ಜುಲೈ ೧೯೭೬

ಕಸ್ತೂರಿ




ಬೆಲೆ: ೧-೨೫

ಯಾವುದೇ ಸಮಯವಿರಲಿ, ಯಾವುದೇ ಸಂದರ್ಭವಿರಲಿ

"ಅಮ್ಮಾ, ನನ್ನ ಮಾಲ್ಟೆಕ್ಸ್ ಮರೆಯಬೇಡ!"



ಅಪರಾಹ್ನಕ್ಕಾಗಿ. ನಮ್ಮ ರಾಜು ಯಾವಾಗಲೂ ತನ್ನ ಊಟದ ಡಬ್ಬಿಯಲ್ಲಿ ***ಮಾಲ್ಟೆಕ್ಸ್*** ಕೊಂಡುಹೋಗಲು ಬಯಸುತ್ತಾನೆ. ಅವನಿಗೆ ಬೇರೆ ಯಾವ ಬಿಸ್ಕಿಟೂ ಇಷ್ಟವಾಗುವುದಿಲ್ಲ. ಕಾರಣ ಎಲ್ಲಾ ಮಕ್ಕಳಿಗೆ ***ಮಾಲ್ಟೆಕ್ಸ್*** ನ ಅಪೂರ್ವ ರುಚಿ ಎಂದರೆ ಬಲು ಪ್ರೀತಿ. ***ಮಾಲ್ಟೆಕ್ಸ್*** ಉಡುಗೊರೆ ಕೊಡಲು ಆಕರ್ಷಣೀಯ ಪಾಕೀಟುಗಳಲ್ಲಿ ಅಥವಾ ಮನೆಗೆ ಕೊಂಡುಹೋಗಲು ಲೂಸ್ ಕೂಡಾ ದೊರಕುತ್ತದೆ ***ಮಾಲ್ಟೆಕ್ಸ್*** — ಇದಕ್ಕೆ ಸಮಾನವಾದ ಬೇರೆ ಸಿಹಿ ಬಿಸ್ಕಿಟ್ ಇಲ್ಲ.



heros' SBC-60-J KAN

ಕಸ್ತೂರಿ

ಪ್ರಕಟಣೆ :
ಪ್ರತಿ ತಿಂಗಳ ೧ ನೇ ದಿನಾಂಕ

ವ್ಯವಸ್ಥಾಪಕ ಸಂಪಾದಕರು :
ರಂಗನಾಥ ದಿವಾಕರ

ಪ್ರಧಾನ ಸಂಪಾದಕರು :
ಖಾದ್ರಿ ಶಾಮಣ್ಣ

ಸಂಪಾದಕರು :
ಪ. ಲ. ಕೆರೂರ

ಪ್ರಕಾಶಕರು :
ಕರ್ನಾಟಕ ಪತ್ರಿಕಾ ಪ್ರೈ. ಲಿ.
ಹುಬ್ಬಳ್ಳಿ

ಕಚೇರಿ :
ಕಸ್ತೂರಿ ಕಾರ್ಯಾಲಯ ಹುಬ್ಬಳ್ಳಿ

ಕಲೆ :
ಕೆ. ಬಿ. ಕುಲಕರ್ಣಿ

ಮುದ್ರಣ :
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಮುಖಪುಟ :

ಅರುಣೋದಯ
ಕಲೆ : ಯಜ್ಞ

ಚಂದಾದರ

೩ ವರ್ಷ (ಅಂಚೆ ಸೇರಿ)		ರೂ. ೩೫-೦೦
೨ ವರ್ಷ	"	ರೂ. ೨೫-೦೦
೧ ವರ್ಷ	"	ರೂ. ೧೪-೦೦
ಅರ್ಧ ವರ್ಷ	"	ರೂ. ೭-೫೦

KASTURI July 1976

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟಣೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಅವುಗಳ ಮೂಲ ಲೇಖಕ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖನಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವುದು. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯ ಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. 'ಇದುವೆ ಜೀವ' ಮೊದಲಾದ ಚುಟುಕುಗಳನ್ನು ತಿರುಗಿ ಕಳಿಸಲು, ಆ ಬಗ್ಗೆ ಪತ್ರವ್ಯವಹಾರ ಮಾಡಲು ಸಾಧ್ಯವಿಲ್ಲ. ಲೇಖನ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವುದು. ಲೇಖಕರು ತಮ್ಮ ಲೇಖನಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವುದೊಳಿತು. ಲೇಖನಗಳು ಆಕಸ್ಮಾತ್ತಾಗಿ ಕಳೆದುಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖನ ಪ್ರಕಟವಾದರೆ, ಕಸ್ತೂರಿಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಅದನ್ನು ಬೇಗ ಕೊಡುವುದು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿ ತಿಂಗಳ ಕಸ್ತೂರಿ ಆಯಾ ತಿಂಗಳ ೧ ನೇ ದಿನಾಂಕದೊಳಗೆ ಪ್ರಕಟವಾಗುವುದು. ಅದು ಚಂದಾದಾರರಿಗೆ ಆಯಾ ತಿಂಗಳ ೫ ನೇ ದಿನಾಂಕದೊಳಗೆ ತಲುಪುವುದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರ್ ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಸಹಚಿಂತನ

ಗಳನ್ನು ತಿದ್ದಲು, ಅಥವಾ ಕೈಬಿಡಲು ಸಲಹೆ ಅಥವಾ ಚಳುವಳಿಯನ್ನು ಮಾಡಬಹುದು.

ನಮ್ಮ ದೇಶದಲ್ಲಿ ಅನಕ್ಷರಸ್ಥರೇ ಇನ್ನೂ ಹೆಚ್ಚಾಗಿರುವಾಗ ಕ್ರಾಂತಿಕಾರಕವಾದ ಆದರ್ಶಗಳನ್ನು ಅರ್ಥ ಮಾಡಿಕೊಳ್ಳುವುದಾಗಲಿ, ಅದರಂತೆ ನಡೆದುಕೊಳ್ಳುವುದಾಗಲಿ ಅವರಿಂದ ಸಾಧ್ಯವಿಲ್ಲ. ಇಂಥ ಲೇಖನಗಳು ಅವರನ್ನು ಗೊಂದಲಕ್ಕೀಡು ಮಾಡಿ ಇರುವ ಶಿಸ್ತನ್ನೂ ಹಾಳು ಮಾಡಬಹುದು.

ಈಗಲೇ ನಮ್ಮ ದೇಶದಲ್ಲಿ ಶಿಸ್ತು ಇಲ್ಲವೆಂದು ತುರ್ತು ಪರಿಸ್ಥಿತಿಯ ಕರಾಳ ಶಾಸನವನ್ನು ಜಾರಿಗೆ ತಂದಿದ್ದಾರೆ. ಈ ಅಶಿಸ್ತು ರಾಜಕೀಯಕ್ಕೆ ಸಂಬಂಧಿಸಿದ್ದು. ಇದರ ಜೊತೆಗೆ ಸಾಮಾಜಿಕ ಅಶಿಸ್ತೂ ಜೊತೆಗೂಡಿದರೆ ದೇಶದ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಆದುದರಿಂದ ಇಂಥ ಲೇಖನಗಳನ್ನು ಪ್ರಕಟಿಸುವ ಮುನ್ನ ಅದರ ಬಗ್ಗೆ ಸಾರಾಸಾರ ವಿವೇಚನೆ ಅಗತ್ಯ.

ಇಡೀ ಸಾಮಾಜಿಕ ಜೀವನದ ಎದುರು ತಿರುಗಿ ಬೀಳುವ ಬದಲು ನಿಧಾನವಾಗಿ ಕೆಲವು ವಿನಾಶಕಾರಿ ಪ್ರವೃತ್ತಿಯ ಕ್ರಮಗಳನ್ನು ಹಂತಹಂತವಾಗಿ ನಿವಾರಿಸುವುದು ಒಳ್ಳೆಯದು.

ಹಾದೀಕೆರೆ ಎಚ್. ಕೆ. ಚಂದ್ರಶೇಖರ

ಸರೂಪಿಕ ಶಸ್ತ್ರಚಿಕಿತ್ಸೆ

ಮಾನ್ಯ ಲೇಖಕರು ಚಿಕಿತ್ಸಾಕ್ರಮವನ್ನು ಬಹು ಸರಳ ರೀತಿ ವಿವರಿಸಿರುತ್ತಾರೆ. ಸರೂಪಿಕ ಶಸ್ತ್ರಚಿಕಿತ್ಸೆಯ ಮೂಲ ಭಾರತವೇ ಆಗಿದ್ದುದು ನಮಗೆ ಹೆಮ್ಮೆಯ ವಿಚಾರ. ಲೇಖಕರಿಗೆ ಅನಂತ ಧನ್ಯವಾದ.

ಕುಷ್ಠ ರೋಗಿಗಳು, ಕೈ, ಕಾಲು, ಕಣ್ಣು ಹಾಗೂ ಮುಖ ವಿಕಾರವಾಗಿ "ನಳ ಚರಿತ್ರೆಯ ಕಾರ್ಕೋಟಕನನ್ನು ಹೋಲುತ್ತಾರೆ" ಎಂದು ಬರೆದಿದ್ದಾರೆ. ಆದರೆ ಅದು ವಸ್ತುತ: "ಕಾರ್ಕೋಟಕನೆಂಬ ವಿಷಸರ್ಪ ಕಚ್ಚಿದ ನಂತರ ವಿಕಾರರೂಪಿಯಾದ ನಳನನ್ನು ಹೋಲುತ್ತಾರೆ" ಎಂದಿರಬೇಕಾಗಿತ್ತು. ಅಲ್ಲವೇ?

ಹಾಸನ -ಎಚ್. ಶ್ರೀನಿವಾಸಯ್ಯ

ನನ್ನ ರಾಗಾನುರಾಗ

ಜೂನ್ ತಿಂಗಳ 'ಕಸ್ತೂರಿ' ಉತ್ತಮ ಲೇಖನಗಳನ್ನೊಳಗೊಂಡು ಬಂದಿರುವುದು ನನಗೆ ಸಂತೋಷದ ವಿಷಯ. ಮಾನವೀಯತೆಯನ್ನು ಜಾಗ್ರತಗೊಳಿಸುವ ಗಾನ-ನಾದಮಯ ಸಂಗೀತ ಕಲೆಯ ವಿಚಾರವಾಗಿ ಕನ್ನಡದ ಶ್ರೇಷ್ಠ ಸಾಹಿತಿಯೊಬ್ಬರ ಚಿಂತನಸಲ್ಲಾಪ- (ಶ್ರೀ ರಂ. ಶ್ರೀ. ಮುಗಳಿ- ನನ್ನ ರಾಗಾನುರಾಗ); ಗಾನದೇವತೆಯ ಆರಾಧನೆಗೆ ಜೀವನವನ್ನೇ ಸಮರ್ಪಿಸಿಕೊಂಡ ನಾದ ಚೇತನವೊಂದರ ಸುಂದರ, ಸಂಕ್ಷಿಪ್ತ ವ್ಯಕ್ತಿ ಚಿತ್ರ (ಸಂಗೀತವೇ ಉಸಿರು-ಕೃಷ್ಣ ಕೊಲ್ಹಾರ ಕುಲಕರ್ಣಿ) ಇವೆರಡು ಬಹುವಾಗಿ ಹಿಡಿಸಿದವು.

ಮಾರ್ಜಹಳ್ಳಿ ನಾ. ಅಮರನಾಥ

ಅಹಿಂಸೆ–ಅಸತ್ಯ

ಜೂನ್, ೭೬ ರ ಕಸ್ತೂರಿಯಲ್ಲಿ ಶ್ರೀ ಮು. ಬ. ಚನ್ನಬಸಪ್ಪನವರು 'ಅಹಿಂಸೆ ಮತ್ತು ಅಸತ್ಯ' ಎಂಬ ಲೇಖನದಲ್ಲಿ ಕೆಲವು ಸಾಮಾಜಿಕ ಕಟ್ಟುಪಾಡುಗಳ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಕಟ್ಟುಪಾಡುಗಳಿಲ್ಲದ ಸಮಾಜವನ್ನು ಊಹಿಸುವುದು ಕಷ್ಟ. ಎಂಥ ನಾಗರಿಕ ಅಥವಾ ಅನಾಗರಿಕ ಸಮಾಜವೇ ಆಗಲಿ ಕಟ್ಟುಪಾಡುಗಳನ್ನು ಹೊಂದಿಯೇ ಇರುತ್ತದೆ. ಅವು ಕೆಲವರಿಗೆ ಒಳ್ಳೆಯದಾಗಲಾರದೆಂದು ಕಟ್ಟುಪಾಡುಗಳೇ ಬೇಡ ಎಂದು ಹೇಳುವುದು ಸರಿಯಲ್ಲ.

ಹಿಂಡಿನಲ್ಲಿ ವಾಸಿಸುವ ಪ್ರಾಣಿಗಳೂ ಸಹ ಕೆಲವು ನಿಯಮಗಳಿಗನುಸಾರವಾಗಿಯೇ ನಡೆದುಕೊಳ್ಳುತ್ತವೆ. ಹೀಗಿರುವಾಗ ಸಾಮಾಜಿಕ ಜೀವಿಯಾದ ಮನುಷ್ಯ ಅಂಥ ಕಟ್ಟುಪಾಡುಗಳಿಲ್ಲದೆ ಇರುವುದು ಸಾಧ್ಯವಿಲ್ಲ.

ಆದರೆ ಒಂದು ಕಾಲಕ್ಕೆ ಬೇಕಾದ ಕಟ್ಟುಪಾಡುಗಳು ಕೆಲವು ಕಾಲದ ಬಳಿಕ ಬೇಡವಾಗಬಹುದು. ಅವು

ಒಂದು ಊರಿನ ಕಥೆ

ಶ್ರೀ ಬರಗೂರು ರಾಮಚಂದ್ರಪ್ಪನವರ 'ಒಂದು ಊರಿನ ಕಥೆ'ಯಲ್ಲಿ ಒಡೆದು ಕಾಣುವ ಹೊಸತನವೇನೂ ಇಲ್ಲ. ಹಳ್ಳಿಯ ವಿವಿಧ ಜಾತಿ ವರ್ಗಗಳು ತಮಗೆ ಎದುರಾದ ಸಮಸ್ಯೆಯ ಜ್ವಲಂತಿಕೆಯನ್ನು ಅಲಕ್ಷಿಸಿ, ರಾಮು-ಶೀಲಾ ಮೊದಲಾದ ಸಾಮಾನ್ಯ ವ್ಯಕ್ತಿಗಳ ಇಷ್ಟಾನಿಷ್ಟಗಳನ್ನು ನಿರ್ಲಕ್ಷಿಸಿ, ಕೇವಲ ತಮ್ಮ ಸ್ವಾರ್ಥವನ್ನು ಸಾಧಿಸಲು ಹೇಗೆ ಯತ್ನಿಸುತ್ತವೆ ಮತ್ತು ಇದೆಲ್ಲದರ ಹಿಂದೆ ಎಂಥ ಹೊಂತಗಾರಿಕೆಯಿದೆ ಎಂಬುದನ್ನು ಲೇಖಕರು ಚೊಕ್ಕವಾಗಿ ನಿರೂಪಿಸಿದ್ದಾರೆ. ಶೀಲಳ ನಗೆಯ ಹಿಂದೆ ರಚನಾತ್ಮಕ ಕ್ರಿಯೆಯಲ್ಲಿ ತೊಡಗಿ ಬೆಳೆಯಬಹುದಾಗಿದ್ದ ಊರು ಕ್ಷುಲ್ಲಕ ರಾಜಕೀಯದ ವಿವರ್ತಕ್ಕೆ ಸಿಲುಕಿ ಮುಳುಗುತ್ತಿದೆಯಲ್ಲ ಎಂಬ ವಿಷಣ್ಣ ಭಾವವನ್ನು ಲೇಖಕರು ಪ್ರತಿಪಾದಿಸಿದಂತಿದೆ.

ಪ್ರತಿಭಟನೆಯ ಹುಮ್ಮಸ್ಸಿನಿಂದ ಹಾಳಾಗುವ ರಾಮು, ತನ್ನ ಅಂತರಂಗದ ಸಂಕಟದಿಂದ ನಿಜವಾಗುವ ಶೀಲಾ ಬೇರು ಕಳೆದುಕೊಳ್ಳುತ್ತಿರುವ ಪಟೇಲರು, ಸಾಮಾಜಿಕ ಸ್ಥಾನ ಪಡೆದು, ಮಾನವೀಯ ಕಣ್ಣು ಕಳೆದುಕೊಂಡಿರುವ ಭೈರಪ್ಪ, ಇವರನ್ನು ಬಿಟ್ಟರೆ ಉಳಿದ ಪಾತ್ರಗಳು ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುವುದಿಲ್ಲ.

ಓದುಗರ ಕಡೆಗೆ ಮುಖ ಮಾಡಿರುವ ಈ ಕಥೆಯಲ್ಲಿ ಲೇಖಕರು ಕೆಲವೊಮ್ಮೆ ಸೂಚ್ಯತೆಯನ್ನು ವಾಚ್ಯತೆಗಿಳಿಸಿದ್ದು ಅನುಚಿತ.

ಅದಮಾರು ಮಹಾಬಲೇಶ್ವರರಾವ್ ಬೈಕಾಡಿ

ಸಾಮಾಜಿಕ ಪ್ರಜ್ಞೆಯ ಅಚ್ಚುಕಟ್ಟನ್ನು ಹಾಕಿ ಪಾತ್ರಗಳ ಆವೇಶವನ್ನು ತಡೆಯುವ ಶ್ರೀ. ಬರಗೂರು ರಾಮ-

ಚಂದ್ರಪ್ಪನವರ ರಾಮು-ಶೀಲಾ ಎರಡು ವಿಭಿನ್ನ ಮುಖಗಳ ದ್ವಂದ್ವ. ಹೊಸ ಸಾಮಾಜಿಕ ವ್ಯವಸ್ಥೆಯ ಸ್ಥಿತ್ಯಂತರದಲ್ಲಿ ರಾಮು-ಗೌರಿಯರ ಹಗರಣ ಕೈ ಜಾರಿ, ಅಪರಾಧಿ ರಾಮು ನ್ಯಾಯದ ಕಟ್ಟೆಯಿಂದ ಸರಿದು ಹೋಗುವ ಸನ್ನಿವೇಶ ಸಿನೀಮೀಯ ಹಾದಿ ಹಿಡಿದಿದೆ. ರಾಮುವಿನ ಕ್ರೌರ್ಯ ಶೀಲಾಳ ಮಾನಸಿಕ ಅಂದೋಲನಕ್ಕೆ ಕಾರಣವಾಗಿ ಕಥೆಯನ್ನು ದುರಂತಗೊಳಿಸುತ್ತದೆ. ಅಂತ್ಯದಲ್ಲಿ ಆವೇಶ ಉಕ್ಕಿ ಕ್ರೌರ್ಯ ಹೆಡೆಯಾಗಿ ನಿಶ್ಶಬ್ದ ಮಾಡಿದೆ. ಊರೊಟ್ಟಿನ ಸಮಸ್ಯೆ ಎಂದು ಕೈಕೋರಿದ್ದವರ ಹಟ್ಟಿಯೊಳಗೇ ಸಮಸ್ಯೆ ಎದುರಾಗಿ ಅವರ ಮುಖಭಂಗವಾಗುವುದರಿಂದ ವಾಸ್ತವವಾಗಿ ಇದೊಂದು ಊರಿನ ಕಥೆಯಾಗಲಾರದು. ಹಟ್ಟಿಯೊಳಗಿನ ಕಿಚ್ಚಿನ ಮಥನ; ಕ್ರೌರ್ಯದ ಕಥನ. ಕಥೆ ಹೆಸರಿಗೆ ತಕ್ಕಂತೆ ಅಂತ್ಯವಾಗಿಲ್ಲವಾದರೂ ಹೆಸರನ್ನು ಮರೆತು, ಸನ್ನಿವೇಶವನ್ನು ಭ್ರಮಿಸಿದಲ್ಲಿ ಕಥಾವಸ್ತು ವೈಶಿಷ್ಟ್ಯಕರವಾದ ಸಾಮಗ್ರಿಯನ್ನೊಳಗೊಂಡಿದೆ ಎಂದು ಹೇಳಬಹುದು.

ಚನ್ನಪಟ್ಟಣ — ಜಿಡ್ಡಿಗೆರೆ ಸದಾನಂದಮೂರ್ತಿ

ಕರಾವಳಿ

ಜೂನ್ 'ಕಸ್ತೂರಿ'ಯಲ್ಲಿ 'ಕರಾವಳಿ' ಕಾದಂಬರಿ ಸಂಗ್ರಹವನ್ನು ಪುಸ್ತಕ ವಿಭಾಗದಲ್ಲಿ ಓದಿ ಈ ಒಂದೆರಡು ಮಾತುಗಳನ್ನು ಬರೆಯುತ್ತಿದ್ದೇನೆ.

ವಿಶುಕುಮಾರರ 'ಕರಾವಳಿ'ಯು, ಕರಾವಳಿ ಜನಾಂಗವಾದ ಮೊಗವೀರರ ಸರಳ-ಸುಂದರ ಜನಜೀವನವನ್ನು ಮೈಗೂಡಿಸಿಕೊಂಡು ಮನೋಜ್ಞವಾಗಿದೆ. ಇಲ್ಲಿ ಬರುವ ಎಲ್ಲ ಪಾತ್ರಗಳಲ್ಲಿ ನೈಜತೆ ಒಡೆದು ಕಾಣುತ್ತದೆ. ಆದರೆ ಕೆಲವು ಪಾತ್ರಗಳಲ್ಲಿ ಸಫಲತೆ ಕಂಡುಬರುವದಿಲ್ಲ.

ಸಂಜೀವನ ಕೈಹಿಡಿದ ಹೆಂಡತಿ ಹಂಸಾಳನ್ನು ಅವಳ ಹೆತ್ತವರು ಸಂಜೀವನ ಮನೆಗೆ ಕರೆತಂದು ಬಿಟ್ಟು ಹೋಗಲು ಬಂದಾಗ ಸಂಜೀವ ಅವಳನ್ನು ಹೆಂಡತಿಯನ್ನಾಗಿ ಸ್ವೀಕರಿಸಲು ನಿರಾಕರಿಸುವುದು ಅಷ್ಟೊಂದು ಸಮಂಜಸವೆನಿಸದು, ಅವಳ ಪಾತ್ರಕ್ಕೆ ಒಂದು ನೆಲೆಯನ್ನು ತೋರಿಸುವಲ್ಲಿ ಲೇಖಕರು ವಿಫಲರಾಗಿದ್ದಾರೆ.

ಗದಗ-ಬೆಟಗೇರಿ — ಡಿ. ವಿ. ಬಡಿಗೇರ

ಕನ್ಯಾಪಿತೃಗಳ ಗೋಳು

ವಿಜ್ಞಾನಿಯಾದ ಶಿಕ್ಷಕ ಶ್ರೀ ಚಂದ್ರಶೇಖರ ಲೋಹುಮಿಯಾ ಇವರನ್ನು ದೇಶದ ಶ್ರೇಷ್ಠ ವಿಜ್ಞಾನಿಯೆಂದು ಗೌರವಿಸಲಾಯಿತಷ್ಟೆ! ಯಾವ ಸಾಧನ ಸಲಕರಣೆಗಳಿಲ್ಲದೆ ಲಂಟಾನಾ ಪೊದೆಯ ನಿಗ್ರಹದಲ್ಲಿ ಮಹತ್ವದ ಸಂಶೋಧನೆ ಮಾಡಿದ್ದು ನಿಜವಾಗಿಯೂ ಸ್ತುತ್ಯವೇ. ಇದಕ್ಕಾಗಿ ಭಾರತ ಸರಕಾರವು ಒಂದು ಪ್ರಶಸ್ತಿ ಪತ್ರವನ್ನೂ, ೧೫೦೦೦ ರೂಪಾಯಿಗಳ ನಗದು ಬಹುಮಾನವನ್ನು ನೀಡಿತು. ಹಾಗೇ ಪ್ರಧಾನ ಮಂತ್ರಿಗಳು ೫೦೦೦ ರೂಪಾಯಿಗಳ ಬಹುಮಾನವನ್ನು ನೀಡಿದರು. "ದೇಶದ ಒಂದು ದೊಡ್ಡ ಸಮಸ್ಯೆಯನ್ನು ಪರಿಹರಿಸಲು ನೆರವಾದ ಈ ವಿಜ್ಞಾನಿ ಶಿಕ್ಷಕನ ಖಾಸಗಿ ಸಮಸ್ಯೆಯೊಂದು ಪರಿಹಾರವಾಗುವದಕ್ಕೆ" ಈ ಹಣ ಸಹಾಯವಾಯ್ತು. "ಚಂದ್ರಶೇಖರರ ೨೯ ವರ್ಷದ ಮಗಳು ಮದುವೆಯಾಗದೇ ಉಳಿದುಬಿಟ್ಟದ್ದಳು. ಕಾರಣ ಮದುವೆ ಮಾಡಿಕೊಡಲು ತಂದೆಯ ಬಳಿ ಹಣವಿಲ್ಲದುದು. ಈ ಸಾಮಯಿಕ ಸಹಾಯದಿಂದ ಅವರು ಅವಳ ಮದುವೆಯನ್ನು ಮುಗಿಸಿ ಆ ಋಣ ಭಾರವನ್ನು ಹಗುರು ಮಾಡಿಕೊಂಡು ಸಮಾಧಾನದ ನಿಟ್ಟುಸಿರು ಬಿಟ್ಟರು."

ವರದಕ್ಷಿಣೆ ವಿರುದ್ಧ ಏನೇ ಕಾನೂನುಗಳು ಬರಲಿ-ಎಷ್ಟೇ ಪ್ರಚಾರವಾಗಿರಲಿ, ಈಗ್ಯೂ ಕನ್ಯಾಪಿತೃಗಳ ಸಮಸ್ಯೆ ಎಷ್ಟು ತೊಡಕಿನದಾಗಿದೆಯೆಂಬುದು ಮೇಲಿನ ಸಂಗತಿಯಿಂದ ತಿಳಿಯುತ್ತದೆ.

ವಿಜಾಪುರ — ಕೃ. ರಾ. ಕೊರ್ತಿ

ಓದುಗರೊಡನೆ

ನಮ್ಮ ಎಪ್ರಿಲ್ ಸಂಚಿಕೆಯಲ್ಲಿ ಬಂದ '೫೦೦, ೬೦೦ ಏಕೆ?' ಲೇಖನದ ಬಗ್ಗೆ ಮುಂಬಯಿಯ ಶ್ರೀ ಗೋ. ಮೊಕಾಶಿ ಹಾಗು ಶ್ರೀ ಗೋವಿಂದ ನಾಮಣ್ಣನವರು ಬರೆದ ಪ್ರತಿಕ್ರಿಯೆ ಜೂನ್ ಸಂಚಿಕೆಯಲ್ಲಿ ಪ್ರಕಟವಾಗಿದೆಯಷ್ಟೆ. ನಮ್ಮ ಕಣ್ಣು ತಪ್ಪಿನಿಂದ ಎರಡು ಪ್ರಮಾದಗಳು ಸಂಭವಿಸಿವೆ. ಈ ಲೇಖನ ಖ್ಯಾತ ಹಿಂದೀ ಲೇಖಕ ಶ್ರೀ ಕನ್ಹಯಲಾಲ ಮಿಶ್ರ 'ಪ್ರಭಾಕರ' ಅವರದೆಂಬುದನ್ನು, ಅದನ್ನನುವಾದಿಸಿದ ಶ್ರೀ ಬಿ. ಸುಬ್ರಾಯ ಅಡಿಗರು ಮೊದಲೇ ತಿಳಿಸಿದ್ದರು. ಅದನ್ನು ಮೊದಲೇ ಪ್ರಕಟಿಸದೇ ಆದ ತಪ್ಪು ಮೊದಲನೆಯದಾದರೆ, ಎರಡನೆಯ ತಪ್ಪು ಮೂಲ ಹಸ್ತಪ್ರತಿಯನ್ನು ನೋಡದೆಯೇ ಪ್ರತಿಕ್ರಿಯೆಯನ್ನು ಪ್ರಕಟಿಸಿದ್ದು. ಇದಕ್ಕಾಗಿ ನಾವು ವಿಷಾದಿಸುತ್ತೇವೆ.

ಸಂ

ತಿಗಣೆ

'ಕಸ್ತೂರಿ' ನನಗೆ ಅತ್ಯಂತ ಪ್ರಿಯವಾದ ಕನ್ನಡ ಮಾಸಿಕ ಪತ್ರಿಕೆ. ಏಕೆಂದರೆ, ಅದು ಸಾಹಿತ್ಯ, ಕಲೆ, ಸಂಶೋಧನೆ ಹಾಗೂ, ರಂಜನೆ ಇತ್ಯಾದಿಗಳಲ್ಲಿಯ ಜೀವನ ಸತ್ವವುಳ್ಳ 'ಕಸುವನ್ನು ಹೀರಿ' ಓದುಗರಿಗೆ ನೀಡುತ್ತದೆ.

ಜೂನ ೭೬ರ ಸಂಚಿಕೆಯಲ್ಲಿ ಶ್ರೀಯುತ ಶಂ. ಬಿ. ಪಾಟೀಲರು ಬರೆದ 'ತಿಗಣೆ-ಒಂದು ಅನಿಸಿಕೆ' ಎಂಬ ಲಲಿತ ಲೇಖನವು, ಹಗುರಾಗಿ ಓದಿಸಿ ಕೊನೆಯ ಘಟ್ಟದಲ್ಲಿ ನಮ್ಮ ಜೀವನದ ದುರ್ಭರತೆಯನ್ನು ಅನಂತ ಜೀವನದ ರಂಗದಲ್ಲಿ ನಮ್ಮ ಪಾತ್ರವನ್ನು ಮಿಂಚಿಸಿದ ಅನುಭವವನ್ನುಂಟುಮಾಡುತ್ತದೆ.

ಲಿಂಗಸಗೂರು — ಸುಧೀರ ಕುಲಕರ್ಣಿ

ಕಸ್ತೂರಿ

ಸಂಚಿಕೆ : ೧೧ ಕಸ್ತೂರಿ, ಜುಲೈ ೧೯೭೬ ವರ್ಷ : ೨೦

ಯುಕ್ತಿವಾದ

ಸುಖಬೀರ

ಹಿಟ್ಲರನ ಪ್ರಚಾರಮಂತ್ರಿ ಗೋಬೆಲ್ಸ್ ಮಹಾ ಚಾಣಾಕ್ಷ. ಆತನೊಮ್ಮೆ ಯಹೂದಿ ಧರ್ಮೋಪದೇಶಕನ ಕಡೆಗೆ ಹೋಗಿ ಆತನಿಗೆ, "ಯಹೂದಿ, ನೀವು ಯಹೂದಿಗಳು. ನಿಮ್ಮ ಧರ್ಮಗ್ರಂಥ 'ತಾಲಮುದ'ದ ಆಧಾರದಿಂದ ನಡೆಸುವ ವಿಶೇಷ ತರ್ಕವಾದದಿಂದ ನೀವು ಚಾಣಾಕ್ಷರು ಎಂದು ಪ್ರಸಿದ್ಧವಾಗಿದೆ. ನಾನೂ ತಾಲಮುದವನ್ನು ಕಲಿಯಬೇಕು ಎಂದು ಕೊಂಡಿದ್ದೇನೆ. ನೀನು ಕಲಿಸುವಿಯಾ?" ಎಂದು ಕೇಳಿದ.

"ನಾನೇನೋ ಸಂತೋಷದಿಂದ ಕಲಿಸಬಹುದು. ಆದರೆ ನಿನಗಿನ್ನೂ ಕಲಿಯುವ ವಯಸ್ಸಿಲ್ಲ," ಎಂದು ಆ ಧರ್ಮೋಪದೇಶಕ ಮಾರ್ನುಡಿದ.

"ಏನು ಬಡಬಡಿಸುತ್ತೀ? ಈ ಪ್ರೌಢ ವಯಸ್ಸಿನಲ್ಲಿಯೂ ನನಗೆ ಕಲಿಯಲಿಕ್ಕಾಗುವದಿಲ್ಲವೇ?" ಎಂದು ಗೋಬೆಲ್ಸ್ ಗರ್ಜಿಸಿದ.

"ನಿಜವಾಗಿ ಹೇಳಬೇಕೆಂದರೆ, ತಾಲಮುದ ಕಲಿಯುವ ಇಚ್ಛೆಯಿಂದ ನಮ್ಮಲ್ಲಿ ಬರುವ ಅಭ್ಯರ್ಥಿಗಳನ್ನು ನಾವು ಮೊದಲು ಪರೀಕ್ಷಿಸುತ್ತೇವೆ. ನಾವು ಆತನಿಗೆ ಮೂರು ಪ್ರಶ್ನೆಗಳನ್ನು ಕೇಳುತ್ತೇವೆ. ಆತ ಅವನ್ನು ಸಮರ್ಪಕವಾಗಿ ಉತ್ತರಿಸಿದರೆ ನಾವು ಆತನಿಗೆ ತಾಲಮುದ ಕಲಿಸುತ್ತೇವೆ."

"ಹಾಗೇ ಆಗಲಿ. ನನ್ನನ್ನು ಪರೀಕ್ಷಿಸು."

"ಒಳ್ಳೇದು. ಮೊದಲನೇ ಪ್ರಶ್ನೆ ಎಂದರೆ, ಇಬ್ಬರು ಹೊಗೆಗಿಂಡಿಯೊಳಗಿಂದ ಹಾಯ್ದು ಕೆಳಗೆ ಬೀಳುತ್ತಾರೆ. ಒಬ್ಬ ಕಾಡಿಗೆಯಿಂದ ಕಪ್ಪಾಗಿ ಬಿಟ್ಟಿದ್ದಾನೆ. ಇನ್ನೊಬ್ಬ ಹಾಗೇ ಸ್ವಚ್ಛ ಉಳಿದಿದ್ದಾನೆ. ಇವರಲ್ಲಿ ಯಾರು ಸ್ನಾನ ಮಾಡಬೇಕು?" ಎಂದು ಧರ್ಮೋಪದೇಶಕ ಕೇಳಿದ.

"ಕಾಡಿಗೆ ಬಳಿದು ಕಪ್ಪಾದವ ಸ್ನಾನ ಮಾಡಬೇಕು."

"ಇಲ್ಲ, ಇನ್ನೊಬ್ಬ; ಸ್ವಚ್ಛವಾಗಿದ್ದವ ಸ್ನಾನ ಮಾಡಬೇಕು"

"ಅದು ಹೇಗೆ?" ಎಂದು ವಿಚಾರಿಸಿದ ಗೋಬೆಲ್ಸ್.

"ಏಕೆಂದರೆ, ಅವರು ಕೆಳಗೆ ಬಿದ್ದ ಕೂಡಲೆ ಒಬ್ಬರನ್ನೊಬ್ಬರು ನೋಡುತ್ತಾರೆ. ಕಪ್ಪಾದವ ಸ್ವಚ್ಛವಿದ್ದವನನ್ನು ನೋಡಿ, ಹೊಗೆಗಿಂಡಿಯೊಳಗಿಂದ ಜಾರಿ ಬಿದ್ದರೂ ಸ್ವಚ್ಛವಾಗಿಯೇ ಉಳಿದಿದ್ದೇವೆ, ಎಂಥ ವಿಚಿತ್ರ ಎಂದುಕೊಳ್ಳುತ್ತಾನೆ. ಆದರೆ ಇನ್ನೊಬ್ಬ ಆ ಕಪ್ಪು ವ್ಯಕ್ತಿಯನ್ನು ನೋಡಿ, ಎಲಾ, ಎಷ್ಟೊಂದು ಕಪ್ಪಾಗಿದ್ದೇವೆ. ನಾನೀಗ ಬೇಗನೆ ಸ್ನಾನ ಮಾಡಬೇಕು, ಶುದ್ಧವಾಗಬೇಕು. ಎಂದುಕೊಂಡು ಬಚ್ಚಲ ಮನೆಗೆ ಧಾವಿಸುತ್ತಾನೆ."

"ಅದ್ಭುತ!" ಎಂದು ಗೋಬೆಲ್ಸ್ ಉದ್ಗರಿಸಿ, "ಎರಡನೆ ಪ್ರಶ್ನೆ ಏನು?" ಎನ್ನುತ್ತಾನೆ.

"ಎರಡನೆ ಪ್ರಶ್ನೆ ಹೀಗಿದೆ. ಇಬ್ಬರು ಹೊಗೆಗಿಂಡಿಯೊಳಗಿಂದ ಜಾರಿ ಬಿದ್ದಿದ್ದಾರೆ. ಅವರಲ್ಲಿ ಒಬ್ಬ ಕಾಡಿಗೆಯಿಂದ ಕಪ್ಪಾಗಿ ಬಿಟ್ಟಿದ್ದಾನೆ. ಇನ್ನೊಬ್ಬ ಸ್ವಚ್ಛವಾಗಿ ಉಳಿದಿದ್ದಾನೆ. ಅವರಲ್ಲಿ ಯಾರು...?"

"ಇದು ಮೊದಲಿನ ಪ್ರಶ್ನೆಯೇ ಆಗಿದೆ," ಎಂದು ಗೋಬೆಲ್ಸ್ ನಡುವೆ ಬಾಯಿ ಹಾಕಿದೆ.

"ಇಲ್ಲ. ಇದು ಬೇರೆ ಪ್ರಶ್ನೆ."

"ಒಳ್ಳೇದು. ನೀನು ನನ್ನನ್ನು ಹೆದ್ದನನ್ನಾಗಿಸಲಾರೆ. ಇದಕ್ಕೆ ಉತ್ತರವೆಂದರೆ ಕಾಡಿಗೆಯಿಂದ ಕಪ್ಪಾಗದೆ ಇದ್ದ ಮನುಷ್ಯನು ಸ್ನಾನ ಮಾಡುತ್ತಾನೆ."

"ತಪ್ಪು," ಎಂದ ಧರ್ಮೋಪದೇಶಕ.

"ಇದೇ ಈಗ ನೀನೇ ಹೇಳಿದ್ದು..."

"ಅದು ಬೇರೆ ಪ್ರಶ್ನೆಯಾಗಿತ್ತು. ಈಗ ಕಾಡಿಗೆಯಿಂದ ಕಪ್ಪಾದ ಮನುಷ್ಯನೇ ಸ್ನಾನ ಮಾಡುತ್ತಾನೆ. ಮೊದಲಿನಂತೆ ಅವರು ಒಬ್ಬರನ್ನೊಬ್ಬರು ನೋಡುತ್ತಾರೆ. ಸ್ವಚ್ಛ ಇದ್ದವನು ಕಪ್ಪಾದವನನ್ನು ನೋಡಿ, 'ಎಲಾ ನಾವೆಷ್ಟು ಕೊಳೆಯಾಗಿದ್ದೇವೆ,' ಎಂದುಕೊಳ್ಳುತ್ತಾನೆ. ಆದರೂ ಆತ ತನ್ನ ಶುದ್ಧ ಕೈಗಳನ್ನು ನೋಡಿಕೊಂಡಾಗ ತಾನೇನೂ ಕಾಡಿಗೆ ಬಳಿದು ಕಪ್ಪಾಗಿಲ್ಲ ಎಂಬುದನ್ನು ಕಂಡುಕೊಳ್ಳುತ್ತಾನೆ. ಕಪ್ಪು ಮನುಷ್ಯನು ಇನ್ನೊಬ್ಬನನ್ನು ನೋಡಿ 'ಏನು ಹೊಗೆಗಿಂಡಿಯೊಳಗಿಂದ ಜಾರಿದರೂ ನಾವು ಕಪ್ಪಾಗಿಲ್ಲವೇ!' ಎಂದುಕೊಂಡು ತನ್ನ ಕೈಗಳನ್ನು ನೋಡಿಕೊಳ್ಳುತ್ತಾನೆ. ಅವು ಕಪ್ಪಾಗಿರುವದನ್ನು ಕಂಡು, 'ಹೌದು ನಾನೀಗ ಕಾಡಿಗೆಯಿಂದ ಕಪ್ಪಾಗಿದ್ದೇನೆ,' ಎಂದು ತಿಳಿಯುತ್ತಾನೆ. ಈತನೇ ಸ್ನಾನಮಾಡುವದು ಸ್ವಾಭಾವಿಕ."

"ಅತ್ಯದ್ಭುತ ನಿನ್ನ ಚಾಣಾಕ್ಷತನಕ್ಕೆ ಜೊತೆಯಿಲ್ಲ. ಇನ್ನು ಮೂರನೆ ಪ್ರಶ್ನೆ ಏನು?"

"ಮೂರನೆಯದು ಇನ್ನೂ ಕಠಿಣವಾದ ಪ್ರಶ್ನೆ. ಇಬ್ಬರು ಹೊಗೆಗಿಂಡಿಯೊಳಗಿಂದ ಜಾರಿಬೀಳುತ್ತಾರೆ. ಅವರಲ್ಲೊಬ್ಬ..."

"ಮತ್ತೆ ಇದು ಅದೇ ಪ್ರಶ್ನೆಯಾಗಿದೆ,"

"ಅಲ್ಲ. ಶಬ್ದಗಳು ಅವೇ ಇರಬಹುದು. ಆದರೆ ಸಮಸ್ಯೆ ಬೇರೆ ಆಗಿದೆ."

"ಕಪ್ಪಾಗಿರುವವನು ಸ್ನಾನಮಾಡುವನು."

"ತಪ್ಪು," ಎಂದ ಧರ್ಮೋಪದೇಶಕ.

"ಹಾಗಾದರೆ ಸಮರ್ಪಕ ಉತ್ತರ ಏನಿದೆ?" ಎಂದು ಗೋಬೆಲ್ಸ್ ಗುಡುಗಿದ.

"ಸಮರ್ಪಕ ಉತ್ತರವೆಂದರೆ ಇದೊಂದು ಮೂರ್ಖ ಪ್ರಶ್ನೆ," ಎಂದು ಹೇಳಿದ ಧರ್ಮೋಪದೇಶಕ, "ಹೊಗೆಗಿಂಡಿಯೊಳಗಿಂದ ಇಬ್ಬರು ಒಮ್ಮೆಲೇ ಜಾರಿಬಿದ್ದಾಗ ಒಬ್ಬನಿಗೆ ಕಾಡಿಗೆ ಮೆತ್ತುತ್ತದೆ, ಇನ್ನೊಬ್ಬ ಹಾಗೇ ಶುಭ್ರ, ಸ್ವಚ್ಛ ಉಳಿಯುತ್ತಾನೆ ಎಂದುದನ್ನು ನಂಬಬಹುದೆ? ಇಂಥ ಸಣ್ಣ ಮಾತನ್ನು ಅರಿಯಲಾಗದವರು ತಾಲಮುಂದವನ್ನೇನು ಅರ್ಥ ಮಾಡಿಕೊಂಡಾರು!" ಎಂದು ತನ್ನ ಮಾತು ಮುಗಿಸಿದ. ಗೋಬೆಲ್ಸನ ಮುಖ ಇಂಗು ತಿಂದ ಮಂಗನಂತಾಗಿತ್ತು. ✡

'ನವಶಕ್ತಿ'ಯಿಂದ

ಬೆಕ್ಕಿನ ಕೊರಳಿಗೆ
ಗಂಟೆ ಕಟ್ಟಿದ ಬಂಟ


ರಾಲ್ಫ್ ನೆಡರ್

ಅನುವಾದ : ಶ್ಯಾಮ ಹುದ್ದಾರ

ಸುಮಾರು ಒಂದು ದಶಕದ ಹಿಂದೆ ೨೨ ಮಾರ್ಚ್ ೧೯೬೬ ರಂದು ಅಮೇರಿಕದ ಸಿನೇಟ್ ಸಮಿತಿಯ ಎದುರು ಒಂದು ನ್ಯಾಯ ವಿಚಾರಣೆ ನಡೆದಿತ್ತು. ಅದರಲ್ಲಿ ಒಂದು ಕಡೆಗೆ ಅಬ್ಜಗಟ್ಟಲೆ ಡಾಲರ್ ಧೂಳಿ ಹಾರಿಸುವಷ್ಟು ಬಲಾಢ್ಯ ಶಕ್ತಿಯುಳ್ಳ ಜಗತ್ಪ್ರಸಿದ್ಧ ಜನರಲ್ ಮೋಟರ್ಸ್ ಕಂಪನಿಯ ಅಧ್ಯಕ್ಷ ಜೇಮ್ಸ್ ರೋಶ್ ಇದ್ದರೆ, ಅವರ ಪ್ರತಿವಾದಿಯಾಗಿ, ಅಮೇರಿಕದ ಯಾವೊಬ್ಬ ಜನಸಾಮಾನ್ಯನೂ ಕೇಳರಿಯದ ಒಬ್ಬ ತರುಣ ವಕೀಲ ನಿಂತಿದ್ದನು. ಈ ವಕೀಲನ ಪೂರ್ವೇತಿಹಾಸ ಹುಡುಕಿ ತೆಗೆಯಲು ಖಾಸಗಿ ಗುಪ್ತಚಾರ ಪೋಲಿಸರ ನೆರವು ತೆಗೆದುಕೊಂಡ ಬಗ್ಗೆ ಕಂಪನಿಯ ಪರವಾಗಿ ಜೇಮ್ಸ್ ರೋಶ್ ತನ್ನ ಎದುರಾಳಿ ವಕೀಲನ ಕ್ಷಮೆ ಕೇಳಿದ್ದನು.

ರಾಷ್ಟ್ರದ ಒಂದು ಪ್ರಚಂಡ ಉದ್ಯಮಸಂಸ್ಥೆ ಒಬ್ಬ ಸಾಮಾನ್ಯ ನಾಗರಿಕನಿಗೆ ತೊಂದರೆ ಕೊಡುವಂತಹ ತೀರ ಕೆಳ ದರ್ಜೆಯ ಕೃತಿಯಲ್ಲಿ ತೊಡಗಿದುದನ್ನು ಕಂಡು, ಅಮೇರಿಕದ ನಾಗರಿಕರು ಭಯಗ್ರಸ್ತರಾದರು. ಈ ಯುವಕ ವಕೀಲನ ಹೆಸರು ಬೆಳಗಾಗುವಷ್ಟರಲ್ಲಿ ಸಾರ್ವತ್ರಿಕ ಪ್ರಸಿದ್ಧಿ ಪಡೆಯಿತು. ಆ ತರುಣ ವಕೀಲನೇ ರಾಲ್ಫ್ ನೆಡರ್.

ಜನರಲ್ ಮೋಟರ್ಸ್ ಕಂಪನಿ ರಾಲ್ಫ್ ನೆಡರನಿಗೆ ಇಷ್ಟೊಂದು ತೊಂದರೆ ಕೊಡುವ ಕಾರಣವೇನಿತ್ತು? ವಕೀಲ ರಾಲ್ಫ್ 'ಅನ್-ಸೇಫ್ ಎಟ್ ಏನೀ ಸ್ಪೀಡ್' ಎಂಬ ಒಂದು ಪುಸ್ತಕ ಬರೆದು, ಅದರಲ್ಲಿ ಅಮೇರಿಕದಲ್ಲಿ ತಯಾರಾಗುವ ಮೋಟರ್ ವಾಹನ ಅದರಲ್ಲಿಯೂ ಜನರಲ್ ಮೋಟರ್ಸ್ ಕಂಪನಿ ಸಿದ್ಧಗೊಳಿಸುತ್ತಿದ್ದ 'ಕಾರ್ವೆಯರ್' ಮಾಡೆಲ್ ಗಾಡಿಗಳಲ್ಲಿ ಬಹಳಷ್ಟು ಯಾಂತ್ರಿಕ ದೋಷವಿದ್ದುದರಿಂದ ಈ ಗಾಡಿ ಚಾಲಕನಿಗೆ ಹಾಗೂ ಅದರಲ್ಲಿಯ ಪ್ರಯಾಣಿಕರಿಗೆ ಜೀವದ ಭೀತಿ ಹೆಚ್ಚೆಂದು ಅಂಕಿ-ಸಂಖ್ಯೆ ಸಹಿತ ಸಿದ್ಧ ಮಾಡಿಕೊಟ್ಟಿದ್ದನು. ಆ ಪುಸ್ತಕದ ಲಕ್ಷ-ಗಟ್ಟಲೆ ಪ್ರತಿಗಳು ಹುರಿಗಡಲೆಯಂತೆ ಮಾರಾಟವಾಗಿ ಹೋದವು. ಇದರಿಂದಾಗಿ ಆ ಮಾಡೆಲ್ ಮೋಟರುಗಳ ಮಾರಾಟದ ಮೇಲೆ ಬಹು ದೊಡ್ಡ ಪರಿಣಾಮವಾಯಿತು. ಜನತೆಯಲ್ಲಿ ಇದೊಂದು ತೀವ್ರ ಚರ್ಚಾಸ್ಪದ



ಕೃಪೆ : 'ನವನೀತ' ಮರಾಠಿ ಡೈಜೆಸ್ಟ್

ವಿಷಯುವಾದ ಪರಿಣಾಮವಾಗಿ ಅದನ್ನು ವಿಚಾರಣೆಯಿಂದ ಪೂರ್ಣ ಇತ್ಯರ್ಥಕ್ಕೆ ಹಚ್ಚಲು ಸಿನೇಟು ಒಂದು ಸಮಿತಿಯನ್ನೇ ನಿಯಮಿಸಬೇಕಾಯಿತು. ರಾಲ್ಫರು ತಮ್ಮ ಅಭಿಪ್ರಾಯವನ್ನು ಸಿನೇಟಿನ ಎದುರು ಮಂಡಿಸಿದರು. ಆಗ ಜನರಲ್ ಮೋಟರ್ಸ್ ಕಂಪನಿಯ ಕೆಲ ಅಧಿಕಾರಿಗಳು ಗುಪ್ತಚಾರರಿಂದ ಮತ್ತು ಒಬ್ಬ ಸುಂದರ ತರುಣಿಯನ್ನು ಮುಂದೆ ಮಾಡಿ, ರಾಲ್ಫರ ವೈಯಕ್ತಿಕ ಜೀವನಕ್ಕೆ ಮಸಿ ಹಚ್ಚಲು ಪ್ರಯತ್ನಿಸಿದರು. ಆ ಕಾರ್ಯದಲ್ಲಿ ವಿಫಲರಾದಾಗ ಕಂಪನಿಯು ರಾಲ್ಫರಲ್ಲಿ ಬಹಿರಂಗ ಕ್ಷಮೆ ಕೇಳಬೇಕಾಯಿತಲ್ಲದೆ, ತನ್ನ 'ಕಾರ್ವೆಯರ್' ಮಾಡೆಲ್ ಗಾಡಿಗಳನ್ನು ಮಾರುಕಟ್ಟೆಯಿಂದ ಹಿಂತೆಗೆದುಕೊಳ್ಳಬೇಕಾಯಿತು.

ತರುಣ ವಕೀಲ ರಾಲ್ಫ್ ಅಂದಿನಿಂದ ಅಮೆರಿಕದ ಇಪ್ಪತ್ತು ಕೋಟಿ ಗ್ರಾಹಕರ ಹಿತರಕ್ಷಣೆಗಾಗಿ ಯಾವುದೇ ಪ್ರತಿಫಲವಿಲ್ಲದೆ ದುಡಿಯುವ ಆಪದ್ಬಂಧು ಮತ್ತು ಭದ್ರ ರಕ್ಷಾಕವಚವಾಗಿದ್ದಾರೆ. ಸಾರ್ವಜನಿಕ ಗ್ರಾಹಕರ ಶೋಷಣೆ ಮಾಡುವ ಮತ್ತು ಅವರ ಹಿತಕ್ಕೆ ವ್ಯಥೆಯನ್ನುಂಟುಮಾಡುವ ಪ್ರತಿಯೊಂದು ಕಾರ್ಯದ ವಿರುದ್ಧವೂ ಈ ತರುಣ ವಕೀಲರು ಚಳವಳಿಯನ್ನೇ ಪ್ರಾರಂಭಿಸಿದರು.

ಚಿಕ್ಕಮಕ್ಕಳಿಗಾಗಿ ಹಾಲಿನ ಪುಡಿ ತಯಾರಿಸುವ ಕಂಪನಿಯವರು ವ್ಯಾಪಾರೀ ಮನೋಭಾವದಿಂದ ಹಾಲಿಗೆ ಸ್ವಾದ ಹೆಚ್ಚಿಸಲು ಮೊನೋಸೋಡಿಯಮ್ ಗ್ಲುಟಾಮೇಟನ್ನು ಬೆರೆಸುತ್ತಿದ್ದರು. ನಿಶ್ಚಿತ ಪ್ರಮಾಣಕ್ಕಿಂತ ಹೆಚ್ಚು ಕೂಡಿಸಿದರೆ ಮಗುವಿನ ಮೆದುಳಿಗೆ ಹಾನಿಕರವೆಂದು ಶಾಸ್ತ್ರಜ್ಞರು ಸಿದ್ಧಪಡಿಸಿದ ಆಧಾರದಿಂದ ರಾಲ್ಫ್ ಪೌಷ್ಟಿಕ ಆಹಾರದಲ್ಲಿ ಈ ಮಿಶ್ರಣದ ಉಪಯೋಗ ನಿಲ್ಲಿಸಬೇಕೆಂದು ಕೂಗೆಬ್ಬಿಸಿದರು. ಅವರ ಬೇಡಿಕೆಯನ್ನು ಉತ್ಪಾದಕರು ಮನ್ನಿಸಬೇಕಾಯಿತು. ಇದೇ ರೀತಿ ತಿಂಡಿ, ತಿನಿಸು, ಪೇಯಗಳಲ್ಲಿ ಸಿಹಿ ಹೆಚ್ಚಿಸಲು ಬಳಸುತ್ತಿದ್ದ ಸೈಕ್ಲಾಮೆಟ್‌ನಂಥ ಅಪಾಯಕಾರಕ ಪದಾರ್ಥ ಮಿಶ್ರಣ ಮಾಡುವುದಕ್ಕೆ ಇವರೇ ತಡೆ ತಂದರು. ಜನತೆಗೆ ತತ್ತಿ, ಮಾಂಸ ಮುಂತಾದ ಪದಾರ್ಥಗಳು ತಾಜಾ ಸ್ಥಿತಿಯಲ್ಲಿ ಸಿಗುವಂತೆ ಮಾಡಲು ಕೆಲವೊಂದು ನಿರ್ಬಂಧಗಳನ್ನು ಸ್ವಂತಃ ಸಿದ್ಧಗೊಳಿಸಿ, ಅವುಗಳನ್ನು ಬಳಕೆಯಲ್ಲಿ ತರಲು ಸ್ವತಃ ಶ್ರಮಿಸಬೇಕಾಯಿತು. ಡಿ. ಡಿ. ಟಿ. ವಿರುದ್ಧದ ಚಳವಳಿಯಲ್ಲಿ ರಾಲ್ಫರೂ ಭಾಗವಹಿಸಿದ್ದರು.

೧೯೭೧ ರಲ್ಲಿ ಸಾನ್ ಫ್ರಾನ್ಸಿಸ್ಕೊನಲ್ಲಿ ಭೂಕಂಪ ಸಂಭವಿಸಿದಾಗ, ಭೂಕಂಪ ಉಂಟಾಗುವ ಸಾಧ್ಯತೆಯಿರುವಾಗಲೂ ಜನತೆಗೆ ಮುನ್ಸೂಚನೆ ಕೊಡದಿರುವುದಕ್ಕೆ ಸರಕಾರಿ ಅಧಿಕಾರಿಗಳ ವಿರುದ್ಧ ರಾಲ್ಫರು ಸಿಡಿದೆದ್ದರು. ಕಲ್ಲಿದ್ದಲು ಗಣಿಗಳಲ್ಲಿ ಕೈಕೊಂಡ ಸುರಕ್ಷಿತೆಯ ನಿಯಮಗಳು ರಾಲ್ಫರ ಪ್ರಯತ್ನದ ಫಲಗಳಾಗಿವೆ. ಹೊಲಗಳಲ್ಲಿ ನಿಂತುಕೊಂಡ ಟ್ರ್ಯಾಕ್ಟರ್ ತಂತಾನೇ ಹೊರಟು ಅದರ ಅಡಿಯಲ್ಲಿ ರೈತನೊಬ್ಬನು ಸಿಕ್ಕುಬಿದ್ದುದನ್ನು ಕಂಡ ರಾಲ್ಫ್ ನೆಡರ್ ಇಂಥ ಯಾಂತ್ರಿಕ ದೋಷವುಳ್ಳ ಟ್ರ್ಯಾಕ್ಟರುಗಳ ಮಾರಾಟದ ಮೇಲೆ ನಿರ್ಬಂಧ ಹೇರಬೇಕೆಂಬ ಬೇಡಿಕೆ ಮಂಡಿಸಿದರು. ಅನಾವಶ್ಯಕವೆನಿಸಿದಾಗಲೂ ರೋಗಿಗಳ ಎಕ್ಸ್-ರೇ ತೆಗೆಯುವುದರಿಂದ ರೋಗಿಗೆ ಅಪಾಯ ಉಂಟಾಗುತ್ತದೆಂದು ದನಿ ಎತ್ತಿದರು. ವರ್ಣಮಯ ಟೆಲಿವಿಜನ್‌ನಿಂದ ಹೊರಡುವ ವಿಕಿರಣಗಳಿಂದ ಪ್ರೇಕ್ಷಕರಿಗೆ ಅಪಾಯವಾಗಬಾರದೆಂದು ಅವರನ್ನು ಟೆಲಿವಿಜನ್ ಇಟ್ಟ ಸ್ಥಳದಿಂದ ೬ ಫೂಟು ದೂರದಲ್ಲಿ ಕುಳ್ಳಿರಿಸಬೇಕೆಂಬ ನಿಯಮವನ್ನು ರಾಲ್ಫರು ಕೈಕೊಂಡ ಪ್ರಚಾರದಿಂದ ಶಾಶ್ವತವಾಗಿ ನಡೆಸಿಕೊಂಡು ಬರಬೇಕಾಯಿತು.

ಎಲ್ಲಕ್ಕಿಂತ ಬಲು ಮುಖ್ಯ ಅಂಶವೆಂದರೆ, ಅಮೇರಿಕದ ನಾಗರಿಕರು ರಾಲ್ಫರ ಚಳವಳಿಯಿಂದ ತಮ್ಮ ಹಕ್ಕುಗಳನ್ನು ಕಾಯ್ದುಕೊಳ್ಳಲು ಜಾಗ್ರತರಾದರು. ಅಮೇರಿಕದ ಸಂಯುಕ್ತ ಸಂಸ್ಥಾನಗಳ ೫೦ ಪ್ರಾಂತಗಳ ಪೈಕಿ ೩೪ ಪ್ರಾಂತಗಳಲ್ಲಿ ಗ್ರಾಹಕ ಸಂರಕ್ಷಕ

ಸಮಿತಿಗಳು ಸ್ಥಾಪನೆಗೊಂಡವು. ಸುಮಾರು ೫೦ ರಷ್ಟು ಸಂಘಟನೆಗಳು ಗ್ರಾಹಕರನ್ನು ಸದಾ ಜಾಗರೂಕರನ್ನಾಗಿ ಇರಿಸುವ ಕಾರ್ಯ ಕೈಕೊಂಡವು.

ನಾಲ್ಕು ವರ್ಷದ ಹಿಂದೆ ರಾಲ್ಫ್ 'ಪಬ್ಲಿಕ್ ಸಿಟಿಝನ್ ಇನ್‌ಕಾರ್ಪೊರೇಟೆಡ್' ಹೆಸರಿನ ಸಂಘಟನೆಯನ್ನು ಪ್ರಾರಂಭಿಸಿದರು. ಈ ಸಂಸ್ಥೆ ರಾಲ್ಫರ ಕೇಸದಲ್ಲಿ ಸಹಾಯ ನೀಡುವ, ವಕೀಲರ ಫೀ ಮುಂತಾದ ವೆಚ್ಚದ ವ್ಯವಸ್ಥೆ ಮಾಡುತ್ತದೆ. ೧೯೭೨ ರಲ್ಲಿ ಈ ಸಂಘಟನೆಗೆ ೬೦,೦೦೦ ಅಮೇರಿಕದ ನಾಗರಿಕರು ವರ್ಗಣಿ ಮುಖಾಂತರ ೭೫ ಲಕ್ಷ ರೂಪಾಯಿ ಸಂಗ್ರಹಿಸಿ ಕೊಟ್ಟರು.

ರಾಲ್ಫರ ಚಳವಳಿಯ ಸ್ವರೂಪ ಹೀಗಿದೆ: ದಿನ ನಿತ್ಯ ಭಾಷಣ ಮಾಡಿ, ಸಂಬಂಧಿಸಿದ ವಿಷಯದ ಕುರಿತು ಜನಾಭಿಪ್ರಾಯ ನಿರ್ಮಾಣ ಮಾಡುವುದೇ ಇವರ ಚಳವಳಿಯ ಮೂಲ ಸ್ವರೂಪ. ವೃತ್ತಿಯಿಂದ ಸ್ವತಃ ವಕೀಲರಾದ ಅವರು ಯಾವಾಗಲೂ ಕಾನೂನು ಬಾಹಿರವಾಗಿ ನಡೆಯುವುದಿಲ್ಲ. ತತ್ವನಿಷ್ಠ ಹಾಗೂ ಕಾನೂನುಗಳೇ ಅವರ ಹೋರಾಟದ ಪ್ರಮುಖ ಅಸ್ತ್ರಗಳಾಗಿವೆ. ದಿನಪತ್ರಿಕೆ, ನಿಯತಕಾಲಿಕ ಮೊದಲಾದವುಗಳಲ್ಲಿ ಅವರು ನೀತಿ-ನಿಯಮಗಳ ಪ್ರಚಾರ ಮಾಡುತ್ತಾರೆ. ಕಾನೂನಿನ ಒರೆಗಲ್ಲಿಗೆ ತಿಕ್ಕಿ ತೋರಿಸುತ್ತಾರೆ. ಈ ಕೆಲಸದಲ್ಲಿ ರಾಲ್ಫರಿಗೆ ಸಹಾಯ ನೀಡಲು ಒಂದು ಆದರ್ಶವಾದಿ ತರುಣರ ಗುಂಪು ಅವರಲ್ಲಿದೆ. ಈ ತರುಣರು ಕಾಯ್ದೆಗಳ ಪರಿಪೂರ್ಣ ಅಭ್ಯಾಸ ಮಾಡಿ, ದೊಡ್ಡ ದೊಡ್ಡ ಪದವಿ ಪಡೆದವರಾಗಿದ್ದಾರೆ. ಇಂದು ಇವರೆಲ್ಲ ಕೇವಲ ಸಾಂಕೇತಿಕ ಅಲ್ಪ ಪ್ರತಿಫಲ ಪಡೆದು, ರಾಲ್ಫರ ಸಲುವಾಗಿ ಹಗಲಿರುಳು ದುಡಿದು ಅಪಾರ ಕಷ್ಟ ಅನುಭವಿಸುತ್ತಿದ್ದಾರೆ.

ಜನಾಭಿಪ್ರಾಯ ನಿರ್ಮಾಣ ಮಾಡಲು ವಕೀಲ ರಾಲ್ಫ್ ಭಾಷಣ ಮಾಡುವುದನ್ನೇ ಮಾಧ್ಯಮವಾಗಿರಿಸಿಕೊಂಡು, ತಮ್ಮ ವಿಚಾರಗಳು ಜನತೆಯ ಎಲ್ಲಾ ಸ್ತರಗಳಿಗೆ ಮುಟ್ಟುವಂತೆ ಸಾರ್ವಜನಿಕ ಕಾರ್ಯಗಳಿಗಾಗಿ ಅವರು ವರ್ಗಣಿ ಸಂಗ್ರಹಿಸುತ್ತಾರೆ. ಪ್ರತಿ ವರ್ಷ ಭಾಷಣಕ್ಕೆ ಪ್ರತಿಫಲವೆಂದು ಸುಮಾರು ೧೫ ಲಕ್ಷ ರೂಪಾಯಿ ಸಿಗುತ್ತದೆ. ಆದರೆ ಆ ಹಣದಲ್ಲಿ ತಮ್ಮ ಸ್ವಂತದ ಖರ್ಚಿಗಾಗಿ, ತೀರ ಅವಶ್ಯವಾದಷ್ಟನ್ನೇ ರಾಲ್ಫ್ ಉಪಯೋಗಿಸಿಕೊಳ್ಳುತ್ತಾರೆ. ಇಡೀ ವರ್ಷದಲ್ಲಿ ಅವರು ೧೫೦ ರಷ್ಟು ಭಾಷಣ ಮಾಡುತ್ತಾರೆ. ಅವುಗಳಲ್ಲಿ ಅರ್ಧದಷ್ಟು ಭಾಷಣಗಳಿಗೆ ಪ್ರವೇಶ-ಧನ ತೆಗೆದುಕೊಂಡರೆ ಉಳಿದವುಗಳು ಪುಕ್ಕಟೆ.

ರಾಲ್ಫ್ ನೆಡರರ ಜೀವನ ಹೋರಾಟ ಒಂದು ಉದ್ದೇಶ ಸಾಧನೆಗಾಗಿ ಸಮರ್ಪಿತವಾಗಿದೆ. ಅವರು ವಾರದಲ್ಲಿ ಎಲ್ಲಾ ದಿನ ೧೭-೧೮ ತಾಸು ಅವಿಶ್ರಾಂತ ದುಡಿಯುತ್ತಾರೆ. ಮಧ್ಯರಾತ್ರಿಗೆ ಮಲಗಿ, ಬೆಳಗಿನಜಾವ ಐದ ಗಂಟೆಗೇ ಏಳುತ್ತಾರೆ. ಒಂದೊಂದು ದಿನ ಅವರು ಆರರಷ್ಟು ಭಾಷಣಗಳನ್ನೂ ಮಾಡಬೇಕಾಗುತ್ತದೆ. ಇವರ ಭಾಷಣದ ಅವಧಿ ಸುಮಾರು ಒಂದೂವರೆ ತಾಸು. ಪ್ರತಿ ವಾರ ವಿಮಾನ ಪ್ರಯಾಣ ತಪ್ಪುವುದಿಲ್ಲ. ಪ್ರವಾಸದಲ್ಲಿ ಅವರೊಂದಿಗೆ ಕಾರ್ಯದರ್ಶಿ, ಸ್ವಯಂಸೇವಕ ಯಾರೂ ಇರುವುದಿಲ್ಲ. ಒಂದು ಕೈಚೀಲದಲ್ಲಿ ಎರಡು ಮೂರು ಬಟ್ಟೆಗಳು, ವೃತ್ತಪತ್ರಿಕೆಗಳ ಸುರಳಿ, ಕಾಗದ-ಪತ್ರಗಳ ಲಕೋಟೆ ಮತ್ತು ಅವರಿಗೆ ಅವಶ್ಯಕವೆನಿಸಿದ ಕತ್ತರಿ ಟಾಚಣಿ ಮುಂತಾದವುಗಳನ್ನು ವೃತ್ತಪತ್ರಿಕೆಯಲ್ಲಿ ಇಟ್ಟುಕೊಂಡಿರುತ್ತಾರೆ.

ಭಾರೀ ಉದ್ದಿಮೆ ಕಂಪನಿಗಳ ವಿರುದ್ಧ ಹೋರಾಡುವಾಗ, ಸ್ವಂತ ಜೀವನ ಸಂರಕ್ಷಣೆಗಾಗಿ ಸ್ವಲ್ಪ ಮಟ್ಟಿಗಾದರೂ ಜಾಗರೂಕತೆ ವಹಿಸಬೇಕಾಗುತ್ತದೆ. ರಾಲ್ಫ್ ತೀರ ಸಣ್ಣ ಮನೆಯೊಂದರಲ್ಲಿ ವಾಸಿಸುತ್ತಾರೆ. ಅದನ್ನು ಗೊತ್ತು ಹಚ್ಚುವದೂ ಕಠಿಣ. ಅವರ ಟೆಲಿಫೋನ್ ನಂಬರು ಸಿಗುವದೂ ದುಸ್ತರ. ಸರ್ವ ಸಾವಧಾನವಾಗಿ ಅವರು ಮನೆಯಲ್ಲಿ ಯಾರಿಗೂ ಸಂದರ್ಶನ ಕೊಡುವುದಿಲ್ಲ.

ತೀರ ಸಾದಾ ಪೋಷಾಕಿನಲ್ಲಿ ರಾಲ್ಫ್ ಒಮ್ಮೊಮ್ಮೆ ಅಚಾನಕವಾಗಿ ಪೇಟೆಯಲ್ಲಿ

೧೦೫ ನೇ ಪುಟ ನೋಡಿರಿ.

ಮಂತ್ರಶಕ್ತಿ ಫಲಿಸೀತೆ ?

ಜಿ. ವಿ. ಗಣೇಶಯ್ಯ

ದ್ವಾಪರಯುಗದ ವಿಚಾರ; ಜನಮೇಜಯ ರಾಯನ ಸರ್ಪಯಾಗದ ಸಮಯ; ದ್ವಿಜಶ್ರೇಷ್ಠರ ದಿವ್ಯ ಮಂತ್ರಗಳ ಬಲದಿಂದ ಆಕರ್ಷಿತವಾದ ಎಲ್ಲ ಸರ್ಪಗಳೂ ಅಗ್ನಿಕುಂಡದಲ್ಲಿ ಬಂದು ಬಿದ್ದು ಭಸ್ಮವಾಗುತ್ತಿದ್ದರೂ ಪ್ರಮುಖನಾದ ತಕ್ಷಕನೇ ಇನ್ನೂ ಬಂದಿರಲಿಲ್ಲ. ಅವನು ಬೆದರಿ ಇಂದ್ರನ ಆಶ್ರಯದಲ್ಲಿರುವನೆಂದು ಜನಮೇಜಯರಾಯನಿಗೆ ತಿಳಿದಾಕ್ಷಣ, "ಇಂದ್ರ ಸಹಿತನಾಗಿ ತಕ್ಷಕನು ಬಂದು ಅಗ್ನಿಕುಂಡದಲ್ಲಿ ಬೀಳುವಂತೆ ಮಾಡಿರಿ!" ಎಂದು ಕೋಪೋದ್ರಿಕ್ತನಾಗಿ ಬ್ರಾಹ್ಮಣರಿಗೆ ಆಜ್ಞಾಪಿಸಿದನು. ಆ ಕೂಡಲೇ ಹೋತೃವು ಮಂತ್ರ ಪುನಶ್ಚರಣೆ ಮಾಡಿ 'ಸಹೇನ್ದ್ರಂ ತಕ್ಷಕಂ ಹೋಷ್ಯಾಮಿ ಸ್ವಾಹಾ,' ಎಂದು ಅಗ್ನಿಯಲ್ಲಿ ಆಜ್ಯವನ್ನು ಹೋಮ ಮಾಡಿದನು. ಕೂಡಲೇ ಆ ಮಹಾ ಮಂತ್ರವು ಇಂದ್ರಸಮೇತನಾಗಿ ತಕ್ಷಕನನ್ನು ಆಕರ್ಷಿಸಿ ಅಗ್ನಿಕುಂಡದ ಮೇಲಕ್ಕೆ ಧರದರನೆ ಎಳೆತಂದಿತು! ತನಗೆಲ್ಲಿ ವೃಥಾ ತೊಂದರೆಯಾದೀತೋ ಎಂದು ಭಯಗೊಂಡ ಇಂದ್ರನು ತಕ್ಷಕನನ್ನು ಬಿಟ್ಟು ಸ್ವರ್ಗಾಭಿಮುಖನಾದನು. ಇನ್ನೇನು ಹೋಮಕುಂಡದಲ್ಲಿ ತಕ್ಷಕನು ಬೀಳಬೇಕು ಎನ್ನುವಷ್ಟರಲ್ಲಿ ಅವನ ಹಿತಚಿಂತಕನಾದ, ಬ್ರಾಹ್ಮಣಶ್ರೇಷ್ಠನಾದ ಆಸ್ತೀಕನೆಂಬುವನು 'ತಿಷ್ಠ! ತಿಷ್ಠ! ತಿಷ್ಠ!' (ನಿಲ್ಲು) ಎಂದು ಮೂರಾವರ್ತಿ ಆಜ್ಞೆ ಮಾಡಲು ತಕ್ಷಕನು ಹೋಮಕುಂಡದ ಮೇಲೆ, ನಭೋಮಂಡಲದಲ್ಲಿ ತಲೆ ಕೆಳಗಾಗಿ ನಿಂತುಬಿಟ್ಟನು!

ಇದು ನಮ್ಮ ಇತಿಹಾಸ ಗ್ರಂಥವಾದ ಮಹಾಭಾರತದಲ್ಲಿನ ಒಂದು ಉದಾಹರಣೆ ಮಾತ್ರ. ಮಂತ್ರಶಕ್ತಿಯ ಬಗ್ಗೆ ಇಂಥಾ ಎಷ್ಟೋ ಉದಾಹರಣೆಗಳನ್ನು ನಮ್ಮ ಇತರ ಗ್ರಂಥಗಳಲ್ಲೂ ನಾವು ಕಾಣಬಹುದು. ಈ ರೀತಿಯ ಅಮೋಘ ಕಾರ್ಯಗಳನ್ನು ನಮ್ಮ ಪೂರ್ವಜರು ಕೇವಲ ಮಂತ್ರಶಕ್ತಿಯಿಂದಲೇ ಮಾಡಿರಲು ಸಾಧ್ಯವೇ? ಈ ೨೦ ನೇ ಶತಮಾನದಲ್ಲೂ ಇಂಥವೇ ಕಾರ್ಯಗಳನ್ನು ಮಂತ್ರಶಕ್ತಿಯಿಂದ ಮಾಡಲು ಬರುವುದೇ? ಎಂಬ ವಿಚಾರಗಳನ್ನು ಓದುಗರು ಆಲೋಚಿಸುವಂತೆ ಮಾಡುವುದೇ ಈ ಲೇಖನದ ಉದ್ದೇಶ. ಇಲ್ಲಿ ವೇದ ಮಂತ್ರಗಳನ್ನು ಮುಖ್ಯವಾಗಿ ಗಮನದಲ್ಲಿಡಲಾಗಿದೆ.

ಅಮೇರಿಕೆಯ ಹೆಸರಾಂತ ಗಾಯಕ ಲಿಯೋನಾರ್ಡ್ ವಾರೆನ್ ಎಂಬುವರು ಹಾಡುತ್ತಿದ್ದಾಗ ಗೋಡೆಗೆ ತೂಗುಹಾಕಿದ್ದ ಕನ್ನಡಿಯೊಂದು ಜೇನುಗೂಡಿನಂತೆ ಬಿರುಕು ಬಿಟ್ಟದ್ದು ಹಾಗೂ ಮೈಸೂರು ಸದಾಶಿವರಾಯರು ಹಾಡುತ್ತಿದ್ದಾಗ ಅವರ ಮನೆಯ ಗೋಡೆಗೆ ತೂಗುಹಾಕಿದ್ದ ನರಸಿಂಹದೇವರ ಪಟದ ಗಾಜು ಅವರ ಸಂಗೀತದ ಪ್ರಭಾವದಿಂದ ಒಡೆದು ಚೂರು ಚೂರಾದದ್ದು, ದೀಪಗಳು ಅದುರುತ್ತಿದ್ದದ್ದು –ಮುಂತಾದ ಘಟನೆ

ಗಳು ಐತಿಹಾಸಿಕ ಸತ್ಯಗಳು. ಈ ವಿಚಾರಗಳನ್ನು ತಿಳಿದಾಗ ಹಾಡಿನಿಂದ ಕಲ್ಲು ಕರಗಿಸುವುದು, ದೀಪ ಹತ್ತಿಸುವುದು ಮುಂತಾದ ಹಳೆಯ ಕಥೆಗಳಲ್ಲಿ ಬರುವ ಸನ್ನಿವೇಶಗಳು ಸತ್ಯವಿದ್ದಿರಲೂಬಹುದೆಂದು ಅನುಮಾನ ಸಹಜವಾಗಿ ನನಗೆ ಆಗಿದೆ. ಆದರೆ ನಾವು ಒಂದು ಕನ್ನಡಿಯ ಮುಂದೆ ನಿಂತು ಕಿವಿಯ ತಮ್ಮಟೆ ಒಡೆದುಹೋಗುವಂತೆ ಕಿರುಚಿಕೊಂಡರೂ ಕನ್ನಡಿಯ ಮೇಲೆ ಯಾವ ಪರಿಣಾಮವೂ ಉಂಟಾಗುವುದಿಲ್ಲ. ಕಾರಣವೇನು?

ಈಗ ದೀಪವು ನಮ್ಮ ಹಾಡಿನಿಂದ ಹತ್ತಿಕೊಳ್ಳಬೇಕೆಂದು ಇಟ್ಟುಕೊಳ್ಳೋಣ, ಅದಕ್ಕಾಗಿ ನಾವು ಒಂದು ನಿರ್ದಿಷ್ಟವಾದ ರೀತಿಯಲ್ಲೇ ಹಾಡಬೇಕು; ಸ್ವಲ್ಪ ಹೆಚ್ಚು ಕಡಿಮೆಯಾದರೂ ಖಂಡಿತವಾಗಿ ಆ ಫಲವು (ಅಂದರೆ ದೀಪ ಹತ್ತಿಕೊಳ್ಳುವ ಕಾರ್ಯ) ಪ್ರಾಪ್ತವಾಗುವುದಿಲ್ಲ. ('ಒಂದು ಮೂಲದಿಂದ ಹೊರಡುವ ಸ್ಪಂದನ ತರಂಗಗಳು ವಸ್ತುಗಳ ಮೇಲೆ ಪರಿಣಾಮವನ್ನುಂಟುಮಾಡುತ್ತವೆ' ಎಂಬ ವಿಚಾರವು ವೈಜ್ಞಾನಿಕ ಸತ್ಯವಾಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕು.) ಇಲ್ಲಿ ಸಂಗೀತವು ಸಸ್ಯಗಳ ಮೇಲೆ ಮಾಡುವ ಪರಿಣಾಮದ ಬಗ್ಗೆ ನಡೆದಿರುವ ಪ್ರಯೋಗಗಳನ್ನೂ ನೆನಪು ಮಾಡಿಕೊಳ್ಳುವುದು ಅಪ್ರಸ್ತುತವಾಗಲಾರದು.

ಸಂಗೀತಕ್ಕಿರುವ ಈ ಗುಣವೇ ನಮ್ಮ ವೇದ ಮಂತ್ರಗಳಿಗೂ ಇರುವುದು (ಸಂಗೀತವು ಸಾಮವೇದದಿಂದಲೇ ಬಂದುದಷ್ಟೆ.) ರಾಮಾಯಣ ಮಹಾಭಾರತಾದಿ ಗ್ರಂಥಗಳನ್ನು ಋಷಿಗಳು ಬರೆದರು ಎಂದು ನಾವು ತಿಳಿದಿದ್ದೇವೆ! ಆದರೆ ವೇದಗಳನ್ನು ಯಾರೋ ಬರೆದರೆಂದು ಎಲ್ಲಿಯೂ ಇದ್ದಂತಿಲ್ಲ. ಅದನ್ನು ಒಬ್ಬರು ಇನ್ನೊಬ್ಬರ ಕಿವಿಯಲ್ಲಿ ಹೇಳಿ ಕ್ರಮವಾಗಿ ಕಂಠಪಾಠ ಮಾಡಿಸುತ್ತಿದ್ದರೆಂದೂ, ಆದುದರಿಂದಲೇ ವೇದಗಳಿಗೆ 'ಶ್ರುತಿ'ಗಳೆಂದು ಹೆಸರು ಬಂದಿರುವುದೆಂದೂ ಎಲ್ಲರಿಗೂ ತಿಳಿದ ವಿಚಾರ. ಏಕೆಂದರೆ ವೇದ ಮಂತ್ರಗಳನ್ನು ಉಚ್ಚರಿಸುವಾಗ ಎಲ್ಲೆಲ್ಲಿ ಯಾವ ಯಾವ ರೀತಿ ಸ್ಪಂದನ ತರಂಗಗಳು ಉಂಟಾಗಬೇಕೆಂಬುದು ಎದುರಿಗೇ ಕುಳಿತು ಗುರುವು— ಸಂಗೀತ ಕಲಿಸುವಂತೆ ಬಾಯಿಂದ ಉಚ್ಚರಿಸಿ ಕಲಿಸಿದರೆ ಮಾತ್ರ ತಿಳಿಯುವುದಲ್ಲದೆ ಪುಸ್ತಕ ಓದಿ ತಿಳಿಯಲು ಸಾಧ್ಯವಿಲ್ಲ. ಸಂಗೀತದಂತೆಯೇ ಸ್ಪಂದನ ತರಂಗಗಳು ಒಂದು ಗೊತ್ತಾದ ರೀತಿಯಲ್ಲಿ ವೇದ ಮಂತ್ರೋಚ್ಚಾರದಲ್ಲೂ ಇರಲೇಬೇಕೆಂಬ ನಿಯಮವಿಲ್ಲದಿರುತ್ತಿದ್ದಲ್ಲಿ ವೇದಗಳನ್ನು ಎದುರಿಗೆ ಕುಳಿತು ಗುರುಮುಖೇನ ಕೇಳಿಯೇ ತಿಳಿಯಬೇಕಾಗಿದ್ದಿರಲಿಲ್ಲ; ಓದಿ ಅರಿಯಬಹುದಿತ್ತು. ಆದರೆ ಅಂಥಾ ಕ್ರಮವು ಇಲ್ಲದಿರುವುದರಿಂದ ಇಲ್ಲಿ ಮಂತ್ರಗಳ ನಿರ್ದಿಷ್ಟ ಉಚ್ಚಾರದಿಂದುಂಟಾಗುವ ಸ್ಪಂದನ ತರಂಗಗಳಿಗೆ ಬಹಳ ಮಹತ್ವವಿದ್ದಂತಾಗುವುದು. (ಇದರಿಂದಲೇ ಇರಬೇಕು ಸ್ವರ ವರ್ಣಾಕ್ಷರ ಲೋಪದೋಷಗಳು ಉಂಟಾಗಲೇ ಕೂಡದು; ಇದರಿಂದ ಮಹಾ ಕೇಡಾಗುವುದೆಂಬರ್ಥದ ಮಂತ್ರಗಳಿರುವುದು) ಈ ಸ್ಪಂದನ ತರಂಗಗಳ ಗೊತ್ತಾದ ರೀತಿಯ ಪ್ರಯೋಗದಿಂದ ಬೇಕು ಬೇಕಾದ ಕಾರ್ಯಗಳನ್ನು ಅಂದಿನವರು ಸಾಧಿಸುತ್ತಿದ್ದಿರಬೇಕು. ಅದಕ್ಕಾಗಿಯೇ ವೇದ ಮಂತ್ರೋಚ್ಚಾರದ ನಿಖರತೆಗೆ ಇಷ್ಟು ಕಾಳಜಿ ನಮ್ಮವರಿಗಿದ್ದಿತು.

ಆದ್ದರಿಂದ ಇಲ್ಲಿ ಪದಗಳ ಅಥವಾ ವಾಕ್ಯಗಳ ಉಚ್ಚಾರದಿಂದ ಹೊರಡುವ ಸ್ಪಂದನ ತರಂಗಗಳು ಮುಖ್ಯವಾಗಿ ಅರ್ಥ ಗೌಣವಾಗುವುದೆನಿಸುತ್ತದೆ. (ಆದರೆ ಅರ್ಥವನ್ನೂ ಉನ್ನತ ಮಟ್ಟದಲ್ಲಿರುವಂತೆ ವೇದಗಳನ್ನು ರಚಿಸಿರುವುದು (?) ನಮ್ಮ ಪೂರ್ವದ ಋಷಿಪುಂಗವರ ಪ್ರತಿಭೆಗೆ ಸಾಕ್ಷಿ! ಇಲ್ಲಿ ಅರ್ಥವನ್ನು ಕಡೆಗಣಿಸುವಂತೆಯೂ ಇಲ್ಲ; ಅದರಿಂದ ನಮಗೆ ಬಹಳ ಹಾನಿಯುಂಟಾಗುವುದು ನಿಶ್ಚಯ!)

ಆದ್ದರಿಂದ ಈಗ 'ಓಂ ನಮೋ ನಾರಾಯಣಾಯ' ಹಾಗೂ 'ಓಂ ನಮೋ ಲಕ್ಷ್ಮೀರಮಣಾಯ' ಎಂಬ ಎರಡೂ ಪದಪುಂಜಗಳು ಒಂದೇ ಅರ್ಥವನ್ನು ಹೊರಸೂಸುವುದಾದರೂ ಈ ಎರಡೂ ಪದಪುಂಜಗಳ

ಉಚ್ಚಾರದಿಂದ ಹೊರಡುವ ಸ್ಪಂದನ ತರಂಗಗಳ ವ್ಯತ್ಯಾಸದಿಂದಾಗಿ ಲಭ್ಯವಾಗುವ ಪರಿಣಾಮಗಳು ಬೇರೆಬೇರೆಯಾಗಿರುತ್ತವೆ. (ಈ ವಿಚಾರವನ್ನು ಯೋಚಿಸಿದಾಗ ವೇದಗಳನ್ನು ಬೇರೆ ಬೇರೆ ಭಾಷೆಗಳಿಗೆ ತರ್ಜುಮೆ ಮಾಡುವುದರಿಂದ ಪರಭಾಷಾ ಜನರು ವೇದಗಳ ಅರ್ಥ ಮಾತ್ರ ಅರಿತು, ನಿಶ್ಚಿತ ಫಲದಿಂದ ವಂಚಿತರಾಗುವರೆನಿಸುವುದು!)

ಆದ್ದರಿಂದ ನಾವು ಈ ವೇದ ಮಂತ್ರಗಳಿಂದ ನಿಶ್ಚಿತ ಫಲ ಪಡೆಯಬೇಕಾದರೆ ಅವುಗಳ ಉಚ್ಚಾರದಿಂದ ಹೊರಡಿಸಬೇಕಾದ ಸ್ಪಂದನ ತರಂಗಗಳ ರೀತಿಯನ್ನೆಲ್ಲ ಚೆನ್ನಾಗಿ ತಿಳಿದಿರಬೇಕು. (ಇದನ್ನೇ 'ಮಂತ್ರಸಿದ್ಧಿ' ಎಂದು ನಮ್ಮ ಹಿಂದಿನವರು ಕರೆದಿರಬೇಕು.) ಇಲ್ಲದಿದ್ದಲ್ಲಿ ಫಲ ಸಿಗುವುದೇ ಇಲ್ಲ ಈ ಗುಟ್ಟನ್ನು ಅರಿಯದೆ ಒಂದು ಮಂತ್ರವನ್ನು ಎಷ್ಟು ಕೋಟಿ ಬಾರಿ ಜಪಿಸಿದರೂ ಉಪಯೋಗ ಕಾಣದೆ ಮಂತ್ರಗಳ ಬಗ್ಗೆ ತಪ್ಪು ಭಾವನೆಯುಂಟಾಗಲು ಅವಕಾಶವಾಗುವುದು! (ವೇದ ಮಂತ್ರಗಳನ್ನು ಉಚ್ಚರಿಸುವಾಗ ಯಾವಯಾವ ಸ್ಥಾನದಲ್ಲಿ ಯಾವ ಯಾವ ರೀತಿಯ ಸ್ಪಂದನ ತರಂಗಗಳು ಉಂಟಾಗಬೇಕೆಂಬುದನ್ನು ಸಂಪೂರ್ಣವಾಗಿ ಅರಿತಿರುವವರು ಇಂದು ಈ ಪ್ರಪಂಚದಲ್ಲಿರುವರೇ ಎಂಬುದು ಯೋಚಿಸಬೇಕಾದ ವಿಚಾರ!)

ಆದರೂ ಪುಣೆಯಲ್ಲಿ ಹಿಂದಿನ ವರ್ಷ (೧೯೭೪ರಲ್ಲಿ ಕಾಶಿನಾಥ ಶಿಡೋರೆ') ಎಂಬೊಬ್ಬರು ಮಂತ್ರಶಕ್ತಿಯಿಂದ ಯಜ್ಞಕುಂಡದಲ್ಲಿ ಅಗ್ನಿಯು ಪ್ರಜ್ವಲಿಸುವಂತೆ ಮಾಡಿರುವುದು ಭಾರತದ ಪ್ರಮುಖ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಶಿಡೋರೆಯವರ ಅಪೂರ್ವವಾದ ಮಂತ್ರಶಕ್ತಿಯ ಈ ಪ್ರದರ್ಶನಕ್ಕೆ ವಿಜ್ಞಾನಿಗಳು, ಪುರಪ್ರಮುಖರು, ಪತ್ರಕರ್ತರಾದಿಯಾಗಿ ಅನೇಕರು ಸಾಕ್ಷಿಯಾಗಿದ್ದರೆಂಬುದು ಗಮನಾರ್ಹ. (ನಮ್ಮ ಸಮಕಾಲೀನವಾದ ಈ ಕಾರ್ಯವು ಮಂತ್ರಕ್ಕೆ ಶಕ್ತಿ ಇದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ.)

ವೇದಾದಿ ಪವಿತ್ರ ಗ್ರಂಥಗಳು ಇಂದು ತಾವು ಉದಿಸಿದ ಈ ಭಾರತದಲ್ಲೇ ಆಧುನಿಕತೆಯ ಹುಚ್ಚು ಬಿರುಗಾಳಿ ಬೀಸಿದುದರ ಫಲವಾಗಿ ಬೆಲೆಯಿಲ್ಲದಂತಾಗಿ ಬುದ್ಧಿಜೀವಿಗಳೆಂದುಕೊಳ್ಳುವವರಲ್ಲಿ ಕೆಲವರ ತಿರಸ್ಕಾರಕ್ಕೆ ಕೂಡ ಒಳಗಾಗಿರುವುದು ಧರ್ಮದ ಅವನತಿಯ, ಮುಖ್ಯವಾಗಿ ಭಾರತೀಯತೆಯ ಅವನತಿಯ ಸಂಕೇತ. ವೇದ ಮಂತ್ರಗಳ ಮರ್ಮವನ್ನರಿಯದೆ, ಅವನ್ನು ಸರಿಯಾಗಿ ಪ್ರಯೋಗ ಮಾಡದೆ, ನಿಷ್ಪ್ರಯೋಜಕಗಳೆಂದು ಗಣಿಸಿ, ಅವು ಕೇವಲ ಬ್ರಾಹ್ಮಣ ಜನಾಂಗದ ಬೂಟಾಟಿಕೆ ಎಂದು ಟೀಕಿಸುವುದು ಸರಿಯಲ್ಲ. ನಾವು ನೀರನ್ನು ಪಡೆಯಲು ಹೇಗೆ ಒಂದು ಗೊತ್ತಾದ ಪ್ರಮಾಣದಲ್ಲಿ ಜಲಜನಕ ಹಾಗೂ ಆಮ್ಲಜನಕಗಳನ್ನು ಪ್ರಯೋಗಶಾಲೆಯಲ್ಲಿ ವೈಜ್ಞಾನಿಕ ರೀತಿಯಲ್ಲಿ ಸಂಯೋಗ ಮಾಡುತ್ತೇವೋ ಹಾಗೆಯೇ ವೇದ ಮಂತ್ರಗಳಿಂದ ಕೂಡ ಸರಿಯಾದ ಕ್ರಮದಲ್ಲಿ ಪ್ರಯೋಗ ಮಾಡಿ, ನಿಶ್ಚಿತ ಫಲ ಪಡೆಯಬಹುದು. ಜಲಜನಕ, ಆಮ್ಲಜನಕಗಳ ಪ್ರಮಾಣದಲ್ಲಿ ವ್ಯತ್ಯಾಸವಾದರೆ ಹೇಗೆ ನಿಶ್ಚಿತ ಫಲ ಬಾರದೋ ಹಾಗೆಯೇ ವೇದ ಮಂತ್ರಗಳ ತಪ್ಪಾದ ಪ್ರಯೋಗದಿಂದ ನಿರಾಶೆ ಖಂಡಿತ.

☼

ಮಲೇಶಿಯದ ಒಂದು ಕೋರ್ಟ್ ಒವೆ, ಅಪ್ರಾಮಾಣಿಕತನದ ಕೃತ್ಯವೆಸಗಿದ್ದಕ್ಕಾಗಿ ಒಬ್ಬನಿಗೆ ಶಿಕ್ಷೆ ವಿಧಿಸಿತು. ಆತ ಮಾಡಿದ ಅಂತಹ ಅಪರಾಧ ಯಾವುದೆನ್ನುವಿರಾ? ಪೋಲೀಸು ಅಧಿಕಾರಿಗಳಿಗೆ ಲಂಚ ಕೊಡುವ ಉದ್ದೇಶದಿಂದ ಕೊಟ್ಟ ೭೦ ಡಾಲರುಗಳನ್ನು ಸ್ವಂತಕ್ಕಾಗಿ ಉಪಯೋಗಿಸಿಕೊಂಡಿದ್ದು. -ಜಾನ್ ಟೂಮಿ

ನಾನಾಸಾಹೇಬ ಪೇಶ್ವೆಯ

೫೪ ಕೋಟಿ

ರೂಪಾಯಿಗಳ ಬಚ್ಚಿಟ್ಟ ನಿಧಿ

ಮೂರು ಲಕ್ಷ ಸೈನ್ಯ ಹನ್ನೆರಡು ವರ್ಷ ಕಾಲ ಯುದ್ಧ ನಡೆಸಬಹುದಾದಷ್ಟು ನಿಧಿ ನನ್ನ ಹತ್ತಿರ ಇದೆ," ಎಂದು ನಾನಾ ಸಾಹೇಬ ಪೇಶ್ವೆ ತನ್ನದೊಂದು ಪತ್ರದಲ್ಲಿ ಕಾಣಿಸಿದ್ದಾನೆ. 'ಸಿಪಾಯಿಗಳ ಬಂಡಾಯ' ಎಂದೂ ಪ್ರಖ್ಯಾತವಾಗಿರುವ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅಧ್ವರ್ಯು ಈ ನಾನಾಸಾಹೇಬ ಪೇಶ್ವೆ. ಕಂಪನಿ ಸರಕಾರವು ಒಯ್ದುಬಿಟ್ಟ ಬ್ರಹ್ಮಾವರ್ತದಿಂದಲೇ ಈತ ಸ್ವಾತಂತ್ರ್ಯ ಸಮರವನ್ನು ದಿಗ್ದರ್ಶಿಸಿ ಪರಂಭೂತನಾದದ್ದೂ ವಿದಿತ ಸಂಗತಿ. ಅನಂತರ ಆತ ಗುಜರಾತದ ಸಿಹೋರ ಎಂಬಲ್ಲಿ ಇದ್ದ ಎಂದು ವದಂತಿಗಳು ಇವೆಯಾದರೂ, ಅನೇಕ ಇತಿಹಾಸಜ್ಞರು ಅದನ್ನು ನಂಬುತ್ತಿಲ್ಲ. ಆದರೆ ಆತನು ಕಂಪನಿ ಸರಕಾರವನ್ನು ಹೊಡೆದೋಡಿಸಲು ಹೋರಾಟ ನಡೆಸಿದ ಎಂಬ ಮಾತಿಗೆ ಎರಡಿಲ್ಲ.

ಹನ್ನೆರಡು ವರ್ಷ ಕಾಲ ಹೋರಾಡಬಲ್ಲಂತೆ ಮೂರು ಲಕ್ಷ ಸೈನಿಕರನ್ನು ಪೋಷಿಸಬಲ್ಲೆ ಎಂದು ನಾನಾಸಾಹೇಬ ತಮ್ಮ ಪತ್ರವೊಂದರಲ್ಲಿ ಕಾಣಿಸಿರಬೇಕಾದರೆ ಆತ ಅಷ್ಟು ಅಪಾರ ನಿಧಿ ಸಂಗ್ರಹಿಸಲಿಕ್ಕೆ ಬೇಕು ಎಂದೇ ತರ್ಕಿಸಬೇಕಾಗುತ್ತದೆ. ಹಾಗಾದರೆ ಆ ನಿಧಿ ಎಲ್ಲಿ ಹೂತಂಕೊಂಡು ಕುಳಿತಿದೆ? ಇನ್ನೂ ಅದು ಇದೆಯೆ? ಎಂಬೆಲ್ಲ ಪ್ರಶ್ನೆಗಳು ಯಾರನ್ನಾದರೂ ಕಾಡದೆ ಇರವು. ಎಲ್ಲಕ್ಕಿಂತ ಹೆಚ್ಚಾಗಿ ಅವು ಮಹಾರಾಷ್ಟ್ರದ ಡಾ. ದಾದೂಮಿಯಾ ಎಂಬ ಸಂಶೋಧಕರನ್ನು ಕಾಡುತ್ತಿವೆ. ಅವರು ನಾನಾಸಾಹೇಬ ಪೇಶ್ವೆಯ ಜೀವನದ ಉತ್ತರಾರ್ಧದ ಬಗ್ಗೆ ಸಂಶೋಧನೆ ನಡೆಸಿದ್ದಾರೆ.


ನಾನಾಸಾಹೇಬನ ಈ ಮೇಲಿನ ಪತ್ರದ ಉಲ್ಲೇಖವನ್ನು ಅವರು ಖ್ಯಾತ ಇತಿಹಾಸ ಸಂಶೋಧಕರಾದ ಮಹಾಮಹೋಪಾಧ್ಯಾಯ ದತ್ತೋ ವಾಮನ ಪೋತದಾರ ಹಾಗೂ ಶ್ರೀ ಸೇತುಮಾಧವ ಪಗಡಿ ಅವರ ಎದುರಿಗೆ ಮಾಡಿದಾಗ, "ನಿಮ್ಮ ಹೇಳಿಕೆಯನ್ನು ಪುಷ್ಟೀಕರಿಸುವಂಥ ಪ್ರಬಲ ಪುರಾವೆಗಳು ಇನ್ನೂ ಬೇಕು. ನಿರಾಶರಾಗದೆ ನಿಮ್ಮ ಸಂಶೋಧನೆ ಮುಂದುವರಿಸಿರಿ." ಎಂದು ಆಶೀರ್ವದಿಸಿದರಂತೆ.

ಡಾ. ದಾದೂಮಿಯಾ ತಮ್ಮ ಸಂಶೋಧನೆ ಹಾಗೇ ಮುಂದುವರಿಸಿದಾಗ ಅವರ ಕೈಗೆ ಸ್ವಾಮಿ ದಯಾನಂದರ ಅಪ್ರಕಟಿತ ಆತ್ಮ

ಚರಿತ್ರೆ ಸಿಕ್ಕಿತು. ಅದರಲ್ಲಿ ನಾನಾಸಾಹೇಬ ಪೇಶ್ವೆಯು ಯುದ್ಧನಿಧಿಯು ಉಲ್ಲೇಖವಿದ್ದದ್ದು ಕಂಡು ಬಂದಿತು. ದಾದೂಮಿಯಾ ತಮ್ಮ ಸಂಗ್ರಹದಲ್ಲಿದ್ದ ಇನ್ನಿತರ ಕಾಗದ ಪತ್ರಗಳನ್ನು ಮತ್ತೆ ಮತ್ತೆ ಪರಿಶೀಲಿಸಿದಾಗ ಈ ಕೆಳಗಿನ ನಾಲ್ಕು ಅಂಶಗಳು ಅವರಿಗೆ ಸ್ಪಷ್ಟವಾಗಿ ಗೋಚರವಾದವು:

೧) ವಿಕ್ರಮ ಶಕೆ ೧೯೨೫ನೇ ಸಂವತ್ಸರದಲ್ಲಿ ನಾನಾಸಾಹೇಬ ಪೇಶ್ವೆಯು ಸಿಹೋರದ ಹರ್ಷರಾಮಶಾಸ್ತ್ರಿ ಮೆಹತಾರಿಗೆ ಬರೆದಿರುವ ಪತ್ರದಲ್ಲಿ "ಬದನೂರ ಸಮೀಪದ ಮೇಡಿ ರಾಮದ ಹತ್ತಿರ ನಮ್ಮ ನಿಧಿ ಸುರಕ್ಷಿತವಾಗಿದೆ. ನಾಗಪುರದ ಶ್ರೀಮಂತ ಬುಟಿ ಸರದಾರರು ನಮಗೆ ಬೇಕಾದ ನೆರವು ನೀಡಲು ಸಿದ್ಧರಿದ್ದಾರೆ," ಎಂದು ಕಾಣಿಸಲಾಗಿದೆ.

೨) ಮತ್ತೊಂದೆಡೆಯಲ್ಲಿ ನಾನಾಸಾಹೇಬ ಹೀಗೆ ಬರೆದಿದ್ದಾನೆ: "ಬುಟಿ ಅವರೇ ಈ ನಿಧಿಯನ್ನು ಪ್ರತ್ಯಕ್ಷ ನನಗೆ ತೋರಿಸಿದರು. ಮೂರು ಲಕ್ಷ ಸೈನ್ಯ ಹನ್ನೆರಡು ವರ್ಷ ಯುದ್ಧ ನಡೆಸಲು ಸಾಲುವಷ್ಟು ಈ ನಿಧಿ ಇದೆ. ಸಕಾಲದಲ್ಲಿ ಈ ಬೊಕ್ಕಸವನ್ನು ನನಗೆ ಸಮರ್ಪಿಸಲು ಬುಟಿ ಅವರು ಸಿದ್ಧರಿದ್ದಾರೆ."



೩) ಅನಂತರ ಇಪ್ಪತ್ತು ವರ್ಷಗಳ ಮೇಲೆ ಅಂದರೆ ವಿಕ್ರಮ ಸಂವತ್ ೧೯೪೫ ಮಾರ್ಗಶೀರ್ಷ ಪೌರ್ಣಿಮೆಯಂದು ಕಲ್ಯಾಣಜಿ ಎಂಬವನು ತನ್ನ ಪತ್ರದಲ್ಲಿ ಕಾಣಿಸಿದ್ದು ಈ ರೀತಿ: "ನಮ್ಮೆಲ್ಲರ ವೆಚ್ಚ ಈಗ ಸುರತದಿಂದ ಸಾಗುತ್ತಿದೆ. ನಾವು ಎಲ್ಲರೂ ಅಂದರೆ ಇಪ್ಪತ್ತೆರಡು ಜನ ಇದ್ದೇವೆ. ಇನ್ನುಳಿದವರನ್ನೆಲ್ಲ ಧರ್ಮಕ್ಕೆ ಸಾಗಿಸಲಾಗಿದೆ. ಬ್ರಹ್ಮಕುಂಡದಲ್ಲಿ ೫೦ ಕುದುರೆ ದನಕರು ಮಾತ್ರ ಉಳಿದಿವೆ."

೪) ಮತ್ತೆ ಒಂಭತ್ತು ವರ್ಷಗಳ ನಂತರ, ವಿಕ್ರಮ ಸಂವತ್ ೧೯೫೪ರಲ್ಲಿ ಮಾಘ ಶುಕ್ಲ ಏಕಾದಶಿ ದಿನ ಕಲ್ಯಾಣಜಿ ಬರೆದ ಪತ್ರದಲ್ಲಿ ಹೀಗಿದೆ: "ರತ್ನಾ ಕುಂಬಾರನ ನಾವೆಯಲ್ಲಿ ಒಂದು ಚೀಲ ಕಳಿಸಲಾಗಿದೆ. ಅದರಲ್ಲಿ ಬ್ರಿಟಿಶ್ ಅರಸನ ಮುದ್ರೆಯ ೧೫೦೦ ಗಿನಿಗಳಿವೆ. ಎಚ್ಚರದಿಂದ ಸ್ವೀಕರಿಸಿ."

ಇಷ್ಟೆಲ್ಲ ಅಂಶಗಳು ದೊರೆತ ನಂತರ ದಾದೂಮಿಯಾ ಇನ್ನಷ್ಟು ಅಸ್ವಸ್ಥರಾದರು. ಆ ನಿಧಿ ಎಲ್ಲಿದೆ ಎಂಬುದನ್ನು ಪತ್ತೆ ಹಚ್ಚಿಯೇ ಬಿಡಬೇಕು ಎಂದು ಇನ್ನಷ್ಟು ಆಗ್ರಹ ತೊಟ್ಟರು. ಬ್ರಿಟಿಶರ ವಿರುದ್ಧ ಸಂಗ್ರಾಮ ನಡೆಸಲು ಸಂಗ್ರಹಿಸಿರುವ ನಿಧಿಯನ್ನು ನಾನಾಸಾಹೇಬ ಅತಿ ರಹಸ್ಯವಾಗಿ ಬಚ್ಚಿಟ್ಟಿರಲೇಬೇಕು. ಸುಲಭದಲ್ಲಿ ಇಂಗ್ಲೀಷರ ಕೈಗೆ ಬೀಳದಂತೆ ಎಂದೂ ಅವನಿಗೆ ಹೊಳೆಯದಿರಲಿಲ್ಲ. ಆದರೂ ಆ ನಿಧಿ ಎಲ್ಲಿ ಬೈತಿಟ್ಟುಕೊಂಡಿದೆ ಎಂಬುದನ್ನು ತಿಳಿಸುವ ಪುರಾವೆ ಇಲ್ಲದೆ ಏನೂ ಮಾಡಲು ಬರುವಂತಿಲ್ಲ.

ಈ ರಹಸ್ಯ ಸ್ಫೋಟ ಮಾಡುವ ಕಾಗದ ಕೊನೆಗೊಮ್ಮೆ ದಾದೂಮಿಯಾರ ಕೈಗೆ ಸಿಕ್ಕಿತು. ಅದು ಅಂತಿಂಥ ಕಾಗದವಲ್ಲ; ಅದರ ಮೇಲೆ ಭಾವನಗರ ಸಂಸ್ಥಾನದ ಮುದ್ರೆ ಇದ್ದಿತು. ವಿಕ್ರಮ ಸಂವತ್ ೧೯೪೩ರ ಫಾಲ್ಗುಣ ವದ್ಯ ಪಂಚಮಿಯಂದು ಆ ಕಾಗದವನ್ನು ತಯಾರಿಸಲಾಗಿದೆ. ನಾನಾಸಾಹೇಬ ಬಚ್ಚಿಟ್ಟಿದ್ದ ನಿಧಿಯ ವಿವರಗಳೆಲ್ಲವೂ ಆ ಕಾಗದ

ದಲ್ಲಿದೆ. ಆ ಕಾಗದದಲ್ಲಿಯು ಭೌಗೋಲಿಕ ವಿವರಣೆ ನಾನಾಸಾಹೇಬ ವಾಸವಾಗಿದ್ದ ಎಂದು ಹೇಳಲಾದ ಮನೆಯನ್ನು ಗುರುತಿಸುವಂತಿದೆ.

ಈ ಕಾಗದದಲ್ಲಿಯ ಮಹತ್ವರ ಅಂಶಗಳು ಇಂತಿವೆ :

"ಗುಹೆಯ ನಕ್ಷೆ ಮತ್ತು ವಿವರಣೆಗಳು ಎಲ್ಲಿ ಏನಿದೆ ಎಂಬುದನ್ನು ಸ್ಪಷ್ಟೀಕರಿಸ ಬಲ್ಲವು. ಶ್ರೀಮಂತ ಮಹಾರಾಜ ನಾನಾ ಸಾಹೇಬ ಪೇಶ್ವೆ ಅವರ ಹೇಳಿಕೆಯಂತೆ ಈ ಕಾಗದ ಸಿದ್ಧಪಡಿಸಲಾಗಿದೆ. (ವಿಕ್ರಮ) ಸಂವತ್ ೧೯೪೩ ರ ಫಾಲ್ಗುಣ ವದ್ಯ ಪಂಚಮಿಯಂದು ಅವರ ಆಜ್ಞೆಯಂತೆ ಕಾಗದ ತಯಾರಿಸಲಾಯಿತು.

"(ವಿಕ್ರಮ) ಸಂವತ್ ೧೯೧೯ರ ಅಕ್ಷಯ ತೃತೀಯೆಯಂದು ಈ ಗುಹೆಯನ್ನು ನಿರ್ಮಿಸಲಾಯಿತು. ಮಹಾರಾಜರು ಇಲ್ಲಿ ವಾಸಿಸಲು ಬರುವ ಪೂರ್ವದಲ್ಲಿ ಏಲಾನಡ ಗ್ರಾಮದಲ್ಲಿ ಒಂದು ವರ್ಷ ಇದ್ದರು."

"ಗೌತಮೀ ನದೀ ತೀರದಲ್ಲಿ ಗೌತಮಿ ಕುಂಡ ಇದೆ. ಅದರ ಸಮೀಪದಲ್ಲಿ ಉತ್ತರಕ್ಕೆ ಅಕ್ಷಯವಟ ಇದೆ. ಮೊದಲು ಅಲ್ಲಿ ಚಿಕ್ಕ ಗುಹೆ ಕೊರೆಯಲಾಯಿತು. ಚಿಕ್ಕ ಗುಹೆಯಲ್ಲಿ ಶಿವಲಿಂಗವನ್ನೂ ದೊಡ್ಡ ಗುಹೆಯಲ್ಲಿ ಭಗವಾನ್ ದತ್ತಾತ್ರೇಯನ ಮೂರ್ತಿಯನ್ನು ಸ್ಥಾಪಿಸಲಾಯಿತು.

"ದೊಡ್ಡ ಗುಹೆಯನ್ನು ಚಿಕ್ಕ ಗುಹೆಗೆ ಜೋಡಿಸುವ ಮಾರ್ಗದ ಮಧ್ಯದಲ್ಲಿ ನಿಧಿ ಇದ್ದಲ್ಲಿಗೆ ಹೋಗಲು ಒಂದು ಸ್ವತಂತ್ರ ದಾರಿ ಇದೆ. ಈ ದಾರಿ ಇಪ್ಪತ್ತೊಂದು ಮಾರು ಉದ್ದವಿದೆ. ಒಬ್ಬನೇ ನಡೆದು ಹೋಗುವಷ್ಟು ಈ ದಾರಿ ಅಗಲವಿದೆ. ಈ ದಾರಿ ನೀರಿನಲ್ಲಿ ಸಾಗುತ್ತದೆ. ಈ ದಾರಿಯ ಕೊನೆಯಲ್ಲಿ ಮೂರುವರೆ ಮೊಳ (೩।। ಘನ ಮೀಟರ್) ಕೋಣೆಯನ್ನು ಕಲ್ಲಿನಲ್ಲಿ ಕೊರೆಯಲಾಗಿದೆ. ಆ ಕೋಣೆಯ ಗೋಡೆಗಳನ್ನು ಗಚ್ಚಿನಿಂದ ಗಿಲಾಯಿ ಮಾಡಲಾಗಿದೆ. ಅದು ಕಾಜಿನಂತೆ ಹೊಳೆಯುತ್ತದೆ."

"ಆ ಕೋಣೆಯಲ್ಲಿ ಚಂದ್ರ– ತಕ್ಕಡಿ ಮುದ್ರೆಯ ಎರಡು ಲಕ್ಷ ಮೂವತ್ತಾರು ಸಾವಿರ ಅಶ್ರಫಿ ಗಿನಿಗಳಿವೆ. ಅಲ್ಲದೆ ಅದೇ ಕೋಣೆಯಲ್ಲಿ ಒಂದು ಲಕ್ಷ ಬ್ರಿಟಿಶ್ ಅರಸನ ಮುದ್ರೆಯ ಗಿನಿಗಳು ಇವೆ. ಮತ್ತು ಒಂದು ಲಕ್ಷ ರೂಪಾಯಿಗಳ ಚೀಲಗಳೂ ಅಲ್ಲಿವೆ."

"೧, ೪ ಮತ್ತು ೬ನೇ ಕುಂಡೆಗಳಲ್ಲಿ ಹದಿಮೂರು ರತ್ನಗಳನ್ನಿಡಲಾಗಿದೆ. ಅವುಗಳ ಕಾಂತಿ ಕೋಣೆಯನ್ನೆಲ್ಲ ಬೆಳಗಿದೆ. ರತ್ನ ಕಂಕಣಗಳ ಎರಡು ಜೋಡಿ, ಬಾಜುಬಂದ (ವಂಕಿ) ಮುಂತಾದ ಆಭರಣಗಳ ಹಂಡೆ ಇದೆ."

"ಈ ಎಲ್ಲ ನಿಧಿಯನ್ನು ಸುರಕ್ಷಿತವಾಗಿ ಇಡಲಾಗಿದೆ, ಇದರ ಮೇಲೆ ಬಂಧನ ಎರಡು ಪ್ರತಿಮೆಗಳನ್ನೂ ಮೋಡೀರಾಮನು ತಂದಿದ್ದ ೨ ಯಕ್ಷ ಪ್ರತಿಮೆಗಳನ್ನೂ ಇಡಲಾಗಿದೆ. ನಂತರ ಕೋಣೆಯ ಬಾಗಿಲನ್ನು ಶಿಲಾಫಲಕದಿಂದ ಮುಚ್ಚಿ ಮೇಣದಿಂದ ಮೆತ್ತಲಾಗಿದೆ."

"ಈ ನಿಧಿಯನ್ನು ಯಾರು ಉಪಯೋಗಿಸಬಹುದು? ನಾನಾಸಾಹೇಬ ಪೇಶ್ವೆಯ ವಂಶದ ಯಾರಾದರೂ (ಅಂದರೆ ರಾಜವಂಶದವರು ಅಥವಾ ಭಾರತ ಸರಕಾರ) ಏಳು ಪೀಳಿಗೆಗಳ ವರೆಗೆ ಉಪಯೋಗಿಸಬಹುದು. ಇತರರು ಯಾರಾದರೂ ಇದನ್ನು ಉಪಯೋಗಿಸಿದರೆ ಗತಪ್ರಾಣರಾಗುವರು. ಆ ರೀತಿ ಮಾಟ ಮಾಡಿದ ನಂತರವೇ ಈ ನಿಧಿಯನ್ನು ಇಲ್ಲಿಡಲಾಗಿದೆ."

"ಆಂಗ್ಲರ ರಾಜ್ಯ ಭರದಿಂದ ಸಾಗಿದೆ. ಗುಹೆಯನ್ನು ಮಣ್ಣಿನಿಂದ ಮುಚ್ಚಿಬಿಡಲಾಗಿದೆ. ಅದರ ದ್ವಾರಕ್ಕೆ ಕತ್ತೆಯ ಹಲ್ಲುಗಳು, ಬೂದಿ ಉಂಡೆಗಳು, ಆಕಳ ಬಾಲದ ಬೂದಿ ಇಡಲಾಗಿದೆ." (ಈ ಸ್ಥಳವನ್ನು ಹೇಗೆ ಗುರುತಿಸಬೇಕು ಎಂಬುದಕ್ಕೆ ಒಂದು ಸೂತ್ರವನ್ನೂ ಹೇಳಲಾಗಿದೆ. ಜ್ಯೋತಿಷಿಗಳಿಗೆ ಅದರ ಅರ್ಥ ಸುಲಭದಲ್ಲಿ ಆಗಬಹುದು) "ಭಾದರವಾ ವದಿ ಸೂರ್ಯ–ಚಂದ್ರಘನೆ ಷಡಿ ೫೬ ಪಳ ೩೦ ನೇ ಶ ನಿ ಆ ಜಗಾಸೆ" (ಆ ದಿನ, ಆ ಕ್ಷಣಕ್ಕೆ ಮೂಡುವ ಸೂರ್ಯನ ಕಿರಣ ಆ ಸ್ಥಳದ ಮೇಲೆ ಬೀಳುತ್ತವೆ ಎಂದು ನಾನಾ ಸಾಹೇಬನ ಮೊಮ್ಮಗ ಹೇಳುತ್ತಾನೆ.)

"ಗುಹೆಯನ್ನು ಮುಚ್ಚಿ ಮೇಲೆ ಗಚ್ಚಿನ ಗಿಲಾಯಿ ಮಾಡಲಾಗಿದೆ. ಚಿಕ್ಕ-ದೊಡ್ಡ ಗುಹೆಗಳ ನಡುವೆ ಈ ಸುರಂಗ ಮಾರ್ಗ ಇದೆ.

ವಿಕ್ರಮ ಸಂವತ್ ೧೯೪೩ ಫಾಲ್ಗುಣ ವದ್ಯ ಪಂಚಮಿ ದಿನದಂದು ವಲಾವಡ ಗ್ರಾಮ ನಿವಾಸಿ ಕಲ್ಯಾಣಜಿ ವಿಶ್ವನಾಥ ಮೆಹತಾ ಈ ಕಾಗದ ತಯಾರಿಸಿದ್ದಾರೆ. ಹರ್ಷರಾಮ ಶಾಸ್ತ್ರಿ ಅದಕ್ಕೆ ತಕ್ಕ ಮಾಟ ಮಾಡಿದ್ದಾರೆ."

ಹೀಗೆ ಅಧಿಕೃತವಾಗಿರುವ ಕಾಗದವು ಸುಳ್ಳೆಂದು ಹೇಳುವದು ಧಾರ್ಷ್ಟ್ಯದ ಮಾತೇ ಆದೀತು. ಈ ಕಾಗದದ ಮೇಲೆ ಭಾವನಗರ ಸಂಸ್ಥಾನದ ರಾಜಮುದ್ರೆ, ದಿನಾಂಕ ಎಲ್ಲವೂ ಸ್ಪಷ್ಟವಾಗಿದೆ. ಆದರೂ ಸಂಶೋಧಕರು ಇದನ್ನು ನಂಬಲು ಸಿದ್ಧರಿರಲಿಲ್ಲ. ಅದರಲ್ಲಿ ಹೇಳಿದ ಬಚ್ಚಿಟ್ಟ ನಿಧಿ ಬಯಲಿಗೆ ಬಂದಾಗಲೇ ಇತಿಹಾಸಜ್ಞರಿಗೆ ಮನವರಿಕೆ ಆಗಬೇಕು.

ಶ್ರೀ ದಾದೂಮಿಯಾ ಏನೂ ಕಡಿಮೆ ಸಾಹಸಿಗಳಲ್ಲ. ಈ ಕಾಗದ ದೊರೆತ ಕೂಡಲೇ ಗುಜರಾತ ಸರಕಾರದ ಗವರ್ನರರ ಕಾರ್ಯದರ್ಶಿ ಶ್ರೀ ಸರೀನರನ್ನು ಕಂಡು ಅವರಿಗ ಈ ಕಾಗದ ತೋರಿಸಿದರು. ಅವರು ತಮ್ಮ ತಜ್ಞರೊಡನೆ ಚರ್ಚಿಸಿ "ಈ ಕಾಗದ ಖೊಟ್ಟಿ ಎಂದು ಸಿದ್ಧ ಮಾಡುವದು ಕಠಿಣ," ಎಂಬ ನಿರ್ಣಯಕ್ಕೆ ಬಂದರು. ನಾನಾಸಾಹೇಬನ ನಿಧಿಯನ್ನು ಕಂಡುಹಿಡಿಯಬೇಕು ಎಂದು ಅವರೇನೋ ಆಜ್ಞೆ ಹೊರಡಿಸಿದರು. ದಾದೂಮಿಯಾ ಚಿನ್ನದ ಗಿನಿಗಳ ಕನಸು ಕಾಣಹತ್ತಿದರು.

ಅಷ್ಟರಲ್ಲೇ ಚುನಾವಣೆ ಬಂದಿತು. ಆ ಗೊಂದಲದಲ್ಲಿ ಒಂದು ರಾಜಕೀಯ ಕೊಲೆ ನಡೆಯಿತು. ಆಗ ಈ ನಿಧಿ ಶೋಧದ ಆಜ್ಞೆ ಹಿಂದೆ ಬಿದ್ದು ಕೊಲೆಗಡಕರ ಶೋಧಕ್ಕಾಗಿ ಆಜ್ಞೆ ಹೊರಟಿತು.


ಚುನಾವಣೆ ಮುಗಿಯಿತು. ಜನತಾ ಸರಕಾರ ಅಧಿಕಾರಕ್ಕೆ ಬಂದಿತು. ಸರಿನ ದಿಲ್ಲಿಗೆ ಹಿಂತಿರುಗಿದರು.

ದಾದೂಮಿಯಾ ಆಗ ಹೋಗಿ ಮುಖ್ಯಮಂತ್ರಿಗಳನ್ನೇ ಕಂಡರು. ಸಾಕಷ್ಟು ಚರ್ಚಿಸಿದರು. ನಿಧಿ ಪತ್ತೆ ಹಚ್ಚುವದಾಗಿ ಅವರೂ ಹೇಳಿದರು. ಆದರೆ ಆ ಸರಕಾರವೇ ಸದಾಕಾಲ ಗಂಡಾಂತರದಲ್ಲಿ ಇದ್ದದ್ದರಿಂದ ನಿಧಿ ಶೋಧದ ಕಾರ್ಯ ನಡೆಯಲೇ ಇಲ್ಲ. ಜನತಾ ಸರಕಾರ ಉರುಳಿತು.

ಈಗ ಗುಜರಾತದಲ್ಲಿ ಮತ್ತೆ ರಾಷ್ಟ್ರಪತಿ ಆಳಿಕೆ ಐದನೇ ಸಲ ಜಾರಿಯಲ್ಲಿ ಬಂದಿದೆ. ಆದರೂ ಏನೂ ಚಟುವಟಿಕೆ ಈ ದಿಶೆಯಲ್ಲಿ ನಡೆದಿಲ್ಲ.

"ನೀವು ದಿಲ್ಲಿಗೆ ಬನ್ನಿ. ಈ ನಿಧಿಯ ವಿಚಾರದಲ್ಲಿ ಒಬ್ಬ ಶ್ರೀಮತಿಯನ್ನು ಭೆಟ್ಟಿ ಮಾಡಿಸುತ್ತೇನೆ. ಅವರು ಮನಸು ಮಾಡಿದರೆ, ಎರಡೇ ದಿನಗಳಲ್ಲಿ ಆ ಗುಪ್ತನಿಧಿ ಬಯಲಿಗೆ ಬರುತ್ತದೆಂದು," ಯಶವಂತರಾವ ಚವ್ಹಾಣರು ದಾದೂಮಿಯಾರಿಗೆ ಹಿಂದೊಮ್ಮೆ ಹೇಳಿದ್ದರಂತೆ.

ದಾದೂಮಿಯಾ ಅದನ್ನು ಮರೆತಿಲ್ಲ ಆದರೂ ಅವರು ದಿಲ್ಲಿಗೆ ಹೋದಂತಿಲ್ಲ. ✡



ಪ್ರತಿಭಾವಂತರಾದ ಲೇಖಕ, ಕವಿ ಅಥವಾ ಸಂಗೀತಗಾರರ ಮೂರ್ತಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸಿದ್ದನ್ನು ನೀವೆಲ್ಲ ಕಂಡಿದ್ದೀರಿ. ಆದರೆ ಒಬ್ಬ ಸಮರ್ಥ ವಿಮರ್ಶಕನ ಮೂರ್ತಿಯನ್ನು ನಿಲ್ಲಿಸಿದ್ದನ್ನು ನೀವೆಲ್ಲಿಯಾದರೂ ಕಂಡಿದ್ದೀರಾ?

—ಸಾಜಾ ಗಾಯ್ತ್ರಿ

ಶಿಸ್ತು

ಜಿ. ಟಿ. ನಾರಾಯಣರಾವ್

ಮಿಲಿಟರಿ ದಳವೊಂದರ ಉತ್ಸವ ಕವಾಯತಿಯನ್ನು ನೋಡುತ್ತಿದ್ದಂತೆಯೇ "ಅಹಾ ಎಂಥ ಶಿಸ್ತು" ಎಂದು ತೀರ ಸಹಜವಾಗಿ ನಾವು ಉದ್ಗರಿಸುವುದುಂಟು. ಪಾಠ ಪ್ರವಚನಗಳು ಸರಿಯಾಗಿ ನಡೆದು ವಿದ್ಯಾರ್ಥಿಗಳಿಗೆ ಯೋಗ್ಯ ಶಿಕ್ಷಣ ಮತ್ತು ಸಮರ್ಥ ಮಾರ್ಗದರ್ಶನ ಲಭಿಸುವಂಥ ಒಂದು ವಿದ್ಯಾಸಂಸ್ಥೆಯ ವಿಚಾರವಾಗಿ ಜನ "ಶಿಸ್ತಿನ ಪರಮೋಚ್ಚ ಮಾದರಿ," ಎಂದು ಹೇಳುವುದು ವಾಡಿಕೆ. ಕಾಲೇಜು ದಿನಗಳಲ್ಲಿ ನಮ್ಮ ಗಣಿತ ಪ್ರಾಧ್ಯಾಪಕರು ಹೇಳುತ್ತಿದ್ದ ಮಾತೊಂದು ನನ್ನ ನೆನಪಿಗೆ ಬರುತ್ತದೆ. ಬೀಜಗಣಿತದಲ್ಲಿ ಅವರು ಕೆಲವು ಕಸರತ್ತುಗಳನ್ನು ನಡೆಸಿ, ಸಂಖ್ಯೆ ಒಂದು ಸಂಖ್ಯೆ ಎರಡಕ್ಕೆ ಸಮವಾಗಿದೆ (೧=೨) ಎಂದು ಸಾಧಿಸಿದರು. ಇದು ನಾವು ತಿಳಿದು ವ್ಯವಹರಿಸುತ್ತ ಬಂದಿರುವ ಸಂಖ್ಯಾ ಪ್ರಪಂಚದ ಅಡಿಪಾಯವನ್ನೇ ಹಂದಾಡಿಸಿಬಿಡುವುದೆಂಬುದು ಸ್ಪಷ್ಟವಾಗಿದೆ. ಅವರೇ ಮುಂದುವರಿದು "ನಾವು ಬೀಜಗಣಿತದ ಶಿಸ್ತನ್ನು ಮುರಿಯುವ ಅಂದರೆ ಸೊನ್ನೆಯಿಂದ ಭಾಗಿಸುವ, ದುಸ್ಸಾಹಸವನ್ನು ಮಾಡಿದ್ದರಿಂದ ಈ ಕುಂಭೀಪಾಕಕ್ಕೆ ಬಿದ್ದು ತೊಳಲಾಡುತ್ತಿದ್ದೇವೆ," ಎಂದು ನಕ್ಕು ಹೇಳಿದರು.

ಹಾಗಾದರೆ ಶಿಸ್ತು ಅಂದರೇನು ?

ಪರಿಸರದ ಬಲಗಳಿಗೆ ಅನುವರ್ತಿಯಾಗಿ ನಮ್ಮ ಬದುಕನ್ನು ರೂಪಿಸಿಕೊಳ್ಳುವ ವಿಧಾನವೇ ಶಿಸ್ತು. ಉದ್ದಿಷ್ಟ ಕಾರ್ಯವನ್ನು ನಿರ್ವಹಿಸುವಲ್ಲಿ ಅದರ ಇತಿಮಿತಿಗಳು ನಮ್ಮ ನಡವಳಿಕೆಯ ಮೇಲೆ ವಿಧಿಸುವ ನಿರ್ಬಂಧವೇ ಶಿಸ್ತು. ಸಮಾಜ ಜೀವಿಯಾದ ಮನುಷ್ಯ ತನ್ನ ಹಿತವನ್ನು ಸಮಾಜ ಹಿತಕ್ಕೆ ಧಕ್ಕೆ ಒದಗದಂತೆ ಸಾಧಿಸಲು ಸ್ವಂತ ಇಚ್ಛೆಯಿಂದ ಬಿಗಿ ಎಳೆದು ಹಿಡಿದಿರಬೇಕಾದ ವಿವೇಕದ ಲಗಾಮೇ ಶಿಸ್ತು.

ಎರಡು ಉದಾಹರಣೆಗಳಿಂದ ಈ ಹೇಳಿಕೆಯನ್ನು ವಿಶದೀಕರಿಸುತ್ತೇನೆ. ಇಳಿಜಾರಿನಲ್ಲಿ ದೌಡಾಯಿಸುತ್ತಿರುವ ಸೈಕಲ್ಲಿನ ಬಿರಿಗಳನ್ನು ಸಾಕಷ್ಟು ಅಮುಕಿ ಅಲ್ಲಿನ ಪರಿಸರದ ಬಲಗಳಿಗೆ ಅನುವರ್ತಿಯಾಗಿ ಓಟವನ್ನು ಹತೋಟಿಗೆ ತರದಿದ್ದರೆ ಸವಾರನ ಪಾಡು ಏನಾದೀತೆಂಬುದು ಸೈಕಲ್ ಏರಿ ಬಿದ್ದವರಿಗೆಲ್ಲ ತಿಳಿದೇ ಇದೆ. ಮನುಷ್ಯ ಸ್ವತಂತ್ರನಾಗಿ ಬಾಳಲು ಹುಟ್ಟಿದವ. ಆದ್ದರಿಂದ ಖಾಸಗಿ ಆಗಲಿ ಸಾರ್ವಜನಿಕವಾಗಲಿ ಆತನ ಯಾವದೇ ಚಟುವಟಿಕೆಯಲ್ಲಿಯೂ ಲಗಾಮನ್ನು ಬಿಗಿ ಹಿಡಿಯಲಾಗದು ಎಂಬ ಧೋರಣೆಯಿಂದ ಅವನು ಬಾಳಿದುದಾದರೆ ಅದು ಸ್ವತಃ ಅವನಿಗೆ ಮತ್ತು ಆತನ ದೇಶಕ್ಕೆ ಕೂಡ ಎಂಥ ಕುತ್ತನ್ನು ತಂದೊಡ್ಡೀತು ಅಂದರೆ, ದೇಶಹಿತ ಅಥವಾ ಬಹು ಜನರ ಬಹು ಹಿತ ಎಂಬ ಪರಿಸರ ಬಲವನ್ನು ಯಾರೇ ಆಗಲಿ ಅಲಕ್ಷಿಸಿ ನಿರಂಕುಶಗಾಮಿಗಳಾದರೆ ಅಂಥವರು ಹೇಗೆ ದೇಶಕ್ಕೆ ಪಿಡುಗಾಗುತ್ತಾರೆ ಎಂಬುದು

ಇತಿಹಾಸ ವಾಚಕರಿಗೆಲ್ಲ ಗೊತ್ತಿರುವ ಸಂಗತಿಯೇ.

ಈಗ ಮನುಷ್ಯ ಪರಿಸರದ ಅಂದರೆ ನಿಸರ್ಗದ, ಸಮಕಾಲೀನ ಪ್ರಪಂಚದ ಎನ್ನುವ ಅರ್ಥಗಳಲ್ಲಿ ಶಿಶು. ಆದ್ದರಿಂದ ಆತನ ಯಾವುದೇ ಉದ್ಯಮದಲ್ಲಿ ಪರಿಸರವನ್ನು ಅಸಡ್ಡೆ ಮಾಡಿದ್ದೇ ಆದರೆ ಅಂಥ ಕ್ರಿಯೆ ಶಿಸ್ತಿನ ಉಲ್ಲಂಘನೆ ಎನ್ನಿಸುತ್ತದೆ. ಇದರಿಂದ ಅವನ ಉದ್ಯಮದಲ್ಲಿ ವೈಫಲ್ಯ ಸ್ವತಸ್ಸಿದ್ಧ. ಎರಡು ಉದಾಹರಣೆಗಳಿಂದ ಈ ಅಂಶವನ್ನು ಸ್ಪಷ್ಟಪಡಿಸುತ್ತೇನೆ.

ಮೊದಲನೆಯದಾಗಿ, ಇಂದು ಮನುಷ್ಯನ ಉಳಿವಿಗೆ ಕಠೋರ ಸವಾಲಾಗಿ ಪರಿಣಮಿಸಿರುವ ಪರಿಸರ ಮಾಲಿನ್ಯವನ್ನು ಪರಿಶೀಲಿಸೋಣ. ವಿಜ್ಞಾನ ಮುಂದುವರಿದಂತೆ ನವ ಆವಿಷ್ಕಾರಗಳೂ ನವ ಉಪಜ್ಞೆಗಳೂ (New inventions) ಜನಜೀವನದ ಮೇಲೆ ಮಹತ್ತರವಾದ ಪರಿಣಾಮಗಳನ್ನು ಬೀರುತ್ತ ಬಂದುವು. ಸ್ವಯಂಚಾಲಿತ ವಾಹನಗಳು, ಯಂತ್ರ ಸ್ಥಾವರಗಳು, ಪರಮಾಣು ರಿಯಾಕ್ಟರುಗಳು ಮುಂತಾದವೆಲ್ಲವೂ ನಮ್ಮ ಇಂದಿನ ಬದುಕಿನ ಅವಿಭಾಜ್ಯ ಅಂಗಗಳಾಗಿರುವುದು ಸರಿಯಷ್ಟೆ. ನಿಸರ್ಗದ ಪರಿಮಿತ ಸಂಪನ್ಮೂಲಗಳ ನಿರಂತರ ವಿನಿಯೋಗದಿಂದ (ಸೂರೆಯಿಂದ) ಈ ದೈತ್ಯ ಉದ್ಯಮಗಳು ಬೆಳೆದು ತ್ರಿವಿಕ್ರಮಾಕಾರವನ್ನು ತಳೆದಿವೆ. ಈ ಸಮಸ್ತ ತೋರಿಕೆಯನ್ನು ಪ್ರಗತಿಯಲ್ಲಿಯೂ ಮನುಷ್ಯ ನಿಸರ್ಗದ ಬಲಗಳಿಗೆ ಅನುವರ್ತಿ ಆಗದೆ, ಬಲು ವೇಳೆ ಅವುಗಳಿಗೆ ವಿರುದ್ಧವಾಗಿ, ವರ್ತಿಸುತ್ತ ಬಂದಿರುವುದರಿಂದ ಪರಿಸರ ಮಾಲಿನ್ಯ ಎಂಬ ಭೀಕರ ಪಿಡುಗನ್ನು ಇಂದಿನ ಜನಾಂಗ ಎದುರಿಸಬೇಕಾಗಿ ಬಂದಿದೆ. ಇದರ ಕಾರಣ ಪರಿಸರ ವಿಧಿಸುವ ಶಿಸ್ತಿನ ಉಲ್ಲಂಘನೆ ಅಥವಾ ಡಿ. ವಿ. ಜಿ.ಯವರ ಮಾತಿನಲ್ಲಿ, "ಪ್ರಕೃತಿಯನವರತ ಮನುಜನ ತಿದ್ದುತಿರುವಂತೆ ವಿಕೃತಿಗೊಳಿಸುವನ್ ಅವನುಮ್ ಆಕೆಯಂಗಗಳ".

ಡೊಮೈಡ್' ಶಿಶುಗಳ ಕರುಣಾಮಯ ಸ್ಥಿತಿಯನ್ನು ಉಲ್ಲೇಖಿಸಬಹುದು. ಗರ್ಭಿಣಿಯರಿಗೆ, ಹೆಚ್ಚಾಗಿ ಎಳೆ ಬಸುರಿನಲ್ಲಿ ತಲೆದೋರುವ ವಮನ ಮುಂತಾದ ಅಹಿತಕರ ಅನುಭವಗಳನ್ನು ತತ್‌ಕ್ಷಣ ನಿವಾರಿಸಿ ಸುಲಭವಾಗಿ ನಿದ್ದೆ ಬರಿಸುವ ಒಂದು ಹೊಸ ಮದ್ದು ತಾಲಿಡೊಮೈಡ್. ಇದನ್ನು ಸೇವಿಸಿದ ಎಳೆ ಬಸುರಿಯರಿಗೆ ಬದುಕು ಬಲು ಲಘುವಾಯಿತು, ಉಲ್ಲಾಸಭರಿತವಾಯಿತು. ಹೀಗಾಗಿ ತಾಲಿಡೊಮೈಡಿನ ಉಪಯೋಗ ಕ್ಷಿಪ್ರವಾಗಿಯೂ ಅತಿಯಾಗಿಯೂ ಪಶ್ಚಿಮ ರಾಷ್ಟ್ರಗಳಲ್ಲಿ, ವಿಶೇಷವಾಗಿ, ಮದ್ದು ತಯಾರಕರ ತವರೂರಾದ ಪಶ್ಚಿಮ ಜರ್ಮನಿಯಲ್ಲಿ ೧೯೫೦–೬೦ರ ಅವಧಿಯಲ್ಲಿ ಪ್ರಸರಿಸಿತು. ಮುಂದೆ ಯುಕ್ತ ವೇಳೆಯಲ್ಲಿ ಶಿಶುಗಳ ಜನನವಾದಾಗ ವೈದ್ಯ ಪ್ರಪಂಚ ಆ ತನಕ ಕಾಣದಿದ್ದಂಥ, ಊಹಿಸದಿದ್ದಂಥ ಕೂಡ—ಒಂದು ಹೊಸ ಮಾನವೀಯ ಸಮಸ್ಯೆ ಹಠಾತ್ತಾಗಿ ಅನಾವರಣಗೊಂಡಿತು. ಅಂಗವಿಕಲ ಜೀವಂತ ಶಿಶುಗಳ ಜನನದಲ್ಲಿ ಅತಿ ಬಾಹುಳ್ಯ. ಇವು ತಾಲಿಡೊಮೈಡ್ ಶಿಶುಗಳೆಂದೇ ಹೆಸರು ಪಡೆದು, ಇಂದು (೧೯೭೬) ಪ್ರಾಯ ಪ್ರಬುದ್ಧವಾಗಿ, ದೇಹವಿಜ್ಞಾನ ವಿಧಿಸುವ ಶಿಸ್ತಿನ ಉಲ್ಲಂಘನೆಗೆ ಜೀವಂತ ನಿದರ್ಶನಗಳಾಗಿ ಬದುಕಿಕೊಂಡಿವೆ.

ಈಗ, ಶಿಸ್ತು ಒಂದು ವಿಧಾನ, ಒಂದು ರೀತಿ, ಒಂದು ಅಮೂರ್ತ ಗುಣ ಆಗಿರುವುದರಿಂದ ಸ್ವತಃ ಶಿಸ್ತಿಗೆ ಒಳ್ಳೇ ಅಥವಾ ಕೆಟ್ಟ ಗುಣವನ್ನು ಆರೋಪಿಸುವುದು ಸಾಧ್ಯವಿಲ್ಲ. ದರೋಡೆಕಾರ ತನ್ನ ದುಷ್ಟೋದ್ದೇಶವನ್ನು ಈಡೇರಿಸುವ ಹಾದಿಯಲ್ಲಿ ಅದೆಷ್ಟು ಶಿಸ್ತಿನಿಂದ ವರ್ತಿಸಬೇಕು ಎನ್ನುವುದನ್ನು ಲಕ್ಷಿಸಿದರೆ ಈ ಹೇಳಿಕೆಯ ಅರ್ಥ ಸ್ಪಷ್ಟವಾದೀತು. ವಾಸ್ತವವಾಗಿ ವಾಮಮಾರ್ಗಗಾಮಿಗಳಿಗೆ ಅಧಿಕ ಶಿಸ್ತಿನ ಅವಶ್ಯಕತೆ ಉಂಟು. ಏಕೆಂದರೆ ಹೆಜ್ಜೆ ಹೆಜ್ಜೆಗೂ ಅವರು ಪರಿಸರದ ತೀವ್ರ ವಿರೋಧ ಬಲಗಳನ್ನು ಎದುರಿಸಿ ಮುಂದುವರಿಯ

ಶಿಸ್ತನ್ನು ಒಳ್ಳೆಯ ಕಾರ್ಯಗಳ ನಿರ್ವಹಣೆಯೊಂದಿಗೆ ಲಗತ್ತಿಸುವುದು ವಾಡಿಕೆ.

ಒಂದು ಹೊಳೆಯ ಗತಿಯನ್ನು ಅನುಸರಿಸೋಣ. ಇದು ಶಕ್ತಿಯ ಎಂಥ ವ್ಯರ್ಥ ಅಪವ್ಯಯ ಎಂದೆನ್ನಿಸದಿರದು. ನಮ್ಮ ದೃಷ್ಟಿಯಿಂದ ಹೊಳೆಗೆ ಉದ್ದೇಶರಹಿತ ಪ್ರವಹನವಿರುವುದೇ ಇದಕ್ಕೆ ಕಾರಣ. ಈಗ ಅದೇ ಹೊಳೆಗೆ ಒಂದು ಅನುಕೂಲ ಸ್ಥಳದಲ್ಲಿ ಕಟ್ಟೆ ಕಟ್ಟಿ ನೀರಿನ ಹರಿವಿಗೆ ಶಿಸ್ತನ್ನು ವಿಧಿಸಿದರೆ ಶಕ್ತಿ ಸಂಚಯನಗೊಂಡು ನಮಗೆ ವಿವಿಧ ಉಪಯೋಗಗಳಿಗೆ ಲಭ್ಯವಾಗುವುದು. ಸಾವಿರ ಜನರ ದೊಂಬಿಯನ್ನು ಕೇವಲ ಹತ್ತು ಮಂದಿ ಪೋಲೀಸರ ಲಾಠೀ ಪ್ರಹಾರ ನಿಮಿಷಗಳಲ್ಲೇ ಚದರಿಸುವ ದೃಶ್ಯವನ್ನು ಸ್ಮರಿಸಿಕೊಳ್ಳಬಹುದು. ಪೋಲೀಸರ ಉದ್ದೇಶಪೂರ್ವಕ ಶಕ್ತಿ ಪ್ರಯೋಗ ಸಾವಿರ ಜನರ ಉದ್ದೇಶರಹಿತ ಶಕ್ತಿ ಹ್ರಾಸವನ್ನು ಎದುರಿಸಲು ಸಮರ್ಥವಾಗುವುದು ಪೋಲೀಸರಲ್ಲಿ ಶಿಸ್ತು ಇರುವುದರಿಂದ. ಆದ್ದರಿಂದ ಶಿಸ್ತು ಜನರ ಬಿಡಿ ಶಕ್ತಿಗಳನ್ನು ಒಟ್ಟಾಗಿ ಸಂಘಟಿಸಿ ನಿರ್ದಿಷ್ಟ ಉದ್ದೇಶದೆಡೆಗೆ ಪ್ರವರ್ತಿಸಿ ಒಂದು ಮಹಾ ಕಾರ್ಯ ನೆರವೇರುವಂತೆ ಮಾಡಬಲ್ಲುದು. ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿಯ ಘೋಷಣಾ ನಂತರ ಸಾರ್ವಜನಿಕ ಉದ್ಯಮಗಳಲ್ಲಿಯೂ ಜೀವನದಲ್ಲಿಯೂ ಮೂಡಿ ಬಂದಿರುವ ಶಿಸ್ತು ಹಾಗೂ ಅದರ ಸಾಧನೆ ಇದಕ್ಕೊಂದು ಉತ್ತಮ ನಿದರ್ಶನ.

ಇಷ್ಟು ಹೇಳಿದ ಬಳಿಕ ವರ್ತಮಾನ ಜೀವನ ನಮಗೆ ಹಸನಾಗಲು ಮತ್ತು ನಮ್ಮ ಪೀಳಿಗೆ ಬದುಕಿ ಬಾಳಲು ಬದುಕಿನ ಒಂದೊಂದು ಹಂತದಲ್ಲಿಯೂ ಶಿಸ್ತಿನ ನಡವಳಿಕೆ ಅದೆಷ್ಟು ಮುಖ್ಯ ಎಂಬುದು ಸ್ಪಷ್ಟವಾಗುತ್ತದೆ. ಆಂತರಿಕ ವಿವೇಕದ, ಸಚ್ಚಾರಿತ್ರ್ಯದ ಮತ್ತು ಕರ್ತವ್ಯನಿಷ್ಠೆಯ ಪ್ರಕಟಿತ ರೂಪವೇ ಶಿಸ್ತು. ಬದುಕಿನ ಒಳ್ಳೆಯದರೆಡೆಗೆ ನಮ್ಮನ್ನು ಒಯ್ಯುವ ಹಾದಿಯೇ ಶಿಸ್ತು. ಈಗ, ನಿತ್ಯ ಜೀವನದ ಅವಿಭಾಜ್ಯ ಅಂಗವಾಗಿ ಶಿಸ್ತು ಇರುವಂತೆ ವ್ಯಕ್ತಿಗೆ ದೊರೆಯಬೇಕಾದ ಶಿಕ್ಷಣ ಮತ್ತು ಸಂಸ್ಕಾರ ಹೇಗಿರಬೇಕು? ಈ ಪ್ರಶ್ನೆಗೆ ಸರಳವಾದ ಒಂದು ಉತ್ತರವಿಲ್ಲ. ಸ್ಥೂಲವಾಗಿ ಇಷ್ಟು ಹೇಳಬಹುದು: ಆಯಾ ರಾಷ್ಟ್ರ ಆಯಾ ಕಾಲದ ಸ್ಥಿತಿಗತಿಗಳಿಗೆ ಅನುಸಾರವಾಗಿ ಸಮಗ್ರ ರಾಷ್ಟ್ರದ ಮತ್ತು ತನ್ಮೂಲಕ ಸಮಗ್ರ ಮಾನವ ಜನಾಂಗದ ಕಲ್ಯಾಣದ ದೃಷ್ಟಿಯಿಂದ ತನ್ನ ನಡವಳಿಕೆಯನ್ನು ರೂಪಿಸಿ ರೂಢಿಸಬೇಕು. "ಸರ್ವೇಜನಾಸ್ಸುಖಿನೋ ಭವಂತು" ಎನ್ನುವಲ್ಲಿ ಇದೇ ಭಾವ ಅಧ್ಯಾಹಾರವಾಗಿದೆ. ಇಂಥ ಶಿಸ್ತಿನ ಆರಂಭ ಮನೆ ಮನೆಯಲ್ಲಿ ಆಗಬೇಕು. ನಾವು ಸದಾ ನೇರ ನಡೆಯನ್ನು ಮಾತ್ರ ಪಾಲಿಸುತ್ತಿದ್ದರೆ ಮತ್ತು ಎಂದೂ ಡೊಂಕು ಹಾದಿಯನ್ನು ಹಿಡಿಯದಿದ್ದರೆ ಆಗ ಶಿಸ್ತು ನಮ್ಮ ಅರಿವಿಲ್ಲದೆಯೇ ನಮ್ಮ ಬದುಕಿನಲ್ಲಿ ಬೆರೆತು ಹೋಗಿರುತ್ತದೆ. ಇದರಿಂದ ಮೂಲತಃ ನಮಗೆ ಸಂತೃಪ್ತಿ ಉಂಟು. ಆನುಷಂಗಿಕವಾಗಿ ಸಮಾಜ ಜೀವನದಲ್ಲಿ ಇತರರ ಮೇಲೆಯೂ ಇದರ ಸತ್ಪ್ರಭಾವ ಆಗಿಯೇ ಆಗುತ್ತದೆ. ಇಂಥ ಓರ್ವ ಆದರ್ಶ ವ್ಯಕ್ತಿಯ. ಅಂದರೆ ಶಿಸ್ತಿನ ಸಾಕಾರ ಮೂರ್ತಿಯ ನಡವಳಿಕೆಯನ್ನು ಪರಿಶೀಲಿಸುವುದರ ಮೂಲಕ ಈ ಅಪೂರ್ವಗುಣದ ಕೆಲವು ಮುಖ್ಯ ಲಕ್ಷಣಗಳನ್ನು ಗುರುತಿಸಬಹುದು.

ಶಿಸ್ತುಗಾರನೊಬ್ಬ ಅತ್ಯಂತ ಪ್ರಾಮಾಣಿಕ ವ್ಯಕ್ತಿ. ಫೋಶಿಯನ್ ಎಂಬಾತ ಗ್ರೀಸಿನ ಸೇನಾಧಿಪತಿ ಆಗಿದ್ದ. ದೂರದರ್ಶಿತ್ವ ಹಾಗೂ ಪರಾಕ್ರಮಗಳಿಗೆ ಮನೆ ಮಾತಾಗಿದ್ದ. ಅವನನ್ನು ಜನ ಸತ್ಪುರುಷ ಎಂದೇ ಅರ್ಥಪೂರ್ಣವಾಗಿ ಕರೆಯುತ್ತಿದ್ದರು. ಅಲೆಕ್ಸಾಂಡರ್ ಮಹಾಶಯ ಗ್ರೀಸ್ ರಾಷ್ಟ್ರವನ್ನು ಮುತ್ತಿಗೆ ಹಾಕಿ ವಶಪಡಿಸಿಕೊಳ್ಳಬೇಕೆಂದು ಹವಣಿಸುತ್ತಿದ್ದ ಸಂದರ್ಭ. ಫೋಶಿಯನ್ನನ ನಿಷ್ಠೆಯನ್ನು ತನ್ನ ಕಡೆಗೆ ಒಲಿಸಿಕೊಳ್ಳಲು ಅಲೆಕ್ಸಾಂಡರ್ ಬಲು ಬಗೆಯ ಎರೆಗಳನ್ನು ಎಸೆದ. ಆದರೆ ಸತ್ಪುರುಷ ಫೋಶಿಯನ್ ಒಂದೇ ಮಾತಿನಿಂದ ಇವನ್ನು ಸುಲಭವಾಗಿ ತರಿದೊಗೆದ, "ಅಲೆಕ್ಸಾಂಡರ್ ನಿಜವಾಗಿಯೂ ನನ್ನನ್ನು

ಗಣ್ಯನೆಂದು ಭಾವಿಸುವುದಾದರೆ ನನ್ನ ಪ್ರಾಮಾಣಿಕತೆಯನ್ನು ಗೌರವಿಸಲಿ." ಶಿಸ್ತುಗಾರನನ್ನು ನೀವು ಕೊಳ್ಳಲಾರಿರಿ.

ಕರ್ತವ್ಯ ನಿರ್ವಹಣೆಯೊಂದೇ ಶಿಸ್ತುಗಾರನ ಆದರ್ಶ. ಸೀತಾನ್ವೇಷಣೆಗೋಸ್ಕರ ಸಾಗರೋಲ್ಲಂಘನ ಮಾಡುತ್ತಿದ್ದ ಹನುಮಂತನ ಹಾದಿಗೆ ಎದುರಾಗಿ ಮೈನಾಕ ಪರ್ವತರಾಜ ಜಲರಾಶಿಯಿಂದ ಮೇಲೆದ್ದು ತನ್ನ ಆತಿಥ್ಯವನ್ನು ಮಾಯುಸುತ ಸ್ವೀಕರಿಸಿ ಮುಂದೆ ಸಾಗಬೇಕೆಂದು ಬಿನ್ನವಿಸಿಕೊಂಡ. ಆಗ ಹನುಮಂತ ನೀಡಿದ ಉತ್ತರ ಬಲು ಸಾಂಕೇತಿಕವಾಗಿದೆ, "ಕಾರ್ಯಸಾಧನೆ ಆಗಬೇಕಾದ ಕಾಲ ನನ್ನನ್ನು ತ್ವರೆ ಪಡಿಸುತ್ತಿದೆ. ಎಲ್ಲಿಯೂ ಮಧ್ಯ ಮಾರ್ಗದಲ್ಲಿ ನಾನು ನಿಲ್ಲುವುದಿಲ್ಲವೆಂದು ಭಾಷೆ ಕೊಟ್ಟಿರುವೆನು." ಕರ್ತವ್ಯ ಪ್ರಜ್ಞೆಗೆ ಶಾಶ್ವತ ಪ್ರತೀಕ ಹನುಮಂತ.

ಕಾಲನಿಷ್ಠೆ ಶಿಸ್ತುಗಾರನ ಬದುಕಿನ ಉಸಿರು. ನಮ್ಮ ಯಾವ ಪ್ರಯತ್ನವೂ ಇಲ್ಲದೆ ಸ್ಥಿರ ದರದಿಂದ ವೆಚ್ಚವಾಗಿ ಹೋಗುವ ಮತ್ತು ಎಂದೆಂದೂ ಮರಳಿ ಬರದಿರುವ ಏಕೈಕ ಪರಿಮಾಣವೆಂದರೆ ಕಾಲ. ಸರ್ವ ಕಾಲಗಳಲ್ಲಿಯೂ ಸರ್ವರಿಗೂ ಸಮವಾಗಿ ಅನ್ವಯಿಸುವ ನಿಯಮವಿದು. ಆದ್ದರಿಂದ ನಾವು ಏನನ್ನಾದರೂ, ಲೋಕದ ಮಾತಂತಿರಲಿ ಕನಿಷ್ಠ ಪಕ್ಷ ನಮ್ಮ ನಮ್ಮ ಒಳಿತಿಗಾಗಿ ಆದರೂ ಸಾಧಿಸಬೇಕೆಂದಿದ್ದರೆ, ಅದು ವರ್ತಮಾನ ಕಾಲದ ಸದುಪಯೋಗವೊಂದರಿಂದಲೇ ಸಾಧ್ಯ. ಗತಕಾಲದಿಂದ ಪಡೆದ ಅನುಭವದಿಂದ ಭವಿಷ್ಯತ್ತನ್ನು ರೂಪಿಸುವುದಕ್ಕೋಸ್ಕರ ವರ್ತಮಾನ ಕಾಲದಲ್ಲಿ ತೀವ್ರವಾಗಿ ಬಾಳಬೇಕು. ಜನರಲ್ ತಿಮ್ಮಯ್ಯನವರು ಒಮ್ಮೆ ಒಂದು ಭಾಷಣದಲ್ಲಿ ಹೇಳಿದ ಈ ಮುಂದಿನ ಮಾತು ಬಲು ಅರ್ಥಪೂರ್ಣವಾಗಿದೆ. "ಯಾವುದೇ ಯಶಸ್ವೀ ಕಾರ್ಯದ ಅಡಿಪಾಯ ಶಿಸ್ತು. ಇಂಥ ಶಿಸ್ತು ನಮ್ಮ ಸಮಸ್ತ ಚಟುವಟಿಕೆಗಳಲ್ಲಿಯೂ ಹಾಸುಹೊಕ್ಕಾಗಿ ಪಸರಿಸಬೇಕಾದರೆ ನಾವು ಕಲಿಯಬೇಕಾದ ಮೊದಲ ಪಾಠ ಕಾಲಪ್ರಜ್ಞೆಯನ್ನು ಕುರಿತದ್ದು. ಓರ್ವ ಶಿಸ್ತುಗಾರ ಸ್ವಂತ ಜೀವನದಲ್ಲಿ ಕಾಲನಿಷ್ಠೆಯನ್ನು ಬಲು ಸಹಜವಾಗಿ ರೂಢಿಗೆ ತಂದಿರುತ್ತಾನೆ. ತನ್ನ ವೇಳೆಗೆ ತುಂಬ ಬೆಲೆಯನ್ನು ಕೊಡುವ ಆತ ಇತರರ ಸಮಯಕ್ಕೆ ಅದಕ್ಕಿಂತಲೂ ಹೆಚ್ಚಿನ ಮಹತ್ವವನ್ನು ಕೊಡುತ್ತಾನೆ. ಕಾಲನಿಷ್ಠೆ ನಮ್ಮ ಆಂತರಂಗಿಕ ಸಂಸ್ಕೃತಿಯ ಬಾಹ್ಯ ಪ್ರಕಟಿತ ರೂಪ."

ಆರ್ಥಿಕ ನಿಷ್ಕೃಷ್ಟತೆ ಶಿಸ್ತುಗಾರನ ಬದುಕಿನ ನೀತಿ. ಇತರರಿಗೆ ಸಲ್ಲಬೇಕಾದದ್ದನ್ನು ಆತ ಮೊದಲು ಪಾವತಿಸಿಬಿಡುತ್ತಾನೆ. ತನ್ನ ಖಾಸಗಿ ವ್ಯವಹಾರದಲ್ಲಿ ಅವನು ಎಂದೂ ಹಾಸಿಗೆಗಿಂತ ಉದ್ದಕ್ಕೆ ಕಾಲುಗಳನ್ನು ಚಾಚುವುದಿಲ್ಲ. ನೇರ ಬದುಕನ್ನು ಬಾಳಲು ಅವನಿಗೆ ಧನ ಒಂದು ಸಾಧನ ಮಾತ್ರ. ಅದೇ ಲಕ್ಷ್ಯ ಅಲ್ಲ. ಶಿಸ್ತುಗಾರನ ಬಾಳು ದೈನ್ಯ ರಹಿತವಾದದ್ದು, ಧೈರ್ಯ ಸಹಿತವಾದದ್ದು. ಇದರ ಒಂದು ಮುಖ್ಯ ಕಾರಣ ಆತನ ಆರ್ಥಿಕ ಪಾರಿಶುದ್ಧ್ಯ.

ಶಿಸ್ತುಗಾರನೊಬ್ಬ ಸುಸಂಸ್ಕೃತ ವ್ಯಕ್ತಿ. ಎಂಥ ದುರ್ಭರ ಪ್ರಸಂಗದಲ್ಲಿಯೂ ಆತ ಸಂಯಮವನ್ನು ಕಳೆದುಕೊಳ್ಳಲಾರ. ಅವನು ಧೈರ್ಯಶಾಲಿ, ಕಷ್ಟಸಹಿಷ್ಣು, ಸಹನಶೀಲ ಮತ್ತು ಸಾಹಸಪ್ರಿಯ. ಭಗವದ್ಗೀತೆಯಲ್ಲಿನ "ಯೋಗಃ ಕರ್ಮಸು ಕೌಶಲಮ್" ಎನ್ನುವ ಹೇಳಿಕೆಯ ಅರ್ಥದ ಯೋಗಿ ಈತ. ಶಿಸ್ತುಗಾರರ ಸಂಖ್ಯೆ ಯಾವ ರಾಷ್ಟ್ರದಲ್ಲಿ ಬಹುಮತದಲ್ಲಿ ಇರುವುದೋ ಅಲ್ಲಿ ಮಹಾಕಾರ್ಯಗಳು ನಡೆಯುತ್ತವೆ. ಆ ರಾಷ್ಟ್ರ ಉತ್ಸರ್ಪಿಣೀ ಸ್ಥಿತಿಯಲ್ಲಿ ಇರುತ್ತದೆ. ಇತರ ರಾಷ್ಟ್ರಗಳಿಗೆ ಮುಂದಾಳಾಗಿರುತ್ತದೆ. ✿



ನಮಗೆ ನಾವೇ
ಅನ್ಯಾಯ
ಮಾಡುತ್ತಿದ್ದೇವೆ

ಕಾಮಧೇನು ಮೇಕೆ

ಜಿ. ಆರ್. ರಂಗಸ್ವಾಮಯ್ಯ

ನಮ್ಮ ದೇಶದಲ್ಲಿ ಮೇಕೆಗೆ ಕೊಟ್ಟಿರುವ ಬಿರುದು ಬಾವಲಿಗಳನ್ನು ಬೇರಾವ ದೇಶದಲ್ಲೂ ಕೊಟ್ಟಿರಲಿಕ್ಕಿಲ್ಲ. ಇಲ್ಲಿ ಮೇಕೆಗೆ, 'ಬಡವನ ಹಸು,' 'ಬಡವನ ಕಾಮಧೇನು,' 'ಬಡವನ ಬಂಧು' ಇತ್ಯಾದಿ ಹಣೆಪಟ್ಟಿಯನ್ನು ನಾವು ಕೊಟ್ಟಿದ್ದೇವೆ. ಇದರ ಹಾಲು ಶ್ರೇಷ್ಠ, ಸಿದ್ಧೌಷಧ; ಹಿಚಿಕೆ ಉತ್ತಮ ಗೊಬ್ಬರ; ಮಾಂಸ– ಉತ್ತಮ ಪ್ರೋಟೀನ್ ಆಹಾರ ಮಹಾತ್ಮ ಗಾಂಧಿಯವರ ನೆಚ್ಚಿನ ಆಹಾರ ಮಾಂಸತಾಗಿ ಸಮಯ ಸಿಕ್ಕಿದಾಗೆಲ್ಲಾ ಲೇಖಣಿ ಮುರಿಯುವವರೆಗೂ ಕೊರೆದಿದ್ದೇವೆ, ಕೊರಳು ಹರಿಯುವವರೆಗೂ ಒದರಿದ್ದೇವೆ. ಆದರೂ ಈ ಪುಟ್ಟ ಪ್ರಾಣಿ ನಮ್ಮ ದೇಶದಲ್ಲಿ ಇಂದಿಗೂ 'ಕಟುಕನ ಕಾಮಧೇನು'ವಾಗೇ ಉಳಿದಿದೆ. ಭಾರತದ ಯಾವುದೇ ಮೂಲೆಗೆ ಹೋಗಿ ಮೇಕೆ ಸಾಕಿದವನೊಬ್ಬನನ್ನು ನೀನೇಕೆ ಮೇಕೆ ಸಾಕಿರುವೆಯೆಂದರೆ, ಬರುವ ಉತ್ತರ 'ಮಾಂಸಕ್ಕೆ' ಎಂದೇ. ಆದರೆ ಸ್ವಿಟ್ಜರ್‌ಲೆಂಡ್, ಫ್ರಾನ್ಸ್, ಜರ್ಮನಿ, ಸ್ಪೇನ್ ಹಾಗೂ ಇಂಗ್ಲೆಂಡಿನಲ್ಲಿ ಇವು ಕರಾವಿನ ಹಸುಗಳಷ್ಟೇ ಜನಪ್ರಿಯ. ಮೇಕೆ ಹಾಲಿನಿಂದ ವಿವಿಧ ರುಚಿಕರ ತಿನಿಸುಗಳನ್ನು ತಯಾರಿಸುತ್ತಾರೆ, ಮೇಕೆ ಸಾಕಣೆಗೇ ಮೀಸಲಾದ ಪತ್ರಿಕೆಗಳಿವೆ. ಅವುಗಳಲ್ಲಿ ರಸರುಚಿ ಶೀರ್ಷಿಕೆಯಡಿ ಇದರಿಂದ (ಹಾಲು) ವಿವಿಧ ಖಾದ್ಯ ಪದಾರ್ಥಗಳನ್ನು ತಯಾರಿಸುವ ವಿಧಾನಗಳನ್ನು ಕಾಣಬಹುದು. ಆದರೆ ನಮ್ಮಲ್ಲಿ ಅಕಸ್ಮಾತ್ ಕಣ್ಣು ನೋವಿಗೋ, ನರಸಂಬಂಧಿ ಕಾಯಿಲೆಗಳಿಗೋ ನಾಟಿವೈದ್ಯ ಮೇಕೆ ಹಾಲು ಬೇಕೆಂದಾಗ 'ಮೇಕೆ ಹಾಲು' ಎಂಬ ವಸ್ತುವೊಂದಿದೆ ಎಂದು ನೆನಪಿಗೆ ಬರುತ್ತದೆ, ಆಗ ಇದನ್ನು ಗಿಟ್ಟಿಸಲು ಭಗೀರಥ ಪ್ರಯತ್ನವನ್ನೇ ಕೆಲವೊಮ್ಮೆ ಮಾಡಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಸಿಕ್ಕಿದರೆ, ರೋಗಿಯ ಪುಣ್ಯ.

'ಮೇಕೆ' ಶಬ್ದ ಕಿವಿಗೆ ಬಿದ್ದೊಡನೆ ನನ್ನ ಕಣ್ಮುಂದೆ ಮೇಕೆಯ ಎರಡು ಚಿತ್ರಗಳು ಬಂದು ನಿಲ್ಲುತ್ತವೆ. ಒಂದು, ಹಳ್ಳಿಯ ಪುಟಾಣಿಗಳಿಂದ ಹಿಡಿದು ಮುದುಕರವರೆಗೂ ಪ್ರಿಯವಾದ ಜಿಂಕೆಯಂತೆ ಚಂಚಲವಾದ, ಅತ್ಯಂತ ಅಪಾಯಕಾರಿ ಜಾಗಗಳಲ್ಲೂ ಜಿಗಿದಾಡುವ ಆಕರ್ಷಕ ಮೇಕೆ ಮರಿ (ಇದರ ಈ ಚಿನ್ನಾಟ ನೋಡಿಯೇ 'ಆಡು' ಎಂದಿರಬೇಕು). ಎರಡನೆಯದು, ದಷ್ಟಪುಷ್ಟವಾಗಿ ಬೆಳೆದೂ ಪ್ರೇತ ಕಳೆ ಹೊತ್ತು, ನಿಸ್ಸಹಾಯಕವಾಗಿ, ತನ್ನ ಕೊರಳಿನ ಇರುವಿಕೆಯನ್ನೇ ಸಂದೇಹಿಸುತ್ತಾ, ತನ್ನ ಸರದಿಗಾಗಿ ಮಿಡು

ಕುತ್ತಾ, ಕಟುಕನಂಗಡಿ ಮುಂದೆ ನಿಂತ ಆ ಮೇಕೆಯ ಮೂಕ ಚಿತ್ರ !

ಇತಿಹಾಸದ ಮೊದಲ ಪುಟಗಳಿಂದಲೂ ಇತರ ಸಾಕು ಪ್ರಾಣಿಗಳಂತೆ ಪಳಗಿಸಿಕೊಂಡು ಬಂದ ಒಂದು ಸಾಕುಪ್ರಾಣಿ ಇದು. ಅಂದಿನಿಂದಲೂ ಇದು ಮಾಂಸ, ಹಾಲು, ಚರ್ಮ ಹಾಗೂ ಗೊಬ್ಬರವನ್ನೊದಗಿಸುತ್ತಾ ಬಂದಿದೆ. ಯಲ್ಲದೆ ಇದು ಬಡವನಿಗೇ ಗಂಟುಬಿದ್ದಿದೆ; ಕಾರಣ ಇದರ ಪುಟ್ಟ ಗಾತ್ರದ ತುತ್ತಿನ ಚೀಲ. ಎಂಥ ಪರಿಸ್ಥಿತಿ, ಸೊಪ್ಪು ಸೆದೆಗೂ ಒಗ್ಗಿಕೊಳ್ಳುವ ಜಾಯಮಾನ. ಉಳ್ಳವರು ಉತ್ತಮ ತಳಿಯ ಸೀಮೆ ಹಸುಗಳನ್ನು ಸಾವಿರಾರು ರೂಪಾಯಿ ಬಂಡವಾಳ ಹಾಕಿಕೊಂಡು, ಸಾಕಿ, ಕ್ಷೀರಸಾಗರಕ್ಕೆ ಗಂಗಾಧಾರೆಯನ್ನೂ ಧಾರಾಕಾರವಾಗಿ ಹರಿಸಿ ಧಿಡೀರನೆ ಲಕ್ಷಾಧಿಪತಿಗಳಾಗುವ ಕನಸು ಕಾಣುತ್ತಿರುವಾಗ, ಮೇಕೆಯು ಇಲ್ಲದವರಿಗೇ ಗಂಟು ಬೀಳಬೇಕಷ್ಟೆ. ಉಳ್ಳವರ ಆ ಕನಸನ್ನು ಯಾವ ಮೇಕೆಯೊಡೆಯನೂ ನಮ್ಮ ದೇಶದಲ್ಲಿ ಬರಲಿರುವ ಕೆಲವಾರು ದಶಕಗಳಲ್ಲೂ ಕಾಣಲಾರ. ಏಕೆಂದರೆ, "ಎರಡು ಮೆಕೆಯ ಕುಟುಂಬಕ್ಕೆ ೫ ಅಡಿ ಅಗಲದ ೮ ಅಡಿ ಉದ್ದದ ಶೆಡ್...



ತಲೆಯ ಕಡೆ ಇಷ್ಟೆತ್ತರವಿದ್ದರೆ ಬಾಲದ ಕಡೆ ಇಷ್ಟೆತ್ತರವಿರಬೇಕು..." ಇತ್ಯಾದಿ ಶಿಫಾರಸುಗಳನ್ನು ತನ್ನ ನಿತ್ಯದ ವ್ಯಾಪಾರಗಳೆಲ್ಲವನ್ನೂ ಪೂರೈಸಿಕೊಳ್ಳಲು ತನಗೇ ಇಷ್ಟಗಲದ ಜೋಪಡಿಯಿಲ್ಲದ ಮೇಕೆಯೊಡೆಯ ಹೇಗೆ ಪೂರೈಸಲು ಸಾಧ್ಯ ?

ಹಳ್ಳಿಗಳಲ್ಲಿ ಇಂದಿಗೂ ಕೋಳಿಯಿಂದ ಹಿಡಿದು ಹಸುವಿನವರೆಗೂ ಉಳ್ಳವರಿಂದ ಇಲ್ಲದವರು ಈ ಪ್ರಾಣಿಗಳನ್ನು ತಂದು ಪಾಲಿಗೆ ಸಾಕುವ ಪದ್ಧತಿ ರೂಢಿಯಲ್ಲಿದೆ. ಹೆಣ್ಣು ಮೇಕೆಯೊಂದನ್ನು ಹೀಗೆ ಪಾಲಿಗೆ ತಂದು ಸಾಕಿ ಮೊದಲ ಸೂಲಿನ ಮರಿಗಳನ್ನು ತಾನು ಉಳಿಸಿಕೊಂಡು ಇನ್ನೊಂದು ಸೂಲಿನ ಮರಿಗಳೊಡನೆ ತಾಯಿ ಮೇಕೆಯನ್ನೂ ಒಡೆಯನಿಗೊಪ್ಪಿಸುತ್ತಾರೆ. ತಾನು ಉಳಿಸಿಕೊಂಡ ಮರಿಗಳನ್ನು ಬೆಳೆಸಿ ಈ ಪೀಳಿಗೆಯನ್ನು ಮುಂದುವರಿಸಿಕೊಂಡು ಗಂಡು ಮೇಕೆಗಳನ್ನೆಲ್ಲಾ ತಿನ್ನುವವರಿಗೋ ಕಟುಕನ ದಳ್ಳಾಳಿಗಳಿಗೋ ಮಾರುತ್ತಾರೆ. ಕೆಲವೊಮ್ಮೆ ತಾಪತ್ರಯಗಳ ಸುಳಿಗೆ ಸಿಕ್ಕಿ ಹೆಣ್ಣು ಮೇಕೆಗಳನ್ನೇ ಕಟುಕರಿಗೊಪ್ಪಿಸಬೇಕಾಗುತ್ತದೆ.

ಅಂಗೈ ಅಗಲದ ಜಮೀನಿಲ್ಲದ ಬರಿಗೈ ಬಂಟ ಈ ಪುಟ್ಟ ಪ್ರಾಣಿಯ ತುತ್ತಿನ ಚೀಲ ತುಂಬುವುದೂ ಇಂದು ದುಸ್ತರವಾಗಿದೆ. ಮೇಕೆಯೊಡೆಯ ಸೊಪ್ಪು ಸೆದೆಗಾಗಿ ಕಾಡು ಮೇಡುಗಳನ್ನಲೆಯಬೇಕಾಗುತ್ತದೆ. ರಸ್ತೆ ಮರ ತೋಟ ತುಡಿಕೆಗಳ ಬೇಲಿಗಳನ್ನೆಲ್ಲ ಬೋಳಿಸಬೇಕಾಗುತ್ತದೆ. ತೋಟದ ಮಾಲಿಕರ ಬೈಗಳನ್ನು ತಿನ್ನಬೇಕಾಗುತ್ತದೆ. ಕೆಲವೊಮ್ಮೆ ಇವರ ಅವಕೃಪೆಗೂ ಪಾತ್ರರಾಗಿ ಒಂದು ಮೇಕೆಯನ್ನೇ ದಂಡದ ರೂಪದಲ್ಲಿ ತೆತ್ತು, ಕೆಲವರ ನಾಲಿಗೆ ಚಪಲ ತೀರಿಸಬೇಕಾಗುತ್ತದೆ.

ಈ ತಿರಸ್ಕೃತ ಪ್ರಾಣಿಯ ಮೂಕ ಚಿತ್ರವನ್ನು ಬದಲಿಸಲು ಭಾರತದಲ್ಲಿ ಒಮ್ಮನಸಿನಿಂದ ಏನೇನೂ ಕೆಲಸ ಆಗಿಲ್ಲವೆಂದೇ ಹೇಳಬೇಕು. ಇತ್ತೀಚೆಗೆ ಹೆಚ್ಚು ಹಾಲು ಕೊಡುವ ಉತ್ತಮ ವಿದೇಶೀ ತಳಿಗಳನ್ನು ಅಪಾರ ಹಣ ತೆತ್ತು ತರಿಸಿಕೊಳ್ಳಲಾಗಿದೆ. ಇವನ್ನು

ನಮ್ಮ ದೇಶದ ತಳಿಗಳೊಡನೆ ಸಂಪರ್ಕ ಕಲ್ಪಿಸಿ ಉತ್ತಮ ತಳಿಯೆಬ್ಬಿಸಿ ಈ ದಿಶೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರಬೇಕೆಂಬ ಉದ್ದೇಶದಿಂದ ಕಾರ್ಯ ಸಾಗಿದೆ. ಜೊತೆಯೇ ಈಗಾಗಲೇ ಸಾಕಷ್ಟು ಸಸ್ಯಸಂಪತ್ತು ಹಾಳಾಗಿದೆ. ಈ ಯೋಜನೆಗೆ ಹೆಚ್ಚು ಒತ್ತು ಕೊಡುವುದು ಒಳಿತಲ್ಲ. ಇವು ಕಳಿದುಳಿದ ಕುರುಚಲು ಗಿಡಗಳನ್ನು ಮುಗಿಸಿ ಬಿಡುತ್ತವೆ ಎಂಬ ರಾಗವೂ ಕೇಳಬರುತ್ತಿದೆ. ಇತ್ತೀಚಿನ ಕೃಷಿ ಆಯೋಗದ ಧೋರಣೆಯೂ ಒಂದು ವಿಧದ ಮಲತಾಯಿ ಮನೋಭಾವ ತೋರುತ್ತದೆ. ಸೌದೆಗಾಗಿ, ಮರಮುಟ್ಟುಗಳಿಗಾಗಿ ನಿರ್ದಾಕ್ಷಿಣ್ಯವಾಗಿ ಬುಡಸಮೇತ ಉರುಳಿಸುತ್ತಿರುವ ಮಾನವನಿಗಿಂತ ಮೇಕೆಗಳು ಸಸ್ಯಸಂಪತ್ತಿಗೆ ಅಪಾಯಕಾರಿಯೇ ಎಂಬುದನ್ನು ನಾವು ಮತ್ತೊಮ್ಮೆ ಆತ್ಮಶೋಧನೆ ಮಾಡಿಕೊಳ್ಳಬೇಕು.

ಬಡವನ ಈ ಕಿರುಕಾಮಧೇನುವನ್ನು ಕನ್ಯಾಕುಮಾರಿಯಿಂದ ಹಿಮಾಲಯದ ವರೆಗೆ ಎಲ್ಲಾದರೂ ಇದನ್ನು ೧೨ ವರ್ಷಗಳ ವರೆಗೂ ಲಾಭದಾಯಕವಾಗಿ ಸಾಕಬಹುದು. ಇದು ತನ್ನ ೬, ೭ ಮತ್ತು ೮ನೇ ವರ್ಷಗಳಲ್ಲಿ ಗರಿಷ್ಠ ಹಾಲಿನ ಇಳುವರಿ ನೀಡುತ್ತದೆ.

ಈ ದಿಶೆಯಲ್ಲಿ ಎಲ್ಲಕ್ಕೂ ಮೊದಲು ಆಗಬೇಕಾದ ಕಲಸವೆಂದರೆ ನಮ್ಮ ಜನ 'ಮೇಕೆ ಹಾಲು' ಎಂದರೆ ಮೂಗು ಮುರಿಯುವು

ಬಾಯಿಚಪ್ಪರಿಸುವ ಜನ, ಮೇಕೆಯ ಹಾಲಿನ ಸವಿಯನ್ನು ಅರಿಯುವಂತಾಗಬೇಕು. ಈ ಜನರ ಪ್ರವೃತ್ತಿ ಬದಲಾದರೆ ಉಳಿದ ಕ್ರಾಂತಿಕಾರಿ ಬದಲಾವಣೆ ಈ ದಿಶೆಯಲ್ಲಿ ತಾನಾಗೇ ಆಗುತ್ತದೆ.

ಮೇಕೆ ಹಾಲು ಚುಂಗುವಾಸನೆ ಕೊಡುತ್ತದೆಂಬುದು ನಿರಾಧಾರ. ಪಸು, ಎಮ್ಮೆಗಳ ಹಾಲು, ಮಜ್ಜಿಗೆ ಸಹ ಮದರು ಮದರಾಗಿವೆಯೆಂದೂ ಹೇಳುವುದುಂಟು. ಇದಕ್ಕೆ ಕಾರಣ ಎಮ್ಮೆ–ಹಸುಗಳ ಮೈಯನ್ನು ಆಗಾಗ್ಗೆ ತೊಳೆಯದಿರುವುದು. ಸ್ವಚ್ಛತೆ ಬಗ್ಗೆ ಗಮನ ಕೊಟ್ಟು, ಗಂಡು ಮೇಕೆಗಳನ್ನು ದೂರವಿಟ್ಟರೆ ಹಸುವಿನ ಹಾಲಿಗೂ ಮೇಕೆ ಹಾಲಿಗೂ ಯಾವ ವ್ಯತ್ಯಾಸವನ್ನೂ ಕಾಣಲು ಸಾಧ್ಯವಿಲ್ಲ. ವಿಶೇಷವಾಗಿ ಮೇಕೆಗಳು ಬೆದೆಗೆ ಬರುವ ದಿನಗಳಲ್ಲಿ ಕರಾವಿನ ಮೇಕೆ ಬಳಿ ಹೋತ ಬಂದರೆ ಇದರ ವೀರ್ಯ ಹಾಲಿನ ವಾಸನೆಗೆ ಕಾರಣವಾಗುತ್ತದೆ.

ಮೇಕೆ ಹಾಲಿನ ಮಹತ್ವ ಬಹುಶಃ ಈ ಕೆಳಗಿನ ಪಟ್ಟಿಯಿಂದ ನಮಗೆ ಅರ್ಥವಾದೀತು.

ಸಸ್ತನಿ ಪ್ರಾಣಿಗಳ ಹಾಲಿನ ರಚನೆ

	ಹಸು	ಮೇಕೆ	ಮನುಷ್ಯ	ಕುರಿ	ಕುದುರೆ	ಕತ್ತೆ
ನೀರು	೮೭.೭೦	೮೬.೦	೮೮.೨	೮೧.೩	೮೯.೮	೯೦.೧
ಕೊಬ್ಬು	೩.೬೧	೪.೬	೩.೩	೬.೯	೧.೨	೧.೩
ಲೇಕ್ಟೋಸ್	೪.೬೫	೪.೨	೬.೮	೫.೨	೬.೯	೬.೫
ಪ್ರೋಟೀನ್	೩.೨೯	೪.೪	೧.೫	೫.೬	೧.೮	೧.೬
ಬೂದಿ	೦.೭೫	೦.೮	೦.೨	೧.೦	೦.೩	೦.೫

ಮೇಕೆ ಹಾಲಿನಲ್ಲಿ ಪ್ರೋಟೀನ್ ಮತ್ತು ಕೊಬ್ಬಿನ ಅಂಶ ಹಸುವಿನ ಹಾಲಿನಂತಲ್ಲದೆ ಏಕರೂಪವಾಗಿ ಹರಡಿರುತ್ತದೆ. ಇದರಿಂದ ಮಕ್ಕಳು, ಮುದುಕರು, ರೋಗಿಗಳಾದಿಯಾಗಿ ಸುಲಭವಾಗಿ ಈ ಹಾಲನ್ನು ಜೀರ್ಣಿಸಿಕೊಳ್ಳಬಹುದು. ಹಸು ಅಥವಾ ಎಮ್ಮೆಗಳಿಗೆ ಹೋಲಿಸಿದರೆ ಮೇಕೆ ಹಾಲಿಗೆ ತಗಲುವ

ಮೇಕೆ ಸಾಕುವವರು ನೆನಪಿಡಬೇಕಾದ ಕೆಲವು ಮುಖ್ಯಾಂಶಗಳು :

೧. ಉತ್ತಮ ತಳಿಯ ಮೇಕೆ ಆರಿಸಿಕೊಳ್ಳಿ.

೨. ಮೇಕೆಯ ದೊಡ್ಡಿ, ಜೋಪಡಿ, ಕೊಟ್ಟಿಗೆ ಸ್ವಚ್ಛವಾಗಿರಲಿ.

೩. ಮೇವು, ತಿನಿಸು, ನೀರು ನೀಡುವಲ್ಲಿ ಕ್ರಮವಿರಲಿ. ಮೇವನ್ನು ಕೊಂಚಕೊಂಚವೇ ಹಾಕಿ.

೪. ಮುಂಗಾರಿ ಮಳೆ ಬಿದ್ದಾಗ ಬರುವ ಹಚ್ಚಹಸಿರು ಹುಲ್ಲನ್ನು ಹೆಚ್ಚಿಗೆ ತಿನ್ನಲು ಬಿಡಬೇಕು.

೫. ಕರಾವಿನ ಮೇಕೆಗೆ ಹಾಲಿನ ಇಳುವರಿಗನುಗುಣವಾಗಿ ಕಾಳು, ಗೋದಿ, ಜೋಳ ಮುಂತಾದವುಗಳ ಭೂಸ ನೀಡಿ.

೬. ಇತರ ಜಾನುವಾರುಗಳಂತೆ ಮೇಕೆಗೂ ಉಪ್ಪು ನೆಕ್ಕಿಸುವುದು ಅಗತ್ಯ.

೭. ಮೇಕೆ ಮರಿಗಳು ಸಾಯುವ ಸಂಭವ ಕಡಿಮೆಯಿರುವ ದಿನಗಳಲ್ಲಿ ಮರಿ ಹಾಕುವಂತೆ ಹೋತದೊಡನೆ ಹೆಣ್ಣು ಮೇಕೆಯ ಸಂಪರ್ಕ ಕಲ್ಪಿಸಿ.

೮. ಹೋತಕ್ಕೆ ೧೫–೧೮ ತಿಂಗಳು ತುಂಬಿದ ಬಳಿಕ ಅದನ್ನು ಹೆಣ್ಣು ಮೇಕೆ ಮೇಲೆ ಬಿಡಿ. ಮೂರು ವರ್ಷ ತುಂಬುವವರೆಗೂ ಇದನ್ನು ವರ್ಷಕ್ಕೆ ೩೦ ಕ್ಕೂ ಹೆಚ್ಚು ಹೆಣ್ಣು ಮೇಕೆಗಳ ಮೇಲೆ ಬಿಡಬೇಡಿ. ಇದು ಬಲಿತ ಮೇಲೂ ೨–೩ ದಿನಗಳ ಅಂತರವಿಟ್ಟುಕೊಂಡು ಹೆಣ್ಣು ಮೇಕೆ ಮೇಲೆ ಬಿಡಿ. ಹೆಣ್ಣು ಮೇಕೆ ಮೇಲೆ ಒಂದೆರಡು ಸಾರಿ ಬಿಟ್ಟು ಬಳಿಕ ಹೆಣ್ಣು ಮೇಕೆಯಿಂದ ಬೇರ್ಪಡಿಸಿ. ಈ ರೀತಿ ನೋಡಿಕೊಂಡರೆ ಹೋತವೊಂದನ್ನು ಹನ್ನೊಂದು ವರ್ಷ ಬಳಸಬಹುದು.

೯. ಗರ್ಭ ಧರಿಸಿದ ಹೆಣ್ಣು ಮೇಕೆಯನ್ನು ಹೆಚ್ಚು ಇಳಿಜಾರಿನಲ್ಲಿ ಓಡಲು ಬಿಡಬೇಡಿ. ಮರಿ ಹಾಕುವ ಒಂದು ವಾರ ಮುಂಚೆಯೇ ಇದನ್ನು ಹಿಂಡಿನಿಂದ ಬೇರ್ಪಡಿಸಿ. ಮರಿ ಹಾಕಿದ ೩–೪ ದಿನಗಳ ವರೆಗೂ ಪ್ರತ್ಯೇಕ ಜಾಗದಲ್ಲಿಡಿ.

೧೦ ಎರಡು ಮರಿಗಳಿಗಿಂತ ಹೆಚ್ಚು ಮರಿ ಹುಟ್ಟಿದರೆ ಅತ್ಯಂತ ಚಿಕ್ಕ ಮರಿಗೆ ಹೆಚ್ಚು ಹಾಲು ದೊರೆಯುವಂತೆ ನೋಡಿಕೊಳ್ಳಿ. ಹೆತ್ತ, ಮೊದಲ ಮೂರು ದಿನಗಳ ಹಾಲನ್ನು ಮರಿಗಳಿಗೆ ತಪ್ಪದೆ ಕುಡಿಸಿ, ಇದರಲ್ಲಿ ರೋಗ ನಿರೋಧಕ ಶಕ್ತಿಯಿರುತ್ತದೆ.

೧೧. ಎರಡು ಮೊಲೆಗಳಿಂದಲೂ ಒಂದೇ ರೀತಿ ಹಾಲು ಕರೆಯಿರಿ. ಹಾಲು ಕರೆಯುವ ಸಮಯದಲ್ಲಿ ಕ್ರಮಬದ್ಧತೆಯಿರಲಿ. ಆದಷ್ಟು ಬೇಗ ಬೇಗ ಹಾಲು ಕರೆದರೆ ಹೆಚ್ಚು ಹಾಲಿನ ಇಳುವರಿ ಸಾಧ್ಯ. ಸ್ವಚ್ಛತೆ ಬಗ್ಗೆಯೂ ಗಮನವಿರಲಿ.

೧೨. ರೋಗ ರುಜಿನಗಳ ಬಗ್ಗೆ ಜಾಗರೂಕತೆ ವಹಿಸಿ ಮುಂಜಾಗರೂಕತೆಯ ಕ್ರಮಗಳನ್ನು ತೆಗೆದುಕೊಳ್ಳಿ.

ಮೇಕೆ ಸಾಕಣೆಗೆ ಕೋಳಿ ಸಾಕಣೆ, ಜೇನು ಸಾಕಣೆ, ಡೈರಿ ಹಸುಗಳ ಸಾಕಣೆಗೆ ಕೊಡುವಂತೆ ಸಹಾಯ, ಸಹಕಾರಗಳು ಸರ್ಕಾರದಿಂದ ಸಿಗುವಂತಾಗಬೇಕು. ಇದರಿಂದ ಹಳ್ಳಿಗಾಡಿನ ಲಕ್ಷಾಂತರ ಬಡಜನರ ಉದ್ಧಾರವಾಗದಿದ್ದರೂ ನಿರುದ್ಯೋಗಿ ಅರೆ ಉದ್ಯೋಗಿಗಳ ಉದರಂಭರಣವಾದರೂ ಆದೀತು. ವಿಶ್ವದ ಭೂಪಟದಲ್ಲಿ ಗುರುತಿಸುವುದೂ ಕಷ್ಟವಾದ ಸಣ್ಣ ಪುಟ್ಟ ದೇಶಗಳು ಮೇಕೆ ಸಾಕಣೆಯಲ್ಲಿ ಮುನ್ನಡೆದಿರುವುದನ್ನು ಗಮನಿಸಿದರೆ ವಿಶಾಲ ಹಾಗೂ ಸಂಪದ್ಭರಿತ ಭಾರತದಲ್ಲಿ ಬಡವನ ಭಾಗ್ಯದಂತಿರುವ ಈ ಪ್ರಾಣಿಯನ್ನು 'ಕಟುಕನ ಕಾಮಧೇನು'ವಾಗೇ ಬಿಟ್ಟು ನಮಗೆ ನಾವೇ ಅನ್ಯಾಯ ಮಾಡಿಕೊಳ್ಳುತ್ತಿದ್ದೇವೆ ಎನಿಸುತ್ತದೆ. ✡

ಪ್ರಾಚೀನ ಕಾವ್ಯ ಸುಧೆ

ನೀವಿನ್ನೆದ್ದಿರಾ?

–ದಲಕೆ

ಪ್ರಪಂಚದ ಶ್ರೇಷ್ಠತಮ ಅನುಭಾವಿಗಳಲ್ಲಿ ಒಬ್ಬರೆಂದು ಕೀರ್ತಿಭಾಜನರಾದ ಮಹಿಪತಿದಾಸ (೧೬೧೧–೮೧) ರ ಜೀವನ ಉದ್ಬೋಧಕವಾಗಿದೆ. ತಂದೆ ಕೋನೇರರಾಯ ನೊಂದಿಗೆ ಚಿಕ್ಕಂದಿನಲ್ಲಿಯೇ ವಿಜಾಪುರಕ್ಕೆ ಬಂದ ಮಹಿಪತಿ ಚಿಕ್ಕ ವಯಸ್ಸಿನಲ್ಲಿಯೇ ಮಹಮ್ಮದ ಆದಿಲಶಹನಲ್ಲಿ ಕೆಲಸಕ್ಕೆ ಸೇರಿಕೊಂಡು ದಿವಾಣ ಪದವಿಗೇರಿದ. ಕಲಬುರ್ಗಿ ದೇಶಮುಖರ ಮನೆತನದ ತಿಮ್ಮವ್ವ ಸಾಧ್ವಿ ಹೆಂಡತಿಯಾಗಿ ದೊರೆತಳು. ದಿವಾಣ ಮಹಿಪತಿರಾಯ ಸುಖೋಪಭೋಗದಲ್ಲಿ ಮೆರೆಯುತ್ತಿದ್ದಾಗ ಶಹಾ ನಂಗಾವಲಿಗಳು ತೋರಿದ ಪವಾಡದಿಂದಾಗಿ ಮಹಿಪತಿರಾಯರಲ್ಲಿ ವೈರಾಗ್ಯೋದಯವಾಗಿ, ಭಾಸ್ಕರಸ್ವಾಮಿಗಳ ಅನುಗ್ರಹ ಪಡೆದು ಅಧಿಕಾರ ತ್ಯಾಗ ಮಾಡಿ ಮಹಿಪತಿ ದಾಸರಾದರು. ವಿಜಾಪುರ ತ್ಯಜಿಸಿ ಶಹಾಪುರದಲ್ಲಿ (ನಿಜಾಂ) ಮೂರು ವರ್ಷ ಕಾಲ ವಾಸವಾಗಿದ್ದು ಕಾಖಂಡಕಿಗೆ ಹಿಂತಿರುಗಿ ಕೊನೆವರೆಗೂ ಅಲ್ಲಿಯೇ ನೆಲೆ ನಿಂತರು. ಇವರಿಗೆ ದೇವರಾಯ–ಕೃಷ್ಣರಾಮ ಎಂಬಿಬ್ಬರು ಮಕ್ಕಳು. ಮಹಿಪತಿದಾಸರು ಕಾಖಂಡಕಿಯಲ್ಲಿ ಎರಡು ದಶಕ ಕಾಲಕ್ಕೂ ಮಿಕ್ಕಿ ವಾಸವಾಗಿದ್ದು ತಮ್ಮ ಪದ-ಪದ್ಯಗಳ ಮೂಲಕ ಜನರಲ್ಲಿ ಭಗವದ್ಭಕ್ತಿ ಪ್ರಚಾರ ಮಾಡಿದರು. ಅಕ್ಕನ ಆಗ್ರಹಕ್ಕೊಳಗಾಗಿ ಸತ್ತವನನ್ನು ಬದುಕಿಸುವ ಪವಾಡ ಮಾಡಿ ತೋರಿಸಿದರು. ಆದರೆ ಪವಾಡಗಳು ಅವರಿಗೆ ಸೇರುತ್ತಿರಲಿಲ್ಲ. ತಮ್ಮ ಗುರು, ತಮಗಾದ ಸಾಕ್ಷಾತ್ಕಾರ, ಭಗವದ್ಭಕ್ತಿ, ನೀತಿಬೋಧೆ ಎಲ್ಲವನ್ನು ಸರಳ ಸುಂದರ ಪದ್ಯಗಳಲ್ಲಿ ನೀಡಿದ್ದಾರೆ ನಿವೇದಿಸಿದ್ದಾರೆ. ಅವರ ಕೆಲ ಪದ್ಯಗಳನ್ನು ಇಲ್ಲಿ ಕೊಡಲಾಗಿದೆ. ಅವರ ವಂಶಜರು ವಿಜಾಪುರದಲ್ಲಿ ಇನ್ನೂ ಇದ್ದಾರೆ.

ಎಲ್ಲಿದ್ಯೋ ಹರಿ !

ಎಲ್ಲಿದ್ಯೋ ಹರಿ ಹೇಳಯ್ಯಾ
ಎಲ್ಲ ತಿಳಿಯುತ್ತದೆ ನಿಮ್ಮಾಟದ
ಸುದ್ದ್ಯೆಯಾ ||ಪ||

ನಾಲ್ಕಾರು ಹದಿನೆಂಟು ಮಂದಿಯು ಕೇಳಿದೆ
ಸಿಲುಕನವರಿಂದಾಡೂದೆ
ಮಲಕು ಎಂಬತ್ನಾಲ್ಕು ಲಕ್ಷವೂ ಸೋಸಿದೆ
ನಿಲುಕಿ ನಿನ್ನ ನೆಲೆ ನಿಜವು ದೋರದೆ ||೧||

ನಾನಾ ಮತ ನಾನಾ ಮಾರ್ಗ ಶೋಧಿಸಿದೆ
ಖೂನ ನಿನ್ನದು ತಿಳಿಯದೆ
ನಾನು ನೀನಾರೆಂಬವರಿಗೆ ಅನುಸರಿಸಿದೆ
ನೀನಿಹುದ ಸ್ಥಳದ ಗಾಳಿಯು ಬೀಸದೆ ||೨||

ಜೀಳದವರ ಕಾಲು ಬಿದ್ದು ನಾ ಕೇಳಿದೆ
ಸುಳುಹು ನಿನ್ನದು ದೋರದೆ
ಕಲಿ ಕಳಗವೆ ಮಾಡಿ ತಪಸವ ಮಾಡಿದೆ
ಒಲವು ನಿಮ್ಮದು ಎಂದಿಗೂ ಆಗದೆ ||೩||

ಒಡದ ಭವಣೆ ಬಟ್ಟು ಹುಡುಕದಾ
ಹುಡುಕಿದೆ
ತೊಡಕು ನಿಮ್ಮದು ತಿಳಿಯದೆ
ಒಡನೆ ಎನ್ನೊಳು ಬಂದು ಅಡಕವ ಹರಿಸಿದಿ
ಒಡವನಾಥಾ ಎಂದು ಕೈಯ್ಯ ಬಿಡದೆ ||೪||

ಮನೋನ್ಮನವಾಗಿ ಕಂಗಳ ತೆರೆಸಿದೆ
ಸ್ವಾನುಭವನೇ ಬೀರಿದೆ
ದೀನ ಮಹಿಪತಿ ಮನೋಹರನೆ ಮಾಡಿದೆ
ಅನುದಿನ ಘನ ಸುಖದೊಳು ಇರಿಸಿದೆ ||೫||

ಶ್ರೀಹರಿ ರೂಪ

ಸಾರಿಹಲ್ಲೇದ ನೋಡಿ ಶ್ರೀಹರಿ ರೂಪ
ದೋರುತಿಹ ಗುರು ಪರಮ ಸಮೀಪ ||ಪ||

ಇಡದು ತುಂಬೇದ ನೋಡಿ ಎಡ ಬಲಪೂರ್ಣ
ಬಿಡದೆ ಸೂಸುತಲಿದೆ ಜಡೆದು ನಿಧಾನ ||೧||

ಸಂದಿಸೀಹದು ನೋಡಿ ಹಿಂದು ಮುಂದೆಲ್ಲ
ಒಂದು ಮನದಿ ನೋಡಿ ಬಂದು ನೀವೆಲ್ಲ ||೨||

ಬಳೆದು ಕೊಂಬುವಂತೆ ಹೊಳೆಯುತದೆಲ್ಲ
ಸುಳಹು ಶ್ರೀಕೃಷ್ಣನ ತಿಳುವವರಿಲ್ಲ ||೩||

ಕಣ್ಣುಗೆಟ್ಟರಬ್ಯಾಡಿ ಕಾಣದೆ ಖೂನ
ತನ್ನೊಳಗಾದೆ ನೋಡಿ ಸಾನ್ನಿಧ್ಯಪೂರ್ಣ ||೪||

ಭಾಸುತಲಿದೆ ಭಾಸ್ಕರ ಕೋಟಿತೇಜ
ದಾಸ ಮಹಿಪತಿ ಪ್ರಾಣದೊಡೆಯ ಸಹಜ ||೫||

ಏನೋ ಎಂತೋ

ಏನೋ ಎಂತೋ ತಿಳಿಯದು ತಿಳಿಯದು
ಸ್ವಾನಂದದ ಸುಖದಾಟ ||ಪ||

ಒಳಗೊ ಹೊರಗೊ ಬೈಗೊ ಬೆಳಗೊ
ಕಾಳೊ ಬೆಳದಿಂಗಳವೋ
ಮಳೆಯೊ ಮಿಂಚೊ ಹೊಳಪೊ ಸುಳವೊ
ತಿಳಿಯದ ಕಳೆ ಕಾಂತಿಗಳು ||೧||

ಉದಯಾ ಅಸ್ತೊ ಆದ್ಯೊ ಅಂತೊ
ಮಧ್ಯೊ ತಾ ತಿಳಿಯದು
ತುದಿ ಮೊದಲಿಲ್ಲದ ಪದಮುಲ ಬ್ರಹ್ಮವು
ಉದಯವಾಗಿಹುದು ನೋಡಿ ||೨||

ಜೀವೊ ಭಾವೊ ಶಿವೋ ಶಕ್ತ್ಯೊ
ಆವದು ತಾ ತಿಳಿಯದು
ಘುಮುಘುಮಿಸುವ ಅವಿನಾಶನ ಪ್ರಭೆಯಿದು
ಮಹಿಪತಿ ವಸ್ತುಮಯವೊ ||೩||

ತಾನೆಂಬುದು ಸುಜ್ಞಾನ

ತಾನಾ ತಂದನಾನಾ ತಾನಾ ತಂದ ನಾನಾ
ತಾನಾ ತಂದನಾನಾ ತಾನಾ ತಂದ ನಾನಾ ||ಪ||

ತಾನಾ ತಂದನಾನಾ ತಾನೆಂಬುದರ ಖೂನ
ಏನಂದರಿಯು ಹೀನ ಮನುಜಾ ಪಾಮರ ಪೂರ್ಣಾ ||೧||

ತಾನೆಂಬುದೆ ತಾ ದೈವ, ನಾನೆಂಬುದೆ ತಾ ಜೀವ
ಜ್ಞಾನದಿಂದ ತಿಳಿವ, ಅನುಭವ ಆಶ್ರಯಿಸುವ ||೨||

ತಾನೆ ತಂದವ ನಾನಾ ತತ್ವಿಂದಲೇ ಜೀವನ
ನಾನೆಂಬುಡವ ಗುಣ ಜನ್ಮಕಿದೆ ಸಾಧನ ||೩||

ತಾನೆಂದರೆ ತಾರಕ ನಾನೆಂದರೆ ನರಕ
ಜ್ಞಾನ ಗುರುಮುಖ ಖೂನ ತಿಳಿವೂದು ಸುಖ ||೪||

ತಾನೆಂದರೆ ತಾ ಬ್ರಹ್ಮ ನಾನೆಂದರೆ ಅಹಮ್ಮ
ಅನುಭವದಿಂದ ಮರ್ಮ, ಖೂನಾದರೆ ಸಂಭ್ರಮ ||೫||

ತಾನೆಂದರ ತಾ ಅರ್ಕ, ನಾನೆಂದರ ತಾ ತರ್ಕ
ಹೀನ ಗುಣ ಸಂಪರ್ಕ, ಏನೆಂದರಿಯು ಮೂರ್ಖ ||೬||

ತಾನೆಂಬುದು ಸುಜ್ಞಾನ, ನಾನೆಂಬುದು ಅಜ್ಞಾನ
ತಾನೆಂದರೆ ಅಣುರೇಣು, ನಾನೆಂದರನು ಮಾನ ||೭||

ತಾನೇ ತಾನಾಗಿ ಒಂದೇ, ಖೂನದೋರಿದ ತಂದೆ
ಭಾನುಕೋಟಿ ತೇಜೊಂದೆ ಪೂರ್ಣ ಮಹಿಪತಿಗೊಂದೆ ||೮||

ಏಳಿರಿ

ಎದ್ದಿರ್ಯಾ ನೀವಿನ್ನೆದ್ದಿರ್ಯಾ
ಎದ್ದೆವು ನಾವಿನ್ನು ಸದ್ಗುರು ಕೃಪೆಯಿಂದ ||ಪ||

ಶುದ್ಧಿ ಮರೆದು ನಿದ್ರಿಯು ಕಳೆದಿನ್ನೆದ್ದಿರ್ಯಾ
ಕಾಯ ಮಂದಿರದೊಳು ಮುಸುಕು ತೆಗೆದು
ಚನ್ನಾಗಿ ಮಲಗಿದ್ದ ಜನ್ಮ ಹಾರಿಸಿ ಬಿಟ್ಟು
ಮನದಲ್ಲಿ ಇನಕೋಟಿ ತೇಜನ ಕಾಣ್ಯಾಂಗೆ
ತನ್ನ ತಾ ತಿಳಿದ್ಯಾಂಗೆ ಕಣ್ದೆರೆದಿನ್ನು
ಎದ್ದಿದ್ದರೆ ನೀವಿನ್ನು ಶುದ್ಧ ಬುದ್ಧರಾಗಿ
ದೀನ ಮಹಿಪತಿಸ್ವಾಮಿ ಮನೋಹರ ಮಾಡ್ಯಾಂಗ

ಉತ್ಸವ

ಎಂ. ಬಿ. ನಟರಾಜ

ನಿನ್ನೆಯೇ ಸೋಮುವಿನ ಕಾಗದ ಬಂತು: 'ಆದಷ್ಟು ಬೇಗ ಬಾ. ಸಧ್ಯದಲ್ಲೇ "ಸ್ವಾಮಿ ಹುಣ್ಣಿಮೆ" ಸುರು. ನಿನಗೆ ಬೇಕಾದ ಹಾಡು-ಹಸೆ, ದೃಶ್ಯಗಳು ಸಿಗುತ್ತವೆ. ಅದಕ್ಕಿಂತ ಹೆಚ್ಚಾಗಿ ನಾಲ್ಕಾರು ದಿನ ಕಾಲ ಕಳೆಯಬಹುದು. ನಿನ್ನ ಬಳಿ ಬೇಕಾದಷ್ಟು ಮಾತಾಡುವುದಿದೆ. ಬೇಗ ಬಾ.'

ಹೆಗಲಿಗೆ ಕ್ಯಾಮರಾ ತೂಗು ಹಾಕಿಕೊಂಡೆ. ಜೊತೆಗೆ ಟೇಪ್ ರೆಕಾರ್ಡರ್, ನಾಲ್ಕಾರು ದಿನಕ್ಕೆ ಬೇಕಾದ ಬಟ್ಟೆಬರೆಯನ್ನೆಲ್ಲ ಕಿಟ್‌ನಲ್ಲಿ ತುರುಕಿಕೊಂಡು ಬಸ್ಸು ಹತ್ತಿದ್ದಾಯಿತು. 'ಸಾಸುವೆ ಕಟ್ಟೆ' ಕೈ ಮರದ ಬಳಿ ಇಳಿದು, ಒಳ ರಸ್ತೆಯಲ್ಲಿ ಸುಮಾರು ಎರಡು ಮೈಲಿ ನಡೆಯಬೇಕು ಸೋಮುವಿನ ಊರಿಗೆ. ಕಿರಿದಾದ ರಸ್ತೆಯ ಎರಡು ಪಕ್ಕಗಳಲ್ಲೂ ಲಂಟಾನ, ಕಳ್ಳಿಬೇಲಿ. ಅದರ ಆ ಕಡೆಯಲ್ಲಿ ಬೆಳೆದು ನಿಂತ ಹತ್ತಿಗಿಡಗಳಲ್ಲಿ ಅರಳಿದ ಹತ್ತಿಯ ಉಂಡೆಗಳು ಅಸ್ಪಷ್ಟವಾಗಿ ಕಾಣುತ್ತಿದ್ದವು. ಬೇಲಿಗೆ ಮುತ್ತಿಯಿಕ್ಕುತ್ತಿದ್ದ ಪೇಕೆಗಳನ್ನು ನೋಡುತ್ತ ಬರುತ್ತಿದ್ದಂತೆ, ಹಿಂದಿನ ಬಾರಿ ಇಲ್ಲಿಗೆ ಬಂದುದು ನೆನಪಾಯಿತು.

ಸಂಜೆ ಆರೂವರೆ ಗಂಟೆ- ನಾನು ಡಾಕ್ಟರ್ ಸೋಮುವಿನ ಮನೆ ಮುಂದೆ ನಿಂತಾಗ. ವಯಸ್ಸಾದ ಅವನ ಅಜ್ಜಿ ಕಟ್ಟೆಯ ಮೇಲೆ ಕೂತಿದ್ದು ಹುಬ್ಬಿನ ಮೇಲೆ ಕೈಯಿಟ್ಟು ನೋಡಿತು "ನಾನು ಕಣಜ್ಜಿ ನಿಮ್ಮ ಸೋಮು ಸ್ನೇಹಿತ. ಆವೊತ್ತು ಬಂದಿದ್ನಲ್ಲ..." ಎನ್ನುವಷ್ಟರಲ್ಲಿ ಚಟುವಟಿಕೆಯಿಂದ ನನ್ನ ಭುಜದ ಮೇಲೆಲ್ಲ ಕೈಯಾಡಿಸುತ್ತ, "ಸ್ವಲ್ಪ ದಪ್ಪಗಾಗಿದ್ದಿ. ಮದುವೆ ಮಾಡಿ ಕೊಂಡ್ಯ...?" ಎಂದು ನಕ್ಕಿತು.

ಅಷ್ಟರಲ್ಲಿ ಸೋಮು ಕೊಳೆಯಾಗಿದ್ದ ಒಂದು ಪ್ಯಾಂಟು ಧರಿಸಿ ಒಳಗಿಂದ ಬಂದವನೆ "ಓಹೊ ಬಂದು ಬಿಟ್ಟೆಯ! ಇಷ್ಟು ಬೇಗ ನೀನು ಬಂದಿದ್ದೆ ಆಶ್ಚರ್ಯ." ಎನ್ನುತ್ತ ಬೆನ್ನಿನ ಮೇಲೆ ಮೃದುವಾಗಿ ತಟ್ಟಿದ. ನಾನು ಸ್ನಾನ ಮಾಡಿದ ಮೇಲೆ ನನಗೆ ಕಾಫಿ-ತಿಂಡಿ ಸಿಕ್ಕಿತು.

ಸೋಮುವಿಗೆ ತಂದೆಯಿಲ್ಲ.: ತೀರಿಕೊಂಡು ಸುಮಾರು ಏಳೆಂಟು ವರ್ಷವಾಯಿತು. ಅವನ ತಂದೆ-ಚಿಕ್ಕಪ್ಪ ಹಿಸ್ಸೆಯಾಗಿ ತುಂಬ ವರ್ಷವಾಗಿವೆ. ಇಬ್ಬರ ಮನೆಗಳೂ ಅಕ್ಕಪಕ್ಕದವೆ. ಸೋಮು ಅವರ ತಂದೆಗೆ ಒಬ್ಬನೆ ಮಗ. ಸೊಸೆ ಅಂದರೆ ಸೋಮುವಿನ ತಾಯಿ. ತಾಳ್ಮೆಯವಳೆಂದು ಅಜ್ಜಿ ಈ ಮನೆಯಲ್ಲಿ ಸದಾ ಕಾಲ ಇರುವುದು.

ತನ್ನ ಅಜ್ಜಿಯ ಕತೆಗಳನ್ನು ಸೋಮು ಖುಷಿಯಿಂದ ವರ್ಣಿಸುತ್ತಾನೆ. ಅದಕ್ಕೆ ಅರಳು ಮರಳೆಂದು ಹೇಳಿದರೆ ಒಪ್ಪದಿರುವುದನ್ನು ಕಂಡು ಗೇಲಿ ಮಾಡುತ್ತಾನೆ, "ನೀನು

ರಾತ್ರಿ ಮಲಗಿದ್ದಾಗ ಹಂಜಿ ಬುಟ್ಟಿಯಂತೆ ತಲೆಗೂದಲನ್ನು ಬಾಬ್ ಮಾಡುತ್ತೇನೆ ನೋಡು," ಎಂದರೆ ಅಜ್ಜಿ ನಗುತ್ತದೆ. ಇಷ್ಟೆಲ್ಲ ಮೊಮ್ಮಗನ ಮೇಲೆ ಪ್ರೀತಿ ಇಡಲು ಅದಕ್ಕೆ ಮತ್ತೊಂದು ಕಾರಣ, ಅವನು ಚಿಕ್ಕ ವಯಸ್ಸಿನಲ್ಲಿ ಊರಿಗೆ ಮೊದಲನೆ ಡಾಕ್ಟರಾಗಿ ಬಂದನಲ್ಲಾ ಎಂದು.

ಅಜ್ಜಿಗೆ ಮೊಮ್ಮಗನ ಮೇಲೆ ಬಲವಾದ ಒಂದು ಕಾರಣಕ್ಕಾಗಿ ಕೋಪವೂ ಇದೆ. ಆ ಕೋಪವನ್ನು ಯಾವಾಗಲೂ ತೋರಿಸಿಕೊಳ್ಳದೆ ಸಮಯ ಸಿಕ್ಕಾಗ ವ್ಯಂಗವಾಗಿ, ತಮಾಷೆಯಾಗಿ ಮಾತಾಡುತ್ತ ತೀರಿಸಿಕೊಳ್ಳುತ್ತದೆ.

ಪಕ್ಕದ ಮನೆಯ ಮಗುವಿಗೊಮ್ಮೆ ಬಾಲಗ್ರಹ ಬಡಿಯಿತಂತೆ. ಅಜ್ಜಿ ಗ್ರಹಶಾಂತಿ ಮಾಡಬೇಕು ಎಂದಿತು. ಸೋಮು ಒಪ್ಪದೆ ಇಂಜೆಕ್ಷನ್ನು ಮಾತ್ರ ಕೊಟ್ಟ. ಪೈಪೋಟಿಯಿಂದ ಅಜ್ಜಿ 'ಶಾಂತಿ'ಯನ್ನು ಮಾಡಿಸಿತು. ಖಾಯಿಲೆ ಗುಣವಾಯಿತು. ಜೊತೆಗೆ ಅಜ್ಜಿ ಮೊಮ್ಮಗನಿಗೆ ಜಗಳವೂ ಸುರು: ಮಗುವಿಗೆ ಗುಣವಾಗಿದ್ದು 'ಶಾಂತಿಯಿಂದ'— ಇಲ್ಲ— 'ಔಷಧಿಯಿಂದ.' ಅಜ್ಜಿ ನನ್ನ ಮುಂದೆ ಪಂಚಾಯಿತಿ ತಂದಿತು. 'ನೀನು ಕೊಟ್ಟ ತೀರ್ಪನ್ನು ಒಪ್ಪುತ್ತೇನೆ' ಎಂದಿತು. "ಅವನು ಏನಾದರೂ ಹೇಳಲಿ ಬಿಡಿ. ಅವರವರ ನಂಬಿಕೆ ಅವರವರಿಗೆ ದೊಡ್ಡದು," ಎಂದೆ. ನನ್ನ ಮಾತು ಕೇಳಿ "ನೀನು ಬಲು ಕಿಲಾಡಿ ಮನುಷ್ಯ," ಎಂದು ಬಚ್ಚು ಬಾಯಲ್ಲಿ ನಕ್ಕಿತು. ಪ್ರೀತಿಯಿಂದ ರಾಗಿಯ ಹುರಿಟ್ಟನ್ನು ಕಲಿಸಿ ತಂದು, ನನ್ನ ಮುಂದಿಟ್ಟು "ತೆಗೆದುಕೊ, ಇಂಥ ಸವಿಯಾದ್ದು ನೀನು ತಿಂದಿರಲಿಕ್ಕಿಲ್ಲ," ಎಂದಿತು. ಅದನ್ನು ಬಾಯಿಗೆ ಇಟ್ಟುಕೊಳ್ಳುವಷ್ಟರಲ್ಲಿ ಸೋಮುವಿನ ಚಿಕ್ಕಪ್ಪ— ಬಸಪ್ಪ ಬಂದರು. "ಹೊತ್ತಾಯ್ತು ನಾವೆಲ್ಲ ಗುಡಿಗೆ ಸೂಚನೆ ಕೇಳಲು ಹೊರಟಿದ್ದೀವಿ. ನೀನು ಬರ್ತೀಯೋ... ಹೇಗೆ?" ಅಜ್ಜಿಯನ್ನು ಕೇಳಿದರು. ಅಜ್ಜಿ ನನಗೆ "ಹಾಗಾದರೆ ಬಂದ ನಂತರ ನೀನು ತಿನ್ನಬಹುದು. ನೀನೂ ಹೊರಡು," ಎಂದಿತು. ತಿಂಡಿ ಹಾಗೇ ಉಳಿಯಿತು.

ಗುಡಿಗೆ ಹೋದಾಗ ಹೊತ್ತು ಸಂಪೂರ್ಣ ಇಳಿದಿತ್ತು. ಒಳಗೆ ಎಳ್ಳೆಣ್ಣೆ ದೀಪಗಳು ಮಾತ್ರ. ಗುಡಿಯೆಂದರೆ ಒಂದೇ ಒಂದು ಚೌಕಾಕಾರದ ಕೋಣೆ. ಅದರಲ್ಲೆ ಸಮಸ್ತ ವ್ಯವಹಾರವೂ ನಡೆಯಬೇಕು. ನಾವು ಹೋಗುವುದರೊಳಗಾಗಿ ಅನೇಕ ಜನ ಸೇರಿದ್ದರು. ಪೂಜಾರಿ ಕಚ್ಚೆಯುಟ್ಟು ವಿಭೂತಿಯನ್ನು ಧಾರಾಳವಾಗಿ ಪೂಸಿಕೊಂಡಿದ್ದ. ಅಸ್ಪಷ್ಟವಾದ ಧ್ವನಿಯಲ್ಲಿ ಮಂತ್ರದ ಹಾಗೆ ಏನೋ ಗುಣಗುಟ್ಟುತ್ತ ಮೂರು ಕಲ್ಲಿನಾಕಾರದ ದೇವತೆಗಳಿಗೆ ಪೂಜೆ ಮಾಡುತ್ತಿದ್ದ. ಆ ಕಲ್ಲಿನಲ್ಲಿ ದೇವತೆಯ ಆಕಾರ ಮೂಡಿದೆಯೆನ್ನುವ ಭಾಗದಲ್ಲೆಲ್ಲ ಚಿನ್ನ, ಬೆಳ್ಳಿಯ ಆಭರಣಗಳನ್ನು ತೊಡೆಸಿದ್ದರು. ಸಾಧಾರಣ ಅಳತೆಗಿಂತಲೂ ಮೀರಿದ ಕಣ್ಣು, ಹುಬ್ಬು, ಬಾಯಿಯ ಆಕಾರ. ಸುತ್ತ ಮುತ್ತ ಚಂಡು ಹೂವು, ದಾಸವಾಳ, ಸೇವಂತಿಗೆ, ಅರಿಶಿನ, ಕುಂಕುಮ. ನಿಧಾನವಾಗಿ ಹೊರಗಿನಿಂದ ಉರುಮೆಯ ಬಡಿತ ಕೇಳಿ ಬಂತು. ಕತ್ತಲಾಗುತ್ತಿದ್ದಂತೆ ಬಡಿತದ ವೇಗ ಹೆಚ್ಚಾಯಿತು. ಚೌಕಿಯ ಬಾಗಿಲನ್ನು ಹಾಕಿಕೊಂಡು ಪೂಜಾರಿಯೊಬ್ಬನೆ ಒಳಸೇರಿದ. ದೂರದ ಕೆರೆಯನ್ನೆ ಸೂಕ್ಷ್ಮವಾಗಿ ನೋಡುತ್ತ ನಿಂತೆ. ಪರೆ ಮುತ್ತಿದ ಕಣ್ಣಿನ ಹಾಗೆ ಮಂಕು ಹೊಳೆಯುತ್ತಿತ್ತು.

ಅಷ್ಟರಲ್ಲಿ ಚೌಕಿಯ ಬಾಗಿಲು ದಡಾರನೆ ತೆಗೆದುಕೊಂಡಿತು. ಉರುಮೆಯ ಬಡಿತ ಕಿವಿಯಲ್ಲಿ ತುಂಬಿತು. ಮಂಕುದೀಪದ ಗರ್ಭ ಗುಡಿಯಿಂದ ಯಾರೋ ದಬ್ಬಿದ ಹಾಗೆ ಪೂಜಾರಿ ಹೊರಕ್ಕೆ ಓಡಿ ಬಂದ. ಅವನ ಭುಜದ ಮೇಲೆ ಸಣ್ಣ ಪೆಟ್ಟಿಗೆಯಾಕಾರದ ಪೀಠದಲ್ಲಿ 'ಅಮ್ಮ'ನ ಒಂದು ಸಣ್ಣ ಬೆಳ್ಳಿ ವಿಗ್ರಹ. ಅದರ ಭುಜದಿಂದ ಕೆಳಕ್ಕೆಲ್ಲ ಹರಡಿಕೊಂಡಂತೆ ಪೀತಾಂಬರ ಪಂಜಿನ ಬೆಳಕಿನಲ್ಲಿ ಹೊಳೆಯುತ್ತಿತ್ತು. ಪೂಜಾರಿ ನಿಂತಿದ್ದ ಜನವನ್ನೆಲ್ಲ ಗಣನೆಗೆ ತಂದುಕೊಳ್ಳದ ಹಾಗೆ ಬೇವಿನ

ಮರದ ಬಳಿಗೆ ಓಡಿದ. ಹಿಂತಿರುಗಿ ಬರುತ್ತಿದ್ದಂತೆ ಉರುಮೆಯ ತಾಳಕ್ಕೆ ತಕ್ಕಂತೆ ಹೆಜ್ಜೆಯಿಡುತ್ತ ಅವಸರದಲ್ಲಿ ಕುಣಿದಾಡಿದ. ಪೂಜಾರಿಗೆ ಆವೇಶ ಇನ್ನೂ ಹೆಚ್ಚಾಯಿತು. ನಾನು ಕ್ಯಾಮರಾಕ್ಕೆ ಫ್ಲಾಷನ್ನು ಜೋಡಿಸಿ ಅವನ ಭಂಗಿಯನ್ನು ಸ್ಥಿರವಾಗಿ ನೋಡುವಷ್ಟರಲ್ಲಿ ಬಸಪ್ಪ 'ಬೇಡ... ಬೇಡ' ಎನ್ನುತ್ತ ಓಡಿ ಬಂದರು. ಅಷ್ಟರಲ್ಲೇ ಪೂಜಾರಿಯ ಮೇಲೆ ಫ್ಲಾಷಿನ ಬೆಳಕಾಡಿತು. ಬಸಪ್ಪನವರ ಮುಖ ಸ್ವಲ್ಪ ಆತಂಕದಿಂದ ಕೂಡಿರುವ ಹಾಗಿತ್ತು.

ಪೂಜಾರಿ ನೆಲದ ಮೇಲೆ ಕಾಲಿಟ್ಟೂ ಇಡದವನಂತೆ ಬಿರುಸಾಗಿ ಕುಣಿಯುತ್ತಿದ್ದ. ಬಸಪ್ಪ ಒಂದು ರೂಪಾಯಿ ಕಾಣಿಕೆಯಿಟ್ಟು ಭಕ್ತಿಯಿಂದ ಕೈಮುಗಿದು ನಿಂತರು. ಇವರ ಪ್ರಶ್ನೆಗೆ ಹೊಸ ತಾಳದಲ್ಲಿ ಕುಣಿಯುತ್ತ ಉತ್ತರ ನೀಡಿತು: "ಹೆಹೆಹೆ ಹೆಹೋ... ನಿನ್ನ ಅಣ್ಣನ ಮಗ ಈ ಸಾರ್ತಿ ಸ್ವಾಮಿ ಸೇವಾ ನಡೆಸಬೇಕೂsss...ಸೇವಾ ನಡೆಸಬೇಕೂsss..."

ಉತ್ತರ ಹೇಳಿದ ಕೂಡಲೇ ಉರುಮೆಯ ಬಡಿತ ಜೋರಾಯಿತು. ಪೂಜಾರಿ ಬುಡ ಕಳಚಿದಂತೆ ಕುಸಿದು ಬಿದ್ದ. ಮಿಸುಕಾಡಲಿಲ್ಲ. ಚೌಕಿಯಲ್ಲಿದ್ದ ತೀರ್ಥದ ನೀರನ್ನು ತಂದು ಮುಖದ ಮೇಲೆ ಎರಚಿದರು. ಸ್ವಲ್ಪ ಹೊತ್ತಾದ ಮೇಲೆ ಅವನು ಅಲುಗಾಡಿದ.

ದಾರಿಯಲ್ಲಿ ಬಸಪ್ಪ ಮೌನವಾಗಿ ನನ್ನ ಜೊತೆ ಬಂದರು. ಸೋಮುವನ್ನು ಕುರಿತು ಅವರೇನಾದರೂ ಆಲೋಚಿಸುತ್ತಿರಬೇಕು ಎನಿಸಿತು. ಸ್ವಲ್ಪ ದೂರ ಹೋದ ಮೇಲೆ ಹಣೆಯುಜ್ಜಿಕೊಳ್ಳುತ್ತ "ಈ ಸಾರ್ತಿ ಹಬ್ಬವೆಲ್ಲ ಹೇಗೆ ನಡೆಯುತ್ತೋ ಏನೋ... ನಮ್ಮ ಸೋಮುವಿನದೇ ನಮಗೆಲ್ಲ ಹೆದರಿಕೆ," ಎಂದರು. ಎದುರಿನಿಂದ ಮೋಟಾರ್ ಸೈಕಲ್ಲಿನ ಕರ್ಕಶ ಸದ್ದು ಕೇಳಿ ಬಂತು. ಹತ್ತಿರವಾದಂತೆ ಸೋಮು ಕಾಣಿಸಿದ. ನಾವು ಅವನಿಗೆ ಎದುರಾದ ಕೂಡಲೇ ಮೋಟಾರ ಬೈಕು ನಿಲ್ಲಿಸಿ "ಅಯ್ಯಾ ಪೂಜೆ ಎಲ್ಲ...?" ಎಂದು ಕೇಳಿದ. ಬೈಕಿನ ಗುಡು ಗುಡು ಸದ್ದಾಗುತ್ತಿರುವಂತೆಯೇ "ಆಯ್ತು, ಈ ಸಾರೆ ನೀನು ಪೂಜೆ ಹೊರಬೇಕಂತೆ. ಅಮ್ಮನ ಅಪ್ಪಣೆಯಾಗಿದೆ," ಎಂದು ಎತ್ತರದ ಧ್ವನಿಯಲ್ಲಿ ಹೇಳಿದರು. ಆದರವನಿಗೆ ಕೇಳಿತೋ-ಇಲ್ಲವೋ... ನನ್ನನ್ನು "ಬಾರಯ್ಯ...ಕೂತ್ಕೋ ಬೇಗ ಹೋಗುವ," ಎಂದ. ಬಸಪ್ಪನವರಿಗೆ ಹೇಳಿ



ಅವನ ಹಿಂಬದಿ ಕುಳಿತೆ. ಅವರ ಮಾತಿಗೇನೂ ಪ್ರತಿಕ್ರಿಯೆ ಹೇಳದೆ ಬೈಕನ್ನು ಹೊರಡಿಸಿದ.

*

ನಾಳೆಯು ದಿವಸವೇ ಹುಣ್ಣಿಮೆ. ಈ ದಿವಸದಿಂದಲೇ ಅಜ್ಜಿಗೆ ಸಡಗರ. ಬೆಳಗಿನ ಜಾವ ಐದು ಗಂಟೆಯಿಂದಲೇ ಅದರ ಗಡಿಬಿಡಿ. ನಾವು ಮಲಗಿದ್ದಲ್ಲಿಗೇ ಬಂದು ಆರಾಮಾಗಿ ಸೊಂಪಾಗಿ ಬೆಳೆದು ಮಲಗಿರುವ ಸೋಮುವಿನ ದೇಹವನ್ನು ನೋಡುತ್ತ "ನಿನ್ನ ಸ್ನೇಹಿತನನ್ನು ಬಯ್ದು ಎಬ್ಬಿಸು," ಎಂದಿತು. ಒಂದಿಷ್ಟು ತಿವಿದಾಡಿದ ಮೇಲೆ ಸೋಮು ಆಕಳಿಸುತ್ತ ಎದ್ದ. ಹಿಂದಿನ ದಿನ 'ಅಮ್ಮ' ಅಪ್ಪಣೆ ಕೊಡಿಸಿದ ವಿಷಯ ತನಗೆ ಗೊತ್ತೇ ಇಲ್ಲವೆನ್ನುವಂತೆ ಹಾಸಿಗೆ ಸುತ್ತಿದ. ಬೇಗ ಬೇಗ ಸ್ನಾನ ಮಾಡಿ ಬಂದು ಊಟದ ಕೋಣೆಗೆ ಹೋದ. ನನ್ನನ್ನೂ ಜೊತೆಯಲ್ಲಿ ಕೂರಿಸಿಕೊಂಡು ಧಾರಾಳವಾಗಿ ಅಕ್ಕಿರೊಟ್ಟಿ ಮೊಸರು ಹೊಡೆದ. ಪ್ರತಿ ಬಾರಿ ರೊಟ್ಟಿ ನೀಡುವಾಗಲೂ ಅವರಮ್ಮ ಏನನ್ನೊ ಹೇಳಲು ತವಕಪಡುತ್ತಿದ್ದಾರೆ ಎನಿಸಿತು. ಆಕೆ ಹೊರಗೆ ಹೋಗಿ, ಅಜ್ಜಿಯ ಸಂಗಡ ಏನನ್ನೋ ಪಿಸುಗುಟ್ಟುತ್ತಿದ್ದರು. ನನಗಿದೆಲ್ಲ ವಿಚಿತ್ರವೆನಿಸಿ "ಏನೋ ಸೋಮು ಇದೆಲ್ಲ? ನಿಮ್ಮಮ್ಮನನ್ನು ಇಷ್ಟು ಕಂಟ್ರೋಲ್‌ನಲ್ಲಿ ಇಟ್ಟಿದೀಯ? I hate it," ಎಂದೆ. ಅವನು ನಕ್ಕು "ನಿನಗಿದೆಲ್ಲ ಗೊತ್ತಾಗುವುದಿಲ್ಲ. ಇವರೆಲ್ಲ ಹೇಳಿದ ಹಾಗೆ ನಾವು ಈ ಹಳ್ಳಿಯಲ್ಲಿ ಕೇಳಿದರೆ ಮುಗಿಯಿತು ನಮ್ಮ ಕಥೆ... ನಾವು ನಾವೇ ಆಗಿ ಬದುಕೋದು ಇಲ್ಲಿ ಕಷ್ಟ," ಎನ್ನುತ್ತ ನೀರು ಕುಡಿದು ಮೇಲೆದ್ದ. ಅಷ್ಟರಲ್ಲಿ ಅಜ್ಜಿ ಬಾಗಿಲಲ್ಲಿ ಬಂದು ನಿಂತು "ಏನೊ ಅದು ನೀನು ಹೇಳ್ತಿರೋದು? ಸುಮ್ಮನೆ ಅದು ಇದು ಮಾತಾಡದೆ ಸಂಜೆ ಬೇಗ ಮನೆಗೆ ಬಾ. ನಾಳೆ ನಿನ್ನದೇ ಪೂಜೆ. ರಾತ್ರಿ ಉಪವಾಸ ಇರಬೇಕು. ಹುಷಾರು..." ಎಂದಿತು. ಅವನ ಮುಖ ನೋಡಿದೆ. ಅಜ್ಜಿಯ ಮಾತುಗಳೇನೂ ಪರಿಣಾಮ ಬೀರಿದಂತಿರಲಿಲ್ಲ. ಆದರೇನೂ ತುಂಬ ಆಲೋಚಿಸುವವನ ಹಾಗೆ ಅಜ್ಜಿಯ ಮುಖವನ್ನೂ ನೋಡದೆ ಹೊರಟು ಹೋದ.

ಅವನು ಕ್ಲಿನಿಕ್ಕಿಗೆ ಹೋದ ಮೇಲೆ ನನಗೇನೂ ಮಾಡಲು ತೋಚಲಿಲ್ಲ. ಇವರ ನಾಳಿನ ಹಬ್ಬದ ಹಿನ್ನೆಲೆಯೇನಾದರೂ ದೊರಕೀತೆ ಎಂದು ಅಜ್ಜಿಯ ಬಳಿ ಹೊರಟೆ...

ಸಂಜೆಯಾಗುತ್ತಿದ್ದಂತೆ ಸೋಮುವಿನ ತಾಯಿ ಮನೆಯನ್ನೆಲ್ಲ ಸಾರಿಸಿದರು. ಅಂಗಳದಲ್ಲಿ ಸಗಣಿ–ನೀರು ಹಾಕಿ, ರಂಗೋಲಿ ಬಿಡಿಸಿದರು. ಹೊರಗೆ ಬಂದು ನೋಡಿದರೆ ಎಲ್ಲರ ಮನೆಯ ಮುಂದೆಯೂ ಗುಡಿಸುವ ಸಂಭ್ರಮದಲ್ಲಿ ದೂಳು ದಟ್ಟವಾಗಿ ಹರಡಿತ್ತು. ಕೆಂದೂಳಿನ ಏರಾಟದ ಅಡಿಯಲ್ಲಿ ಅಲ್ಲಲ್ಲಿ ಹೆಂಗಸರು ಮೈ ಬಗ್ಗಿಸಿ ಗುಡಿಸುತ್ತಿದ್ದರು. ಕೆಲವರು ನೀರು ಚಿಮುಕಿಸುತ್ತಿದ್ದರು. ರಸ್ತೆಯಲ್ಲಾಗುತ್ತಿದ್ದ ಈ ಬದಲಾವಣೆಯನ್ನು ನೋಡಿ ಕುಣಿದಾಡುತ್ತಿದ್ದ ಮಕ್ಕಳು ಬೈಕಿನ ಸದ್ದು ಕೇಳಿ ನಿಂತಲ್ಲೇ ನಿಂತವು. ರಸ್ತೆಯನ್ನು ಸೀಳಿಕೊಂಡು ಬಂದವನ ಹಾಗೆ ಸೋಮು ಬಂದು ನಿಂತು "ಸುಮ್ಮನೆ ಇಲ್ಲೇನು ಮಾಡ್ತಿ? ನಿನ್ನೊಂದಿಗೆ ಸ್ವಲ್ಪ ಮಾತಾಡಬೇಕಾಗಿದೆ. ಬಟ್ಟೆ ಬದಲಾಯಿಸಿಕೊಂಡು ಬಾ," ಎಂದ. ಅಷ್ಟು ಹೊತ್ತಿಗೆ ಅಜ್ಜಿ ಒಳಗಿಂದ ಬಂದು "ಎಲ್ಲಿ ಹೊರಟೆಯೊ ಸೋಮು? ಸಂಜೆ ಸ್ನಾನ ಮಾಡಬೇಕು ನೀನು..." ಎನ್ನುತ್ತ ನಿಂತಿತು. "ಸ್ವಲ್ಪ ತಡೆದು ಬರ್ತೀನಿ. ನನ್ನನ್ನು ಕಾಯಬೇಡಿ," ಎನ್ನುತ್ತ ಹೊರಟ. ನಾನು ಹಿಂಬದಿ ಕುಳಿತೆ.

ಬೈಕು ಲಗಾಮು ಕಿತ್ತ ಹಾಗೆ ಓಡಿತು. ಅಜ್ಜಿ ಮೂಕಾಗಿ ನಿಂತಿರುತ್ತದೆ ಎಂದುಕೊಂಡು ತಿರುಗಿ ನೋಡಿದೆ. ಸುಳ್ಳಾಗಲಿಲ್ಲ.

ಎಲ್ಲೂ ನಿಲ್ಲದೆ ಸೀದಾ ಅವರ ತೋಟಕ್ಕೆ ಕರೆದೊಯ್ದ. ತೋಟದ ಮನೆಗೆ ಹೋದ ಕೂಡಲೇ "ಏ ರಾಮಾ" ಎಂದು ಆಳನ್ನು ಕೂಗಿ, ಸೋಫ ಮೇಲೆ ಕುಳಿತುಕೊಳ್ಳುತ್ತ "ನಿನ್ನ ಹತ್ತಿರ ಕೆಲವು ಮಾತಾಡಲು ಕಾದಿದ್ದೆ, ಇವೊತ್ತು ಸಮಯ ಸಿಕ್ಕಿತು," ಎಂದ. ರಾಮನಿಗೆ ಎಳನೀರು ಕಿತ್ತು ತರಲು ಹೇಳಿ "ಇವನು, ನೋಡು, ನಮ್ಮ ನಂಬಿಗಸ್ಥ ಆಳು. ನನ

ಒಳ-ಹೊರಗೆಲ್ಲ ಗೊತ್ತು ಇವನಿಗೆ," ಎಂದ. ಒಂದಾದ ಮೇಲೆ ಮತ್ತೊಂದು ಮೂರು ನಾಲ್ಕು ಎಳನೀರು ಕುಡಿದದ್ದಾಯಿತು. ಅವನು ಕಂಡುಗೋಲನ್ನು ಬಡುವಿನಲ್ಲಿ ಇಡು ತ್ತಿದ್ದಂತೆ "ಮನೆಯಲ್ಲಿ ಯಾರೂ ಇಲ್ಲದಿದ್ದರೆ ಗೌರಿಯನ್ನು ಬರಬೇಕಂತೆ ಎಂದು ಕರೆದು ಕೊಂಡು ಬಾ," ಎಂದ. ಯಾವ ಗೌರಿಯೋ-ಯಾಕೆ ಅವಳು ಬರಬೇಕೋ, ಅರ್ಥವಾಗಲಿಲ್ಲ. ಸಂಜೆಯಾಗುತ್ತಿತ್ತು. ನನಗೆ ಅಜ್ಜಿಯ ನೆನ ಪಾಯಿತು. "ಮಹರಾಯ, ನಾನು ಹೋಗ್ತೇನೆ. ಅಲ್ಲಿ ಏನೇನು ಶಾಸ್ತ್ರಗಳು, ಹಾಡುಗಳು ನಡೆಯುತ್ತವೋ ಏನೋ... ನಾನು ಬಂದಿದ್ದು ಪ್ರಯೋಜನವಿಲ್ಲದಂತಾ ಗುತ್ತೆ" ಎಂದೆ. ಸೂಕ್ಷ್ಮವಾಗಿ ನೋಡಿದರೆ ಅವನಿಗೆ ಏನೋ ಹೇಳುವ ದುಗುಡ ತುಂಬಿ ರುವ ಹಾಗೆ ಕಂಡಿತು. ಅದನ್ನೆಲ್ಲ ಮರೆತವ ನಂತೆ "ಈ ಹಬ್ಬ-ಆಚಾರ ಅಭ್ಯಾಸ ಮಾಡಿ ಏನು ಮಾಡಬಹುದು ನೀನು...?" ಕೇಳಿದ. ಪುನಃ ಅವನೇ "ಇದನ್ನೆಲ್ಲ ಅಭ್ಯಾಸ ಮಾಡ್ತೀರ, ಪುಸ್ತಕ ಮಾಡ್ತೀರ ಈ ಹವ್ಯಾಸದ ನೆಪದಲ್ಲಿ ಒಂದು ಸಂಪಾದನೆ. ಇದೆಲ್ಲ ಒಂದು ರೀತಿ ಜನಕ್ಕೆ ಮಾಡುವ ವಂಚನೆ," ಎಂದ. ಅವ ನೊಂದಿಗೆ ನನಗೆ ಚರ್ಚೆ ಬೇಕಿರಲಿಲ್ಲ. ನಾನು ಹೊರಟೆ. ರಾಮನ ಜೊತೆಯಲ್ಲಿ ಇವನು ಹೇಳಿದ ಹುಡುಗಿಯೇ ಇರಬೇಕು; ಬರು ತ್ತಿದ್ದಳು. ನೋಡಿ ಗಕ್ಕನೆ ನಿಂತೆ. ತಲೆ ತಗ್ಗಿಸಿ ಹತ್ತಿರಕ್ಕೆ ಬಂದಳು. ಮಾಸು ಕೆಂಪು ಬಣ್ಣದ ಒಂದು ಸೀರೆ ಉಟ್ಟಿದ್ದಳು. ಸೀರೆ-ಕುಬುಸ ಸ್ವಲ್ಪ ಕೊಳೆಯಾಗಿತ್ತು. ನೀಳ ವಾಗಿದ್ದರೂ ದೇಹ, ಪುಷ್ಟವಾಗಿ ದೃಢವಾಗಿ ದ್ದಳು. ತಲೆಗೂದಲು ಆತುರಕ್ಕೆ ಕಟ್ಟಿದಂತೆ ಸಿವುಡಿ ಮಾಡಿದ್ದಳು. ಏಚ್ಚಳವಾದ ಕಣ್ಣು ಗಳು.

ಮೆಂಟ್ಟಿಲ ಬಳಿ ಬಂದು ನಿಂತಿದ್ದಾಳೆ.

ಎಚ್ಚತ್ತವನಂತೆ ಮಾತಿಲ್ಲದೆ ಒಳಕ್ಕೆ ಹಿಂತಿರು ಗಿದೆ. ಆ ಹುಡುಗಿ ಗಂಭೀರವಾಗಿ ಒಳ ಬರು ತ್ತಿದ್ದಂತೆ ಸೋಮು 'ಬಾ' ಎಂದು ಕುರ್ಚಿಯ ಕಡೆ ಕೈತೋರಿಸಿದ. ಸಂಕೋಚದಿಂದ ಕುಳಿತಳು. ರಾಮು ಸ್ವಲ್ಪ ದೂರದಲ್ಲಿ ನಿಂತುಕೊಂಡ. ನನ್ನನ್ನೂ ಬಲವಂತವಾಗಿ ಸೋಮು ಕೂರಿ-ಸಿದ. ಇಷ್ಟರಿಂದಲೆ ಇವರಿಬ್ಬರ ಬಗ್ಗೆ ಏನೇನು ಊಹಿಸುವುದು ಸಾಧ್ಯವಿತ್ತೊ ಎಲ್ಲವೂ ಮನಸ್ಸಿನ ಮುಂದೆ ಬಂತು.

ಮುಗ್ಧವಾದ, ತೇವ ಹರಡಿಕೊಂಡಿದ್ದ ಕಣ್ಣುಗಳಲ್ಲಿ ಅವಳು ನೆಲವನ್ನೇ ನೋಡುತ್ತಿ ದ್ದಳು. ಇವಳಿಗೇನಾದರೂ ಹಳ್ಳಿ ಹಾಡುಗಳು ಬಂದಾವೆ, ಎಂದು ಕೇಳುವಂತಾಯಿತು. ಆದರೆ ಮಾತು ಆಡದೇ ಮುದುಡಿಕೊಂಡಿರುವ ಈ ಹುಡುಗಿ ಏನು ತಾನೆ ಹಾಡಿಯಾಳು? "ಈಕೇನೆ ಗೌರಿ ಎಂದರೆ, ನಿನಗೆ ಪರಿಚಯ ಮಾಡಿಕೊಡಬೇಕು ಎಂದೇ ನಿನ್ನನ್ನಿಲ್ಲಿ ಉಳಿಸಿ ಕೊಂಡಿದ್ದು," ಎಂದ. ನಾನು ಆಕೆಗೆ 'ನಮ-ಸ್ಕಾರ' ಎಂದೆ. ಗೌರಿ ಪ್ರತಿ ನಮಸ್ಕಾರ ಮಾಡಲು ಯತ್ನಿಸಿದಳು. ನಾಚಿಕೆಯಿಂದ ಕೈ ಜೋಡಿಕೆ ಸರಿಯಾಗಿ ಹೊಂದಿಕೊಳ್ಳಲಿಲ್ಲ.

ಮುಂದೇನು ಮಾಡಬೇಕೆಂದು ತೋಚದೆ ಸೋಮುವನ್ನೆ ನೋಡಿದೆ. ಪಾಚು ನೋಡಿ-ಕೊಂಡೆ. ಕರ್ಚೀಫು ತೆಗೆದು ಬೆವರು ಒರೆಸಿ ಕೊಂಡೆ. ಅದೇ ವೇಳೆಗೆ ಸೋಮುವಿನ ಚಿಕ್ಕಪ್ಪನ ಮಗ ಒಂದೇ ಉಸಿರಿನಲ್ಲಿ ಓಡಿ ಬಂದು ಗೌರಿಯನ್ನು, ನಮ್ಮನ್ನು ನೋಡಿ ಅವಾಕ್ಕಾಗಿ ನಿಂತ. ಸುಧಾರಿಸಿಕೊಂಡು "ಅಜ್ಜಿ-ಅಯ್ಯ ಎಲ್ಲ ಕರೀತಿದಾರೆ. ಬೇಗ ನೀನು ಬರಬೇಕಂತೆ ಅಣ್ಣ," ಎಂದ. ಅವನ ಹೇಳಿಕೆ ನನಗೆ ಬಿಡುಗಡೆಯ ಮಾತಾಯಿತು. "ಗೌರಿ ನಿನ್ನ ಕೆಲವು ವಿಷಯಗಳನ್ನು ಇವ ನೊಂದಿಗೆ ಮಾತಾಡಬೇಕೆಂದು ಬಂದೆ. ಅದಕ್ಕೇ ನಿನ್ನನ್ನು ಕರೆದಿದ್ದು, ಇವೊತ್ತು ಆಗಲಿಲ್ಲ. ನಾಳೆ ಬರ್ತೀಯ...?" ಸೋಮು ಕೇಳುತ್ತ ಎದ್ದು ನಿಂತ. ಆಗಲೆಂದು ಮಾತಾಡದೆ ತಲೆ-ಯಾಡಿಸಿದಳು.

ಊರೊಳಗೆ ಏನೇನು ನಡೆದು ಮುಗಿದಿ ದೆಯೊ ಎಂಬ ಚಿಂತೆಯಿಂದ ಬೇಗ ಬೇಗ ಕಾಲು ಹಾಕಿದೆ. ಸೋಮುವೂ ಮೌನವಾಗಿ ಬರು ತ್ತಿದ್ದ. ತನ್ನ ಅಣ್ಣ ಪೂಜೆಗೆ ಬರುತ್ತಿದ್ದಾ-ನಲ್ಲ! ಅದೆ ಒಂದು ಆಶ್ಚರ್ಯ. ಸಂತೋಷ

ದಿಂದ ಶಂಕರ ಮುಂದಾಗಿ ಓಡಿದ. ಬಾಗಿಲಲ್ಲಿ ಅಜ್ಜಿ, ಸೋಮುವಿನ ತಾಯಿ ತುದಿಗಾಲಲ್ಲಿ ನಿಂತು ನಮಗಾಗಿ ಕಾದಿದ್ದರು. ನಮ್ಮನ್ನು ನೋಡಿ ಸಮಾಧಾನದಿಂದ ಒಳಕ್ಕೆ ಹೋದರು. ಸೋಮು, ನಡುದಾರಿಯಲ್ಲೆ ನಿಂತು, ಮೆಲ್ಲಗೆ ಆದರೆ ನೇರವಾಗಿ "ನೀನು ನೋಡಿದೆಯಲ್ಲ ಆ ಹುಡುಗಿಯನ್ನ? ಹೇಗಿದ್ದಾಳೆ? ನನ್ನ ಅವಳ ಸಂಬಂಧ ಕುರಿತು ನಾನೇನು ಹೇಳಬೇಕಾದ್ದಿಲ್ಲ. ನಿನಗಿದೆಲ್ಲ ನಗು ಬರಬಹುದು..." ಎಂದ. "ನಗುವುದೇಕೆ? ಆದರೆ ಇಂತಹ ಹಳ್ಳಿಯಲ್ಲಿ ನಿನ್ನ ಧೋರಣೆ ಬಗ್ಗೆ ನನಗೆ ಅನುಮಾನ. ಅವಳ ಜಾತಿಯ ಬಗ್ಗೆ ಕೇಳುವ ಕುತೂಹಲ ವಾಯಿತು. ಕೇಳಲಿಲ್ಲ" ಎಂದೆ.

*

ಸೋಮುವನ್ನು ದೇವರ ಕೋಣೆಗೆ ಕಳುಹಿಸಿ, ಹಸೆ ಮಣೆ ಮೇಲೆ ಕೂರಿಸಿದೆನಲ್ಲ ಎಂದು ಅಜ್ಜಿಗೆ ದಿಗ್ವಿಜಯ ಪಡೆದಷ್ಟು ಖುಷಿ. ಮನೆಯಲ್ಲೆಲ್ಲ ಅನೇಕ ಜನ. ಬಸಪ್ಪನವರದೆ ಹೊರಗಿನ ಓಡಾಟ. ಅವನ ಹಣೆಗೆ ಧಾರಾಳವಾಗಿ ಕುಂಕುಮ ಹಚ್ಚಿ ಆರತಿಯನ್ನು ಮಾಡಿದರು. ಕೈ ಬೊಗಸೆಯಲ್ಲಿ ಒಂದು ತೆಂಗಿನಕಾಯಿ, ಜೊತೆಗೆ ಹೊಸ ಹತ್ತಿಯ ಎಳೆಗಳನ್ನು ಹಿಡಿದು ಮುಂದೆ ನಡೆದ. ಅವನಿಗಿಂತಲೂ ಮುಂದೆ ಕೊಂಬು-ಕಹಳೆಯವರು. ರಾತ್ರಿ ಸುಮಾರು ಹತ್ತು ಗಂಟೆ ಮೀರಿತ್ತು. ಕಾಡು ಹಾದಿ ಹಿಡಿದು ಗುಂಪೆಲ್ಲ ಅಮ್ಮನ ಗುಡ್ಡಕ್ಕೆ ನಡೆಯಿತು.

ಸೋಮುವನ್ನು ಕರೆದುಕೊಂಡು ಪೂಜಾರಿ ಗುಡಿಯೊಳಗೆ ಸೇರಿದ. ನಾನೂ ಅವನ ಹಿಂದೆ ಹೋಗಲು ಯತ್ನಿಸಿದೆ. ದಢಾರನೆ ಬಾಗಿಲಿಕ್ಕಿಕೊಂಡ. ನಾನೇನು 'ಹಿಂದೂವಲ್ಲದವನೆ...?' ಎಂದುಕೊಂಡು, ಥತ್ ಎಂದೆ. ಬಸಪ್ಪನವರು ನನ್ನ ಕಡೆಗೆ ತಿರುಗಿ ಕಣ್ಣುಬಿಟ್ಟರು. "ಸ್ವಾಮಿ ಒಳಗೇನು ನಡೆಯುತ್ತದೂ ನೋಡಬೇಕಲ್ಲ..? ಅದಕ್ಕೆಂದೇ ಇಲ್ಲಿಗೆ ಬಂದವನು ನಾನು..." ಎಂದೆ. ಅಲ್ಲಿ ಯಾರೂ ಗಟ್ಟಿಯಾಗಿ ಮಾತಾಡುತ್ತಿರಲಿಲ್ಲ. ಅದನ್ನು ತಿಳಿಸಿಕೊಡುವವರಂತೆ ಕೈಯಲ್ಲೆ "ಸ್ವಲ್ಪ ಸುಮ್ಮನಿರಿ," ಎಂದು ಸಂಜ್ಞೆಮಾಡಿದರು.

ಸುಮಾರು ಹತ್ತು ನಿಮಿಷವಾದ ಮೇಲೆ ಪೂಜಾರಿ, ನಂತರ ಸೋಮು ಬಂದರು. ಚೌಕಿಯೊಳಗೆ ಜನರ ಸಣ್ಣ ಗುಂಪುಗಳು ಹೋಗಿ ಬಂದವು. ಸೋಮು ತೆಗೆದುಕೊಂಡು ಹೋಗಿದ್ದ ಹೊಸ ಹತ್ತಿಯ ಎಳೆಗಳಲ್ಲಿ ಕೆಲವನ್ನು ದೀಪ ಹಚ್ಚಿದ್ದರು. ಅಲ್ಲಿಯೇ ಇಟ್ಟಿದ್ದ ಒಂದು ಕುಕ್ಕೆಯನ್ನು ನೋಡಿ ಕಣ್ಣರಳಿಸಿದೆ. ಕೆಳಗೆ ಬಿಡಿಸಿ ಹರಡಿದ ಬೆಳ್ಳನೆಯ ಹತ್ತಿ. ಅದರ ಮೇಲೆ ಆಗತಾನೆ ಹುಟ್ಟಿದ ಮಗುವಿನಾಕಾರದ ಒಂದು ಮಣ್ಣಿನ ಬೆತ್ತಲೆ ಬೊಂಬೆ! ಹಣೆ–ಹೊಟ್ಟೆ–ಕೈ ಮೇಲೆ ವಿಭೂತಿ. ಅಲ್ಲಲ್ಲೆ ಒಂದೊಂದು ಕೆಂಪು ಕಣಗಿಲ ಹೂ. ಬಿಡಿಯಾಗಿ ಕಾಣುವ ಬೆರಳುಗಳು, ಕಿವಿ, ಮೂಗು. ಯಾರಿರಬಹುದು ಈ ಮೂರ್ತಿ?

ಹೊರಗಿದ್ದ ಪೂಜಾರಿ 'ಬೇಗ ಬನ್ನಿ ಸ್ವಾಮಿ. ಜನ ಕಾದಾರೆ' ಎಂದ. ಕೊಂಬು ಕಹಳೆ ಯಥಾಸ್ಥಿತಿಗೆ ಬಂದು ಎಲ್ಲರೂ ಹೊರಟರು. ಸೋಮು ಆ ಕುಕ್ಕೆಯನ್ನು ಎತ್ತಿ ತಲೆಯ ಮೇಲೆ ಹೊತ್ತುಕೊಂಡ...ಪಂಜಿನ ಬೆಳಕಲ್ಲಿ ಅವನ ಕೆಂಪು ಮುಗುಟ ಮಿರುಗುತ್ತಿತ್ತು. ನಾನು ಕ್ಯಾಮರಾ ಸಿದ್ಧಮಾಡಿಕೊಂಡೆ. ಪೂಜಾರಿ ಓಡಿ ಬಂದು ಅಡ್ಡ ಬಾಯಿ ಹಾಕಿದ. ಸೋಮು "ತೆಗೆಯಲಿ ಬಿಡಿ. ಅದಕ್ಕೆಲ್ಲ ನಿಮ್ಮ ದೇವರು ಏನು ಅಡ್ಡಿಮಾಡಲ್ಲ," ಎಂದ. ಕೂಡಲೆ ಪೂಜಾರಿ "ನನ್ನ ಒಡೆಯಾ, ನೀವು ಮಾತ್ರ ಈಗೇನು ಮಾತಾಡಬೇಡಿ. ಇದೊಂದು ಹಬ್ಬ ಯಾವ ತೊಂದರೆಯೂ ಇಲ್ಲದೆ ನಡೆದರೆ ಸಾಕು," ಎಂದು ನಿಟ್ಟುಸಿರಿಟ್ಟ.

ಗುಂಪು ಹೊರಟಿತು. ಢಕ್ಕಢಕ್ಕ ಢಕ್ಕಢಕ್ಕ ಬಡಿತ. ರೊಯ್ಞ್ಞಯ್ಯೊ ರೊಯ್ಞ್ಞ ಉರುಮೆಯ ಧ್ವನಿ. ಮರಗಳಲ್ಲಿ ಅಡಗಿದ್ದ ಹಕ್ಕಿಗಳು ಕಂಗಾಲಾಗಿ ದಿಕ್ಕು ತೋಚಿದತ್ತ ಹಾರಾಡಿದವು. ಆರ್ಭಟ ಇನ್ನೂ ಹೆಚ್ಚಾದಂತೆ ಕತ್ತಲಿನಲ್ಲಿ ಗುಡ್ಡಗಳು ಭೂತಗಳ ಹಾಗೆ ಕಾಣುತ್ತಿದ್ದವು, ಗುಡ್ಡ ಇಳಿದು ಇರುಕಲಾದ ಒಂದು ಸ್ಥಳದಲ್ಲಿದ್ದ ಬಂಡೆಯ ಬಳಿಗೆ ಕೊಂಬಿನವರು ಹೋದ ಕೂಡಲೆ ಅಲ್ಲೆ ನಿಂತುಬಿಟ್ಟರು. ಅವರ

ಒಂದೆ ಊರ ಗೌಡರು, ಕೆಲವು ಹಿರಿಯರು ಒತ್ತಿಕೊಂಡ ಹಾಗೆ ನಿಂತರು. ಪೂಜಾರಿ ಮತ್ತು ಅವನ ಸುತ್ತ ಇದ್ದ ಕೆಲವರು "ಮುಂದೆ ಏನು ನಡೆದಿದೆ? ಯಾಕೆ ನಿಂತಿರಿ?" ಎಂದು ಕಿರುಚಿಕೊಂಡರು. ವಿಷಯವೇನೂ ತಿಳಿಯದೆ ಎಲ್ಲರೂ ಆ ಬಂಡೆಯತ್ತ ಓಡಿ ಹೋದರು?

ಬಂಡೆಯ ಆ ಬದಿಯಲ್ಲಿ ಸುಮಾರು ಒಂದಿಪ್ಪತ್ತು ಮಂದಿ ಗಂಡಸರು ಹೆಂಗಸರು ಸಾಮಾನ್ಯ ಎಲ್ಲರೂ ಮೇಲುಗಚ್ಚೆ ಹಾಕಿದ್ದರು. ಗಂಡಸರಿಗೆ ಮೇಲಂಗಿ ಇರಲಿಲ್ಲ. ಹೊಳೆಯುವ ಕಪ್ಪು ಮೈಯ್ಯ ಅನೇಕ ಜನಗಳ ಮಧ್ಯೆ ಗೌರಿ! ಅಲ್ಲಿದ್ದ ಗಂಡಸರಿಗೂ ನಮ್ಮ ಗುಂಪಿಗೂ ದೊಡ್ಡ ಚರ್ಚೆಯ ಆರಂಭವಾಯಿತು. ಗೌಡರು ಮುಂದೆ ನಿಂತವರು "ಏ ಮಂಚಿಗ ನೀನು ಬಾರೊ ಮುಂದೆ. ಅದೇನು ಹೇಳು ನಿಮ್ಮದೆಲ್ಲ ಕೋರಿಕೆ. ನೀನು ಮಾತಾಡುವಾಗ ಬೇರೆ ಇನ್ಯಾರು ಮಾತಾಡಬಾರದು. ಹೂಂ ಹೇಳು," ಎಂದರು.

ಮಂಚಿಗ ಸ್ವಲ್ಪ ಹೊತ್ತು ಬಿಟ್ಟು "ಬುದ್ಧಿ ಇಷ್ಟು ದಿವಸ ಈ ವಿಚಾರ ತಡೆಕೊಂಡಿದ್ವಿ. ನಿಮ್ಮ ಈ ರಾತ್ರಿ ಹಬ್ಬ ನಮಗೆಲ್ಲ ತೊಂದರೆ," ಎಂದು ಹುಬ್ಬು ಗಂಟಿಕ್ಕಿದ.

ಗೌಡರು "ಯಾಕೆ ಬೊಗಳು," ಎಂದರು.

ಅವರ ಮುಖದ ಬಿಗುವನ್ನೆ ನೋಡಿ ತಲೆ ತಗ್ಗಿಸಿ "ಯಾಕೂ ಇಲ್ಲ ಒಡೆಯ. ಬೆಳಗಿಂದ ಬೈಗಿನ ತನಕ ಕಷ್ಟಪಟ್ಟು ದುಡೀತೀವಿ. ನೀವು ಎಂಟಾನೆಂಟು ದಿವಸ ಈ ಹಬ್ಬದ ಕುಣಿದಾಟ ಬಡಿದಾಟ ನಡೆಸಿದರೆ ನಮ್ಮ ಗತಿ ಏನು? ನಾವು ಮನಗೋದು ಗಿನಗೋದು?... ಎಲ್ಲ ಏನು?" ಎಂದ.

ಅವನಿಗೆ ಬಿಡುವೇ ಕೊಡದ ಹಾಗೆ ಬಸಪ್ಪ "ಥತ್ ನಾಚಿಕೆ ಆಗಲ್ವ ನಿನಗೆ ಈ ಮಾತೆಲ್ಲ ಆಡಲು? ವಯಸ್ಸು ಆಗಿದೆ ನಿನಗೆ ಕತ್ತೆ ಹಾಗೆ," ಎಂದು ಕೆಂಡ ಕಾರಿದರು. ಊರಿನ ಚಿಕ್ಕ ಹುಡುಗರು ಮಂಚಿಗನನ್ನು ನೋಡಿ ಕೇಕೆ ಹಾಕಲು ಸುರು ಮಾಡಿದರು. ಗೌಡರು ದುಮುಗುಟ್ಟುತ್ತಿದ್ದರು.

ಬಸಪ್ಪನವರ "ಯಾರು... ಯಾರು ಹೇಳಿಕೊಟ್ಟರು ನಿಮಗೆ ಇದನ್ನೆಲ್ಲ? 'ಅಮ್ಮ'ನ ವಿರೋಧ ಕಟ್ಟಿಕೊಂಡು ರಕ್ತ ಕಾರಿ ಸಾಯಬೇಡ್ರಿ. ಪೆದ್ದ ಜನಗಳೆ." ಎಂದರು. ಮಂಚಿಗನಿಗೆ ಏನು ಹೇಳಲು ತೋಚದೆ ಸೋಮುವನ್ನೊಮ್ಮೆ ನೋಡಿ, ಮೆಲ್ಲಗೆ "ನಿಮ್ಮ ಈ ಹಬ್ಬ ನಮ್ಮ ಜನಾಂಗಕ್ಕೆ ವಿರೋಧವಾಗಿದೆ ಬುದ್ಧಿ," ಎಂದು ಗೊಣಗಿದ.

ಗೌಡರು "ಬೇವರ್ಸಿ, ಯಾರು ಹಚ್ಚಿಕೊಟ್ರು ಹೇಳೊ ಅಂದರೆ ನಿಮ್ಮ ಜನಾಂಗಕ್ಕೆ ವಿರೋಧವಂತೆ," ಎನ್ನುತ್ತ ಮುನ್ನುಗ್ಗಿದರು. ಅಷ್ಟರಲ್ಲಿ ಗೌಡರ ಮಗ ರಾಜಪ್ಪ ಯಾರೋ ಒಂದಿಬ್ಬರು ಮಂಚಿಗನ ಕಡೆಯ ಹುಡುಗರನ್ನೆಳೆದುಕೊಂಡ. "ಹೇಳ್ರಲೆ... ಹೇಳ್ರೋ" ಎನ್ನುತ್ತ ಒಂದೆರಡೇಟು ಬಿಗಿದ ಸದ್ದಾಯಿತು. ಮಂಚಗನ ಗುಂಪೆಲ್ಲ ಈ ಕಡೆಗೆ ಏರಿ ಬರುವ ಹಾಗಿದ್ದರು. ಪಂಜಿನವರು "ಇಟ್ಟುಬಿಡ್ತೀವಿ ನೋಡಿ. ಹಲ್ಕ ನನ್ಮಕ್ಳ," ಎನ್ನುತ್ತ ಪಂಜನ್ನು ತಿವಿಯುವ ಹಾಗೆ ಬಂದರು. ಎಲ್ಲೆಲ್ಲೂ ಕೂಗಾಟ ಅರಚಾಟ ಸುರುವಾಯಿತು. ಕೆಲವರು ಉಸಿರುಗಟ್ಟಿ ಓಡಿ ಹೋದರು. ಗೌಡರು, ರಾಜಪ್ಪ ಕೆಲವರನ್ನು ಬೆನ್ನಟ್ಟಿದರು. ಬಸಪ್ಪ ಬೆನ್ನಟ್ಟಿದ ಒಬ್ಬ ಕರಿಯನನ್ನು ಎಳೆದುಕೊಂಡು ಬಂದರು. ಸುಮಾರು ಹದಿನೆಂಟು ಇಪ್ಪತ್ತರ ಪ್ರಾಯದವನು. ಅವನ ಕೈಯನ್ನು ಬಳ್ಳಿಯ ಹಾಗೆ ತಿರುಚಿ, ಸೊಂಟ ಬಗ್ಗಿ ನಿಲ್ಲುವಂತೆ ಮಾಡಿದರು– "ಹೇಳು ಯಾರು ಹೇಳಿಕೊಟ್ಟರು ನಿಮಗೆಲ್ಲ ಹೀಗೆ ಬರೋದಕ್ಕೆ...?" ಹುಡುಗ ಸ್ವಲ್ಪ ಹೊತ್ತು ಒರಲಾಡಿದ. ಬೆನ್ನ ಮೇಲೆ ಒಂದು ಗುದ್ದು ಬಿದ್ದ ಕೂಡಲೆ, ಕುಡಿದಿದ್ದ ಸಾರಾಯಿ ಕಕ್ಕಿದ– "ಹೇಳ್ತಿನಿ... ಹೇಳ್ತೀನಿ ಒಡೆಯ ನಿಮ್ಮ ಸೋಮಣ್ಣೋರು ಹೇಳಿಕೊಟ್ಟರು..." ಎಂದು ಮತ್ತೊಮ್ಮೆ ಕಕ್ಕಿದ. ತನ್ನ ಗುಂಪಿನ ಕೊನೆ ಹುಡುಗ ಬರುವವರೆಗೆ ಗೌರಿ, ಕೆಲವು ಹೆಂಗಸರು ಅಲ್ಲೆ ನಿಂತಿದ್ದರು.

*

ಮಾರನೆಯ ದಿವಸವೆಲ್ಲ ಸ್ವಾಮಿಯನ್ನು

ಕುಕ್ಕೆಯಲ್ಲಿಟ್ಟುಕೊಂಡಿದ್ದಂತೆ 'ಪೆಜ್ಜೆ ನಮಸ್ಕಾರ' ನಡೆಯಬೇಕು. ಬೆಳಗಿನ ಜಾವ ಎದ್ದವನೆ ನನ್ನನ್ನೂ ಬಲವಂತದಿಂದ ಸೋಮು ಎಬ್ಬಿಸಿದ. ರಾತ್ರಿ ತಡವಾಗಿ ಮಲಗಿದ್ದರಿಂದ ಕಣ್ಣೆಲ್ಲ ಊದಿಕೊಂಡಂತಾಗಿತ್ತು. "ಅಜ್ಜಿ ಬರುವ ಮೊದಲೆ ಸ್ವಲ್ಪ ಕೆಲಸವಿದೆ ಏಳು," ಎಂದು ಗಡಿಬಿಡಿ ಮಾಡಿದ.

ತೋಟದ ಮನೆಗೆ ಬಂದೆವು. ಬಾಗಿಲ ಪಕ್ಕದ ಚಿಟ್ಟೆಯ ಮೇಲೆ ಮಂಚಿಗ ಮತ್ತು ಇನ್ನಿಬ್ಬರು ಹುಡುಗರು ಕೂತಿದ್ದವರು, ನಾವು ಹೋದ ಕೂಡಲೆ ಎದ್ದು ನಿಂತರು. ಅವರು ಒಳಗೆ ಬಂದ ಕೂಡಲೆ ಸೋಮು "ನಿನ್ನೆ ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಹೇಳುವುದು ಬಿಟ್ಟು ಹಾಗೆ ಹೆದರಿ ಓಡಿ ಹೋಗೋದ? ಯಾಕೆ ಹಾಗೆ ಮಾಡಿದಿರಿ...?" ಎಂದ. ಅವರಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಮಂಚಗ "ಕ್ಷಮಿಸಿ ಒಡೆಯ. ನಮ್ಮ ಹುಡುಗ ಒಬ್ಬ ನಿಮಗೆ ದ್ರೋಹ ಮಾಡಿದ. ನಿಮ್ಮ ಚಿಕ್ಕಯ್ಯೋರು ಕೇಳಿದ್ದಕ್ಕೆ ನಿಮ್ಮ ಹೆಸರು ಹೇಳಿಬಿಟ್ಟ.... ಥತ್ ಅವನ ಮನೆ ಹಾಳಾಗ," ಎಂದ. ಸೋಮು ಅದಕ್ಕೇನೂ ಹೇಳಲಿಲ್ಲ, "ನೋಡು ಮಂಚಿಗ. ಇವೊತ್ತು ರಾತ್ರಿ ಪೆಜ್ಜೆ ಪೂಜೆ ಅಂತ ಮತ್ತೇನೊ ಮಾಡ್ತಾರೆ. ನೀವೆಲ್ಲ ವೇರ ಬಂದು ಇದು ನಮ್ಮ ಜನಾಂಗಕ್ಕೆ ವಿರೋಧ ಅಂತ ಕೂಗಾಡಬೇಕು. ನಿಮಗೆ ಈ ಹಬ್ಬದ ಹಿಂದಿನ ಕಥೆ ಹೇಳಿದೇನೆ. ಇನ್ನೂ ಇದರ ಪಾಡಿಗೆ ಇದು ನಡೆಯಲಿ ಅಂತ ನಿಮಗೆ ಅಭಿಪ್ರಾಯ ಇದ್ದರೆ, ನಿಮ್ಮ ಇಷ್ಟ..." ಎಂದ. ಇಬ್ಬರು "ನಿಮ್ಮ ಪಾದ ಮುಟ್ಟಿ ಆಣೆ ಮಾಡ್ತೀವಿ. ಇವೊತ್ತು ರಾತ್ರಿ ಕೆಲಸ ಕೆಡೋದಿಲ್ಲ. ಒಡೆಯ," ಎನ್ನುತ್ತ ಹೋದರು.

ಸೋಮು ಈಗ ಒಬ್ಬನೆ ನನ್ನ ಜೊತೆ. ಇವನು ಈ ಊರಿನಲ್ಲಿ ವೈದ್ಯನೊ, ಜನರನ್ನು ಎತ್ತಿ ಕಟ್ಟುವವನೊ ತಿಳಿಯಲಿಲ್ಲ. ನನ್ನ ಬಲಭಾಗದ ಗೋಡೆಯ ಕಿಟಕಿಯಾಚೆ ನೋಡಿದೆ. ಅಮ್ಮನ ಗುಡ್ಡ ಮತ್ತು ಬೇವಿನ ಮರ ಬಿಸಿಲಿನಲ್ಲಿ ನಿಚ್ಚಳವಾಗಿ, ಮೌನವಾಗಿ ಕಾಣುತ್ತಿದ್ದವು. ಹಿಂದಿನ ದಿವದ ಹಾರಾಟಗಳೆಲ್ಲ ಮನಸ್ಸಿನಲ್ಲಿ ಧುಮುಗುಟ್ಟುತ್ತಿತ್ತು. ಸದ್ದುಗದ್ದಲಗಳಿಲ್ಲದೆ ಹಳ್ಳಿಯ ಮನೆಗಳೆಲ್ಲ ಕಟ್ಟ ನಿದ್ರೆಯಲ್ಲಿ ಮುಳುಗಿರುವಂತಾಯಿತು. ಇದ್ದಕ್ಕಿದ್ದಂತೆ ಎಲ್ಲೋ ದೂರದಿಂದ ಗ್ರಾಮಫೋನ್ ರಿಕಾರ್ಡಿನಲ್ಲಿ, ಒಂದು ಹಳೆಯ ಕನ್ನಡ ಚಿತ್ರದ ಪ್ರೇಮದ ಕೂಗು; ಬೇಸರವಾಯಿತು. "ನೀನು ಏನಾದರೂ ಹೇಳು ಸೋಮು. ಈ ಊರಿನ ಜನಗಳ ನಂಬಿಕೆಯನ್ನೇ ಕೆಡಿಸುತ್ತಿದ್ದಿ," ಎಂದೆ. ಹಾಡಿನ ಗದ್ದಲ ನಿಂತಿರಲಿಲ್ಲ. ನನ್ನ ನಡವಳಿಕೆ ನಿನಗೆ ವಿಚಿತ್ರವಾಗಿ ಕಾಣಬಹುದು. ನಿನಗೆ ಈ ಜನಗಳ ಹಬ್ಬ–ಹಾಡು–ನಂಬಿಕೆ ಸಂಗ್ರಹಿಸುವ ಮಟ್ಟಿಗೆ ಇದರಲ್ಲಿ ನಂಬಿಕೆ ಇರಬಹುದು. ನನಗೆ, ಮಂಚಿಗನ ಜನಾಂಗವನ್ನ ಊರವರು ಅವಹೇಳನ ಮಾಡಲಿಕ್ಕೆ ಇದೊಂದು ತಂತ್ರ ಎಂದು ನಂಬಿಕೆ," ಎಂದ. ಹಾಡು ನಿಂತ ಕೂಡಲೆ ಮೈಕಿನಲ್ಲಿ ಒಂದು ಗಡಸು ಧ್ವನಿ ಹಲೋ– ಹಲೋ... ಈದಿವಸ ಪೆಜ್ಜೆ ಪೂಜೆ... ಎಲ್ಲರೂ ಭಾಗವಹಿಸಲು ಪ್ರಾರ್ಥನೆ..." ಎಂದ ಕೂಡಲೆ ಪುನಃ ಹಾಡು. "ನಾನು ಹೋಗುತ್ತೇನೆ," ಎಂದು ಹೇಳಿ ಹೊರಟು ಬಂದೆ.

ರಾತ್ರಿ ಸುಮಾರು ಎಂಟು ಗಂಟೆ ಸಮಯ. ಸೋಮು ಬೆಳಗಿನಿಂದ ಎಳೆ ನೀರು ಬಿಟ್ಟು ಇನ್ನು ಯಾವ ಆಹಾರವನ್ನೂ ತೆಗೆದುಕೊಂಡಿಲ್ಲ. ತಣ್ಣೀರು ಸ್ನಾನ ಮಾಡಿದ ಒದ್ದೆಯಲ್ಲಿ ದೇವಸ್ಥಾನಕ್ಕೆ ಕೊಂಬಿನವರ ಸಮೇತ ಕುಕ್ಕೆ ಹೊತ್ತು ಹೊರಟ. ಈಗಿನ ಉರುಮೆಯ ಆವೇಶದ ಧ್ವನಿಗೆ ತಕ್ಕಂತೆ ಎಲ್ಲರೂ ಬೇಗ ಬೇಗ ಹೆಜ್ಜೆಯಿಟ್ಟರು. ಮಕ್ಕಳು ನಡೆಯಲಾರದೆ ಸೋಲುತ್ತಿದ್ದವು. ಬೇವಿನ ಮರವನ್ನೊಮ್ಮೆ ಸುತ್ತಿ ಬಂದು ಸೋಮು ಚೌಕಿಯೊಳಗೆ ನುಗ್ಗಿದ. ಒಳಹೋಗಿ ಐದಾರು ಕ್ಷಣದಲ್ಲಿ ಸೋಮು ಹಿಂದಿರುಗಿ ಬಂದ. ಅವನ ಹಿಂಬದಿಯಲ್ಲಿ ಕುಕ್ಕೆಗೆ ರಕ್ಷಣೆ ನೀಡುವಂತೆ ಪೂಜಾರಿ ಬರುತ್ತಿದ್ದಾನೆ! ಅವನ ಒಂದು ಕೈಯಲ್ಲಿ ಬೇವಿನ ಮರದ ಕೊಂಬೆ, ಮತ್ತೊಂದರಲ್ಲಿ ನೀಳವಾದ ಒಂದು ಹೊಳೆಯುವ ಕತ್ತಿ.

ಅದನ್ನು ರಘುಳಪಿಸುತ್ತ ಸೋಮುವನ್ನೆ ಅನು ಸರಿಸಿದ. ಅದೇಕೆಂದು ಬಸಪ್ಪನವರನ್ನು ಕೇಳಿದೆ– "ಪೂಜಾರಿ ಈಗ ಎಂದಿನ ಹಾಗಿಲ್ಲ. ಅವನ ಮೈಮೇಲೆ 'ಅಮ್ಮ' ಬಂದಿದ್ದಾಳೆ. ಈ ಸ್ವಾಮಿಯ ಉತ್ಸವದ ರಕ್ಷಣೆಗೆ ಆಯಮ್ಮ ಬರುತ್ತಿದ್ದಾಳೆ. ಇದು ಮೊದಲು ನಮ್ಮ ತಾತನ ಕಾಲದಲ್ಲಿ ಇರಲಿಲ್ಲವಂತೆ. ಯಾವಾ ಗಲೊ ಒಮ್ಮೆ ಇದೇ ಮಂಚಿಗನ ಜನಾಂಗದವ ರಿಂದ ಸ್ವಾಮಿಯ ಮೇಲೆ ಗಲಭೆಯಾಯಿತಂತೆ. ಆಗಿನಿಂದ ಅಮ್ಮನ ಕಾವಲಿನಲ್ಲಿ ಈ ಉತ್ಸವ.." ಅವರು ಮಾತು ನಿಲ್ಲಿಸಿದರೂ ಅದೇ ಗುಂಗಿ ನಲ್ಲಿದ್ದರು.

ಹಿಂದಿನ ದಿನ ಮಂಚಿಗನ ಕಡೆಯವರು ಗಲಭೆ ಮಾಡಿದ ಗುಂಡ್ಡದ ಬಳಿ ಬಂದಿತು. ಯಾರಾದರೂ ಜನ ಕಂಡಾರೆ ಎಂದು ದೂರ ದಿಂದಲೇ ನೋಡಿದೆ. ಯಾರೂ ಕಾಣಲಿಲ್ಲ.

ಊರಿನ ಬಾಗಿಲಿಗೆ ಬಂದು ನಿಂತಿತು ಗಾಜು. ಮೊದಲ ಮನೆಯವರು ಬಸವಯ್ಯನವರೇ ಪೂಜೆ ಸಲ್ಲಿಸಿದರು. ಅನೇಕ ಯುವಕರು, ತಲೆಯ ಮೇಲೆ ಹೊಂಬಾಳೆಯ ಕಳಸಗಳ ನ್ನಿಟ್ಟು, ಉತ್ಸವವನ್ನು ಕೂಡಿಕೊಂಡರು. ವಾದ್ಯಕ್ಕೆ ತಕ್ಕಂತೆ ಕುಣಿತ, ಹಾಡು ಶುರು ವಾಯಿತು:

ಹೆಗಲೇರಿ ಕುಂತಾನೋ। ಸ್ವಾಮಿ ನಮ್ಮಯ್ಯ
ಹತ್ಯಾಗ ಮೆತ್ತಾಗ್ಗೆವೋ। ಸ್ವಾಮಿ ನಮ್ಮಯ್ಯ
ಕಪ್ಪಾಗೆ ಚಿಪ್ಪೊಡೆದ। ಸ್ವಾಮಿ ನಮ್ಮಯ್ಯ
ಹೆಪ್ಪಾದ ಚಂದ್ರಾನು। ಸ್ವಾಮಿ ನಮ್ಮಯ್ಯ
ಅವ್ವನ ಸರಿಗುಂಟ। ಸ್ವಾಮಿ ನಮ್ಮಯ್ಯ
ಅವ್ವನ ಕತ್ತಿಮಿಂಚ್ಗೆ।ಸ್ವಾಮಿ ನಮ್ಮಯ್ಯ
ಹತ್ತಿ ಬರುವೋರ। ಸ್ವಾಮಿ ನಮ್ಮಯ್ಯ
ಮೆತ್ತ ಮಾಡುವೋನ। ಸ್ವಾಮಿ ನಮ್ಮಯ್ಯ
ಜಾಲಗಾರ್ರ ಗುಂಪಿಗೆ। ಸ್ವಾಮಿ ನಮ್ಮಯ್ಯ
ಜಾಡ್ಸಡ ಕಂದನು। ಸ್ವಾಮಿ ನಮ್ಮಯ್ಯ

ಕೊನೆಯ ಎರಡು ಸಾಲುಗಳನ್ನು ಹೇಳುತ್ತಿ ದ್ದಂತೆ ಬಡಿತ–ಕುಣಿತಗಳು ಮತ್ತೂ ಹೆಚ್ಚಾ ಯಿತು. ಗುಂಡ್ಡದ ಕಡೆಯಿಂದ ಪ್ರತಿಧ್ವನಿ ಬರುತ್ತಿತ್ತು.

ಊರ ತುದಿಯಲ್ಲಿ ಹಳತಾಗಿ ಉರುಳಿ ಬಿದ್ದಿದ್ದ ಕೋಟೆಯ ಗೋಡೆ ಬಳಿ ಸುಸಜ್ಜಿತ ವಾಗಿ ಮಂಚಿಗನ ಗುಂಪು ನಿಂತಿದೆ. ಕೊಂಬಿ ನವರು ಮಾತ್ರ ಉತ್ಸಾಹದ ಭರದಲ್ಲಿ ಕಲಿತಿದ್ದ ಷ್ಟನ್ನೇ ಮತ್ತೆ ಮತ್ತೆ ಕೂಚುತ್ತಿದ್ದಾರೆ. ಬಸವಯ್ಯನವರಿಗೆ ಗುಂಪನ್ನು ತೋರಿಸಿದೆ. "ಇರಲಿ ಬಿಡಿ ಮೂರ್ಖರು. ನೋಡಿ, ನಮ್ಮ ಭಕ್ತಿ ಕಾಪಾಡಲು ಹಿಂದೆ ಯಾರು ಬರ್ತಿ ದ್ದಾರೆ...? ಆ ತಾಯಿ, ನಮ್ಮವ್ವ ಇರುವ ತನಕ ಯಾವ ಭಯವೂ ಇಲ್ಲ" ಎಂದರು. ನನಗೇಕೋ ಇದೆಲ್ಲ ಹೇಗೆ ಕೊನೆಗೊಳ್ಳು ತ್ತಿದೋ ಎಂದು ಆತಂಕವಾಯಿತು "ಇದೊಂದು ವರ್ಷವಾದರೂ ಎಲ್ಲ ಸುಸೂತ್ರ ವಾಗಿ ನಡೆದರೆ ಸಾಕು," ಎಂದೆ. ಅವರು ನಕ್ಕು "ಅದೇನು ಹಾಗೆ ಹೇಳ್ತಿರಿ? ನೀವಿದನ್ನೆಲ್ಲ ಅಭ್ಯಾಸ ಮಾಡಿಕೊಂಡು ಹೋದ ಮೇಲೆ ಇದೆಲ್ಲ ಉಳಿದರೇನು–ಬಿಟ್ಟರೇನು ಅಂತಾನೋ...?" ಕೇಳಿದರು. ಅವರ ನಡಿಗೆ ಯಲ್ಲಿ 'ಅಮ್ಮ'ನ ಮೇಲೆ ಇದ್ದ ವಿಶ್ವಾಸ ಎದ್ದು ಕಾಣುತ್ತಿತ್ತು.

ಗುಂಪು ಯಾವ ಕಡೆಯಿಂದಲಾದರೂ ಕೂಗಾ ಡುತ್ತ ಏರಿ ಬರಬಹುದೆಂದು ಹಣಿಕಾಡಿದೆ. ಕುಣಿಯುವ ಹುಡುಗರಂತು ಮಂಚಿಗನ ಗುಂಪನ್ನು ನೋಡಿ, ಅರಳು ಸಿಡಿದ ಹಾಗೆ ಕುಣಿದಾಡಿದರು. ಗೆಜ್ಜೆಗಳು ಸಾಲಿನ ಅಂತ್ಯಕ್ಕೆ ರಘುಲ್ಲೆನ್ನುತ್ತಿದ್ದಂತೆ ಉರುಮೆ–ಢಕ್ಕೆಗಳು ಮನಸ್ಸನ್ನು ಅಪ್ಪಳಿಸಿದವು. ಪೂಜಾರಿ ಆರ್ಭಟಿಸುತ್ತ, ಕತ್ತಿಯನ್ನು ಅನೇಕ ವರಸೆ ಗಳಲ್ಲಿ ಈಸಾಡಿಸಿದ. ಕೂಡಲೇ ಪೂಜಾರಿಯ ಬಳಿಗೆ ಜನದ ಮಧ್ಯೆ ನುಸುಳಿಕೊಂಡು ಹೋದೆ. ಅವನು ಕುಣಿಯುತ್ತಲೇ ಇದ್ದ. "ನೋಡು– ಮಂಚಿಗನ ಗುಂಪು ನೆನ್ನೆಗಿಂತ ಇವೊತ್ತು ಹೆಚ್ಚಾಗಿದೆ. ಅವರು ಹೆದರುವುದಾದರೆ ಅಮ್ಮನ ಕುಣಿತಕ್ಕೆ, ಕಾವಲಿಗೆ ಮಾತ್ರ. ನಿನ್ನ ಮೇಲೆ ಎಲ್ಲ ಭಾರ ಬಿದ್ದಿದೆ. ನಿಮ್ಮ ದೇವರ ಸತ್ಯ ಗೆಲ್ಲಿಸಿ ಬಿಡು ಮಹಾರಾಯ," ಎಂದೆ ಒಮ್ಮೆ ಕ್ರೂರವಾಗಿ ನನ್ನ ಕಡೆಗೆ ಅವನು ನೋಡಿದ. ಬೆಸ್ತರ ಹೆಂಗಸರು ಗಂಡಸರು

ಕತ್ತಲಿನಲ್ಲಿ ದಟ್ಟವಾಗಿ ನಿಂತಿದ್ದರು.

ಜಲಗಾರ್‍ರ ಜಾಲಕ್ಕೆ । ಸ್ವಾಮಿ ನಮ್ಮಯ್ಯ
ಜಾರಿದ ಕಂದನು । ಸ್ವಾಮಿ ನಮ್ಮಯ್ಯ

ಬೇಕೆಂದೆ ಗುಂಪನ್ನು ನೋಡುತ್ತ ಕೊಂಬಿನವರು, ಹುಡುಗರು, ದೊಡ್ಡವರು ಕುಣಿಯುತ್ತ ವಿಕಾರವಾಗಿ ಕೇಕೆ ಹಾಕಿದರು. ಸೋಮುವಿನ ಬೆನ್ನ ಬಳಿ ಇದ್ದ ಪೂಜಾರಿ ದಡಾರನೆ ಗುಂಪಿನ ಕಡೆಗೆ ನುಗ್ಗಿದ. ಉಸಿರು ಬಿಗಿ ಹಿಡಿದು ನಿಂತಿದ್ದ ಹುಡುಗರೆಲ್ಲ ಕೂಡಲೇ ಓಡಿ ಹೋದರು. ಮಂಚಿಗ ಮತ್ತು ಅವನ ಹಿಂದೆ ಒಂದಿಬ್ಬರು ಮಾತ್ರ ಮೊಂಡಾಗಿ ನಿಂತರು. ಪೂಜಾರಿಗೆ ಕುಮ್ಮಕ್ಕು ದೊರೆತ ಹಾಗಾಗಿ, ಕತ್ತಿಯನ್ನು ಪೂರಾ ಮೇಲಕ್ಕೆ ಹೊಯ್ಯುವ ಹಾಗೆ ಎತ್ತಿದ. ಸ್ವಾಮಿಗೆ ಎದುರಾದ ತಲೆಗೆ ಅಪ್ಪಳಿಸುವ ಕತ್ತಿ ಮಂಚಿಗನಿಗೆದುರಾಗಿ ಸ್ಪಂದಿಸುತ್ತಿದೆ. ಕೆಂಡಗಣ್ಣಿನಿಂದ ಪೂಜಾರಿ ಅವನನ್ನೇ ನೋಡುತ್ತಿದ್ದಾನೆ. ಕುಣಿಯುತ್ತಿದ್ದಂತೆ ಭುಜದ ಮೇಲಿನ ಕೂದಲು ನಿಮಿರಾಡುತ್ತಿವೆ. ಅವನು ಉದ್ದನೆಯ ಮೂಗು ದೀರ್ಘವಾಗಿ ಉಸಿರನ್ನೊಮ್ಮೆ ಎಳೆದುಕೊಂಡಿತು. ಉರುಮೆಯ ಸದ್ದು ನಿಲುಗಡೆಯ ಹಂತಕ್ಕೆ ಬಂತು. ಮಂಚಿಗನಿಗೆ ಮೈಯಲ್ಲಿ ನಡುಕ ಆವರಿಸಿತು. ಅಕ್ಕಪಕ್ಕದವರ ಪರಿವೆಯೇ ಇಲ್ಲದವನಂತೆ, ಕಾಲನ್ನೊಮ್ಮೆ ನೆಲಕ್ಕೆ ಅಪ್ಪಳಿಸಿ ಓಡಿದ...ಓಡಿದ. "ಅಯ್ಯೋ...... ನಮ್ಮಪ್ಪ...... ಕ್ಷಮಿಸಪ್ಪ." ಎಂದು ಕತ್ತಲಲ್ಲಿ ಅರಚಾಡುತ್ತ ಓಡಿದ.

*

ಮುಂಜಾನೆಯೆ ಬಸವಯ್ಯ ನನಗೆ ಹೇಳಿ ಕಳುಹಿಸಿದರು. ನಾನು ಹೋದ ಕೂಡಲೇ 'ಬನ್ನಿ' ಎಂದು ನಗುತ್ತ ಕೂರಲು ಕೈ ತೋರಿಸಿದರು. "ನೋಡಿ, ನೀವು ನನಗೆ ನಮ್ಮ ಸೋಮು ಇದ್ದ ಹಾಗೆ. ಅವನಾದರೂ ಸ್ವಲ್ಪ ದುಡುಕು," ಎಂದರು. ಸ್ವಲ್ಪ ಹೊತ್ತು ಬಿಟ್ಟು "ನಿನ್ನೆ ನೀವು ಉತ್ಸವ ಪೂರ್ಣ ನಡೆಯಲು ಒಳ್ಳೆಯ ಉಪಾಯ ಮಾಡಿದಿರಿ. ನಮ್ಮೂರಿನ ಜನ ಅದನ್ನ ಮರೆಯುವಂತಿಲ್ಲ...ಈಗ ನಿಮ್ಮಿಂದ ಮತ್ತೊಂದು ಉಪಕಾರ ಆಗಬೇಕು," ಎಂದು ಹೇಳಿ, ನನ್ನನ್ನು ಕರೆದುಕೊಂಡು ಹೊರಟರು.

ನಿನ್ನೆ ಗಲಭೆ ನಡೆದ ಜಾಗದ ಆಚೆಗೂ ನಡೆಯುತ್ತಿದ್ದಂತೆ ಹೊಳೆಯ ದಂಡೆಗೆ ಬಂದೆವು. ಕಾಲು ನಡಿಗೆಯಲ್ಲಿ ಬತ್ತಿದ್ದ ಹೊಳೆಯನ್ನು ದಾಟಿ ಮತ್ತೊಂದು ಬದಿಯನ್ನು ಸೇರಿದೆವು. ದಂಡೆಯಲ್ಲಿದ್ದ ಜೋಪಡಿಗಳ ಹತ್ತಿರ ಹೋಗುತ್ತಿದ್ದಂತೆ ಬೆಸ್ತರ ಕೇರಿಯೆಂದು ತಿಳಿಯಿತು. ಹರಿದು ಬಿದ್ದಿದ್ದ ಬಲೆಗಳು, ಕೈ ದೋಣಿಗಳು, ಜೊಂಡಿನ ವಾಸನೆ. ಕೇರಿಯ ಕೆಲವು ಮಕ್ಕಳು ಓಡುತ್ತ ಬಂದು ನಿಂತವು. ಬಸವಯ್ಯ ಯಾವುದೋ ಒಂದು ಜೋಪಡಿಯ ಮುಂದೆ ನಿಂತು ಮಂಚಿಗನನ್ನು ಕರೆದರು. ಕೊಳಕಾದ ಒಂದು ಖಾಕಿ ಚಡ್ಡಿ ತೊಟ್ಟಿದ್ದ ಅವನು ಹೊರಕ್ಕೆ ಬಂದ. ಅವನ ಸಂಗಡವೇ ಇನ್ನೂ ನಾಲ್ಕೈದು ಮಂದಿ ಬಂದು ನಿಂತರು. ನಾವಿಬ್ಬರು ಅಲ್ಲಿಗೆ ಬಂದುದು ಆಶ್ಚರ್ಯವಾದಂತೆ ನಮ್ಮನ್ನೇ ನೋಡುತ್ತ ನಿಂತರು. "ಲೇ, ಮಂಚಿಗ ಈ ಊರ್ನಲ್ಲಿ ನಿಮ್ಮ ಕೇರಿ ಉಳೀಬೇಕೂಂತ ಮನಸ್ಸು ಇದೆಯ–ಇಲ್ಲವ...?" ಕಡ್ಡಿ ಎರಡು ತುಂಡು ಮಾಡಿದ ಹಾಗೆ ಕೇಳಿದರು. ಅವನು ಮಂಕು ಬಡಿದಂತೆ ನಿಂತ. "ನೋಡೊಲ್ಲೈ, ನಿಮ್ಮ ಒಳ್ಳೆಯದಕ್ಕೆ ಇಲ್ಲಿಯ ತನಕ ಬಂದು ಹೇಳ್ತಿದೀನಿ. ನಾಳೆ ಸ್ವಾಮೀನ ಯೋಗ್ಯವಾಗಿ ಒಪ್ಪಿಸ್ಕೋತೀರ... ಇಲ್ಲವ?" ಮಂಚಿಗ ಅವನ ಅಕ್ಕ ಪಕ್ಕದವರನ್ನು ನೋಡಿದ. ರಾಜ ಎನ್ನುವವನು "ಒಡೆಯ, ಈ ವರ್ಷ ಹಬ್ಬ ಮಾಡಾಕೆ ನಮ್ಮ ಜನದ್ದು ಆಸೆ ಅಷ್ಟಕಷ್ಟೆ," ಎಂದು ಹುದುಗಿದ ಧ್ವನಿಯಲ್ಲಿ ತೊದಲಿದ. ಬಸವಯ್ಯ ನಿಂತಲ್ಲೇ ಕಣ್ಣು ಕಣ್ಣು ಬಿಟ್ಟರು. ನನ್ನ ಕಡೆಗೆ ಒಮ್ಮೆ ನೋಡಿದರು. ಕೂಡಲೇ ಆಕಾಶದ ಕಡೆಗೆ ಬೆರಳು ಮಾಡಿ ತೋರಿಸಿ "ಏ ಮಂಚಿಗ, ಅಲ್ಲಿ ಸೂರ್ಯ ಉರೀತಿದಾನೆ– ಸಾಕ್ಷಾತ್ ದೇವರು. ಅವನಿಗೆದುರಾಗಿ ಹೋಗಿ ಬಾ, ನೋಡುವ...ಥತ್ ಭ್ರಷ್ಟ ಜನವೇ. ಹೊಟ್ಟೆಗೆ ಹಿಟ್ಟಿಲ್ಲದೆ ಸಾಯ್ತಿದೀರ. ಇನ್ನೂ ಹಾಳಾಗಬೇಕೂಂತ ಆಸೆಯೇನು ನಿಮಗೆ?"

ಅಬ್ಬರಿಸಿದರು. ಎಲ್ಲರೂ ತಲೆ ತಗ್ಗಿಸಿ ನಿಂತಿದ್ದರೆ ವಿನಾ ಯಾರೂ ಮಾತಾಡಲಿಲ್ಲ. "ನಾಳೆ ಕೊನೆ ಉತ್ಸವ. ಎಲ್ಲ ಆದ ಮೇಲೆ ಸ್ವಾಮಿಯನ್ನು ತಂದು ಹೊಳೆಯಲ್ಲಿ ಬಿಡ್ತೀವಿ. ಮುಂದೆ ನಿಮಗೆ ಇಷ್ಟ ಬಂದ ಹಾಗೆ ಮಾಡಿ. ನಿಮಗೇನೊ ಅನಿಷ್ಟ ಕಾದಿದೆ," ಎಂದು ಹೇಳಿ, ನನ್ನನ್ನು ಕರೆದುಕೊಂಡು ಸರಸರನೆ ಹೊರಟರು.

ಸ್ವಲ್ಪ ದೂರ ಹೋದ ಕೂಡಲೆ, ಹಿಂದಿನಿಂದ ಮಂಚಿಗ ಅವನ ಜೊತೆಯವರೊಂದಿಗೆ ಬೇಗ ಬೇಗ ಬರುತ್ತಿರುವುದು ತಿಳಿಯಿತು. ಬಸವಯ್ಯ ಬೇಕೆಂದೆ ಹಿಂದಿರುಗಲಿಲ್ಲ. ಓಡುತ್ತ ಬಂದು ಅವರೆದುರಾಗಿ ನಿಂತುಕೊಂಡ. ದಡಾರನೆ ಅವರ ಕಾಲಿಗೆ ಬಿದ್ದು "ಕ್ಷಮಿಸಿಬಿಡಿ ಒಡೆಯ, ನಾಳೆ ಸಂಜೆ ನಾವು, ಎಂದಿನ ಹಾಗೆ ಸ್ವಾಮಿಯನ್ನು ಒಪ್ಪಿಸ್ಕೋತಿವಿ. ತಿಳೀಲಾರದ ಮಂದೇರು ನಾವು," ಎಂದು ಬೇಡಿದ. ಬಸವಯ್ಯ ಮೃದುವಾಗಿ ನಕ್ಕರು.

ದಾರಿಯಲ್ಲಿ ಬರುತ್ತ ನಾನು "ನಿಮ್ಮ ಪಾಲಿನ ಹಬ್ಬ ಮುಗಿಯಿತು. ಈ ಬೆಸ್ತರು ಬಂದರೇನು–ಬಿಟ್ಟರೇನು? ನಿಮಗೇನು ಅವರು ಬರದಿರುವುದರಿಂದ ತೊಂದರೆಯಿಲ್ಲವಲ್ಲ...?" ಎಂದೆ. "ಇದಕ್ಕೆ ನಾನು ಏನೂಂತ ಹೇಳಲಿ? ಏನೊ ಹಿಂದಿನವರು ಈ ಸಂಪ್ರದಾಯದಲ್ಲಿ ಬಂದಿದಾರೆ. ನಾವು ಹೇಗೆ ಅದನ್ನೆಲ್ಲ ಕಳಚಿ ಬಿಡೋದು?" ಎಂದರು.

*

ಮೂರನೆಯ ದಿವಸ ಬೆಳಗಿನಿಂದ ಸಂಜೆಯ ತನಕ ಊರವರೆಲ್ಲ ಅನೇಕ ರೀತಿಯ ನೇವೇದ್ಯ ಸಾಮಗ್ರಿ ತಂದು ಸ್ವಾಮಿಗೆ ಒಪ್ಪಿಸಿದರು. ಎಣ್ಣೆ ತಂದು ದೊಡ್ಡ ಕುಡತೆಗೆ ಹಾಕಿದರು. ಚೆಂದಕ್ಕಾಗಿ ಬಣ್ಣದ ರಂಗವಲ್ಲಿ ಬಿಡಿಸಿದರು. ಮನೆಯಲ್ಲೆಲ್ಲ ಜನರ ಬರು ಹೋಗುವಿಕೆಯಿಂದ ಗಿಜಿ ಗಿಜಿ ಎನ್ನುತ್ತಿತ್ತು.

ಮಧ್ಯಾಹ್ನದಿಂದ ಬಸವಯ್ಯನವರ ಮನೆ ಮುಂದೆ ಅಡ್ಡಾತಿಡ್ಡಿಯಾಗಿ ಒಂದು ಚೌಕಿಯನ್ನು ಸಿದ್ಧಗೊಳಿಸಿದರು. ಸಂಜೆ ಆರು ಗಂಟೆಯಿಂದ ಮೈಕು ಅರಚಾಡುತ್ತ ಈ ದಿನ 'ತಾರಕಾಸುರ ವಧೆ' ನಾಟಕ ಪ್ರದರ್ಶನ ಎಂದು ಗಲಭೆಯೆಬ್ಬಿಸಿತು. ಮುಂಚ್ಚಂಜೆ ಕವಿಯುತ್ತಿದ್ದಂತೆ ಅಕ್ಕಪಕ್ಕದ ಮನೆಯ ಹೆಂಗಸರು ಸೇರಿದರು. ಸ್ವಾಮಿಯ ಬಳಿ ಕುಳಿತರು. ಅಪರೂಪಕ್ಕೆ ಬಳಸುವುದರಿಂದ ಗುಟಲನ್ನು ಸ್ವಲ್ಪ ಹೊತ್ತು ಸರಿಪಡಿಸಿಕೊಂಡರು. ಜನರ ಗಮನವೆಲ್ಲ ಚದುರಿದ್ದುದು ಕೂಡಲೆ ಸ್ತಬ್ಧವಾಗಿ, ತಲೆಯ ಮೇಲೆ ಸೆರಗು ಹೊದ್ದಿದ್ದ ಹೆಂಗಸರತ್ತ ಸೆಳೆಯಿತು;

ಅಂಬೆಗಾಲಾಗೆ ಭೂಮಿಯನ್ನಳೆಯುತ
ಬಂದ ಸ್ವಾಮಿ
ನಂಬುವಲ್ಲದ ಪಾಪಿಗೇಡಿಗೆ ನಿತ್ಯ || ನಿತ್ಯಲ್ಲಿ
ಡಂಬು ಕಿತ್ತೊಗೆವುದ ಏನ ಹೇಳಲನ್ನ
ನಾನು ||
ವೀರಗಾಡುವ್ವೋರ ವೀರೆಯರ ಕದ್ದವನಲ್ಲ
ವೀರ ಶೂರ ಹಾಡ್ಯ ಹಗಲ
ಸೆಟೆಸಾನೆ । ಎದೆಯ
ಜೆಚ್ಚಾನೆ ಬೆಡೆರಾನೆ ಸ್ವಾಮಿ ನಮ್ಮಯ್ಯ ||

ಹಿಮ್ಮೇಳದವರು ಧ್ವನಿಯನ್ನು ಮೊದಮೊದಲು ಹಿಗ್ಗಾಮುಗ್ಗ ಎಳೆದಾಡಿದರು. ಅನಂತರ ಮುಮ್ಮೇಳದೊಂದಿಗೆ ಹೊಂದಿಕೊಂಡರು. ಜೀರುಂಡೆಯ ಹಾಗೆ ಒಂದೇ ಸಮನೆ ಸ್ವಾಮಿಯ ಕಥೆಯನ್ನು ಎಷ್ಟೋ ಹೊತ್ತು ಗುಯ್ಗುಟ್ಟಿದರು.

ಟೇಪ್ ರೆಕಾರ್ಡರನ್ನು ಮುಚ್ಚಿಡುತ್ತಿದ್ದಂತೆ, ನನ್ನನ್ನು ನೋಡುತ್ತ ನಿಂತಿದ್ದ ಸೋಮು ನಗುವ ಹಾಗೆ ಕಂಡಿತು. "ಅಲ್ಲ ಈ ಹಬ್ಬಕ್ಕಾಗಿ ಇಷ್ಟು ಕಷ್ಟಪಡುತ್ತಿದ್ದೀಯಲ್ಲ–ಇದರ ಹಿನ್ನೆಲೆಯೇನು? ಗೊತ್ತ ನಿನಗೆ? ವ್ಯಂಗ್ಯವಾಗಿ ನಕ್ಕ. ಮಂಚಿಗನ ಕಡೆಯವರಿಗೆ ದೇವರನ್ನು ಒಪ್ಪಿಸುತ್ತಾರಲ್ಲವೆ? ಏಕೆ ಈ ರೀತಿ? ನಾನು ಆಲೋಚಿಸುತ್ತಿದ್ದಂತೆ ಅವನು ಮತ್ತೊಮ್ಮೆ ವೈದ್ಯನ ಹಾಗೆ ನಕ್ಕು, ಒಳಕ್ಕೆ ಹೋಗಿ ಬಂದ. ಹೊರಗೆ ಮೈಕಿನ ಸದ್ದು, ಕಹಳೆಯ ಧ್ವನಿ ವಿಕಾರವಾಗಿ ಕೇಳಿದವು. ಸೋಮು "ಚಿಕ್ಕಪ್ಪ, ಗೌಡರು ನನ್ನನ್ನೀಗ ಹುಡುಕಬಹುದು. 'ಬರುತ್ತಾನೆ' ಅಂತ ಹೇಳು," ಎಂದು ಹೇಳಿ, ಹಿತ್ತಲ ಬಾಗಿಲ

ತೆಗೆದು ಕೂಡಲೆ ಹೊರಟು ಹೋದ.

ಮುಂಬಾಗಿಲಿಗೆ ಬಂದೆ. ಒಂದು ಅಡ್ಡ ಪಲ್ಲಕ್ಕಿಯನ್ನು ಹೂವು ವಸ್ತ್ರಗಳಿಂದ ಅಲಂಕರಿಸಿದ್ದರು. ಒಳಗೆ ಒಳ್ಳೆಯ ರೇಷ್ಮೆಯ ಮೆತ್ತು ಹಾಸಿದ್ದರು. ಪಲ್ಲಕ್ಕಿ ಹೊರುವವರು ಊರು ಗೋಲು ಹಿಡಿದು ನಿಂತಿದ್ದರು. ಕೊನೆಯ ಉತ್ಸವಕ್ಕಾಗಿ ಜನ ಸೇರುತ್ತಿದ್ದಂತೆ ಬಸವಯ್ಯ ಮತ್ತು ಅಜ್ಜಿಯ ಭರಾಟೆ ಜೋರಾಯಿತು. ಸ್ವಾಮಿಯನ್ನು ಪಲ್ಲಕ್ಕಿಗಿಡಲು ಸೋಮುವಿಗಾಗಿ ಹುಡುಕಾಡುತ್ತ ನನ್ನನ್ನು ಕೇಳಿದರು. "ಈಗ ತಾನೆ ಎಲ್ಲಿಗೊ ಹೋದ, ಬರುತ್ತಾನಂತೆ..." ಎಂದೆ. ಅವರಿಗಿನ್ನೂ ಆತಂಕ ಹೆಚ್ಚಾಯಿತು. ಅಲ್ಲಿಗೆ ಬಂದ ಗೌಡರೂ ಪರದಾಡಿದರು. ಅಜ್ಜಿಯ ಲೊಟಗುಟ್ಟುವಿಕೆಗೆ ತಕ್ಕಂತೆ ಹೊರಗೆ ವಾದ್ಯಗಳ ಸ್ವರ, ಜನರ ಗಲಾಟೆ ಮತ್ತಷ್ಟು ಗೊಂದಲವೆಬ್ಬಿಸಿತು. "ನೋಡಿರಯ್ಯ ಎಲ್ಲಿ ಹೋದನೊ ಏನೊ," ಎನ್ನುತ್ತಾ ಅಜ್ಜಿ ಅವನ ಬೈಕು, ಕಿಟ್ಟುಗಳನ್ನು ನೋಡಲು ಮಕ್ಕಳಿಗೆ ಹೇಳಿತು. ಎಲ್ಲ ಇದ್ದರೂ ಎಲ್ಲಿಗೆ ಹೋದ ಇವನು ?

ಆ ವೇಳೆಗೆ ಕೆಲವು ಹೆಂಗಸರು ಸ್ವಾಮಿಗೆ ಕೊನೆಯ ಆರತಿಯೆತ್ತಿದರು. ಕಹಳೆಯವರು ದೊಡ್ಡದಾಗಿ ಸ್ವರ ತೆಗೆದು ಉತ್ಸವ ಹೊರಡಲು ಒತ್ತಾಯದ ಪೀಠಿಕೆ ಹಾಕಿದರು. ಜನರೆಲ್ಲ ಕಾದು ಬೇಸರದಿಂದ ಅಲ್ಲಲ್ಲಿ ಕುಳಿತರು. ಬಸವಯ್ಯ ನನ್ನನ್ನು ಕರೆದು "ನೋಡಿ, ಇಷ್ಟು ಹೊತ್ತಾದರು ಇವನು ಬರಲಿಲ್ಲ. ತೋಟದ ಮನೆಯಲ್ಲಿ ಇರಬಹುದು. ದಯವಿಟ್ಟು ನೋಡಿ ಬರ್ತೀರಾ...?" ಎಂದರು.

ನನ್ನ ಜೊತೆಗೆ ಅವರ ಮನೆ ಆಳು ಬಂದ. ಟಾರ್ಚನ್ನು ಒಮ್ಮೆ ನಂದಿಸಿದ ಕೂಡಲೆ ಗಪ್ಪನೆ ಕವಿಯುವ ಕತ್ತಲಿನಲ್ಲಿ ಏನೇನೊ ಅನುಮಾನಗಳನ್ನೂ ತುಂಬಿಕೊಂಡು ನಡೆದೆವು. ತೋಟ ಹತ್ತಿರವಾಯಿತು. ಮನೆಯ ಕಡೆಯಿಂದ ಯಾರೊ ಹೆಂಗಸು ಗೋಳೋ ಎಂದು ಅಳುವ ಧ್ವನಿ. ಕುರುಚಲು ಕಡ್ಡಿಯ ಗೇಟು ತೆಗೆಯುತ್ತಿದ್ದಂತೆ. ಏನೇನೊ ಮಾತುಗಳೂ ಅಸ್ಪಷ್ಟವಾಗಿ ಕೇಳಿ ಬಂದವು; ಪ್ರಶ್ನೆ–ಮರುನಿಯುತ್ತಿನ ಮಾತುಗಳ ಧ್ವನಿ. ಸ್ವಲ್ಪ ದೂರ ಹೋಗಿ ನಿಂತೆವು: 'ಮೊದಲಿಂದ ನಿಮ್ಮ ಮಾತೆ ಕೇಳಿದ್ವಲ್ಲ ಬುದ್ಧೀ...? ನಾವು ಏನೊಂತ ತಪ್ಪು ಮಾಡಿದ್ವಿ...?' 'ನಾವು ವಿವೇಕ ಇಲ್ಲದ ಮಡೇರು ಅಂತ ಹಿಂಗ ನೀವು ಮಾಡೋದು?' 'ನಿಮ್ಮ ಕೆಲಸ ನಡೀಲಿಲ್ಲ ಅಂತ ಈ ರೀತಿ ನಮ್ಮ ಮೇಲೆ ಸೇಡು ತೀರಿಸಿಕೊಂಡಿರಾ ಬುದ್ಧಿ...?' ಪುನಃ ಹೆಂಗಸೊಬ್ಬಳ ಅಳುವ ಧ್ವನಿ ಹೆಚ್ಚಾಯಿತು. 'ಅಯ್ಯಪ್ಪೊ?...ನಮ್ಮ ಹುಡುಗಿಯ ಕೊರಳು ಕೊಯ್ದ್ರಲ್ಲ ಬುದ್ಧೀ' ಎಂದಳು. ಸ್ವಲ್ಪ ಬಗ್ಗಿ ಕಿಡಿಕೆಯೆಡೆ ನೋಡಿದೆ. ಗೌರಿ ಕಂಡಳು. ಮುಂಚಿಗ–ಅವನ ಸಂಗಡಿಗರು. ಒಂದಿಬ್ಬರು ವಯಸ್ಸಾದ ಹೆಂಗಸರು. ಮುಂಚಿಗನ ಹಿಂಬದಿಯಲ್ಲಿದ್ದವನೊಬ್ಬ "ಕೊನೆಗೂ ನಿಮ್ಮ ಜಾತಿ ಬುದ್ಧಿ ತೋರಿಸಿ ಬಿಟ್ರಲ್ಲ ಬುದ್ಧಿ...ಆಹಹ," ಎಂದ. ಬಾಣದ ಹಾಗೆ ಬಂದ ಮಾತಿಗೆ ಕುಳಿತವರೆಲ್ಲ ಅವನ ಕಡೆಗೆ ನೋಡಿದರು. ಗೌರಿ ತಲೆ ತಗ್ಗಿಸಿದ್ದಳು. ಪುನಃ ಅವನೆ "ಎಷ್ಟು ದಿವಸದಿಂದ ಮಸಲತ್ತು ಮಾಡಿದ್ರಿ ಬುದ್ಧಿ...ನೀವು ಓದಿದೋರ... ಥುತ್," ಎಂದ. ಮುಂಚಿಗ ಅವನಿಗೆ "ಏಯ್ ರಾಜ, ನಿನ್ನ ನಾಲಿಗೆ ಉದ್ದ ಆಯ್ತು. ಸ್ವಲ್ಪ ಹುಷಾರಾಗಿರು," ಎಂದ. "ಥುತ್ ಖದೀಮ. ಅವರು ನಿನಗೆ ಆಗಾಗ ದುಡ್ಡು ದುಗ್ಗಾಣಿ, ಹೆಂಡ ಕೊಡ್ತಾರೆ ಅಂತ ಅವರ ಕಡೀಗೇ ಮಾತಾಡ್ತೀಯ...? ಕಳ್ಳ ನನ್ಮಗನೆ," ಎನ್ನುತ್ತ ಮೇಲೆದ್ದ. ಅವನ ಜೊತೆ ಇನ್ನೂ ಒಂದಿಬ್ಬರು ಎದ್ದರು. "ಇವಳಂತೋಳು ನಮ್ಮ ಮನೇಲಿ ಇದ್ದಿದ್ರೆ ಹೂತಾಗ್ಬಿಟ್ಟಿದ್ದ......ಬೇವರ್ಸಿ," ಗೌರಿಯ ಕಡೆಗೆ ತಿರುಗಿ ಹೇಳಿದ. ಮುಂಚಿಗ ಕೂಡಲೆ ಎದ್ದು ರಾಜನ ಕೊರಳಿಗೆ ಕೈ ಹಾಕಿ ದಬ್ಬಿದ. ಎಲ್ಲರೂ ಏಳುವಷ್ಟರಲ್ಲೆ ರಾಜ ಮಿಂಚಿನ ಹಾಗೆ ನುಗ್ಗಿ, ಅವನ ಕಿಬ್ಬೊಟ್ಟೆಗೆ ಲಗತ್ತಾಗಿ ಅಪ್ಪಳಿಸಿದ. 'ಅಯ್ಯಯ್ಯೊ' ಎನ್ನುತ್ತ ಮುಂಚಿಗ ಹೊಟ್ಟೆ ಹಿಡಿದುಕೊಂಡು ನೆಲಕ್ಕೆ ಬಿದ್ದ. ಆವೇಶದಿಂದ ರಾಜ ಮುಂದೆ ಬಂದು "ನಿನ್ನಿಂದಲೆ ಇವೆಲ್ಲ" ಎನ್ನುತ್ತ ಗೌರಿಯ ಕೆನ್ನೆಗೊಂದು ಏಟು ಬಿಗಿದ. ಸೋಮು ಅವನ

ಕೈಯನ್ನು ಬಲವಾಗಿ ಹಿಡಿದುಕೊಂಡು, ಪೆಟ್ಟು ಕೊಡಲು ಕೈಯೆತ್ತಿದ. ಆಳಿನೊಡನೆ ಒಳಕ್ಕೆ ಹೋಗಿ "ಸೋಮು, ಅಲ್ಲಿ ನಿನಗೋಸ್ಕರ ಎಲ್ಲ ಕಾದಿದ್ದಾರೆ. ನೀನಿಲ್ಲಿ...ಸ್ವಲ್ಪ ಸಮಾಧಾನ ತಗೊ...ಬಾ ಹೋಗುವ," ಎಂದೆ. ರಾಜ ನನ್ನನ್ನೊಮ್ಮೆ ದುರು ನೋಡಿದ. ಬಲವಂತವಾಗಿ ಸೋಮುವನ್ನು ಎಳೆದುಕೊಂಡೆ. ರಾಜ ಗೌರಿಯನ್ನು "ಏಳೆ.........ಇಲ್ಲೆ ಬಿದ್ದು ಸಾಯಬೇಕೊಂತ ಇದೀಯ...?" ಎಂದರೂ ಅವಳು ಏಳಲಿಲ್ಲ. ನಾವು ಮುಂದೆ ಹೆಜ್ಜೆ ಇಡುತ್ತಿದ್ದಂತೆ "ನೋಡ್ತೀನಿ ಬುದ್ಧಿ... ಸ್ವಾಮೀನ ಅದ್ಹೆಂಗೆ ಇವೊತ್ತು ನಮಗೆ ಒಪ್ಪಿಸ್ತೀರ ಅಂತ..." ಎಂದ. ರಾತ್ರಿಯ ಮೌನದಲ್ಲಿ ಕಹಳೆಯ ಸದ್ದು ಮೆಲ್ಲಗೆ ಕೇಳುತ್ತಿತ್ತು.

*

ಸೋಮುವಿನ ಮುಖ ನೋಡಿದ ಕೂಡಲೆ ಕಾದು ಕೂತಿದ್ದ ಜನಕ್ಕೆ ಗೆಲವು ತುಂಬಿತು. ಎಲ್ಲರೂ ಚಟುವಟಿಕೆಯಿಂದ ಮೇಲೆದ್ದರು, ಅಜ್ಜಿ ಸಮಾಧಾನದಿಂದ "ನಮ್ಮ ಹುಡುಗ ಕೈ ಕೊಡುವವನಲ್ಲ. ಇದೆಲ್ಲ ಸ್ವಾಮಿಯ ಕೃಪೆ," ಎಂದಿತು. ಸೋಮು ಒಳಕ್ಕೆ ಹೋಗಿ, ಬೇರೆ ವಸ್ತ್ರ ಧರಿಸಿ, ಸ್ವಾಮಿಯನ್ನು ತಂದು ಪಲ್ಲಕ್ಕಿಯಲ್ಲಿಟ್ಟ. ಕಹಳೆಯ ಧ್ವನಿಗೆ, ಗಾಢ ನಿದ್ದೆಯಲ್ಲಿದ್ದವರು ಬಟ್ಟೆ ಕೊಡವಿಕೊಂಡು ಮೇಲೆದ್ದರು. ಹತ್ತಾರು ಇಡಿಗಾಯಿ ತಂದು ಬಸವಯ್ಯ, ಗೌಡರು ಪಲ್ಲಕ್ಕಿಯ ಮುಂದೆ ಒಡೆದರು. ಉತ್ಸವ ಹೊರಟಿತು. ಕಮಾನಿಗೆ ಕಟ್ಟಿದ್ದ ಹಾರಗಳು, ಕುಚ್ಚುಗಳು ವಾಲಾಡಿದವು. ಮುಂಭಾಗದಲ್ಲಿ ಹುಡುಗರು-ದೊಡ್ಡವರು ಒಂದು ಗುಂಪಾದರು:

ಹೆಜ್ಜೆಗೊಂದು ಸಾವಿರ। ಸ್ವಾಮಿ ನಮ್ಮಯ್ಯ
ಭಕ್ತರ ಕಾವಲು। "
ಮುತ್ತಿದ ಭಕ್ತರಿಗೆ। "
ಎರವಾಗಿ ನಿಂತವ। "
....

ಬಸವಯ್ಯನವರನ್ನ, "ಹೊಳೆಯಲ್ಲಿ ಸ್ವಾಮಿಯನ್ನು ಮುಳುಗಿಸುವುದೆ?" ಎಂದು ಕೇಳಿದೆ. ವಾದ್ಯಗಳ ಸದ್ದು ಹೆಚ್ಚಾದ್ದರಿಂದ ನನ್ನ ಕಿವಿಗೆ ಹತ್ತಿರವಾಗಿ "ಇಲ್ಲ, ಆ ಬೆಸ್ತ ನಮ್ಮಕ್ಕಳು ಅನಾಮತ್ತಾಗಿ ದೇವರನ್ನು ತೆಗೆದುಕೊಳ್ಳಬೇಕು. ಅವರು ಎರಡು ದಿವಸ ಹಬ್ಬ ಮಾಡಿ, ಸ್ವಾಮಿಯನ್ನು ಭಿನ್ನ ಭಿನ್ನ ಮಾಡಿ ನೀರಿಗೆ ಬಿಡಬೇಕು. ಇದು ಎಂದಿನ ನಿಯಮ..." ಎಂದರು.

ಹೊಳೆ ಬದಿಗ ಬಂದ ಕೂಡಲೆ ಮಂಚಿಗ ಮುಂದೆ ನಿಂತಿರುವುದು ಕಂಡಿತು. ಅವನ ಹಿಂಬದಿಯಲ್ಲಿ ಅನೇಕ ಹೆಂಗಸರು, ಗಂಡಸರು. ಸೋಮು, ಕುಕ್ಕೆಯ ಸಮೇತ ಸ್ವಾಮಿಯನ್ನು ದಡದಲ್ಲಿದ್ದ ಕೈದೋಣಿಯಲ್ಲಿಟ್ಟ. ಬೆಸ್ತರು ಇಡಿಗಾಯಿ ಒಡೆದರು. ಯಾರೊ ಒಬ್ಬ ತಮ್ಮಟೆ ಬಡಿಯಲು ಪ್ರಾರಂಭಿಸಿದ. ಬಸವಯ್ಯ ಸಮಾಧಾನದ ನಿಟ್ಟುಸಿರು ಬಿಟ್ಟರು.

ಅಷ್ಟರಲ್ಲಿ ಹೊಳೆಯ ಮೇಲೆ ಕಣ್ಣಾಡಿಸಿದರೆ ಇನ್ನೂ ಐದಾರು ಕೈದೋಣಿಗಳು ಹುಟ್ಟು ಹಾಕುತ್ತ ಬರುತ್ತಿವೆ. ಒಂದೊಂದರಲ್ಲೂ ಸುಮಾರು ನಾಲ್ಕೈದು ಮಂದಿ ಇರಬೇಕು, ಮಂಚಿಗ ಹೊರಡುವ ತಯಾರಿಯಲ್ಲಿದ್ದಂತೆ ಆ ದೋಣಿಗಳ ಹುಟ್ಟು ಜೋರಾಯಿತು. ಬಸವಯ್ಯ "ಮಂಚಿಗ ಬೇಗ ಬೇಗ ಹೊರಡಿರಿ," ಎಂದರು. ಆ ಗುಂಪು ಸಮೀಪಕ್ಕೆ ಬಂದೇ ಬಿಟ್ಟಿತು, ಮೊದಲು ಇಳಿದವನೆ ರಾಜ. ಒಂದೇ ಸಾರಿ ಮಂಚಿಗನ ಕಡೆಗೆ ಎಗರಿ "ಲೇ-ನಾಚಿಕೆ ಇಲ್ವ ಮಂಚಿಗ...ಕೊಟ್ಬಿಡು ಆ ಸ್ವಾಮಿ ವಿಗ್ರಹ ಅವರಿಗೇನೆ...ನಮಗೆ ಬೇಕಿದ್ರೆ ಬೇರೆ ಹಬ್ಬ ನಾವೇ ಮಾಡೋಣ," ಎಂದ. ಮಂಚಿಗ ಜಗ್ಗಲಿಲ್ಲ. "ಗೌರಿ ನಿನ್ನ ಮಗಳಾಗಿದ್ರೆ ಈ ಅಯ್ನೋರಪ್ನ ಏನು ಮಾಡ್ತಿದ್ದೆ ಹೇಳು, ತೆಗೆದು ಎಸಿ ಆ ಮಣ್ಣ ಹೆಂಟೆ ಬೊಂಬೇನ," ಎಂದ. "ಅದಕ್ಕೆಲ್ಲ ಕೈಹಾಕಿದ್ರೆ ನಿನ್ನ ಜೀವ ಉಳಿಯಾಕಿಲ್ಲ ನೋಡು"-ಎನ್ನುತ್ತ ಮಂಚಿಗ ಮೊಂಡನಂತೆ ನಿಂತ. ಸ್ವಾಮಿಯ ವಿಗ್ರಹ ಕತ್ತಲಲ್ಲಿ ಅಸ್ಪಷ್ಟವಾಗಿ ಕಾಣುತ್ತಿತ್ತು. ಬಸವಯ್ಯ 'ಏ...ರಾಜ' ಎಂದು ಕೂಗುತ್ತ ಹೋಗುವಷ್ಟರಲ್ಲಿ ಕುಕ್ಕೆಯಲ್ಲಿದ್ದ ಬೊಂಬೆಯನ್ನು ಅನಾಮತ್ತಾಗಿ ಎತ್ತಿ ನೆಲದ ಕಡೆಗೆ

ಒಪ್ಪಳಿಸಿದ. ದೇವರು ಪುಟ್ಟ ಹೆಂಟೆಗಳಾಗಿ ಚೆಲ್ಲಾಪಿಲ್ಲಿ ಹರಡಿತು. ಪತ್ರಿ, ಹೂವು, ಬಟ್ಟೆ ತುಂಡುಗಳನ್ನೆಲ್ಲ ಕಿತ್ತು ನೀರಿಗೆಸೆದ. ಬಸವಯ್ಯ ನುಗ್ಗುತ್ತಿದ್ದಂತೆ, ರಾಜನ ಕಡೆಯವನ್ಯಾರೊ "ಹಾಕೊ ಆ ಮಗನಿಗೆ-ಅವನಿಂದಲೆ ಇವೆಲ್ಲ..." ಎಂದ. ಯಾರೊ ಓಡುತ್ತ ಬಂದು ಬೆನ್ನಿಗೆ ಬಲವಾಗಿ ಗುದ್ದಿದರು. ಅವರಿಗೆ ಕಣ್ಣು ಕತ್ತಲಿಟ್ಟಂತಾಗಿ ಕುಕ್ಕರಿಸಿದರು. ಗಾಬರಿಯಿಂದ ಸೋಮು ನನ್ನನ್ನು ಕರೆಯುತ್ತ ಅವರ ಕಡೆಗೆ ನುಗ್ಗಿದ. ಜನರೆಲ್ಲ ಕೂಗಾಡಿದರು. ಯಾರ ಮಾತು ಯಾರಿಗೂ ಕೇಳುತ್ತಿಲ್ಲ. ಯಾರೊ ಒಬ್ಬ ಸೋಮುವಿನ ಕಡೆಗೆ ನೋಡಿ "ಬಂದ ನೋಡ್ರಪೋ ಗುಮ್ಮನ ಗುಸುಕ," ಎಂದ. ಮಂಚಿಗ ತಪ್ಪಿಸಿಕೊಳ್ಳಲು ನೋಡುತ್ತಿದ್ದ. ಬಸವಯ್ಯ ಎದ್ದು ನಿದಾನವಾಗಿ ಪಕ್ಕದಲ್ಲಿ ಬಂದರು. ಅವರು ಬಂದುದು ಸೋಮುವಿಗೆ ತಿಳಿಯಲಿಲ್ಲ.

ಮತ್ತೊಬ್ಬ "ಬಿಟ್ಟ ಹೆಣ್ಣು ಸಿಕ್ಕಿದರೆ ಏನು ಬೇಕಿದ್ದರೂ ಮಾಡ್ತಾನಪೋ," ಎಂದ.

ರಾಜ "ಗೌರೀನ ಮದುವೆ ಆಗ್ತೀರ ಬುದ್ಧಿ...? ಮಾಡ್ಕೊಡೋಣಾ... ಮದುವೇಯಾ...?" ಎನ್ನುತ್ತ ಅವನನ್ನೆ ನೋಡಿದ. ಸೋಮು ಮೌನವಾಗಿ ಬಸವಯ್ಯನವರಿಗಾಗಿ ಓಡಾಡಿದ. "ಬುದ್ಧಿಯೋರು ಮಾತಾಡಕಿಲ್ಲ ಕಣೊ ದೇವಣ್ಣ...ನೀನೆ ಮಾಡೋ ಮದುವೆಯ," ಎಂದ. ಭಯದಿಂದ ಎರಡು ಹೆಜ್ಜೆ ಗುಂಪಿನ ಕಡೆಗೆ ಹೋದೆ. ಸೋಮು ಅರಚಿದ ಸದ್ದಾಯಿತು. ಇನ್ನೂ ಮುಂದೆ ಹೋಗುವಷ್ಟರಲ್ಲಿ ಮತ್ತೊಮ್ಮೆ ಕ್ಷೀಣವಾಗಿ ಅರಚಿದ. ಬಸವಯ್ಯ, ಗೌಡರು ಓಡಿ ಬಂದರು. "ಹಬ್ಬ ಮಾಡಬೇಡಿ ಅಂತಿದ್ರಲ್ಲ ಬುದ್ಧಿ...ಅಲ್ಲಿ ನೋಡಿ...' ಅಮ್ಮನ ಗುಡ್ಡ," ಎಂದ ರಾಜ. ಅವನ ಕಡೆಯವರೆಲ್ಲ ಆಗಲೆ ದೋಣಿ ಹತ್ತಿದರು. ಗುಡ್ಡದ ಮೇಲೆ ದೇವಸ್ಥಾನದ ಒಪ್ಪಾರಿಗೆ ಬೆಂಕಿ ಬಿದ್ದಿತ್ತು. ಬೆಂಕಿಯ ರಭಸಕ್ಕೆ ಬೇವಿನ ಮರದ ರೆಂಬೆಗಳು ಅಲ್ಲಾಡುತ್ತಿದ್ದವು. ಬಸವಯ್ಯ ಹಲ್ಲು ಕಡಿಯುತ್ತ "ಯಾರದ್ದು ಅದು ಕೆಲಸ?" ಎಂದರು. ಏನು ಮಾಡಲೂ ತೋಚದೆ ನಿಂತರು. ರಾಜ ಗಹಗಹಿಸಿ ನಕ್ಕು ಕತ್ತಲಲ್ಲಿ ಮರೆಯಾದ.

ಸೋಮುವಿನ ನೆತ್ತಿಯಿಂದ ರಕ್ತ ಒಸರುತ್ತಿದೆ. ಪಂಜನ್ನು ಹತ್ತಿರಕ್ಕೆ ತಂದು ನೋಡಿದರೆ ತಲೆ ಬಿರುಕು ಬಿಟ್ಟಂತಾಗಿದೆ. ಬಾಯಲ್ಲೂ ರಕ್ತ. ಅಲ್ಲಾಡಿಸಿದೆವು; ದೇಹ ಸ್ಥೂಲವಾಗಿತ್ತು. ಯಾರಿಗೂ ಮಾತಾಡಲಾಗದೆ, ಅನಾಮತ್ತಾಗಿ ದೇಹವನ್ನೆತ್ತಿ ಪಲ್ಲಕ್ಕಿಯಲ್ಲಿಟ್ಟರು. ಗೌಡರು 'ಬೇಡ ಬೇಡ' ಎಂದುದು ಯಾರಿಗೂ ಕೇಳಲಿಲ್ಲ. ಹೆಜ್ಜೆಯಿಡುತ್ತ ಪಲ್ಲಕ್ಕಿ ಹೊತ್ತು ತಂದರು.

ಮಧ್ಯರಾತ್ರಿ ಹುಣಿಸೆಕಟ್ಟೆಯಿಂದ ಡಾಕ್ಟರು ಬರುವ ವೇಳೆಗೆ ಕತ್ತಲು ಭಯವನ್ನು ಕಾರುವ ಹಾಗಿತ್ತು. ಸೋಮುವಿನ ದೇಹವನ್ನು ಡಾಕ್ಟರು ಪರೀಕ್ಷಿಸಿದರು. ಮುಖ ಬಿಳುಚಿಕೊಂಡು ನಿಂತರು. ಬೆವರು ಒರೆಸಿಕೊಳ್ಳುತ್ತ ತಲೆ ತಗ್ಗಿಸಿ ಹೊರಟು ಹೋದರು.

*

ಮಾರನೆಯ ದಿವಸವೆ ಹಿಂತಿರುಗಲು ಮನಸ್ಸಾದರೂ ಹಾಗೆ ಮಾಡಲಾಗಲಿಲ್ಲ ಒಂದು ದಿವಸ ಕಳೆದ ಮೇಲೆ ಮಧ್ಯಾಹ್ನದ ಬಸ್ಸಿಗೆ ಹೊರಟೆ. ಸೋಮುವಿನ ಕ್ಲಿನಿಕ್ಕಿನ ಬೋರ್ಡು ನನ್ನನ್ನೆ ನೋಡುತ್ತಿತ್ತು. ಜೊತೆಗಿದ್ದ ಆಳು ಕೈಮರದ ವರೆಗೂ ಬಂದ. "ನಿಮ್ಮ ದುರದೃಷ್ಟ ಬುದ್ಧಿ, ಹಬ್ಬ ಉತ್ಸವ ಎಲ್ಲ ಎಡವಟ್ಟಾಯಿತು," ಎಂದ. ಈ ಹಿನ್ನೆಲೆಯೇನೆಂದು ಕೇಳಿದೆ. "ಶಿವನ ಮಗ ಕುಮಾರಸ್ವಾಮಿ ಅಂತಾರಲ್ಲ ಬುದ್ಧಿ...ಅವನು ಹತ್ತಿ ಹೊಲದಲ್ಲಿ ಹುಟ್ಟಿದನಂತೆ. ದೊಡ್ಡವನಾದ ಮೇಲೆ, ಹೊಳೆ ಬದಿ ಓಡಾಡುತ್ತಿದ್ದ ಒಬ್ಬ ಬೆಸ್ತರ ಹುಡುಗಿಯನ್ನು ಹಿಡಿದುಕೊಂಡ. ಆ ಹುಡುಗಿಯನ್ನು ಕೆಡಿಸಿದ. ಈ ಕತೇನ ಇಟ್ಕೊಂಡೆ ಉರಲ್ಲಿ ಹಬ್ಬ ಮಾಡೋದು. ಬೆಸ್ತರು ಸ್ವಾಮಿಯನ್ನು ಒಪ್ಪಿಸಿಕೊಂಡು ತಿಥಿ ಮಾಡಬೇಕು... ಹಿಂದೆಲ್ಲ ಮಾಡ್ತಿದ್ರು. ಕಾಲ ಕೆಟ್ಹೋಯ್ತು ಬುದ್ಧಿ. ಜನ ಹಾಳಾಗವ್ರೆ." ಎಂದ. ✡

ಮಂಗಳ ಮೂರ್ತಿ

ಗುಜರಾತಿ ಕಥೆ : **ದೀನಾನಾಥ ವ್ಯಾಸ**
ಕನ್ನಡಕ್ಕೆ : **ಎಸ್. ಬಿ. ಖೋದಾನಪುರ**

ಇಪ್ಪತ್ತು ವರ್ಷದ ಆಚೆಗಿನ ಮಾತು. ಮರೆತುಹೋಗಿದೆ. ಪ್ರಾಥಮಿಕ ಶಾಲೆಯಿಂದ ಜಿಲ್ಲಾ ಮಾಧ್ಯಮಿಕ ಶಾಲೆಯಲ್ಲಿ ನನ್ನ ೩೭ ವರ್ಷ ಸೇವೆ ಶಿಕ್ಷಕನಾಗಿ. ಅನೇಕ ವಿದ್ಯಾರ್ಥಿಗಳು ಕಲಿತುಹೋಗಿದ್ದಾರೆ.

ಈಗ ನಿವೃತ್ತನಾಗಿರುವೆ. ಹುಡುಗರಿಗೆ ಕಲಿಸುವದರಲ್ಲಿಯೇ ನನ್ನ ಪೂರ್ಣ ಜೀವ ಸವೆದು ಹಣ್ಣಾಗಿದೆ. ಈ ಮುಪ್ಪಿನ ವಯಸ್ಸಿನಲ್ಲಿ ಜೀವನ ನಡೆಸುವದು ಕಷ್ಟವಾಗಿದೆ. ಮಕ್ಕಳಿಬ್ಬರು ದೂರದ ಸ್ಥಳದಲ್ಲಿ ತಮ್ಮ ತಮ್ಮ ಸಂಸಾರ ಸಾಗಿಸುವದೇ ಕಠಿಣ. ತಂದೆ-ತಾಯಿ ಸಹಾಯ ಬಯಸದ ಸ್ಥಿತಿಯಲ್ಲಿ ಮಕ್ಕಳಿದ್ದಾರೆ. ಮಕ್ಕಳಿಗೆ ಯೋಗ್ಯ ಶಿಕ್ಷಣ ಕೊಡಿಸಿ ಉಳಿದ ಹಣ ಈ ಮೂರು ವರ್ಷಗಳಲ್ಲಿ ಮುಗಿದಿದೆ. ಇನ್ನೂ ನನ್ನ ನಿವೃತ್ತಿ ವೇತನ ಮಂಜೂರಾಗಿಲ್ಲ.

ನಿವೃತ್ತಿ ವೇತನದ ಕಾಗದ ಪತ್ರಗಳು ಏ.ಜಿ. ಆಫೀಸಿಗೆ ಹೋಗುತ್ತವೆ. ಅನೇಕ ಆಕ್ಷೇಪಗಳಿಂದ ತಿರುಗಿ ಬರುತ್ತವೆ. ವಿಚಾರಿಸಲಿಕ್ಕೆ ಹೋದಾಗ ಅವುಗಳ ಗೊತ್ತೇ ಆಗುವದಿಲ್ಲ. ಯಾವ ಕ್ಲಾರ್ಕನೂ ನನ್ನ ತೊಂದರೆ ಅರ್ಥ ಮಾಡಿಕೊಂಡಿಲ್ಲ.

ಆದಾಯದ ಮೂಲ ಮುಗಿಸಿ ಕೊನೆಯು ನಿರ್ಣಯ ತೆಗೆದುಕೊಂಡೇ ಆಫೀಸಿಗೆ ಹೋದೆ. ಎರಡು ಮೈಲು ಹಾದಿ ತುಳಿದು ದಣಿವ ನ್ನಾರಿಸಲು ಬೆಂಚಿನ ಮೇಲೆ ಕುಳಿತು ಕೆಲವು ನಿಮಿಷ ವಿಶ್ರಾಂತಿ ಪಡೆದೆ. ಹೃದಯವನ್ನು ಕೈಯಲ್ಲಿ ಹಿಡಿದುಕೊಂಡು ಹೆಡ್ ಕ್ಲಾರ್ಕನ್ನು ಭೆಟ್ಟಿಯಾದೆ.

"ಸರ್, ನನ್ನ ಕಾಗದ ಪತ್ರಗಳನ್ನು ಸಾಹೇಬರಿಗೆ ತೋರಿಸಿ ಬೇಗನೆ ಖುಲಾಸೆ ಮಾಡುವಿರಾ? ನಿಮ್ಮ ಋಣ ಜೀವನ ಪರ್ಯಂತ ಮರೆಯುವದಿಲ್ಲ."

"ನಿಮ್ಮ ಕಾಗದ ಪತ್ರಗಳು ರಾಜಕೋಟಕ್ಕೆ ಹೋಗಿವೆ," ಎಂದರು. ಹೆಡ್ ಕ್ಲಾರ್ಕ್, ಮುಖ ಸೊಟ್ಟಗೆ ಮಾಡಿ.

"ತಿರುಗಿ ಯಾವಾಗ ಬರಬಹುದು!"

"ನನಗೇನು ಗೊತ್ತು? ಬಹುಶಃ ಅವು..." ಇನ್ನು ಏನೋ ಹೇಳಬೇಕೆಂದಿದ್ದ ಅವರು "ಅಂತಿಮ ನಿರ್ಣಯ ನಿಮಗೇನೆ ತಿಳಿಸಲಾಗುವದು, ಯಾಕೆ ತೊಂದರೆ ಕೊಡುವಿರಿ ನಮಗೆ?" ಎಂದು ಹೇಳಿ ಬೇರೆ ಕ್ಲಾರ್ಕ ಸಂಗಡ ಹರಟೆ ಪ್ರಾರಂಭಿಸಿದರು. "ಅಂತಿಮ ನಿರ್ಣಯದ ವೇಳೆಗೆ ಎಲ್ಲಿ ನನ್ನ ಅಂತ್ಯವಾಗುವದೋ", ಎನ್ನುತ್ತಾ ಮನೆಯ ಕಡೆಗೆ ಹೊರಟೆ. ಆದರೆ ಮನೆಯಲ್ಲಿಯ ಖಾಲಿ ಪಾತ್ರಗಳು ಕಣ್ಣ ಮುಂದೆ ಬಂದವು. ಸ್ವಲ್ಪ ನಿಂತು ಮತ್ತೆ ಕೇಳಿದೆ.

"ಸರ್. ಏ. ಓ. ಸಾಹೇಬರನ್ನು ಭೆಟ್ಟಿಯಾಗಲು ಪರವಾನಗಿ ಕೊಡುವಿರಾ? ಬಹುಶಃ ಅವರು..."

"ಇವ ಎಂತಹ ಮನುಷ್ಯ," ಎಂದು ಮುಖ ಗಂಟಿಕ್ಕಿ "ಶಾಲಾ ಮಾಸ್ತರ ಎಂದ್ರೆ ಮಾಸ್ತರ" ಎಂದರು ಆ ಹೆಡ್ ಕ್ಲಾರ್ಕ್.

"ಮಾಸ್ತರ" ಎಂದರೆ ಬುದ್ಧಿ ಇಲ್ಲದವ ಎನ್ನುವಂತಿತ್ತು ಆ ಧಾಟಿ. ನನಗೆ ದಿಗ್ಭ್ರಮೆಯಾಯಿತು.

"ನೋಡ್ರಿ, ಸಾಹೇಬರು ಇಲ್ಲಿಗೆ ಬಂದು ಒಂದು ವಾರವಾಗಿದೆ. ಅವರು ಬಹಳ ಶಿಸ್ತಿನ

ಮನುಷ್ಯ. ಹುಷಾರಾಗಿರಿ. ಹೀಗೆ ಗದ್ದಲ ಮಾಡಿ ನಿಮ್ಮ ಪ್ರಕರಣ ನೀವೆ ಕೆಡಿಸುತ್ತೀರಿ. ಸುಮ್ಮನೆ ಹೋಗಿರಿ," ಎಂದು ಹೇಳಿ ತಮ್ಮ ಪೇಪರುಗಳಲ್ಲಿ ತಲೆ ಹಾಕಿದರು.

ದಿಕ್ಕು ತಿಳಿಯದೆ ಬೆಂಚ ಮೇಲೆ ಕುಳಿತೆ. ಭವಿಷ್ಯ ಪೂರ್ಣ ಕಗ್ಗತ್ತಲು. ಅಷ್ಟರಲ್ಲಿ ಎಲ್ಲಿಂದೊ ಬೆಕ್ಕೊಂದು ಬಂದು ನನ್ನ ಬಳಿ ಕುಳಿತಿತು. ಅದರ ದೇಹದ ಮೇಲೆ ಮೃದುವಾಗಿ ಕೈಯಾಡಿಸಿದೆ. ಅದು ನಿದ್ದೆ ಮಾಡಲಾರಂಭಿಸಿತು. ನನ್ನ ಕಣ್ಣಿನ ತುದಿಗೆ ಬಂದ ಹನಿಯನ್ನು ಕೆಳಗೆ ಬೀಳದಂತೆ ತಡೆದೆ. "ಮುಂದಿನವಾರ ನನ್ನ ಅನ್ನ ಎಲ್ಲಿ?" ಎನ್ನುವ ಪ್ರಶ್ನೆ ಎದುರು ನಿಂತಿತು.

ಆಗ ಜೀಪ್ ಗಾಡಿಯೊಂದು ಬಂದು ಆಫೀಸ್ ಬಾಗಿಲಲ್ಲಿ ನಿಂತಿತು. ಸಿಪಾಯಿ ಮುಂತಾದವರು ಎದ್ದು ನಿಂತು ಒಳಗೆ ಬರುತ್ತಿರುವ ಸಾಹೇಬರಿಗೆ ನಮಸ್ಕಾರ ಮಾಡಿ ಗೌರವ ತೋರಿಸಿದರು. ನಾನು ಸಹ ಯಂತ್ರದಂತೆ ಎದ್ದು ನಿಂತೆ. ಎರಡು ಕೈಗಳನ್ನು ಜೋಡಿಸಿದೆ. ಗಂಭೀರವಾದರೂ ವಿನಯಶೀಲರಾದ ತಮ್ಮ ರೂಮಿಗೆ ಹೊರಟ ಸಾಹೇಬರು ಔದಾರ್ಯದಿಂದ ನನ್ನ ಕಡೆಗೆ ನೋಡಿದರು. ಪ್ರಸನ್ನ ಚಿತ್ತರಾಗಿರುವಂತೆ ಕಂಡಿತು. ಅನುಮಾನ ಪಟ್ಟವರಂತೆ ಒಳಗೆ ಹೋದರು. ಸಿಪಾಯಿಯು ಒಳಗೆ ಹೋದ. ಯಾರೆಂದು ವಿಚಾರಿಸುವಂತೆ ಕ್ಲಾರ್ಕ್ ಕಡೆಗೆ ನೋಡಿದೆ.

"ಅವರೇ ನಮ್ಮ ಹೊಸ ಸಾಹೇಬರು. ಬಹಳ ನಿಯತ್ತಿನ, ಶಿಸ್ತಿನ ಮನುಷ್ಯ. ಹುಚ್ಚಾಪಟ್ಟೆ ಸಹಿಸರು," ಎಂದನು ಆ ಕ್ಲಾರ್ಕ್.

"ಶಿಸ್ತಿನ ನಿಯತ್ತಿನ" ಮುಂತಾದ ಶಬ್ದಗಳು ನನ್ನ ಕೈಕಾಲೇ ಕಳೆದವು. ಕಿವಿಯಲ್ಲಿ ಹೆಡ್ ಕ್ಲಾರ್ಕನ ಸೂಚನೆ ಗುಂಯಿಗುಡುತ್ತಿತ್ತು. ಆದ್ದರಿಂದ ದೇವರು ಮಾಡಿದ್ದಾಗಲಿ ಎಂದು ಮನೆಗೆ ಹೊರಟೆ.

ಅಷ್ಟರಲ್ಲಿ ಸಿಪಾಯಿ ಬಂದು ಗೌರವ ಪೂರ್ಣ ಸ್ವರದಲ್ಲಿ ಹೇಳಿದ: "ಸರ್, ಸಾಹೇಬರು





ನಿಮ್ಮನ್ನು ಕಾಣಬಯಸಿದ್ದಾರೆ."

"ನನ್ನನ್ನೇ...!" ಆಶ್ಚರ್ಯಗೊಂಡೆ.

"ಹೌದು ಸರ್, ನಿಮ್ಮನ್ನೇ," ಎಂದ. ತಲೆಯಲ್ಲಿ ವಿಚಾರಗಳ ಸರ್ಕಸ್. ಅಂತೂ ಸಾಹೇಬರ ರೂಮು ಪ್ರವೇಶಿಸಿದೆ.

"ಕೂಡ್ರಿ" ಎಂದು ಎದುರಿನಲ್ಲಿದ್ದ ಕುರ್ಚಿ ತೋರಿಸಿದರು. ಹೆದರುತ್ತ ಕುಳಿತೆ. ಯಾಕಂದರೆ "ಶಿಸ್ತು" "ಕಠಿಣ" "ಕೆಟ್ಟದ್ದನ್ನು ಸಹಿಸದವ" ಇವು ಕಿವಿಯಲ್ಲಿ ಸುಳಿದಾಡುತ್ತಿದ್ದವು. "ನೀವು ಬಂದ ಕಾರಣ!" ಸಹಾನುಭೂತಿ ಇತ್ತು ಪ್ರಶ್ನೆಯಲ್ಲಿ. ಗಂಟಲು ಒಣಗಿತ್ತು. ತುಟಿಯ ಮೇಲೆ ನಾಲಿಗೆಯಾಡಿಸಿ ಹರಕು ಭಾಷೆಯಲ್ಲಿ ಹೇಳಿದೆ.

"ಸಾಹೇಬ್ರು...ನಾನೊಬ್ಬ ಶಿಕ್ಷಕ. ಈಗ ನಿವೃತ್ತನಾಗಿರುವೆ. ಕಳೆದ ಮೂರು ವರ್ಷಗಳಿಂದ ಇಲ್ಲಿಗೆ ಬರುತ್ತಿರುವೆ. ಆದರೆ..."

"ಹೌದೆ?" ಎಂದು ಸರಿಯಾಗಿ ಹೇಳುವಂತೆ ಧೈರ್ಯ ಕೊಟ್ಟರು.

"ಆದರೆ ಕಾಗದ ಪತ್ರಗಳ ಓಡಾಟವಿಲ್ಲ, ನಿವೃತ್ತಿ ವೇತನ ಇನ್ನೂ ಮಂಜೂರಾಗಿಲ್ಲ," ಅಸ್ಪಷ್ಟ ಧ್ವನಿಯಲ್ಲಿ ಮುಂದುವರಿಸಿದೆ. "ಬೆಲೆ ಏರುತ್ತಿರುವ ಈ ದಿನಗಳಲ್ಲಿ ಜೀವ ಹಿಡಿಯುವದು ಹೇಗೆ, ಸಾಹೇಬರ..., ನಾ ಹೇಳುವದು ನಿಮಗೆ ಅರ್ಥವಾಗಲಿಕ್ಕಿಲ್ಲರೀೀೀ..."

ಸಾಹೇಬರು ಬಾರಿಸಿದ ಆ ಕರೆ ಗಂಟೆ ಸಪ್ಪಳದಲ್ಲಿ ನನ್ನ ಮುಂದಿನ ಶಬ್ದ ಅವರಿಗೆ ಕೇಳಲಿಲ್ಲ. ಓಡ್ತಾ ಬಂದ ಸಿಪಾಯಿ ಸಲಾಂ ಮಾಡಿದ.

"ರಾಮುಜೀ, ಆಫೀಸ್ ಸುಪರಿಂಟೆಂಡೆಂಟರನ್ನು ಕರೆ?"

"ಜೀ ಸಾಬ", ಎಂದು ಹೋದ.

ತಕ್ಷಣದಲ್ಲಿ ಬಂದ ಸುಪರಿಂಟೆಂಡೆಂಟರು ತಿನ್ನುವಂತೆ ನನ್ನ ಕಡೆಗೆ ನೋಡಿದರು. ನನಗೆ ಎಚ್ಚರ ತಪ್ಪುವಂತಾಯಿತು.

"ಇವರ ಕಾಗದ ಪತ್ರಗಳು ನನ್ನ ಟೇಬಲ್‌ಗೆ ಯಾಕೆ ಬಂದಿಲ್ಲ?" ಸಾಹೇಬರ ಹುಕುಂ.

"ಇವರ ಪ್ರಕರಣ ಬಹಳ ಹಳೆಯದು ಮತ್ತು ಜಟಿಲವಾದದ್ದು. ಏ. ಜಿ. ಆಫೀಸಿನವರು ಅನೇಕ ಆಕ್ಷೇಪಗಳನ್ನೆತ್ತಿದ್ದಾರೆ. ಅದಕ್ಕೆ ನಾವು ಉತ್ತರ್......"

"ಕೇಸ್‌ಪೇಪರ್ ಇಲ್ಲಿಗೆ ಬಂದಿರುತ್ತವೆಯೋ?"

"ಬಂದಿವೆ ಸರ್."

"ಸದ್ಯ ಪೂರ್ಣ ಮಾಡಿ ತೆಗೆದುಕೊಂಡು ಬರ್ರಿ."

"ಬಹಳಷ್ಟು ಕೆಲಸವಿದೆ ಸರ್, ಅದರಲ್ಲಿ" ತಿರಸ್ಕಾರದ ಧ್ವನಿಯಲ್ಲಿ ಸುಪರಿಂಟೆಂಡೆಂಟರು ಹೇಳಿದರು.

"ಹಾಗಾದರೆ ಆ ಕೆಲಸ ಈಗ ಮಾಡಿರಿ. ನಾವಿರುವದು ಅದಕ್ಕೆ."

"ಇಂತಹ ಐದಾರು ಪ್ರಕರಣಗಳಿವೆ ಸರ್."

"ಎಲ್ಲವನ್ನೂ ಪೂರ್ಣ ಮಾಡಿ ನನ್ನ ಸಹಿಗೆ ಕಳಿಸಿರಿ."

"ಆಗಲಿ ಸರ್."

"ಇವರ ಕಾಗದಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿರಲಿ." ನಾನು ಎದ್ದು ಸುಪರಿಂಟೆಂಡೆಂಟರ ಹಿಂದೆ ಹೊರಟೆ.

"ನೀವು ಹೋಗುವಾಗ ನನಗೆ ಭೆಟ್ಟಿಯಾಗುವಿರಾ?" ಎಂದು ಆತ್ಮೀಯ ಧ್ವನಿಯಲ್ಲಿ ಕೇಳಿದರು ಸಾಹೇಬರು.

"ಅವಶ್ಯವಾಗಿ," ಕೃತಜ್ಞತೆ ವ್ಯಕ್ತಪಡಿಸುವ ಧ್ವನಿಯಲ್ಲಿ ಹೇಳಿದೆ.

ಸುಪರಿಂಟೆಂಡೆಂಟರು ಕ್ಲಾರ್ಕಿಗೆ "ಹುಕುಂ" ಮಾಡಿದರು. ಪೂರ್ಣ ಆಫೀಸಿಗೆ ಚೈತನ್ಯ ಬಂದಿತು. ಒಂದೇ ಒಂದು ಗಂಟೆಯಲ್ಲಿ ಎಲ್ಲ ಕಾಗದ ಪತ್ರಗಳು ತಯಾರಾಗಿ ಸಾಹೇಬರ ಸಹಿಗೆ ಹೋದವು. ಎಲ್ಲರಿಗೂ ಧನ್ಯವಾದಗಳನ್ನರ್ಪಿಸಿ ಸಾಹೇಬರ ರೂಮಿನಲ್ಲಿ ಹಣಿಕೆ ಹಾಕಿದೆ.

ಆತ್ಮೀಯ ಬಂಧುವಿನಂತೆ ಸ್ವಾಗತಿಸಿ, "ನನ್ನ ಪರಿಚಯವಾಗುವದೇ?" ಎಂದು ಸಲಿಗೆಯಿಂದ ಕೇಳಿದರು ಆ ಶಿಸ್ತಿನ ಸಾಹೇಬರು.

ಅವರನ್ನು ದಿಟ್ಟಿಸಿ ನೋಡಿ ನೆನಪನ್ನು ಅಗೆದು ತೆಗೆಯಹತ್ತಿದೆ. ಆದರೆ ಪರಿಚಯದ ಸುಳಿವು ಸಿಗಲಿಲ್ಲ. "ಸಾಹೇಬ್ರು, ವಯಸ್ಸಾಗಿದೆ. ನೆನಪಿಗೆ ಜಂಗು ಹತ್ತಿದ" ಎಂದೆ.

“ನಿಮ್ಮ ಹೆಸರು ಮಂಗಲದಾಸ ಮಾಸ್ತರ; ಆದರೆ ನಾವು ನಿಮಗೆ ಮಂಗಲಮೂರ್ತಿ ಎಂದು ನಾಮಕರಣ ಮಾಡಿದ್ದೆವು.”

ನನ್ನ ಗಾಬರಿ ಹೆಚ್ಚಾಗಿ ಆ ಶಿಸ್ತಿನ ಸಾಹೇಬರೇ ಮಂಗಲಮೂರ್ತಿಯಂತೆ ಕಂಡರು.

“ನಾನು ಏಳನೆಯ ವರ್ಗದಲ್ಲಿ ನಿಮ್ಮ ವಿದ್ಯಾರ್ಥಿಯಾಗುವ ಸುಯೋಗ ಒದಗಿತ್ತು. ಎರಡು ವರ್ಷಗಳಲ್ಲಿ ನಿಮಗೆ ಜಿಲ್ಲಾ ಸ್ಥಳಕ್ಕೆ ವರ್ಗವಾಗಿ ನೀವು ಹೋದಿರಿ.”

ಗತಕಾಲವನ್ನು ಸಲಿಕೆಯಿಂದ ತೋಡಿದೆ. ಅನೇಕ ವಿದ್ಯಾರ್ಥಿಗಳಿಗೆ ಕಲಿಸಿದ ನನಗೆ ಅವರೆಲ್ಲ ಕೊಟ್ಟ ಉಡುಗೊರೆ ಎಂದರೆ “ಮಂಗಲ ಮೂರ್ತಿ”. ಮಂಗಲದಾಸ ಮಾಸ್ತರ ಎಂದು ನನ್ನನ್ನು ಯಾರೂ ಗುರ್ತಿಸಲಾರರು. ಈ ದೊಡ್ಡ ಸಾಹೇಬರು ಆ ವಿದ್ಯಾರ್ಥಿಗಳಲ್ಲಿ ಒಬ್ಬರಾಗಿರಬಹುದು. ಆದರೆ ನನ್ನ ಸ್ಮರಣೆಗೆ ಯಾವುದೂ ಸ್ಪಷ್ಟವಾಗಲಿಲ್ಲ.

“ಸರ್, ನೆನಪಾಯಿತೇ?” ಮೃದುವಾಗಿ ಸೂಚಿಸಿದರು. ನಾನು ಇಲ್ಲವೆಂದೆ.

“ಕೇಳಿರಿ, ನಾನು ನೆನಪು ಮಾಡುವೆ. ಶಾಲೆಯ ಯುನಿಫಾರ್ಮ್ ಧರಿಸಿ ಬರುವಂತೆ ಹೆಡ್ ಮಾಸ್ತರು ಅಪ್ಪಣೆ ಹೊರಡಿಸಿ ಮೂರು ದಿನಗಳ ಅವಧಿ ಕೊಟ್ಟರು. ನಾಲ್ಕನೆಯ ದಿನ ಸಹ ನಾನು ನನ್ನ ನಿತ್ಯದ ಹರಕು ಬಟ್ಟೆಯಲ್ಲಿ ಬಂದೆ. ನನಗೆ ವರ್ಗದಲ್ಲಿ ಅಪ್ಪಣೆ ಸಿಗಲಿಲ್ಲ.”

ಈ ಶಬ್ದಗಳು ನನ್ನ ಸ್ಮೃತಿಪಟಲಕ್ಕೆ ಸುತ್ತಿಗೆಯ ಪೆಟ್ಟನ್ನು ಕೊಟ್ಟವು.

ಹೌದು. ಅಂದು ಸೋಮವಾರ ಬೆಳಿಗ್ಗೆ ನಾನು ಕ್ಲಾಸಿಗೆ ಹೊರಟಿದ್ದೆ. ಕಣ್ಣೀರು ಸುರಿಸುತ್ತಾ ಮೂಲೆಯಲ್ಲಿ ಒಬ್ಬ ಹುಡುಗ ನಿಂತಿದ್ದ, “ಯಾಕಪ್ಪಾ ಅಳ್ತಾ ಇದ್ದಿ?” ಎಂದೆ.

“ಕ್ಲಾಸಿನಿಂದ ಹೊರಗೆ ಹಾಕಿರುವರು. ಯಾಕಂದರೆ...” ಅವನು ಬಿಕ್ಕಳಿಸಹತ್ತಿದ, ಮಾತು ಹೊರಡಲಿಲ್ಲ. ಸಮಾಧಾನ ಮಾಡಿದೆ.

“...ಯಾಕಂದರೆ ನನಗೆ ಶಾಲೆಯ ಯುನಿಫಾರ್ಮ್ ಇಲ್ಲ.”

“ನಿಮ್ಮ ತಂದೆಗೆ ಹೇಳು; ಹೊಲಿಸು, ಧರಿಸಿಕೊಂಡು ಬಾ,” ಎಂದೆ.

“ಸರ್, ಅನೇಕ ದಿನಗಳಿಂದ ತಂದೆಯವರಿಗೆ ಆರಾಮವಿಲ್ಲ. ತಾಯಿಯೇ ಕಷ್ಟಪಡುತ್ತಾಳೆ. ಊಟಕ್ಕೆ ಸಾಲುವದಿಲ್ಲ. ತಂದೆಗೆ ಔಷಧವಿಲ್ಲ. ಎಲ್ಲಿಂದ ಹಣ...” ಅಳುವುದು ಹೆಚ್ಚಾಗಿ ಮಾತಾಡಲಿಕ್ಕೆ ಸಾಧ್ಯವಾಗಲಿಲ್ಲ.

ನನ್ನ ಹೃದಯ ಕರಗಿತು. ಸಮೀಪದಲ್ಲಿದ್ದ ನನ್ನ ಮನೆಗೆ ಕರೆದುಕೊಂಡು ಹೋದೆ. ಒಂದು ಜೋಡಿ ಯುನಿಫಾರ್ಮ್ ವ್ಯವಸ್ಥೆ ಮಾಡಿ ಆ ಹುಡುಗನನ್ನು ಕಳಿಸಿದೆ. ಆ ಹುಡುಗ ಮುಂದೆ ಎಲ್ಲ ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಪ್ರಥಮ ಪದವೀಧರನಾದ. ಈಗ ಶಿಕ್ಷಣ ಖಾತೆಯಲ್ಲಿ ಅಡ್ಮಿನಿಸ್ಟ್ರೇಟಿವ್ ಆಫೀಸರ್.

ಯುನಿಫಾರ್ಮ್ ಇಲ್ಲದ ಆ ಚಿಕ್ಕ ಬಾಲಕನನ್ನು ಹೊರಗೆ ಹಾಕಿದ ಸಂಗತಿ ಕನಸಿನಂತೆ ಕಣ್ಮುಂದೆ ಬಂದಿತು. ಕಣ್ಣು ತೆರೆದೆ.

“ಸರ್, ನೀವೆ ಆ ಹು...,” ಗಂಟಲು ಕಟ್ಟಿತು. “ಹೌದು, ಹೌದು, ನಿಮ್ಮಿಂದ ಸಹಾಯ ಪಡೆದ ಆ ಹುಡುಗ ನಾನೇ. ನಿಮಗೆ ನಾನು ಕೇವಲ ಕಿಶೋರ—ಸರ್ ಸಾಹೇಬ ಆಗಲಾರೆ. ನಾನು ಗಳಿಸಿದ ಈ ಸ್ಥಾನ ಮಾನಗಳೆಲ್ಲ ನಿಮ್ಮ...” ಆನಂದ ಬಾಷ್ಪ ತುಂಬಿ ಬಂದವು. ಮುಗುಳುನಗೆ ನಕ್ಕ. ಸಾಹೇಬರು ಮುಂದುವರೆಸಿದರು. “ಸರ್, ನೀವು ನನಗೆ ಯಾವಾಗಲೂ ಮಂಗಲ-ಮೂರ್ತಿ; ಮಂಗಲದಾಸ ಮಾಸ್ತರಲ್ಲವೇ ಅಲ್ಲ. ಇಪ್ಪತ್ತು ವರ್ಷದ ಹಿಂದೆ ಇದ್ದ ಮಂಗಲಮೂರ್ತಿ ಈಗಲೂ ‘ಮಂಗಲ ಮೂರ್ತಿ.”

ಆನಂದದಿಂದ ಹೃದಯ ತುಂಬಿ ಬಂದು ಮೂಕನಾದೆ. ಯಾವುದೋ ಒಂದು ಹಳ್ಳಿಯ ಶಾಲೆಯ ಮೂಲೆಯಲ್ಲಿ ನಿಂತ ಚಿಕ್ಕ ಬಾಲಕನ ಭುಜದ ಮೇಲೆ ಕೈ ಇಟ್ಟು ಸಮಾಧಾನ ಮಾಡಿದಂತೆ ಈಗಲೂ ಅವರ ಭುಜದ ಮೇಲೆ ಕೈ ಇಡುತ್ತಾ ಆ ಮುಗ್ಧ ಮುಖ ಮತ್ತೆ ಕಂಡೆ.

ಮೂರು ವರ್ಷ ಈ ಆಫೀಸಿಗೆ ಮಾಡಿದ ನನ್ನ ಯಾತ್ರೆ ಸಫಲವಾಯಿತು. ✿

ಇದುವೆ ಜೀವ ಇದು ಜೀವನ

ಮಾತು ಕಡಿಮೆ

ನಮ್ಮ ವಿದ್ಯಾರ್ಥಿ ನಿಲಯವನ್ನು, ಬೇಸಿಗೆ ರಜೆಯಲ್ಲಿ ಇನ್ನೂ ಪರೀಕ್ಷೆ ಮುಗಿಯದೆ ಇರುವ ವಿದ್ಯಾರ್ಥಿಗಳಿಗೆ ಮಾತ್ರ ವಾಸಿಸಲು ಕೆಲವು ಕೊಠಡಿಗಳನ್ನು ಕೊಟ್ಟು, ಮಿಕ್ಕ ಸಂಪೂರ್ಣ ನಿಲಯವನ್ನು ಮದುವೆಗಳಿಗೆ ಬಾಡಿಗೆಗೆ ಕೊಟ್ಟು ಬಿಡುತ್ತಾರೆ. ನಿಲಯದ ಒಂದು ಕೊಠಡಿಯಲ್ಲಿ, ಮದುವೆಗಳಿಗೆ ಕೊಡುವುದಕ್ಕೆ ಮೊದಲು ಪ್ರಿಯುನಿವರ್ಸಿಟಿ ಓದುತ್ತಿದ್ದ ನಾಲ್ಕು ಮಂದಿ ಇದ್ದರು. ಅವರು ಸದಾ ಓದುತ್ತಿದ್ದುದನ್ನು ನೋಡಿ ಆ ಕೊಠಡಿಗೆ 'ಕುದುಮಿಗಳ ರೂಮು' ಎಂದು ನಾಮಕರಣ ಮಾಡಿದ್ದೆವು. ಅವರ ಚಟವೇನೆಂದರೆ ರೂಮಿನ ಗೋಡೆಯ ಮೇಲೆ ಹಿತನುಡಿಗಳನ್ನು ಬರೆಯುವುದು.

ಮದುವೆಗೆ ಬಂದಿದ್ದ ಒಂದು ಪಾರ್ಟಿ ಅದೇ ಕೊಠಡಿಗೆ ಮದುವೆಯಾದ ಹೆಣ್ಣು ಗಂಡನ್ನು 'ಮೊದಲ ರಾತ್ರಿ' ಕಳೆಯಲು ಬಿಟ್ಟದ್ದನ್ನು ಕಂಡು ನಮಗೆಲ್ಲಾ ತಮಾಷೆಯೋ ತಮಾಷೆ!

ರಹಸ್ಯ ಇಷ್ಟೇ. ಮೊದಲಿದ್ದ ನಮ್ಮ ಕುದುಮಿಗಳು ರೂಮು ಬಿಟ್ಟಿದ್ದರೂ, ಯಾರಾದರು ಕೊಠಡಿಯೊಳಕ್ಕೆ ಪ್ರವೇಶ ಮಾಡುತ್ತಲೇ ಎದುರಿಗೆ ಸರಿಯಾಗಿ ಕಾಣಲಿ ಎಂದು ಗೋಡೆಯ ಮಧ್ಯದಲ್ಲಿ ಕೆಂಪು ಬಣ್ಣದ ದಪ್ಪ ದಪ್ಪ ಅಕ್ಷರಗಳಲ್ಲಿ ಬರೆದಿದ್ದ 'ಮಾತು ಕಡಿಮೆ ಜಾಸ್ತಿ ದುಡಿಮೆ' ಎಂಬ ಹಿತ ನುಡಿ ಮಾತ್ರ ಹಾಗೇ ಇತ್ತು.

—ವಿ. ಆರ್. ಪದ್ಮನಾಭರಾವ್

ಮಡಿ ಹೆಂಗಸು

ನಮ್ಮ ಚಿಕ್ಕಮ್ಮನ ಚಿಕ್ಕ ಮಗ, ಮೋಹನ ಬಲು ಮಾತುಗಾರ. ಒಂದು ಮಧ್ಯಾಹ್ನ ನಾನು ಅವರ ಮನೆಗೆ ಹೋಗಿದ್ದೆ. ರೂಮಿನಲ್ಲಿ ಕುಳಿತು ಹರಟುತ್ತಿದ್ದಾಗ ಎದುರಿಗೆ ಗೋಡೆಗಾನಿಸಿ ನಿಲ್ಲಿಸಿದ ಒಂದು ಚೀಲ ಕಣ್ಣಿಗೆ ಬಿತ್ತು. "ಏನಿದೆ ಅದರಲ್ಲಿ" ಎನ್ನುತ್ತ ಅದನ್ನು ನೋಡಹೋಗಲು, ಅವನು ಕೂಗಿದ, "ಅಕ್ಕಯ್ಯ ಅದನ್ನ ಮುಟ್ಟಬೇಡ. ಅದು ನಮ್ಮ ಮನೆಗೆ ಹುಳಿ, ಸಾರಿನ ಪುಡಿಮಾಡಲು ಬಂದ ಮಡಿ ಹೆಂಗಸಿನದು, ಅವರಿಗೆ ತುಂಬಕೋಪ. ಅವರ ಸಾಮಾನು ಏನು ಮುಟ್ಟಿದರೂ ಅದು ಮಡಿ, ಹೀಗೆ ಮುಟ್ಟಬಾರದು ಎಂದು ಗದರಿಸುತ್ತಾರೆ," ಎಂದು ಹೇಳಿದ.

ಸ್ವಲ್ಪ ಹೊತ್ತಿನಲ್ಲಿ ಒಳಗಡೆಯಿಂದ ಒಬ್ಬ ಹೆಂಗಸು ಬಂದು ಆ ಚೀಲಕ್ಕೆ ಕೈ ಹಾಕ-ಹೋದರು. ಯಾರೋ ಮನೆಗೆ ಬಂದವರು ಎಂದು ಭಾವಿಸಿ, ನಾನು "ಅದನ್ನ ಮುಟ್ಟಬೇಡಿ; ಅದು ನಮ್ಮ ಮನೆಗೆ ಬಂದ ಮಡಿ ಹೆಂಗಸಿಗೆ ಸೇರಿದ್ದು" ಎಂದು ಹೇಳಿದೆ.

ಆಕೆ ಅಚ್ಚರಿಯಿಂದ, "ಇಲ್ಲಮ್ಮ, ಈ ಚೀಲ ನನ್ನದೆ" ಎಂದರು.

ನಾನು ಸ್ವಲ್ಪ ಮಂಕಾಗಿ, "ಓಹ್, ಅಲ್ಲಿಗೆ ನಮ್ಮ ಮೋಹನ ತಪ್ಪು ತಿಳಿದಿದ್ದಾನೆ ಅಂತ ಕಾಣುತ್ತೆ. ಹುಳಿ ಪುಡಿ ಕುಟ್ಟಲು ಬಂದ ಹೆಂಗಸರದು ಎಂದು ಹೇಳಿದ" ಎಂದೆ.

ಆಕೆ "ಆದರೆ ಹುಳಿಪುಡಿ ಮಾಡಲು ಬಂದವಳು ನಾನೇ, ಇನ್ಯಾರೂ ಅಲ್ಲವಲ್ಲ." ಎಂದರು.

ಹಣೆ ತುಂಬ ಕುಂಕುಮವಿಟ್ಟು, ಕೆನ್ನೆ ತುಂಬ ಅರಿಷಣ ಬಳಿದು, ಜಡೆಯಲ್ಲಿ ಹೂ ಮುಡಿದು, ಅಂಚು ಸೆರಗಿನ ಸೀರೆಯುಟ್ಟ ಆ ಹೆಂಗಸನ್ನು ಅವಕ್ಕಾಗಿ ನೋಡಿದುದಲ್ಲದೆ ನಂಗೆ ಬೇರೇನು ಮಾಡಲು ತೋಚಲಿಲ್ಲ.

ಅನಂತರ ಮೋಹನನನ್ನು ತರಾಟೆಗೆ ತೊಗೊಂಡೆ. "ಯಾಕೋ ಅವರನ್ನ ಮಡಿ ಹೆಂಗಸೆಂದು ಹೇಳಿದೆ." ಎಂದು ಕೇಳಲು ಅವನು "ಅಲ್ಲ ಅಕ್ಕಯ್ಯ, ಅವರು ವಿಪರೀತ ಮಡಿ ಮಾಡುತ್ತಾರೆ, ಮತ್ತು ಅವರು ಹೆಂಗಸಲ್ಲವೇ?" ಎಂದು ನನ್ನನ್ನೇ ಪ್ರಶ್ನಿಸಿದ.

—ಆಶಾ ಬಾದಾಮಿ

ಫಲಿಸಿದ ಉಪಾಯ

ನಾನು, ಅಕ್ಕ ಮತ್ತು ತಮ್ಮ ಮೈಸೂರಿನಿಂದ ಮಂಗಳೂರಿಗೆ ಬರಬೇಕಾಗಿತ್ತು. ಉಡುಪಿ ಎಕ್ಸ್‌ಪ್ರೆಸ್‌ನಲ್ಲಿ ಮೊದಲಿನ ದಿವಸವೇ ಸೀಟು ರೀಸರ್ವ್ ಮಾಡಿದ್ದೆ. ಪ್ರಯಾಣದ ದಿನ ಮೈಸೂರು ಸಿಟಿಯಲ್ಲಿ ಸ್ವಲ್ಪ ಕೆಲಸ ಇದ್ದುದರಿಂದ ಸರಸ್ವತಿಪುರಂ ನಮ್ಮ ಮನೆಯಿಂದ ನಾನು ಮಾತ್ರ ಮೊದಲೇ ಹೊರಟುಬಂದಿದ್ದೆ. ಅಕ್ಕ ಮತ್ತು ತಮ್ಮನಿಗೆ ಬಸ್ಸು ಸಮಯಕ್ಕೆ ಸರಿಯಾಗಿ ಸ್ಟ್ಯಾಂಡಿಗೆ ಬರಲು ಹೇಳಿದ್ದೆ. ಗಂಟೆ ಹತ್ತಾಗುತ್ತಾ ಬಂತು. ಇನ್ನೇನು ಬಸ್ಸು ಹೊರಡಲು ತಯಾರಾಗಿತ್ತು. ಡ್ರೈವರ್ ಬಸ್ಸು ಏರುವುದರಲ್ಲಿದ್ದ. ಆದರೆ ನನ್ನ ಅಕ್ಕ, ತಮ್ಮ ಇನ್ನೂ ಬಂದಿಲ್ಲ. ನಮಗೆ ಅಗತ್ಯವಾಗಿ ಅದಿನ ರಾತ್ರಿಯೇ ಮಂಗಳೂರು ಸೇರಬೇಕಾಗಿತ್ತು. ನನಗೊಂದು ಉಪಾಯ ಹೊಳೆಯಿತು. ಡ್ರೈವರ ಒಬ್ಬ ಮಲೆಯಾಳಿಯೇ. ಕಾಸರಗೋಡಿನವನಾದ ನಾನೂ ಅಲ್ಪ ಸ್ವಲ್ಪ ಒತ್ತಾಯದ ಮಲಯಾಳಿಯೇ. ಡ್ರೈವರ ಹತ್ತಿರ ಹೋಗಿ, "ಡ್ರೈವರೆ, ಬರ್‍ರಿ, ಒರು ಚಾಯ ಕುಟ್ಕ (ಡ್ರೈವರೆ ಬರ್‍ರಿ ಒಂದು ಚಾ ಕುಡಿಯೋಣ") ಇಷ್ಟೆ ಅಂದೆ. ಬೇರೇನೂ ಹೇಳಲಿಲ್ಲ. ಧರ್ಮಾರ್ಥವಾಗಿ ಚಾ ಸಿಕ್ಕಿದ ಆಶ್ಚರ್ಯದ ಆನಂದ ಕೂಡಲೇ ಅವನ ಮುಖದ ಮೇಲೆ ಹಾದು ಹೋಯಿತು. ಕನ್ನಡದ ಮೈಸೂರಿನಲ್ಲಿ ತನ್ನ ಮಾತೃ ಭಾಷೆಯಲ್ಲಿ ಮಾತನಾಡಿಸಿದ ಇವನು ಯಾವನೋ ತನ್ನ ಹಳೆಯ ಆತ್ಮೀಯನೆಂದು ಕೊಂಡು ಭಾಷಾಮಿತ್ರನೊಬ್ಬ ದೊರೆತ ಸಂತೋಷದಿಂದ ನನ್ನ ಹಿಂದೆಯೇ ಬಸ್ ಸ್ಟ್ಯಾಂಡ್ ಹೋಟೇಲಿಗೆ ಬಂದ. ಮಲೆಯಾಳದಲ್ಲಿ ಏನೇನೋ ಹರಟೆ ಕೊಚ್ಚುತ್ತಾ ಸಾವಕಾಶವಾಗಿ ಮಾಣಿಯಲ್ಲಿ ತಿಂಡಿ ಕಾಫಿ ತರಿಸಿ ಮುಗಿಸಿ ನಾವಿಬ್ಬರೂ ಬಂದಾಗ ಸಿಟಿ ಬಸ್ಸಿಗೆ ಕಾದು ಸೋತು ತಡಮಾಡಿಕೊಂಡು ರಿಕ್ಷಾದಲ್ಲಿ ಬಂದ ಅಕ್ಕ, ತಮ್ಮ ಬಂದಿದ್ದರು. ಮನಸ್ಸಿನಲ್ಲೇ "Thank God" ಎಂದೆ. ನನ್ನ ಉಪಾಯವನ್ನು ಕೊನೆಗೂ ತಿಳಿಯದ ಡ್ರೈವರನಿಗೆ ಪುಕ್ಕಟೆ ಚಾ, ತಿಂಡಿ ಸಿಕ್ಕಿದ ತೃಪ್ತಿಯಾದರೆ ನನಗೆ ಒಂದು ರೂಪಾಯಿ ಖರ್ಚಿನಲ್ಲಿ ಮೂವತ್ತು ರೂ.ಗಳನ್ನು ಉಳಿಸಿ ಅವಶ್ಯದ ಪ್ರಯಾಣವನ್ನು ನಿರ್ಧರಿಸಿದಂತೇ ಪ್ರಯಾಣಿಸುವಂತಾಯಿತಲ್ಲ ಎಂಬ ಹಿಗ್ಗು!

—ಪಿ. ಕೆ. ರಾಜಗೋಪಾಲ್

ಮುಗಿಲಿಗೆ ದೀಪ ಹಚ್ಚಿದರು

ನಮ್ಮ ವಿಜ್ಞಾನ ಶಿಕ್ಷಕರೊಬ್ಬರು, ತಮ್ಮ ವಿದ್ಯಾರ್ಥಿ ಜೀವನದಲ್ಲಿ ನಡೆದ ಘಟನೆಯನ್ನು ಹೇಳುತ್ತಿದ್ದರು. ಅದನ್ನು ಅವರ ಮಾತಿನಲ್ಲೇ ಕೇಳಿ:

ನಾನು ಎಂ. ಎಸ್ಸಿಯಲ್ಲಿ ಓದುತ್ತಿದ್ದಾಗ ಪಾಠದಲ್ಲಿ ಒಂದು ನಕ್ಷತ್ರದ ವಿಷಯ ಬಂತು. ಅದನ್ನು ಹೇಳುತ್ತಿದ್ದವರು ಅತಿ ಬುದ್ಧಿವಂತರಾದ ಮರೆಗುಳಿ ಪ್ರೊಫೆಸರರು. ಆ ನಕ್ಷತ್ರದ ಬಗ್ಗೆ ಹೇಳುತ್ತಾ ಅದರ ಗಾತ್ರ, ಪ್ರಕಾಶ, ಭೂಮಿಯಿಂದ ಅದರ ದೂರ ಜ್ಯೋತಿರ್ವರ್ಷ ಎಂದೆಲ್ಲ ವಿವರಿಸುತ್ತಿದ್ದರು. ಆದರೂ ನಮಗೆ ಅದರ ಸ್ಥಾನ ಆಕಾಶದಲ್ಲಿ ಎಲ್ಲಿದೆ ಎಂದು ತಿಳಿಯಲಿಲ್ಲ. ನಾವು ಈ ಬಗ್ಗೆ ಕೇಳಿದೆವು. "ಅದನ್ನು ನೋಡಬೇಕೆಂದರೆ ಈ ರಾತ್ರಿ ಕಾಲೇಜ್ ಆವರಣಕ್ಕೆ ಬನ್ನಿರಿ," ಎಂದು ಹೇಳಿದರವರು. ನಾವೆಲ್ಲ ವಿದ್ಯಾರ್ಥಿಗಳು ಕಾಲೇಜ್ ಆವರಣದಲ್ಲಿ ರಾತ್ರಿ ಅವರು ಹೇಳಿದ ಸಮಯಕ್ಕೆ ಸರಿಯಾಗಿ ಬಂದು ಸೇರಿದೆವು. ಪ್ರೊಫೆಸರ್ "ನಾನು ಇಂದು ಬೆಳಿಗ್ಗೆ ಪಾಠದಲ್ಲಿ ಹೇಳಿದೆನಲ್ಲ ಅದೇ ನೋಡಿ ಆ ನಕ್ಷತ್ರ," ಎಂದು ಆಕಾಶದ ಒಂದುಕಡೆ ಕೈಬೆರಳಿಂದ ನಿರ್ದೇಶಿಸಿದರು ಆದರೆ ನಮಗೆ ಲಕ್ಷಾಂತರ ನಕ್ಷತ್ರಗಳಲ್ಲಿ ಅದು ಹೇಗೆ ತಿಳಿಯಬೇಕು? ನಾವು ಪುನಃ ಕೇಳಿದೆವು, "ನಮಗೆ ತಿಳಿಯಲಿಲ್ಲ. ಇನ್ನೊಮ್ಮೆ ಸ್ಪಷ್ಟವಾಗಿ ತೋರಿಸಿರಿ." ಎಂದು. ಕೂಡಲೆ ಅವರು ಆಕಾಶದ ಕಡೆ ತಮ್ಮ ಕೈಲಿದ್ದ ಟಾರ್ಚನ್ನು ಬೆಳಗಿಸಿ, "ಅದೋ ಅಲ್ಲಿ ನೋಡಿ" ಎಂದರು,

— ಸೀ. ವೆ ವಾದಿರಾಜ

ಅಣುವಿನಿಂದ ವಿದ್ಯುತ್ತು

ಸ. ಅನಂತಸ್ವಾಮಿ

೨೦ನೇ ಶತಮಾನದ ವೈಜ್ಞಾನಿಕ ಸಂಶೋಧನೆಗಳನ್ನು ಪರಿಶೀಲಿಸಿದರೆ ಅಣುಶಕ್ತಿಯಷ್ಟು ಬೇರಾವ ಸಂಶೋಧನೆಯೂ ಮಾನವಕುಲಕ್ಕೆ ದಿಗ್ಭ್ರಮೆಯನ್ನು ಉಂಟು ಮಾಡಿರಲಾರದು. ಅಣು ವಿಭಜನೆಯು ಮಾನವನ ಪ್ರಗತಿಪಥದಲ್ಲಿ ಒಂದು ದೊಡ್ಡ ಮೈಲಿಗಲ್ಲು ಎನ್ನಬಹುದು.

ಒಂದು ದೇಶದ ಆರ್ಥಿಕ ಅಭ್ಯುದಯವನ್ನು ಆ ದೇಶದ ಒಬ್ಬ ನಾಗರಿಕನು ಸರಾಸರಿ ಬಳಸುವ ವಿದ್ಯುಚ್ಛಕ್ತಿಯಿಂದ ಅಳೆಯಬಹುದು. ಜನಜೀವನ ಮಟ್ಟವು ಉತ್ತಮಗೊಳ್ಳಬೇಕಾದರೆ ಅದರ ಗುರುಕಿಲ್ಲಿ ಔದ್ಯೋಗೀಕರಣದಲ್ಲಿದೆ. ದಿ. ಡಾ. ವಿಶ್ವೇಶ್ವರಯ್ಯನವರು ದೇಶಕ್ಕೆ ನೀಡಿದ "ಔದ್ಯೋಗೀಕರಣ ಇಲ್ಲವೇ ಮರಣ" ಎಂಬ ಸಂದೇಶವು ಎಷ್ಟು ಸಮಂಜಸವಾದುದೆಂಬುದು ಸುಸ್ಪಷ್ಟ.

ಔದ್ಯೋಗೀಕರಣಕ್ಕೆ ವಿದ್ಯುಚ್ಛಕ್ತಿಯು ಒಂದು ಅತಿ ಮುಖ್ಯ ಸಾಧನ. ನಮ್ಮ ದೇಶದಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಅಂದರೆ ೧೯೬೧ರಲ್ಲಿ ವಿದ್ಯುತ್ತಿನ ಉತ್ಪಾದನಾ ಶಕ್ತಿಯು ಕೇವಲ ೫.೭ ಮಿಲಿಯನ್ ಕಿಲೋವಾಟ್‌ಗಳಷ್ಟು ಇತ್ತು. ೧೯೬೬ರಲ್ಲಿ ಇದು ೧೦.೮ ಮಿಲಿಯನ್ ಮತ್ತು ೧೯೬೯ರಲ್ಲಿ ೧೨.೮ ಮಿಲಿಯನ್ ಕಿಲೋವಾಟ್‌ಗಳಿಗೂ ಏರಿತು. ಇದು ೧೯೭೪ರಲ್ಲಿ ೨೮.೭ ಮಿಲಿಯನ್ ಕಿಲೋವಾಟ್‌ಗಳಷ್ಟು ಇದ್ದು ೧೯೭೯ರಲ್ಲಿ ೪೬.೨ ಮಿಲಿಯನ್ ಕಿಲೋವಾಟ್‌ಗಳಿಗೆ ಏರುವ ಅಂದಾಜಿದೆ. ಇದೇ ಸುಮಾರಿಗೆ ಅಮೇರಿಕ ಸಂಯುಕ್ತ ಸಂಸ್ಥಾನಗಳ ವಿದ್ಯುಚ್ಛಕ್ತಿಯ ಬಳಕೆಯು ಸುಮಾರು ೬೦೦ ಮಿಲಿಯನ್ ಕಿಲೋವಾಟ್‌ಗಳಷ್ಟು ಏರುವ ಅಂದಾಜು ಇದೆ.

ಭಾರತದಲ್ಲಿ ಈಗ ಉತ್ಪಾದನೆಯಾಗುವ ವಿದ್ಯುತ್ತು ಶೇಕಡ ೪೧ ರಷ್ಟು ಜಲಶಕ್ತಿಯಿಂದಲೂ ಮತ್ತು ಶೇಕಡ ೨ರಷ್ಟು ಡೀಸೆಲ್ ತೈಲದಿಂದಲೂ ತಯಾರಾಗುತ್ತಿದೆ. ಇದರ ಪ್ರಮಾಣವು ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಸುಮಾರು ಶೇಕಡ ೧೯.೪ರಷ್ಟು ಜಲಶಕ್ತಿಯಿಂದಲೂ ಶೇಕಡ ೦.೬ರಷ್ಟು ತೈಲದಿಂದಲೂ ಉತ್ಪನ್ನವಾಗುತ್ತದೆ. ಜಗತ್ತಿನಲ್ಲಿ ದೊರೆಯುವ ಕಲ್ಲಿದ್ದಲಿನ ಪ್ರಮಾಣವು ಕೇವಲ ಕೆಲವೇ ದಶಕಗಳಿಗೆ ಸಾಕಾಗುವಷ್ಟು ಇದೆ ಎಂದು ಅಂದಾಜಮಾಡಲಾಗಿದೆ. ಈ ರೀತಿ ಕೇವಲ ಸೀಮಿತ ಪ್ರಮಾಣದಲ್ಲಿ ದೊರೆಯುವ ಕಲ್ಲಿದ್ದಲನ್ನು ಉರಿಸಿ ಉಷ್ಣೋತ್ಪತ್ತಿಯನ್ನು ಮಾಡುವ ಬದಲು ಅದರ ಹೆಚ್ಚಿನ ಅವಶ್ಯಕತೆ ಇರುವ ರಸಾಯನಿಕ ಮತ್ತು ಧಾತು ಸಂಬಂಧಿತ (Metallurgical) ಉದ್ಯೋಗ

ಗಳಿಗಾಗಿ ಮೀಸಲಾಗಿ ಇಡುವುದು ಮೇಲು. ಈ ಕಾರಣದಿಂದ ಉಷ್ಣೋತ್ಪತ್ತಿಗಾಗಿ ಅನ್ಯ ಮಾರ್ಗದ ಅನ್ವೇಷಣೆಯು ಅಪರಿಹಾರ್ಯ ವಾಯಿತು. ಇದಕ್ಕೆ ದೊರೆತ ಅತಿ ಸಮಂಜಸ ಉತ್ತರವೆಂದರೆ ಅಣುಶಕ್ತಿ.

ಅಣುಶಕ್ತಿಯನ್ನು ವಿದ್ಯುದುತ್ಪಾದನೆಗೆ ಬಳಸುವ ಯೋಜನೆಯು ೧೯೫೦ರಲ್ಲಿ ಜನ್ಮ ತಾಳಿತು. ಬೀಜಾಣು (nucleus) ಗಳನ್ನೇ ವಿಭಜಿಸುವಾಗಲೂ ಮತ್ತು ಅವುಗಳನ್ನು ಒಗ್ಗೂಡಿಸುವಾಗಲೂ ಬೃಹತ್ಪ್ರಮಾಣದ ಉಷ್ಣ ಶಕ್ತಿಯು ಉತ್ಪತ್ತಿಯಾಗುವುದು ಕಂಡು ಬಂದಿತು. ಈ ಶಕ್ತಿಯನ್ನು ಬಳಸಿಕೊಂಡು ವಿದ್ಯುತ್ತನ್ನು ಉತ್ಪಾದಿಸಬಹುದು.

ಬೀಜಾಣು ವಿಭಜನೆ (Nuclear fission)ಯ ರೋಮಾಂಚಕ ಕತೆಯು ೧೮೯೬ರಲ್ಲಿ ಆರಂಭವಾಯಿತೆನ್ನಬಹುದು. ಹೆನ್ರಿ ಬೆಕ್ವೆರೆಲ್ ಎಂಬ ಫ್ರೆಂಚ್ ವಿಜ್ಞಾನಿಯು ಯುರೇನಿಯಂ ಎಂಬ ಮೂಲ ವಸ್ತುವಿನಲ್ಲಿ ಕಿರಣೋತ್ಸಾರ (Radioactivity)ದ ಗುಣ ಗಳಿರುವುದನ್ನು ಕಂಡುಹಿಡಿದನು. ೧೮೯೮ರಲ್ಲಿ ಮೇಡಂ ಕ್ಯೂರಿ ಮತ್ತ ಪಿಯರಿ ಕ್ಯೂರಿ ದಂಪತಿಗಳು ರೇಡಿಯಂ ಮತ್ತು ಪೋಲೋ ನಿಯಂ ಎಂಬ ಇನ್ನೂ ಎರಡು ಕಿರಣೋ-ತ್ಸಾರೀ ವಸ್ತುಗಳನ್ನು ಕಂಡುಹಿಡಿದರು. ಈ ಕಿರಣೋತ್ಸಾರಿ ವಸ್ತುಗಳು ತಾವಾಗಿಯೇ ಧನವಿದ್ಯುದಂಶ (Positive charge) ಯುಕ್ತವಾದ ಆಲ್ಫಾಕಣ (Alpha particle) ಗಳನ್ನೂ, ಋಣ ವಿದ್ಯುದಂಶ (Negative charge) ಯುಕ್ತವಾದ ಬೀಟಾ ಕಣ (Beta particle) ಗಳನ್ನೂ ಹಾಗೂ ವಿದ್ಯುದಂಶ ರಹಿತ (Neutral) ವಾದ ಗಾಮಾಕಣ (Gamma particle) ಗಳನ್ನೂ ಹೊರಸೂಸುವವು. ಸುಪ್ರಸಿದ್ಧ ಬ್ರಿಟಿಷ್ ವಿಜ್ಞಾನಿ ಅರ್ನೆಸ್ಟ್ ರೂದರ್-ಫರ್ಡ್ ಮತ್ತು ಆತನ ಅನುಯಾಯಿ ರಾಯ್ಡ್ಸ್ ಇವರು ಆಲ್ಫಾ ಕಣವು ಹೀಲಿಯಂ (Helium) ಅಣುವಿನ ಬೀಜಾಣುವೆಂದು ಸಿದ್ಧಪಡಿಸಿದರು. ಈ ಆಲ್ಫಾಕಣವು ಸೆಕೆಂಡಿಗೆ ಸುಮಾರು ೧೬೦೦೦ ಕಿಲೋ ಮೀಟರುಗಳ ವೇಗದಿಂದ ಸಾಗುವುದು ಹಾಗೂ ಋಣ ವಿದ್ಯುದಂಶಯುಕ್ತವಾದ (Electron) ಕಣಕ್ಕಿಂತಲೂ ಸುಮಾರು ೭೩೦೦ ಪಟ್ಟು ತೂಕವಾಗಿರುವುದು. ೧೯೧೦ರಲ್ಲಿ ರೂದರ್ ಫರ್ಡನು ಆಲ್ಫಾಕಣದ ಸಹಾಯದಿಂದ ಸಸಾರಜನಕ (Nitrogen)ದ ಬೀಜಾಣುವನ್ನು ಭೇದಿಸಿ ಅಣುವಿನ ರಚನೆಯಲ್ಲಿ ಆದ ಬದ-ಲಾವಣೆಯನ್ನು ಅಭ್ಯಸಿಸಿದನು. ಅಣುವಿನ ರಚನಾ ಕ್ರಮವನ್ನು ಕೃತಕ ರೀತಿಯಲ್ಲಿ ಬದ ಲಾಯಿಸಲು ಮಾಡಿದ ಪ್ರಯೋಗಗಳಲ್ಲಿ ಇದು ಮೊದಲನೆಯ ಯಶಸ್ವಿ ಪ್ರಯೋಗವೆನ್ನ ಬಹುದು.

ರೂದರ್‌ಫರ್ಡನು ೧೯೧೧ರಲ್ಲಿ ಅಣುವಿನ ರಚನೆಯ ಕೆಲವು ತತ್ವಗಳನ್ನು ಪ್ರತಿಪಾದಿಸಿ ದನು. ಇವುಗಳ ಪ್ರಕಾರ ವಸ್ತು(Matter) ವಿನಲ್ಲಿ ಅಸಂಖ್ಯ ಅಣುಗಳಿದ್ದು ಪ್ರತಿ ಅಣು ವಿನಲ್ಲಿಯೂ ಒಂದು ಬೀಜಾಣುವಿರುತ್ತದೆ. ಈ ಬೀಜಾಣುವಿನಲ್ಲಿ ಧನವಿದ್ಯುದಂಶಯುಕ್ತ ವಾದ (Positively charged) ಪ್ರೋಟಾನ್ ಕಣಗಳು ಮತ್ತು ವಿದ್ಯುದಂಶರಹಿತವಾದ ನ್ಯೂಟ್ರಾನ್ ಎಂಬ ಕಣಗಳೂ ಒಟ್ಟಿಗೆ ಕೂಡಿರುತ್ತವೆ. ಈ ಪ್ರೋಟಾನ್‌ಗಳು ನ್ಯೂಟ್ರಾನ್‌ಗಳನ್ನು ಅತ್ಯಂತ ಬಲವಾಗಿ ಆಕರ್ಷಿಸಿರುತ್ತವೆ. ಈ ಬೀಜಾಣುವಿನ ಸುತ್ತಲೂ ಋಣ ವಿದ್ಯುದಂಶಯುಕ್ತವಾದ (Negatively charged) ಎಲೆಕ್ಟ್ರಾನ್ ಕಣಗಳು ತಮ್ಮದೇ ಆದ ಕಕ್ಷೆಯಲ್ಲಿ ಸುತ್ತು ತ್ತಿರುತ್ತವೆ. ಈ ರೀತಿಯ ಬೀಜಾಣುವನ್ನು ವಿಭಜಿಸಿದಾಗ ಉಷ್ಣೋತ್ಪತ್ತಿಯಾಗುವುದು ಕಂಡುಬಂದಿತು. ಈ ವಿಭಜನೆಯೇ ಅಣು ಶಕ್ತಿಗೆ ಮೂಲ.

ಪರಮಾಣು ವಿಭಜನೆಯು 'ವಸ್ತುವು ಅವಿನಾಶಿ' ಎಂಬ ಸಿದ್ಧಾಂತವನ್ನು ಸರಿಯಲ್ಲ ವೆಂದು ತೋರಿಸಿದೆ. ಬೀಜಾಣುವಿನ ವಿಭ ಜನೆಯ ನಂತರ ಆದರ ತೂಕ ಮೊದಲಿ ಗಿಂತಲೂ ಕಡಿಮೆಯಾದುದು ಕಂಡು ಬಂದಿತು. ಉಷ್ಣೋತ್ಪತ್ತಿಯೇ ಇದಕ್ಕೆ

ಕಾರಣವೆಂದು ಹೇಳಬಹುದು. ಮತ್ತು ಕ್ರಿಯಾಶಕ್ತಿ (Energy) ಗೂ ತೂಕವಿದೆ ಎಂದಾಯಿತು. ಈ ಕ್ರಾಂತಿಕಾರಕ ಸಿದ್ಧಾಂತವನ್ನು ಮಂಡಿಸಿದವನು ಜಗತ್ಪ್ರಸಿದ್ಧ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್.

ಬೀಜಾಣುವಿನಲ್ಲಿರುವ ಪ್ರೋಟಾನ್‌ಗಳ ಸಂಖ್ಯೆಗೆ 'ಅಣುಸಂಖ್ಯೆ' (atomic number) ಎಂದೂ ಮತ್ತು ಅದರಲ್ಲಿರುವ ನ್ಯೂಟ್ರಾನ್‌ಗಳ ಸಂಖ್ಯೆಗೆ 'ನ್ಯೂಟ್ರಾನ್ ಸಂಖ್ಯೆ' (neutron number) ಎಂದು ಹೆಸರು. ಈ ಎರಡೂ ಸಂಖ್ಯೆಗಳ ಮೊತ್ತಕ್ಕೆ 'ವಸ್ತು ಸಂಖ್ಯೆ' (mass number) ಎಂದು ಹೆಸರು. ${}_{೧೧}Na^{೨೩}$ ಎಂಬ ಸೋಡಿಯಂ ಬೀಜಾಣುವಿನಲ್ಲಿ ೧೧ ಪ್ರೋಟಾನುಗಳೂ ಮತ್ತು ೧೨ ನ್ಯೂಟ್ರಾನುಗಳೂ ಇವೆ. ಅವುಗಳ ಮೊತ್ತ ೨೩. ಅಂತೆಯೇ ${}_{೧೧}Na^{೨೧}$ ಮತ್ತು ${}_{೧೧}Na^{೨೨}$ ಎಂಬ ಬೀಜಾಣುಗಳೂ ಇರುವವು. ಇವೆಲ್ಲವುಗಳಲ್ಲೂ ಪ್ರೋಟಾನ್ ಸಂಖ್ಯೆ (೧೧) ಸಮನಾಗಿದ್ದು ನ್ಯೂಟ್ರಾನ್‌ಗಳ ಸಂಖ್ಯೆ ಬದಲಾಯಿಸಿದೆ. ಒಂದೇ ವಸ್ತು ಸಂಖ್ಯೆಯುಳ್ಳ ಅಣುಗಳ ಗುಂಪಿಗೆ 'ಸಮಸ್ಥಾನಿಕ' (Isotope) ಎಂದು ಹೆಸರು. ಎರಡು ಸಮಸ್ಥಾನಿಕಗಳ ಮಧ್ಯೆ ಇರುವ ವ್ಯತ್ಯಾಸ ಅವುಗಳ ನ್ಯೂಟ್ರಾನ್ ಸಂಖ್ಯೆಗಳಲ್ಲಿರುವ ವ್ಯತ್ಯಾಸವಾಗಿರುತ್ತದೆ.

ರೂದರ್‌ಫರ್ಡರ ಪ್ರಯೋಗದಲ್ಲಿ ಸಾರಜನಕದ ಬೀಜಾಣುವನ್ನು ಆಲ್ಫಾಕಣದಿಂದ ಭೇದಿಸಿದಾಗ ಕೆಳಗೆ ಕಂಡ ಬೀಜಾಣು ಪ್ರಕ್ರಿಯೆ (nuclear reaction) ಉಂಟಾಯಿತು. *

ಅಂದರೆ ಆಲ್ಫಾಕಣವು (${}_{೨}He^{೪}$) ಸಾರಜನಕ (${}_{೭}N^{೧೪}$)ದ ಬೀಜಾಣುವನ್ನು ಭೇದಿಸಿದಾಗ ಮೊದಲು ಅಸ್ಥಿರವಾದ ಫ್ಲೋರೀನ್ (${}_{೯}F^{೧೮}$) ಬೀಜಾಣುವು ನಿರ್ಮಾಣವಾಯಿತು. ಅನಂತರ ಇದು ಪರಿವರ್ತನಗೊಂಡು ಆಮ್ಲಜನಕದ ಬೀಜಾಣು (${}_{೮}O^{೧೭}$), ಒಂದು ಪ್ರೋಟಾನ್ (${}_{೧}H^{೧}$) ಮತ್ತು ಉಷ್ಣತೆ (Q)ಯೂ ಉಂಟಾದವು. ಈ ರೀತಿ ಸಾರಜನಕದ ಬೀಜಾಣು ವಿಭಜನೆಯಿಂದ ಉಷ್ಣತೆಯೂ ಉತ್ಪತ್ತಿಯಾದಂತಾಯಿತು.

ಆಲ್ಫಾಕಣವು ಒಂದು ಬೀಜಾಣುವನ್ನು ಭೇದಿಸಿದಾಗ ಪ್ರತಿಯೊಂದು ಪ್ರಕ್ರಿಯೆಯಲ್ಲೂ ಪ್ರೋಟಾನ್ ಕಣವು ಹೊರ ಬೀಳುವುದೆಂದು ಹೇಳಲಾಗುವುದಿಲ್ಲ. ೧೯೩೨ ರಲ್ಲಿ ಚಾಡ್ವಿಕ್ ಎಂಬ ಇನ್ನೊಬ್ಬ ಬ್ರಿಟಿಷ್ ವಿಜ್ಞಾನಿಯು ಆಲ್ಫಾಕಣದಿಂದ ಬೆರಿಲಿಯಂ ಬೀಜಾಣುವನ್ನು ಭೇದಿಸಿದಾಗ ಪ್ರೋಟಾನಿಗೆ ಬದಲಾಗಿ ನ್ಯೂಟ್ರಾನುಗಳು ಹೊರಬಿದ್ದವು. ‡

ಈ ಪ್ರಕ್ರಿಯೆಯಲ್ಲಿ ಮೊದಲು ಅಸ್ಥಿರವಾದ ಇಂಗಾಲದ ಬೀಜಾಣು (${}_{೬}C^{೧೩}$)ವು ಉತ್ಪತ್ತಿಯಾಯಿತು. ಅದು ಅನಂತರ ಪರಿವರ್ತನಗೊಂಡು ಸಮಸ್ಥಾನಿಕವಾದ ಇಂಗಾಲದ ಇನ್ನೊಂದು ಬೀಜಾಣು (${}_{೬}C^{೧೨}$)ವೂ ಮತ್ತು ಒಂದು ನ್ಯೂಟ್ರಾನ್ (${}_{೦}n^{೧}$) ಕಣವೂ ಉತ್ಪತ್ತಿಯಾದವು.

ಇದರಂತೆಯೇ ಬೋರಾನ್ (Boron) ಬೀಜಾಣುವನ್ನು ಆಲ್ಫಾಕಣದಿಂದ ಭೇದಿಸಿದಾಗ ಕೆಳಗೆ ಕಂಡ ಪ್ರಕ್ರಿಯೆಗಳು ಉಂಟಾಗುತ್ತವೆ.§

---

* ${}_{೨}He^{೪} + {}_{೭}N^{೧೪} \rightarrow ({}_{೯}F^{೧೮}) \rightarrow {}_{೮}O^{೧೭} + {}_{೧}H^{೧} + Q$ —(೧)

‡ ${}_{೪}Be^{೯} + {}_{೨}He^{೪} \rightarrow ({}_{೬}C^{೧೩}) \rightarrow {}_{೬}C^{೧೨} + {}_{೦}n^{೧}$ —(೨)

§ i) ${}_{೫}B^{೧೦} + {}_{೨}He^{೪} \rightarrow ({}_{೭}N^{೧೪}) \rightarrow ({}_{೭}N^{೧೩}) + {}_{೦}n^{೧}$

ii) $({}_{೭}N^{೧೩}) \rightarrow {}_{೬}C^{೧೩} + {}_{+೧}e^{೦}$ —(೩)

ಈ ಪ್ರಕ್ರಿಯೆಗಳಲ್ಲಿ ಮೊದಲು ಒಂದು ನ್ಯೂಟ್ರಾನ್ (${}_{೦}n^{೧}$) ಮತ್ತು ಅನಂತರ ಒಂದು ಪಾಸಿಟ್ರಾನ್ (${}_{+೧}e^{೦}$) ಹೊರ ಚಿಮ್ಮುವುದು ಕಂಡುಬರುವುದು.

ಮೇಲ್ಕಂಡ ಪ್ರಕ್ರಿಯೆಗಳಲ್ಲಿರುವ ಕುತೂಹಲಕಾರಿಯಾದ ಅಂಶವೆಂದರೆ ಒಂದು ವಸ್ತುವಿನ ಬೀಜಾಣುವನ್ನು ಆಲ್ಫಾಕಣದಿಂದ ಭೇದಿಸಿದಾಗ ಪ್ರೋಟಾನ್, ನ್ಯೂಟ್ರಾನ್ ಹಾಗೂ ಪಾಸಿಟ್ರಾನ್‌ಗಳು ಹೊರಚಿಮ್ಮುದುದು. ಇದು ಕೃತಕ ರೀತಿಯ ಕಿರಣೋತ್ಸಾರವಾಗಿದ್ದು ಇದನ್ನು 'ಪ್ರೇರಿತ ಕಿರಣೋತ್ಸಾರ (induced radio-activity) ಎಂದು ಕರೆಯಬಹುದು.

ಈ ರೀತಿಯ ಬೀಜಾಣು ವಿಭಜನೆಗೆ ಹೆಚ್ಚು ಕಾರ್ಯಶಕ್ತಿ (high energy) ಮತ್ತು ವೇಗವುಳ್ಳ ಕಣವೊಂದು ಬೇಕಾಗುವುದು, ಏಕೆಂದರೆ ಧನವಿದ್ಯುದಂಶಯುಕ್ತವಾದ ಬೀಜಾಣುವು ಅದೇ ವಿದ್ಯುದಂಶದ ಕಣವನ್ನು ವಿರೋಧಿಸುವುದು ಸಹಜ. ಈ ಕಾರಣದಿಂದಲೇ ಮೊದಲು ಹೆಚ್ಚು ತೂಕ ಮತ್ತು ವೇಗವುಳ್ಳ ಆಲ್ಫಾಕಣವನ್ನು ಈ ವಿರೋಧವನ್ನು ಲೆಕ್ಕಿಸದೆ ಬೀಜಾಣುವನ್ನು ಭೇದಿಸಲು ಉಪಯೋಗಿಸಲಾಯಿತು. ಇದಕ್ಕಾಗಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಲಾರೆನ್ಸ್ ಮತ್ತು ಲಿವಿಂಗ್‌ಸ್ಟನ್ ಎಂಬ ಇಬ್ಬರು ವಿಜ್ಞಾನಿಗಳು ಸೈಕ್ಲೋಟ್ರಾನ್ ಎಂಬ ಯಂತ್ರವನ್ನು ತಯಾರಿಸಿದರು. ಇದರಲ್ಲಿ ಜಲಜನಕ, ಹೀಲಿಯಂ ಮುಂತಾದ ವಸ್ತುಗಳ ವಿದ್ಯುದಂಶಯುಕ್ತವಾದ ಕಿರಣಗಳನ್ನು, ಹೆಚ್ಚುತ್ತಿರುವ ತ್ರಿಜ್ಯವುಳ್ಳ ಪರಿಧಿ (widening spiral) ಯಲ್ಲಿ ವೇಗದಿಂದ ಸುತ್ತಿಸಿ ಸಾಕಷ್ಟು ಕಾರ್ಯಶಕ್ತಿಯ ಮಟ್ಟವನ್ನು ತಲುಪಿದೊಡನೆ ಆ ಕಣವನ್ನು ಬೀಜಾಣು ವಿಭಜನೆಗಾಗಿ ಉಪಯೋಗಿಸಿದರು. ಇಲ್ಲಿನಾಯ್ ವಿಶ್ವವಿದ್ಯಾನಿಲಯದ ಡಿ. ಡಬ್ಲ್ಯು. ಕೆರ್ಸ್ಟ್ ಎಂಬ ಇನ್ನೊಬ್ಬ ಅಮೆರಿಕನ್ ವಿಜ್ಞಾನಿಯು ಬೀಟಾಟ್ರಾನ್ (Betatron) ಎಂಬ ಬೇರೊಂದು ಯಂತ್ರವನ್ನು ತಯಾರಿಸಿ ಅದರಲ್ಲಿ ಎಲೆಕ್ಟ್ರಾನ್ ಕಣವನ್ನು ವೇಗದಿಂದ ಸುತ್ತಿಸಿ ಅನಂತರ ಅದನ್ನು ಬೀಜಾಣು ವಿಭಜನೆಗೆ ಉಪಯೋಗಿಸಿದನು. ಇದರಲ್ಲಿ ಎಲೆಕ್ಟ್ರಾನ್ ಕಣಕ್ಕೆ ಬೀಜಾಣುವಿನ ವಿರೋಧವಿಲ್ಲದಿದ್ದರೂ, ಎಲೆಕ್ಟ್ರಾನಿನ ತೂಕ ಕಡಿಮೆಯಾದ್ದರಿಂದ ವಿಭಜನೆಗೆ ಅತಿ ಹೆಚ್ಚಿನ ವೇಗವು ಬೇಕಾಗುವುದು. ಈ ಎರಡೂ ಯಂತ್ರಗಳೂ ಬೃಹದಾಕಾರದವೂ ಮತ್ತು ಹೆಚ್ಚಿನ ವೆಚ್ಚದವೂ ಆದ ಯಂತ್ರಗಳಾಗಿವೆ.

ಆಲ್ಫಾ ಮತ್ತು ಬೀಟಾ ಕಣಗಳ ಬದಲಾಗಿ ವಿದ್ಯುದಂಶರಹಿತವಾದ ನ್ಯೂಟ್ರಾನನ್ನು ಬೀಜಾಣು ವಿಭಜನೆಗೆ ಬಳಸುವ ಯೋಚನೆ ಅಣು ವಿಚ್ಛೇದನದಲ್ಲಿ ಪ್ರಮುಖವಾದ ಹೆಜ್ಜೆ ಎನ್ನಬಹುದು. ಇದರಿಂದ ಬೀಜಾಣುವಿನ ಪ್ರೋಟಾನ್ ಮತ್ತು ಎಲೆಕ್ಟ್ರಾನ್‌ಗಳು ಭೇದಿಸಲು ಬರುವ ಕಣವನ್ನು ವಿರೋಧಿಸುವ ಪ್ರಮೇಯವು ಇರುವುದಿಲ್ಲ. ಇದರಿಂದಾಗಿ ಸೈಕ್ಲೋಟ್ರಾನ್ ಅಥವಾ ಬೀಟಾಟ್ರಾನ್‌ಗಳಂಥ ಅಗಾಧ ವೆಚ್ಚದ ಯಂತ್ರಗಳನ್ನು ಬಳಸಬೇಕಾಗುವುದಿಲ್ಲ. ನ್ಯೂಟ್ರಾನನ್ನು ಉಪಯೋಗಿಸುವುದರಿಂದ ಆಗುವ ಪ್ರಕ್ರಿಯೆ ಕೆಳಗೆ ಕಂಡಂತೆ ಇರುವುದು.

$${}_{೫}B^{೧೦} + {}_{೦}n^{೧} \rightarrow ({}_{೫}B^{೧೧}) \rightarrow {}_{೩}Li^{೭} + {}_{೨}He^{೪} + Q \text{—(೪)}$$

ಮೇಲ್ಕಂಡ ಪ್ರಕ್ರಿಯೆಯಲ್ಲಿ ಬೋರಾನ್ ಬೀಜಾಣು (${}_{೫}B^{೧೦}$) ವನ್ನು ನ್ಯೂಟ್ರಾನ್ (${}_{೦}n^{೧}$) ಇಂದ ಭೇದಿಸಿದಾಗ ಸಮಸ್ಥಾನಿಕವಾದ ಮತ್ತು ಅಸ್ಥಿರವಾದ ಇನ್ನೊಂದು ಬೋರಾನ್ ಬೀಜಾಣು (${}_{೫}B^{೧೧}$) ವು ನಿರ್ಮಾಣವಾಗುವುದು. ಇದು ಅನಂತರ ಲಿಥಿಯಂ (${}_{೩}Li^{೭}$) ಮತ್ತು ಹೀಲಿಯಂ ಬೀಜಾಣು (${}_{೨}He^{೪}$) ಗಳಾಗಿ ಮಾರ್ಪಟ್ಟು

ಉಷ್ಣತೆ (Q) ಯು ಉತ್ಪತ್ತಿಯಾಗುವುದು. ಇದೇ ರೀತಿಯಲ್ಲಿ ನೈಸರ್ಗಿಕವಾಗಿ ಮತ್ತು ಸುಲಭತರವಾಗಿ ದೊರೆಯುವ ಯುರೇನಿಯಂ ಬೀಜಾಣುವಿನ ಪ್ರಕ್ರಿಯೆಯನ್ನು ಪರಿಶೀಲಿಸಬಹುದು.

ಸಾಧಾರಣವಾಗಿ ದೊರೆಯುವ ಯುರೇನಿಯಂನಲ್ಲಿ ${}_{೯೨}U^{೨೩೮}$, ${}_{೯೨}U^{೨೩೫}$ ಮತ್ತು ${}_{೯೨}U^{೨೩೪}$ ಎಂಬ ಸಮಸ್ಥಾನಿಕಗಳು ಇರುತ್ತವೆ. ಇವುಗಳನ್ನು U೨೩೮, ಮತ್ತು U೨೩೫ U೨೩೪ ಎಂಬ ಸಂಕೇತಗಳಿಂದ ಗುರುತಿಸಬಹುದು. ಇದರಲ್ಲಿ U೨೩೮ ರ ಅಂಶವು ಶೇಕಡ ೯೯.೩ ರಷ್ಟು ಮತ್ತು U೨೩೫ ರ ಅಂಶವು ಶೇಕಡ ೦.೭ ರಷ್ಟು ಮತ್ತು U೨೩೪ ರ ಅಂಶವು ಅತ್ಯಲ್ಪವೂ ಇರುವುದು. U೨೩೮ ಅನ್ನು ಭೇದಿಸಲು ಹೆಚ್ಚಿನ ವೇಗದ ನ್ಯೂಟ್ರಾನ್ ಬೇಕಾಗುವುದು. ಆದರೆ U೨೩೫ ಅನ್ನು ಅಲ್ಪವೇಗದ ನ್ಯೂಟ್ರಾನಿನಿಂದಲೂ ಭೇದಿಸಬಹುದು.

೧೯೩೪ ರಲ್ಲಿ ಜಗತ್ಪ್ರಸಿದ್ಧ, ನೋಬೆಲ್ ಬಹುಮಾನ ವಿಜೇತ ಇಟಾಲಿಯನ್–ಅಮೇರಿಕನ್ ವಿಜ್ಞಾನಿ ಡಾ. ಎನ್ರಿಕೊ ಫರ್ಮಿ ಮತ್ತು ಆತನ ಅನುಯಾಯಿಗಳು U೨೩೮ ಅನ್ನು ವೇಗದ ನ್ಯೂಟ್ರಾನಿನಿಂದ ವಿಭಜಿಸಿದರು.

(${}_{೫೬}Ba^{೧೪೩}$) ಮತ್ತು ಕ್ರಿಪ್ಟಾನ್ (${}_{೩೬}Kr^{೯೪}$) ಭೀಜಾಣುಗಳಾಗಿ ಮಾರ್ಪಟ್ಟು ಎರಡು ನ್ಯೂಟ್ರಾನುಗಳೂ ಮತ್ತು ಉಷ್ಣತೆಯೂ ಉತ್ಪನ್ನವಾದವು. ಈ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ವಿಭಜನೆಗಾಗಿ ಒಂದು ನ್ಯೂಟ್ರಾನನ್ನು ಉಪಯೋಗಿಸಿದ್ದು. ಪ್ರಕ್ರಿಯೆಯ ನಂತರ ಎರಡು ನ್ಯೂಟ್ರಾನುಗಳೂ ಮತ್ತು ಉಷ್ಣತೆಯೂ ಉತ್ಪನ್ನವಾಗಿರುವುದು.

ಭೇದಿಸಲು ಬರುವ ನ್ಯೂಟ್ರಾನಿನ ಪ್ರತಿ ಆಘಾತದಲ್ಲಿಯೂ ಮೇಲಿನ ಪ್ರಕ್ರಿಯೆಯು ಸಂಭವಿಸುವುದೆಂದು ಹೇಳಲಾಗುವುದಿಲ್ಲ. ಅನೇಕ ಸಲ ಈ ಸಂಘರ್ಷಣೆಯ ನಂತರವೂ ಯುರೇನಿಯಂ ಬೀಜಾಣುವಿನ ವಿಭಜನೆಯಾಗದೆ ನ್ಯೂಟ್ರಾನಿನ ಕ್ರಿಯಾಶಕ್ತಿಯ ಮಟ್ಟ (energy level) ಕಡಿಮೆಯಾಗುತ್ತಾ ಹೋಗಿ ಕೊನೆಗೆ ಅದು ಯುರೇನಿಯಂ ಬೀಜಾಣುವಿನಲ್ಲಿ ಬಂಧಿತವಾಗುವುದು. ಆಗ ಕೆಳಗೆ ಕಂಡ ಪ್ರಕ್ರಿಯೆಗಳು ಸಂಭವಿಸಬಹುದು.

$$\text{i) } {}_{೯೨}U^{೨೩೮} + {}_{0}n^{೧} \rightarrow ({}_{೯೨}U^{೨೩೯}) \rightarrow {}_{೯೨}U^{೨೩೯} + \gamma \text{ ಕಿರಣಗಳು}$$
$$\text{ii) } {}_{೯೨}U^{೨೩೯} \rightarrow {}_{೯೩}Np^{೨೩೯} + \beta^{-}$$
$$\text{iii) } {}_{೯೩}Np^{೨೩೯} \rightarrow {}_{೯೪}Pu^{೨೩೯} + \beta^{-}$$
$$\text{vi) } {}_{೯೪}Pu^{೨೩೯} \rightarrow {}_{೯೨}U^{೨೩೫} + {}_{೨}He^{೪} \qquad \text{—(೬)}$$

ಮೊದಲನೆಯ ಪ್ರಕ್ರಿಯೆಯಲ್ಲಿ ಯುರೇನಿಯಂ ಬೀಜಾಣುವಿನಲ್ಲಿ ನ್ಯೂಟ್ರಾನ್ ಕಣವು ಲೀನವಾದಾಗ ಯುರೇನಿಯಂ ಸಮಸ್ಥಾನಿಕ (U೨೩೯)ವು ನಿರ್ಮಿತವಾಗಿ ಗ್ಯಾಮಾ ಕಿರಣಗಳು ಹೊರಚಿಮ್ಮುವವು. ಎರಡನೆಯ

$${}_{೯೨}U^{೨೩೮} + {}_{0}n^{೧} \rightarrow ({}_{೯೨}U^{೨೩೯}) \rightarrow {}_{೫೬}Ba^{೧೪೩} + {}_{೩೬}Kr^{೯೪} + {}_{0}n^{೧} + {}_{0}n^{೧} + Q \qquad \text{—(೫)}$$

U ೨೩೮ ಅನ್ನು ವೇಗದ ನ್ಯೂಟ್ರಾನಿನಿಂದ ಭೇದಿಸಿದಾಗ ಮೊದಲು U೨೩೯ ಎಂಬ ಅಸ್ಥಿರವಾದ ಯುರೇನಿಯಂ ಸಮಸ್ಥಾನಿಕವು ತಯಾರಾಯಿತು. ಇದು ಅನಂತರ ಬೇರಿಯಂ

ಪ್ರಕ್ರಿಯೆಯಲ್ಲಿ ಈ ಅಸ್ಥಿರವಾದ U೨೩೯ ಸಮಸ್ಥಾನಿಕವು ರೂಪಾಂತರಗೊಂಡು ನೆಪ್ಟ್ಯೂನಿಯಂ ಬೀಜಾಣು (Np೨೩೯)ವು ನಿರ್ಮಿತವಾಗಿ ಬೀಟಾ ಕಣಗಳು

ಹೊರಬೀಳುವವು. ಈ ನೆಪ್ಚ್ಯೂನಿಯಂ ಬೀಜಾಣುವು ಮತ್ತೆ ರೂಪಾಂತರಗೊಂಡು ಪ್ಲುಟೋನಿಯಂ (Pu೨೩೯) ನಿರ್ಮಿತವಾಗಿ ಬೀಟಾ ಕಣಗಳು ಹೊರಬೀಳುವವು. ಪುನಃ ಈ ಪ್ಲುಟೋನಿಯಂ ಬೀಜಾಣುವು ರೂಪಾಂತರ ಗೊಂಡು ಸುಲಭವಾಗಿ ವಿಭಜಿಸಬಹುದಾದ U೨೩೫ ಬೀಜಾಣುವೂ ಮತ್ತು ಆಲ್ಫಾ ಕಣವೂ ($_{೨}He^{೪}$) ನಿರ್ಮಿತವಾಗುವುವು. ಮೇಲ್ಕಂಡ ಪ್ರಕ್ರಿಯೆಗಳಲ್ಲಿ ಉಷ್ಣತೆಯು ಉತ್ಪತ್ತಿಯಾಗದಿರುವುದೂ ಮತ್ತು ಅಲ್ಪ ವೇಗದ ನ್ಯೂಟ್ರಾನಿನಿಂದ ವಿಭಜಿಸಲಾಗದ U೨೩೮ ಬೀಜಾಣುವಿನಿಂದ ಸುಲಭವಾಗಿ ವಿಭಜಿಸಬಹುದಾದ U೨೩೫ ಬೀಜಾಣುವು ತಯಾರಾಗುವುದೂ ಗಮನಿಸಬೇಕಾದ ಅಂಶಗಳು.

ಯುರೇನಿಯಂ ಬೀಜಾಣುವಿನ ವಿಭಜನೆಯು ಆದ ನಂತರ ಪ್ರಕ್ರಿಯೆಯು ನಿಲ್ಲದೆ ಉಷ್ಣತೆಯು ಸತತವಾಗಿ ನಿರ್ಮಾಣವಾಗಬೇಕಾದುದು ಮುಖ್ಯವಾದ ಅಂಶ. ಪ್ರಕ್ರಿಯೆ-೫ ರಲ್ಲಿ ಎರಡು ನ್ಯೂಟ್ರಾನುಗಳು ವಿಭಜನೆಯ ನಂತರ ಉದ್ಭವಿಸುವುದನ್ನು ಗಮನಿಸಬೇಕು. ಈ ಪ್ರತಿಯೊಂದು ನ್ಯೂಟ್ರಾನ್ ಕಣವೂ ಇನ್ನೊಂದು ಯುರೇನಿಯಂ ಬೀಜಾಣುವನ್ನು ಭೇದಿಸಿದಾಗ ಮತ್ತೆ ಪ್ರತಿ ನ್ಯೂಟ್ರಾನಿಗೂ ಎರಡು ಹೊಸ ನ್ಯೂಟ್ರಾನುಗಳು ಜನಿಸುವುವು ಮತ್ತು ಉಷ್ಣೋತ್ಪತ್ತಿಯು ಹಿಂದಿನ ಪ್ರಕ್ರಿಯೆಗಿಂತ ಇಮ್ಮಡಿಯಾಗುವುದು. ಈ ರೀತಿಯ ಸರಪಣಿ ಪ್ರಕ್ರಿಯೆ (Chain reaction) ಯು ಮುಂದುವರೆದರೆ ಅಪಾರವಾದ ಉಷ್ಣತೆಯು ಉತ್ಪತ್ತಿಯಾಗುವುದು. ಪ್ರಕ್ರಿಯೆಯು ಮುಂದುವರೆಯಲು ಕನಿಷ್ಠಪಕ್ಷ ಒಂದಾದರೂ ನ್ಯೂಟ್ರಾನ್ ಕಣವು ವಿಭಜನೆಯಾದ ನಂತರ ಉತ್ಪನ್ನವಾಗಬೇಕು. ವಿಭಜನೆಯ ಅನಂತರ ಜನಿಸಿದ ನ್ಯೂಟ್ರಾನ್‌ಗಳ ಸಂಖ್ಯೆಯನ್ನು ವಿಭಜನೆಯ ಪೂರ್ವದ ನ್ಯೂಟ್ರಾನಿನ ಸಂಖ್ಯೆಯಿಂದ ಭಾಗಿಸಿದರೆ ದೊರೆಯುವ ಉಪಲಬ್ಧಕ್ಕೆ 'ಗುಣಕ ಸಂಖ್ಯೆ' (Multiplication Factor) ಎಂದು ಹೆಸರು. ಈ ಸಂಖ್ಯೆಯು ೧ ಕ್ಕೆ ಸಮ ಅಥವಾ ೧ ಕ್ಕಿಂತ ಹೆಚ್ಚಾದಾಗ ಪ್ರಕ್ರಿಯೆಯು ಮುಂದುವರೆಯುವುದು ಮತ್ತು ಅಪಾರ ಉಷ್ಣತೆಯು ನಿರ್ಮಾಣವಾಗುವುದು. ಈ ಸಂಖ್ಯೆಯು ೧ ಕ್ಕಿಂತ ಕಡಿಮೆಯಾದರೆ ಪ್ರಕ್ರಿಯೆಯು ನಿಂತುಹೋಗುವುದು. ಈ ರೀತಿಯ ಸ್ವಯಂ ಚಾಲಿತ ಸರಪಣಿ ಪ್ರಕ್ರಿಯೆಯನ್ನು ಡಾ. ಎನ್ರಿಕೋ ಫರ್ಮಿಯವರು ಶಿಕಾಗೋ ವಿಶ್ವವಿದ್ಯಾನಿಲಯದ ಪ್ರಯೋಗಶಾಲೆಯಲ್ಲಿ ಮೊದಲ ಬಾರಿಗೆ ೧೯೪೨ ರಲ್ಲಿ ಸಾಧಿಸಿ ಯಶಸ್ವಿಯಾದರು.


ಈ ಉಷ್ಣತೆಯನ್ನು ನಿಯಂತ್ರಿಸದಿದ್ದರೆ ಅದು ಬಹಳ ಅಪಾಯಕಾರಿಯಾಗಿ ಪರಿಣಮಿಸಬಹುದು. ಇದೇ ಅಣುಬಾಂಬಿನ ತತ್ವ. ಅಣುಬಾಂಬಿನಲ್ಲಿ U೨೩೫ ಅಥವಾ ಪ್ಲುಟೋನಿಯಂ (Pu೨೩೯) ಅನ್ನು ಉಪಯೋಗಿಸಿ ಅನಿಯಂತ್ರಿತ ಉಷ್ಣತೆಯನ್ನು ಉತ್ಪತ್ತಿ ಮಾಡಬಹುದು. ಅಣುಬಾಂಬು ಸ್ಫೋಟವಾದಾಗ ಉಂಟಾಗುವ ಪ್ರಕಾಶದ ಉಷ್ಣತಾಮಾನವು ಸುಮಾರು ೨ ಕೋಟಿ ಡಿಗ್ರಿ ಸೆಂಟಿಗ್ರೇಡ್ ಇರುವುದೆಂದು ಅಂದಾಜು ಮಾಡಲಾಗಿದೆ. ಸೂರ್ಯನ ಮೇಲ್ಭಾಗದ ಉಷ್ಣತಾಮಾನವು ಕೇವಲ ೬೦೦೦ ಡಿಗ್ರಿ ಸೆಂಟಿಗ್ರೇಡ್ ಮಾತ್ರ ಇರುವುದೆಂದಾಗ ಸ್ಫೋಟದ ವಿಧ್ವಂಸಕತೆಯ ಕಲ್ಪನೆಯಾಗುವುದು. ಈ ಸ್ಫೋಟದಿಂದ ಅಪಾಯಕಾರಿಯಾದ ಕಿರಣಗಳೂ ಮತ್ತು ಕಿರಣೋತ್ಸಾರೀ ವಸ್ತುಗಳೂ ಎಲ್ಲಾ ದಿಕ್ಕುಗಳಿಗೂ ಹರಡುವುವು. ಈ ರೀತಿಯಲ್ಲಿ ಜನಿಸಿದ ದೈತ್ಯ ಪ್ರಮಾಣದ ಉಷ್ಣತೆಯನ್ನು ಶಾಂತಿಯುತ ಕಾರ್ಯಗಳಿಗೆ ಬಳಸಬೇಕಾದರೆ ಅದನ್ನು ನಿಯಂತ್ರಿಸುವುದು ಅತ್ಯವಶ್ಯಕ. ಈ ನಿಯಂತ್ರಣವು ಇರುವ ಸಾಧನವೇ ಅಣುಭಟ್ಟಿ (Atomic reactor). ನಿಯಂತ್ರಣವಿಲ್ಲದಿರುವ ಸಾಧನವೇ ಅಣುಬಾಂಬು.

ಈ ನಿಯಂತ್ರಣಕ್ಕಾಗಿ ಬಳಸುವ ಮಾಧ್ಯಮಕ್ಕೆ 'ನಿಗ್ರಾಹಕ' (moderator) ಎಂದು ಹೆಸರು. ಗ್ರ್ಯಾಫೈಟ್, ಬೋರಾನ್, ಕಾಡ್ಮಿಯಂ

ಇತ್ಯಾದಿ ಘನವಸ್ತುಗಳೂ, ಹಗುರವಾದ ನೀರು (light water), ಭಾರವಾದ ನೀರು (heavy water) ಇತ್ಯಾದಿ ದ್ರವ ವಸ್ತುಗಳೂ ಅಣುಭಟ್ಟಿಯಲ್ಲಿ ಉಪಯೋಗಿಸುವ ಕೆಲವು ನಿಗ್ರಾಹಕಗಳು. ಈ ನಿಗ್ರಾಹಕವು ಉಷ್ಣೋತ್ಪತ್ತಿಗಾಗಿ ಉಪಯೋಗಿಸುವ ಯುರೇನಿಯಂಅನ್ನು ಸುತ್ತುವರೆದಿರುತ್ತದೆ. ಇದು ವೇಗದ ನ್ಯೂಟ್ರಾನನ್ನು ಸೆರೆಹಿಡಿಯದಿದ್ದರೂ ಅದರ ವೇಗವನ್ನು ಕಡಿಮೆಮಾಡುವುದು. ಅನಂತರ ಈ ಅಲ್ಪ ವೇಗದ ನ್ಯೂಟ್ರಾನ್ ಕಣವು ಯುರೇನಿಯಂ ಬೀಜಾಣುವಿನಲ್ಲಿ ಲೀನವಾದಾಗ ಹಿಂದೆ ನಮೂದಿಸಿದ ೬ನೆಯ ಪ್ರಕ್ರಿಯೆಗಳು ಉಂಟಾಗುವುವು. ಇದರಿಂದ ಒಟ್ಟು ಉಷ್ಣೋತ್ಪತ್ತಿಯು ಕಡಿಮೆಯಾಗುವುದು. ಬೋರಾನ್ ಅನ್ನು ನಿಗ್ರಾಹಕವಾಗಿ ಉಪಯೋಗಿಸಿದಾಗ ಬೋರಾನಿನ ಬೀಜಾಣುವಿನ ವಿಭಜನೆಯಾಗಿ ಸ್ವಲ್ಪ ಉಷ್ಣೋತ್ಪತ್ತಿಯಾದರೂ ಗುಣಕ ಸಂಖ್ಯೆಯು ೧ಕ್ಕಿಂತ ಕಡಿಮೆಯಾದ್ದರಿಂದ ಪ್ರಕ್ರಿಯೆಯು ಮುಂದುವರೆಯದೆ ಉಷ್ಣತೆಯು ಕಡಿಮೆಯಾಗುವುದು.

ಅಣುಭಟ್ಟಿಯಲ್ಲಿ ಈ ರೀತಿಯಲ್ಲಿ ನಿಯಂತ್ರಿತವಾಗಿ ಉತ್ಪತ್ತಿಯಾದ ಉಷ್ಣತೆಯನ್ನು ಉಪಯೋಗಿಸಿ ವಿದ್ಯುತ್ತನ್ನು ತಯಾರಿಸಬಹುದು. ಈ ರೀತಿಯ ಅಣುವಿದ್ಯುದಾಗಾರಕ್ಕೂ ಸಾಂಪ್ರದಾಯಿಕ ಉಷ್ಣತಾ ವಿದ್ಯುದಾಗಾರ (Conventional Thermal power station) ಕ್ಕೂ ಇರುವ ಮುಖ್ಯ ವ್ಯತ್ಯಾಸವೆಂದರೆ ಕಲ್ಲಿದ್ದಲು ಅಥವಾ ತೈಲ ಭಟ್ಟಿ (Coal or oil furnace)ಗಳ ಬದಲಾಗಿ ಅಣುಭಟ್ಟಿಯಲ್ಲಿ ಉಷ್ಣತೆಯು ಉತ್ಪನ್ನವಾಗುವುದು. ಅಣು ವಿದ್ಯುದಾಗಾರದಲ್ಲಿ, ಈ ರೀತಿಯ ವಿದ್ಯುದುತ್ಪಾದನೆಯು ಯಾವ ರೀತಿ ಆಗುವುದೆಂದು ಈಗ ಸ್ಥೂಲವಾಗಿ ಪರಿಶೀಲಿಸೋಣ.


ಅಣುಭಟ್ಟಿಯು ಅಣುವಿದ್ಯುದಾಗಾರದ ಮುಖ್ಯವಾದ ಭಾಗವೆನ್ನಬಹುದು. ಈ ಅಣುಭಟ್ಟಿಯನ್ನು ನಿರ್ಮಿಸುವಾಗ ಉಷ್ಣತಾ ನಿಯಂತ್ರಣಕ್ಕಾಗಿ ಮತ್ತು ಅಪಾಯಕಾರಿಯಾದ ಕಿರಣೋತ್ಸಾರದಿಂದ ರಕ್ಷಣೆ ಪಡೆಯಲು ಕೆಲವು ರಕ್ಷಣಾ ಕ್ರಮಗಳನ್ನು ಅನುಸರಿಸುವುದು ಅತ್ಯವಶ್ಯಕ (ಚಿತ್ರ ೧). ಇದಕ್ಕಾಗಿ ಅಣುಭಟ್ಟಿಯನ್ನು ಸುಮಾರು [illegible] ಸೆಂಟಿಮೀಟರಿನಷ್ಟು ದಪ್ಪವಿರುವ ತುಕ್ಕುಹಿಡಿಯದ ಉಕ್ಕಿನಿಂದ (Stainless steel) ತಯಾರಿಸಲಾಗುವುದು. ಇದರೊಳಗೆ ಉಷ್ಣೋತ್ಪಾದನೆಗಾಗಿ ಬಳಸುವ ಎಲ್ಲಾ ಕಿರಣೋತ್ಸಾರೀ ವಸ್ತುಗಳನ್ನೂ ಅಳವಡಿಸಬೇಕು. ಅಣುಭಟ್ಟಿಯ ಹೊರಭಾಗವನ್ನು ನಿಗ್ರಾಹಕವಾದ ಗ್ರಾಫೈಟ್ ಕವಚದಿಂದ ಮುಚ್ಚಲಾಗುವುದು. ಅನಂತರ ಗ್ರಾಫೈಟಿನ ಕವಚದ ಹೊರಭಾಗವನ್ನು ದಪ್ಪವಾದ ಉಕ್ಕಿನ ಹಾಳೆಗಳಿಂದ ಮುಚ್ಚಲಾಗುವುದು. ಅಣುಭಟ್ಟಿಯ ಕಟ್ಟಡವನ್ನು ದಪ್ಪವಾದ ಕಾಂಕ್ರೀಟ್ ಗೋಡೆಗಳು (ಸುಮಾರು ೨ ಮೀಟರಿನಷ್ಟು), ಮೇಲ್ಛಾವಣಿ ಮತ್ತು ನೆಲಗಳಿಂದ ನಿರ್ಮಿಸಿ,



ಚಿತ್ರ ೧

ಕಟ್ಟಡದ ಎಲ್ಲಾ ಒಳಭಾಗಕ್ಕೂ ಉಕ್ಕಿನ ಹಾಳೆಗಳನ್ನು ಹೊದಿಸಲಾಗುವುದು. ಈ ಕಟ್ಟಡದ ಒಳಗೆ ಅಣುಭಟ್ಟಿಯನ್ನು ಇರಿಸಲಾಗುವುದು.

ಅಣುಭಟ್ಟಿಯಲ್ಲಿ ಯುರೇನಿಯಂ ದಾಂಡು (rod)ಗಳನ್ನು ವಿಶಿಷ್ಟ ಪದ್ಧತಿಯಲ್ಲಿ ಜೋಡಿಸಲಾಗುವುದು. (ಚಿತ್ರ ೨). ಈ ದಾಂಡುಗಳ ಮಧ್ಯೆ ನಿಗ್ರಾಹಕದ ದಾಂಡುಗಳನ್ನು ನ್ಯೂಟ್ರಾನುಗಳ ನಿಯಂತ್ರಣಕ್ಕಾಗಿ ಜೋಡಿಸಲಾಗುವುದು. ಉತ್ಪತ್ತಿಯಾದ ಉಷ್ಣತೆಯನ್ನು ಪಂಪುಕಾರಕ ದ್ರವ ಅಥವಾ ಶೀತಕ (Coolant)ದ ಸಹಾಯದಿಂದ ಹೊರಕ್ಕೆ ಒಯ್ಯಬಹುದು. ಈ ದ್ರವವು ಕಿರಣೋತ್ಸಾರಿಯಾಗಿರುವುದರಿಂದ ಇದನ್ನು ಕಟ್ಟಡದ ಹೊರಗೆ ಹಾಗೆಯೇ ಉಪಯೋಗಿಸುವುದು ಅಪಾಯಕರ. ಆದ್ದರಿಂದ ಕೆಲವು ವೇಳೆ ಈ ದ್ರವದ ಉಷ್ಣತೆಯನ್ನು ಬೇರೊಂದು ದ್ರವ (Secondary Coolant)ಕ್ಕೆ ವರ್ಗಾಯಿಸಿ ಆನಂತರ ಈ ಎರಡನೆಯ ದ್ರವದ ಉಷ್ಣತೆಯನ್ನು ಉಷ್ಣತಾ ವಿನಿಮಯ ಸಾಧನ (heat exchanger)ಗಳಲ್ಲಿ ನೀರಿಗೆ ವರ್ಗಾಯಿಸಲಾಗುವುದು. ಇಗರಿಂದ ಒತ್ತಡದ ಹಬೆಯು ನಿರ್ಮಾಣವಾಗಿ, ಈ ಹಬೆಯಿಂದ ಹಬೆ-ಟರ್ಬೈನು (Steam turbine)ಗಳನ್ನು ತಿರುಗಿಸಿ ವಿದ್ಯುತ್‌ಜನಕಗಳಲ್ಲಿ (electric generator) ವಿದ್ಯುತ್ತನ್ನು ತಯಾರಿಸಬಹುದು. (ಮುಂದಿನ ಪುಟದ ಬಾಕ್ಸ್ ನೋಡಿರಿ.)



ಚಿತ್ರ. ೨

ಇದಲ್ಲದೆ ಅಣುಭಟ್ಟಿಗಳನ್ನು ಅಣುಶಕ್ತಿಯ ಉಪಯೋಗಕ್ಕನುಗುಣವಾಗಿಯೂ ವಿಂಗಡಿಸಬಹುದು.

ಅಣುಶಕ್ತಿಯನ್ನು ಕೇವಲ ವಿದ್ಯುದುತ್ಪಾದನೆಗೆ ಅಲ್ಲದೆ, ಹಡಗುಗಳ ಚಾಲನೆ, ಆಹಾರ ಧಾನ್ಯಗಳನ್ನು ಕೆಡದಂತೆ ರಕ್ಷಿಸುವುದು, ಛಳಿ ದೇಶಗಳಲ್ಲಿ ನಿಗದಿಯಾದ ಸ್ಥಳಗಳನ್ನು ಶಾಖವಾಗಿಡುವುದು, ವೈದ್ಯಕೀಯ ಇತ್ಯಾದಿ ಅನೇಕ ಶಾಂತಿಯುತ ಕಾರ್ಯಗಳಿಗೂ ಉಪಯೋಗಿಸಬಹುದು.

ಮೇಲ್ಕಂಡ ವರ್ಗೀಕರಣದಲ್ಲಿ ಮುಖ್ಯವಾದ ಪುನರುಜ್ಜೀವನ ತತ್ವವನ್ನವಲಂಬಿಸಿರುವ ಅಣುಭಟ್ಟಿಗಳನ್ನು ಸ್ಥೂಲವಾಗಿ ಪರಿಶೀಲಿಸೋಣ.

ಮೊದಲನೆಯ ಪುನರುಜ್ಜೀವನ ರಹಿತ ಅಣುಭಟ್ಟಿಯಲ್ಲಿ U೨೩೫ ಅಥವಾ Pu೨೩೯ ಅನ್ನು ಇಂಧನವನ್ನಾಗಿ ಬಳಸಲಾಗುವುದು ಇದರಲ್ಲಿ U೨೩೮ ಅನ್ನು Pu೨೩೯ಕ್ಕೆ ರೂಪಾಂತರ (Transmutation) ಗೊಳಿಸುವ ಪ್ರಕ್ರಿಯೆ ಇಲ್ಲ. ಪ್ರತಿ ೧೦೦ ಕಿಲೋಗ್ರಾಂ ನೈಸರ್ಗಿಕ ಯುರೇನಿಯಂನಲ್ಲಿ ಕೇವಲ ೦.೭ ಕಿಲೋಗ್ರಾಂ U೨೩೫ ಸಮಸ್ಥಾನಿಕ ಇರುವದು. ಇದನ್ನು U೨೩೮ರಿಂದ ಬೇರ್ಪಡಿಸಿ ಅನಂತರ ಇಂಧನವನ್ನಾಗಿ ಅಣು ಭಟ್ಟಿಯಲ್ಲಿ ಬಳಸಲಾಗುವುದು. ಈ ರೀತಿ ೧೦೦ ಕಿಲೋಗ್ರಾಂ ನೈಸ

ಗ್ರಿಕ ಯುರೇನಿಯಂ ಇಂದ ದೊರೆಯುವ ಉಷ್ಣತೆಯು ಸುಮಾರು ೧೦೦೦ ಟನ್ನುಗಳಷ್ಟು ಕಲ್ಲಿದ್ದಲಿನಿಂದ ದೊರೆಯುವ ಉಷ್ಣತೆಗೆ ಸಮವೆಂದು ಹೇಳಬಹುದು.

ಅಂಶಪುನರುಜ್ಜೀವಕ ಅಣುಭಟ್ಟಿಯಲ್ಲಿ U೨೩೮ ಅನ್ನು ಬಳಸಲಾಗುವುದು. ಇದರಲ್ಲಿ U೨೩೮ ಪ್ಲೂಟೋನಿಯಂ Pu೨೩೯ಕ್ಕೆ ರೂಪಾಂತರಗೊಳ್ಳುವುದು. ಈ ಅಣುಭಟ್ಟಿಯಲ್ಲಿ ೧೦೦ ಕಿಲೋಗ್ರಾಂ ನೈಸರ್ಗಿಕ ಯುರೇನಿಯಂಅನ್ನು ಉಪಯೋಗಿಸಿದಾಗ ಅದರಲ್ಲಿ ಇರುವ U೨೩೫ ಮತ್ತು ರೂಪಾಂತರದಿಂದ ತಯಾರಾದ Pu೨೩೯ ಅಥವಾ U೨೩೫ ಇವು ಎರಡೂ ಸೇರಿ ಉತ್ಪತ್ತಿ ಮಾಡುವ ಉಷ್ಣತೆಯು ಸುಮಾರು ೨೮೫೦ ಟನ್ನುಗಳಷ್ಟು ಕಲ್ಲಿದ್ದಲಿನಿಂದ ದೊರೆಯುವ ಉಷ್ಣತೆಗೆ ಸಮವೆಂದು ಹೇಳಬಹುದು. ಈ ರೀತಿಯ ಅಣುಭಟ್ಟಿಯಲ್ಲಿ ಎಷ್ಟು U೨೩೫ ಇಂಧನವನ್ನು ಬಳಸಲಾಗುವುದೋ ಅದರ ಶೇಕಡ ೬೦ರಿಂದ ೧೦೦ರಷ್ಟು ವಿಭಜನಯೋಗ್ಯ (Fissionable) ಇಂಧನವು ತಯಾರಾಗುವುದು.

ಪುನರುಜ್ಜೀವಕ ಅಣುಭಟ್ಟಿಯಲ್ಲಿ, ಬಳಸಿದ U೨೩೫ಕ್ಕಿಂತ ಹೆಚ್ಚಿನ ವಿಭಜನ ಯೋಗ್ಯ ಇಂಧನವು ಪ್ರಕ್ರಿಯೆಯಾದ ನಂತರ ತಯಾರಾಗುವುದು. ಇದರಲ್ಲಿ ಮೊದಲು ನೈಸರ್ಗಿಕ ಯುರೇನಿಯಂನಿಂದ U೨೩೫ ಸಮಸ್ಥಾನಿಕವನ್ನು ಬೇರ್ಪಡಿಸಲಾಗುವುದು. ಉಳಿದ ಹಾಗೂ ಭೇದಿಸಲು ಅಷ್ಟು ಸುಲಭವಲ್ಲದ U೨೩೮ ಅನ್ನು ಅಣುಭಟ್ಟಿಯಲ್ಲಿ ಉಪಯೋಗಿಸುವ U೨೩೫ರ ಸುತ್ತಲೂ ಹೊದಿಕೆ (blanket)ಯಂತೆ ಬಳಸಲಾಗುವುದು. ಈ ಹೊದಿಕೆಯು ಅಲ್ಪ ವೇಗದ ಕೆಲವು ನ್ಯೂಟ್ರಾನುಗಳನ್ನು ಸೆರೆ ಹಿಡಿದು U೨೩೮ ವಸ್ತುವು ಕೊನೆಗೆ ೬ನೆಯ ಪ್ರಕ್ರಿಯೆ

ಕೆಳಗೆಕಂಡ ವಿಷಯಗಳನ್ನು ಆಧರಿಸಿ ಅಣುಭಟ್ಟಿಗಳನ್ನು ವಿಂಗಡಿಸಬಹುದು;

೧. ಇಂಧನ ಪುನರುಜ್ಜೀವನ (fuel regeneration)

- i) ಪುನರುಜ್ಜೀವನ ರಹಿತ ಅಣುಭಟ್ಟಿ (non-regenerative reactor)
- ii) ಅಂಶ ಪುನರುಜ್ಜೀವಕ ಅಣುಭಟ್ಟಿ (Partial regenerafive reactor)
- iii) ಪುನರುಜ್ಜೀವಕ ಅಣುಭಟ್ಟಿ (Regenerative or breeder reactor)

೨. ನ್ಯೂಟ್ರಾನ್ ಕಾರ್ಯಶಕ್ತಿ—	ಅಲ್ಪವೇಗ ಮತ್ತು ಅತಿವೇಗ.
೩. ನಿಗ್ರಾಹಕಗಳು :	ಗ್ರಾಫೈಟ್, ಬೆರಿಲಿಯಂ, ಕಾಡ್ಮಿಯಂ, ಹಗುರವಾದ ನೀರು, ಭಾರವಾದ ನೀರು ಇತ್ಯಾದಿ.
೪. ತಂಪು ಕಾರಕಗಳು : ಅಥವಾ ಶೀತಕಗಳು	ಸೋಡಿಯಂ ದ್ರವ, ಬಿಸ್ಮತ್ ದ್ರವ, ಹಗುರವಾದ ನೀರು, ಭಾರವಾದ ನೀರು ಇಂಗಾಲಾಮ್ಲ (Co_2), ಹೀಲಿಯಂ, ಸಸಾರಜನಕ ಇತ್ಯಾದಿ.
೫. ಅಣುಭಟ್ಟಿಗೆ ಬಳಸುವ ವಸ್ತು :	ಅಲ್ಯೂಮಿನಿಯಂ, ಜಿರ್ಕೋನಿಯಂ, ಟೈಟಾನಿಯಂ, ಮೆಗ್ನೀಸಿಯಂ
೬. ಸಂಶೋಧನೆ.	ತುಕ್ಕು ಹಿಡಿಯದ ಉಕ್ಕು ಇತ್ಯಾದಿ

ಗಳಂತೆ U೨೩೫ ಅಥವಾ Pu೨೩೯ಕ್ಕೆ ರೂಪಾಂತರಗೊಂಡು ಇವನ್ನು ಮತ್ತೆ ಅಣು ಭಟ್ಟಿಯಲ್ಲಿ ಇಂಧನವನ್ನಾಗಿ ಉಪಯೋಗಿಸಬಹುದು. ಈ ರೀತಿಯಲ್ಲಿ ಅಣುಭಟ್ಟಿಯಲ್ಲಿ ಬಳಸಿದ U೨೩೫ಕ್ಕಿಂತ ಸುಮಾರು ಶೇಕಡ ೧೨೦ರಷ್ಟು U೨೩೫ ಅಥವಾ ಪ್ಲೂಟೋನಿಯಂ ((Pu೨೩೯) ತಯಾರಾಗುವುದು. ಈ ಪುನರುಜ್ಜೀವನ ತತ್ವವನ್ನು ಮೊದಲು ಕಂಡು ಹಿಡಿದ ಶ್ರೇಯಸ್ಸೂ ಸಹ ಡಾ. ಫರ್ಮಿಯವರಿಗ್ಸೇರಿದೆ.

ಈ ಅಣುಭಟ್ಟಿಯಲ್ಲಿ ಉಪಯೋಗಿಸುವ ಪ್ರತಿ ೧೦೦ ಕಿಲೋಗ್ರಾಂ ನೈಸರ್ಗಿಕ ಯುರೇನಿಯಂನಿಂದ ಆದ ಉಷ್ಣೋತ್ಪತ್ತಿಯು ಸುಮಾರು ೧,೩೦,೦೦೦ ಟನ್ನುಗಳಷ್ಟು ಕಲ್ಲಿದ್ದಲಿನಿಂದ ದೊರೆಯುವ ಉಷ್ಣತೆಗೆ ಸಮವೆಂದು ಅಂದಾಜು ಮಾಡಲಾಗಿದೆ. ಇದರಿಂದ ಅಣು ವಿದ್ಯುತ್ತನ್ನು ತಯಾರಿಸುವ ವೆಚ್ಚ ಸಾಕಷ್ಟು ಕಡಿಮೆಯಾಗುವುದು.

ಈಗಾಗಲೇ ಪ್ರಪಂಚದ ನಾನಾ ದೇಶಗಳಲ್ಲಿ ಅಣುವಿದ್ಯುದಾಗಾರಗಳು ನಿರ್ಮಿತವಾಗಿವೆ. ರಷ್ಯದ ಓಬ್ನಿನ್‌ಸ್ಕ್ (Obninsk, USSR) ಎಂಬಲ್ಲಿ ೧೯೫೪ರಲ್ಲಿ ಸ್ಥಾಪಿತವಾದ ೫೦೦೦ ಕಿಲೋವಾಟುಗಳ ಉತ್ಪಾದನಾ ಶಕ್ತಿಯುಳ್ಳ ವಿದ್ಯುದಾಗಾರವು ಜಗತ್ತಿನ ಮೊದಲ ಅಣು ವಿದ್ಯುದಾಗಾರಗಳಲ್ಲೊಂದು. ಬ್ರಿಟನ್ನಿನ ಕಾಲ್ಡರ್ ಹಾಲ್ ಅಣು ವಿದ್ಯುದಾಗಾರವು (೭೬,೦೦೦ ಕಿಲೋವಾಟುಗಳು) ೧೯೫೬ರಲ್ಲೂ, ಅಮೇರಿಕದ ಷಿಪ್ಪಿಂಗ್‌ಪೋರ್ಟ್ ಅಣು ವಿದ್ಯುದಾಗಾರವು (೬೦,೦೦೦ ಕಿಲೋವಾಟುಗಳು) ೧೯೫೭ರಲ್ಲೂ ನಿರ್ಮಾಣವಾದವು. ಅನಂತರ ದೊಡ್ಡ ಪ್ರಮಾಣದ ಅಣು ವಿದ್ಯುದಾಗಾರಗಳು ಸಾಕಷ್ಟು ಸಂಖ್ಯೆಯಲ್ಲಿ ನಿರ್ಮಾಣವಾಗುತ್ತಿವೆ.

ಭಾರತದಲ್ಲಿಯೂ ಸಹ ಅಣು ವಿದ್ಯುದಾಗಾರಗಳ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. ಮುಂಬಯಿಯ ಬಳಿ ತಾರಾಪುರದಲ್ಲಿ ೫೦ ಕೋಟಿ ರೂ. ಗಳ ವೆಚ್ಚದಲ್ಲಿ ೧೯೬೯ರಲ್ಲಿ ನಿರ್ಮಾಣವಾದ ಅಣುವಿದ್ಯುದಾಗಾರ ದೇಶದಲ್ಲಿ ಮೊದಲನೆಯದು. ಇದರ ಉತ್ಪಾದನಾ ಶಕ್ತಿ ೩೮೦,೦೦೦ ಕಿಲೋವಾಟುಗಳು. ರಾಜಸ್ಥಾನದ ಕೋಟಾ ಬಳಿ ರಾಣಾ ಪ್ರತಾಪಸಾಗರದಲ್ಲಿ ೨೦೦,೦೦೦ ಕಿಲೋವಾಟಿನ, ಮತ್ತು ಮದ್ರಾಸಿನ ಹತ್ತಿರ ಇರುವ ಕಲ್ಪಾಕ್ಕಂನಲ್ಲಿ ೨೫೦,೦೦೦ ಕಿಲೋವಾಟಿನ, ಇನ್ನೆರಡು ಅಣುವಿದ್ಯುದಾಗಾರಗಳ ನಿರ್ಮಾಣ ಭರದಿಂದ ಸಾಗಿದೆ.

ಸದ್ಯದಲ್ಲಿ ಅಣು ವಿದ್ಯುದಾಗಾರಗಳ ನಿರ್ಮಾಣಕ್ಕೆ ತಗಲುವ ವೆಚ್ಚ ಅಪಾರ. ಆದರೆ ಕಾಲಕ್ರಮೇಣ ಅಣುತಂತ್ರ ವಿಜ್ಞಾನವು ಮುಂದುವರೆದಂತೆ ವಿದ್ಯುತ್ತನ್ನು ಇನ್ನೂ ಸುಲಭ ಬೆಲೆಯಲ್ಲಿ ಉತ್ಪಾದಿಸಲು ಸಾಧ್ಯವಾಗುವುದು. ಜೊತೆಗೆ ಸಾಂಪ್ರದಾಯಿಕ ರೀತಿಯಲ್ಲಿ ಶಕ್ತ್ಯುತ್ಪಾದನೆಗೆ ಬಳಸುವ ಕಲ್ಲಿದ್ದಲು ಮತ್ತು ತೈಲಗಳ ಅಭಾವದಿಂದ ಅವುಗಳ ಬೆಲೆಗಳು ಏರುತ್ತಿವೆ. ಆದ್ದರಿಂದ ಕಾಲಾನುಕ್ರಮದಲ್ಲಿ ಅಣು ವಿದ್ಯುತ್ತಿನ ಬೆಲೆ ಉಳಿದ ರೀತಿಯ ವಿದ್ಯುತ್ತಿಗಿಂತ ಕಡಿಮೆಯಾಗುವುದು ನಿಶ್ಚಿತವೆನ್ನಬಹುದು. ಔದ್ಯೋಗೀಕರಣದ ಫಲವಾಗಿ ಉಂಟಾದ ಒಂದು ಬೃಹತ್ಸಮಸ್ಯೆಯನ್ನು ಅಣುಶಕ್ತಿಯು ತಾತ್ಕಾಲಿಕವಾಗಿಯಾದರೂ ನಿವಾರಿಸಿದಂತಾಗಿರುವುದರಿಂದ ಇದನ್ನು ೨೦ನೇ ಶತಮಾನದ ಅತ್ಯಂತ ವಿಸ್ಮಯಕಾರಕ ಸಂಶೋಧನೆ ಎಂದು ಕರೆಯಬಹುದು. ✡

ಆಕೆ: "ಅರೆ! ಜಗಳಾಡಿ ಕೆಲಸಬಿಟ್ಟು ಹೋದ ಆಕೆ ಒಂದೇ ದಿನದಲ್ಲಿ ಮರಳಿ ಬಂದಳಲ್ಲ! ನೀವು ಅವಳೊಂದಿಗೆ ಫೋನಿನಲ್ಲಿ ಮಾತಾಡಿದ್ದಾದರೂ ಏನು?"

ಆತ: "ಅರೆರೆ, ಹೀಗಾಗಿ ಬಿಟ್ಟಿತೇನೆ? ನಾನು ನಿನ್ನೊಂದಿಗೆ ಮಾತಾಡಿದೆ ಅಂದು ಕೊಂಡಿದ್ದೆ."

ಐರ್ಲಂಡಿನ ಜಾನಪದ ಕಥೆ

ಏಟ್ಟೈನ್

ಹನುಮಂತರಾವ್

ಪರ್ವತದಿಂದ ಹರಿಯುತ್ತಿದ್ದ ನಿರರ್ಗಳ ಪ್ರವಾಹ ಸುಂದರವಾದ ಕೊಳಗಳನ್ನು ನಿರ್ಮಿಸಿತ್ತು. ಇಂತಹ ಕೊಳವೊಂದರ ಸಮೀಪ ಏಟ್ಟೈನ್ ಎಲೆ ಹಸಿರು ಬಣ್ಣದ ಲಂಗತೊಟ್ಟು ಕುಳಿತಿದ್ದಳು. ಅವಳು ತನ್ನ ಬಂಗಾರ ಬಣ್ಣದ ಕೇಶಗಳನ್ನು ತೊಳೆಯಲು ಅಲ್ಲಿಗೆ ಬಂದಿದ್ದಳು. ಆ ಕಾಡಿನಲ್ಲಿ ಜಲದೇವತೆಯಂತೆ ಅವಳು ಕಾಣುತ್ತಿದ್ದಳು. ಮಂಜಿನಲ್ಲಿ ತೊಯ್ದ ಗುಲಾಬಿಯ ಬಣ್ಣವನ್ನು ಅವಳ ತುಟಿಗಳೂ ಕಪೋಲಗಳೂ ಕದ್ದಿದ್ದವು. ಆದರೆ ತನ್ನ ಸೌಂದರ್ಯದ ಪ್ರಜ್ಞೆ ಅವಳಿಗಿರಲಿಲ್ಲ. ಅಪರಿಚಿತರು ತನ್ನನ್ನು ನೋಡುತ್ತಿರುವರೆಂಬುದರ ಅರಿವೂ ಅವಳಿಗಿರಲಿಲ್ಲ.

ಅವಳನ್ನು ನೋಡುತ್ತಿದ್ದ ' ಅಪರಿಚಿತರಲ್ಲಿ ಆ ದಾರಿಯಾಗಿ ಕುದುರೆಯ ಮೇಲೆ ಹೋಗುತ್ತಿದ್ದ ಐರ್ಲಂಡಿನ ದೊರೆಯೂ ಒಬ್ಬನಾಗಿದ್ದ. ಅವನ ಹೆಸರು ಯೋಚ್ಚೈದ್. ಯಾವುದೋ ಅದೃಷ್ಟಶಕ್ತಿ ಅವನನ್ನು ಅವಳಕಡೆ ಸೆಳೆದಿತ್ತು. ಆಡಂಬರದಿಂದ ಮೆರೆಯುತ್ತ ಕುಹಕ ನಗೆ ಬೀರುತ್ತಿರುವ ಅಂತಃಪುರದ ಸ್ತ್ರೀಯರಿಗಿಂತಲೂ ಇವಳು ಭಿನ್ನವಾಗಿದ್ದಳು.

ಅರಸ ಕುದುರೆಯಿಂದಿಳಿದು ಅವಳನ್ನು ಸಮೀಪಿಸಿ ಅವಳ ಕೈಯನ್ನು ತನ್ನ ಕೈಯಲ್ಲಿರಿಸಿಕೊಂಡ. ಏಟ್ಟೈನ್ ಬೆಚ್ಚಿ ತಕ್ಷಣವೇ ಕೈ ಹಿಂದೆಗೆದುಕೊಂಡಳು. ಆದರೆ ರಾಜ ಅವಳೊಂದಿಗೆ ಘನತೆ ಗೌರವಗಳಿಗೆ ತಕ್ಕಂತೆ ಮಾತನಾಡಿ ಬಹು ಬೇಗನೇ ಅವಳ ಹೃದಯ ಗೆದ್ದ. ದಿನವೂ ಅವರಿಬ್ಬರೂ ಭೇಟಿಯಾಡ ತೊಡಗಿದರು. ಆಲ್‌ಸ್ಟರ್ ರಾಜನ ಮಗಳಾದ ಅವಳು ತಂದೆಯ ಒಪ್ಪಿಗೆ ಪಡೆದು ವಸಂತಕಾಲದ ಒಂದು ಮುಂಜಾನೆ ಅವನನ್ನು ಮದುವೆಯಾದಳು.

ಆದರೆ ಯೋಚ್ಚೈದ್-ಏಟ್ಟೈನ್ ಬಹಳ ಕಾಲ ಸುಖಪಡುವುದನ್ನು ಬೇಡಿ ಬಂದಿರಲಿಲ್ಲವೇನೋ. ಒಂದು ದಿನ ರಾಜ ಹೊರಗೆ ಬಂದಾಗ ಯೋಧ ವೇಷದ ತರುಣನೊಬ್ಬನು ತನ್ನ ಮನೆಯೆಡೆಗೇ ಬರುತ್ತಿರುವುದು ಕಾಣಿಸಿತು. ಅವನು ಕೈಯಲ್ಲಿ ರತ್ನ ಖಚಿತವಾದ ಢಾಲನ್ನು ಹಿಡಿದಿದ್ದ. ಯೋಚ್ಚೈದ್‌ನಿಗೆ ಆಶ್ಚರ್ಯವಾಯಿತು. ಕೋಟೆಯ ಮಹಾದ್ವಾರಗಳನ್ನು ಮುಚ್ಚಿರುವಾಗ, ಅರಮನೆಯ ಪ್ರಾಂಗಣದಲ್ಲಿ ಇವನು ಹೇಗೆ ಪ್ರವೇಶಿಸಿದನೆಂಬುದು ಅವನಿಗೆ ದಿಗಿಲಾಯಿತು. ಅವನು ನೋಡುತ್ತಿದ್ದಂತೇ ಕೆಲವೇ ಕ್ಷಣದಲ್ಲಿ ಅಪರಿಚಿತನು ಮಾಯವಾದನು. ರಾಜನಿಗೆ ಚಿಂತೆಯಾದರೂ ಈ ಘಟನೆಯನ್ನು ಯಾರಿಗೂ ತಿಳಿಸಲಿಲ್ಲ. ಕೆಲವೇ ದಿನಗಳಲ್ಲಿ

ರಾಜನ ಸಹೋದರನಿಗೆ ಅಸ್ವಾಸ್ಥ್ಯವುಂಟಾಯಿತು. ಒಂದು ಅಗತ್ಯ ಕೆಲಸದ ನಿಮಿತ್ತ ಅರಸನು ತಾರಾ ನಗರವನ್ನು ಬಿಟ್ಟು ತೆರಳಬೇಕಾಗಿತ್ತು. ತನ್ನ ತಮ್ಮನ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕೆಂದು ಏಟ್ಯೆನ್‌ಳಿಗೆ ಹೇಳಿದ. ತಾನು ಬರುವುದರೊಳಗೆ ಅವನು ಸತ್ತರೆ ರಾಜಯೋಗ್ಯ ಸಮಾಧಿ ಮಾಡಿ, ಅದರ ಮೇಲೆ ಚರಮ ವಾಕ್ಯವೊಂದನ್ನು ಬರೆಸಬೇಕೆಂದೂ ಹೇಳಿದ.

ರಾಜನಿಗೆ ಆಶ್ವಾಸನೆ ಕೊಟ್ಟಂತೆ ಅವಳು ತನ್ನ ಮೈದುನನಾದ ರಾಜಕುಮಾರ ಐಲೀಲನನ್ನು ನೋಡಲು ಹೋದಳು. ಅವನು ತನ್ನ ಪ್ರೀತಿಗಾಗಿ ಕಾತರಿಸುತ್ತಿರುವನೆಂದು ತಿಳಿಯಿತು. ಅವಳನ್ನು ಪಡೆಯಬೇಕೆಂಬ ಹಂಬಲವೇ ಅವನ ಅನಾರೋಗ್ಯಕ್ಕೆ ಕಾರಣವಾಗಿತ್ತು.

"ಪ್ರೀತಿಯನ್ನು ಬಯಸುತ್ತಿರುವ ನೀನು ಸಾಯಲಾರೆ," ಅವಳು ನುಡಿದಳು. "ತೋಟದ ಸಮೀಪವಿರುವ ಗುಡಿಸಲಿಗೆ ಬಾ. ನಿನ್ನ ಹೃದಯದ ಹಂಬಲಕ್ಕೆ ನಾನು ಉತ್ತರಿಸುವೆ."

ಅವಳು ಹೇಳಿದ ಸ್ಥಳಕ್ಕೆ ಐಲೀಲ್ ಬಂದ. ಅಲ್ಲಿ ಏಟ್ಯೆನ್ ಇದ್ದಳು. ಆದರೆ ಈಗ ಅವನ ಚರ್ಯೆ ಬದಲಾಗಿತ್ತು. ಅವಳೆದುರು ನಿಂತು ಅವನು, "ನೀನು ಮರೆತೇ ಬಿಟ್ಟಿರುವೆ," ಎಂದಷ್ಟೆ ಹೇಳಿದ. ಮರುಕ್ಷಣವೇ ಅವನು ಹಿಂತಿರುಗಿ ಹೋದ. ಮರುದಿನವೂ ಗುಡಿಸಲಿಗೆ ಅವನು ಬಂದು ಅದೇ ರೀತಿ ನುಡಿದ, ಹಾಗೇ ಮರಳಿ ಹೋದ. ಮೂರನೆಯ ಬಾರಿ ಬಂದಾಗ ಮಾತ್ರ ಅವಳೆದುರು ಅವನು, ಹೆಚ್ಚು ಹೊತ್ತು ನಿಂತು ಅವಳತ್ತ ಕೈಚಾಚಿ ಹೇಳಿದ.

"ಎಲೌ ಸುಕೇಸಿ, ನನ್ನೊಂದಿಗೆ ಬರುವೆಯಾ?"

ನಂತರ ಅವನು, ಅವಳ ಕೂದಲಿನಂತೇ ಇರುವ ಹಳದಿ ಸೊಗಸಾದ ಹೂಗಳನ್ನು ಕುರಿತು ಅವಳ ಮೈಗಿಂತಲೂ ಶುಭ್ರವಾದ ಹಿಮಮಯ ನಾಡಿನ ಬಗ್ಗೆ ಹಾಡಿದ. ಹಾಡನ್ನು ಕೇಳಿ ಏಟ್ಯೆನ್ ಮಾರು ಹೋದಳು. ಹಾಡನ್ನು ಮುಗಿಸಿದ ನಂತರ ಅವನು ಹೇಳಿದ. "ನಾನು ಐಲೀಲ್ ಅಲ್ಲ. ಅವನು ಗಾಢ ನಿದ್ರೆಯಲ್ಲಿರುವಂತೆ ನಾನು ಮಾಡಿದ್ದೇನೆ. ಅವನು ಎಚ್ಚತ್ತಾಗ ನಿನ್ನನ್ನು ಬಯಸುವುದಿಲ್ಲ. ನಾನು ಅಮರ ಲೋಕದ ದೊರೆ ಮಿದಿರ್."

ಅವನು ಮುಂದುವರಿಸಿದ:

"ದೇವತೆಗಳ ನಾಡಿನಲ್ಲಿ ನಾನು ನಿನ್ನನ್ನು ಪ್ರೀತಿಸಿದೆ. ಆದರೆ ನನ್ನ ರಾಣಿ ಮಾಟಗಾರನನ್ನು ಕರೆದು ನೀನು ತುಂಬಿಯಾಗುವಂತೆ ಮಾಡಿದಳು. ನಂತರ ಅವಳು ಬಿರುಗಾಳಿಯನ್ನು ಎಬ್ಬಿಸಿದಳು. ಅದರಲ್ಲಿ ನೀನು ತೂರಿಕೊಂಡು ಒಯ್ಯಲ್ಪಟ್ಟೆ. ವರುಷಗಟ್ಟಲೇ ತಿರುಗುತ್ತ ನೀನು ನನ್ನ ಸಾಕು ಮಗನೂ ಪ್ರೇಮ ದೇವತೆಯೂ ಆಗಿರುವ ಓಯೆಂಜಸ್‌ನ ಅರಮನೆಗೆ ಬಂದೆ. ನಿಮ್ಮನ್ನು ಅವನು ಜೇನು ತುಂಬಿದ ಹೂಗಳುಳ್ಳ ಕಾಜಿನ ಪೆಟ್ಟಿಗೆಯಲ್ಲಿಟ್ಟ. ಆದರೆ ನನ್ನ ರಾಣಿ ಫೌಮುಸಿಕಳಿಗೆ ನೀನು ಸುಖಿಯಾಗಿರುವುದು ಸಹಿಸಲಿಲ್ಲ. ಒಂದು ದಿನ ಪೆಟ್ಟಿಗೆಯಿಂದ ನೀನು ಜಾರಿದುದನ್ನು ನೋಡಿ ಅವಳು ಮತ್ತೆ ಬಿರುಗಾಳಿಯನ್ನು ಸೃಷ್ಟಿಸಿದಳು. ಅದು ಪುನಃ ನಿನ್ನನ್ನು ಭೂಮಿಗೆ ತಂದಿತು.

"ತಿರುಗಿ ತಿರುಗಿ ಸಾಕಾಗಿ ನೀನು ನಿನ್ನ ಮರ್ತ್ಯ ತಂದೆ ಏಟಾರ್‌ನ ಮನೆಯನ್ನು ಪ್ರವೇಶಿಸಿದೆ. ದಣಿದು ಹಣ್ಣಾಗಿದ್ದ ನೀನು ಮದ್ಯದ ಲೋಟದಲ್ಲಿ ಬಿದ್ದೆ. ಅದನ್ನು ಏಟಾರ್‌ನ ಹೆಂಡತಿ ಸೇವಿಸಿದುದರ ಪರಿಣಾಮವಾಗಿ ನೀನು ಅವರ ಮಗಳಾಗಿ ಜನಿಸಿದೆ. ನೀನು ನಿನ್ನ ಹಿಂದಿನ ಜೀವಿತೇತಿಹಾಸವನ್ನು ಮರೆತಿರುವೆ. ಆದರೆ ನಾನು ಶತಮಾನಗಳಿಂದಲೂ ಅದನ್ನು ನೆನಪಿಟ್ಟಿದ್ದೇನೆ. ಇಂದು ನಾನು ನಿನ್ನನ್ನು ವಧುವಾಗಿ ಸಾರಿ ನನ್ನ ಹಕ್ಕು ಸಾಧಿಸಲು ಬಂದಿರುವೆ."

ಏಟ್ಯೆನ್ ಬೆದರಿದಳು. "ಐರ್ಲಂಡಿನ ಅರಸನ ಹೆಂಡತಿ ನಾನು. ನಿನ್ನ ಬಾಹುಗಳಿಂದ ನನ್ನನ್ನು ಬಂಧಿಸಲು ಯೋಚೈದ್ ಅನುಮತಿಸಿದ ವಿನಾ ನಾನು ನಿಮ್ಮೊಂದಿಗೆ ಬರಲಾರೆ."

"ನಿನ್ನ ಇಚ್ಛೆಯಂತೇ ಆಗಲಿ." ಮಿದಿರ್

ಹೇಳಿ ಅಂತರ್ಧಾನನಾದ. ಐಲೀಲ್‌ನ ಹಾಸಿಗೆಯತ್ತ ಅವಳು ಧಾವಿಸಿ ಗಾಢ ನಿದ್ರೆಯಿಂದ ಅವನೂ ಎಚ್ಚೆತ್ತಿದ್ದನ್ನು ಕಂಡಳು. ಅಪರಿಚಿತನೊಬ್ಬನು ತಮ್ಮನ್ನು ಭೇಟಿಯಾದನೆಂದು ಅವಳು ಹೇಳುತ್ತಲೇ ಐಲೀಲ್‌ನಿಗೆ ಅವಳ ಮೇಲಿನ ಮೋಹ ಇಂಗಿ ಹೋಯಿತು.

ಈ ಘಟನೆ ನಡೆದ ಕೆಲವೇ ದಿನಗಳಲ್ಲಿ ಅರಸ ಹಿಂದಿರುಗಿದ. ಒಂದು ದಿನ ಮುಂಜಾನೆ, ತಾನು ಐರ್ಲೆಂಡ್ ಬಿಡುವುದಕ್ಕಿಂತ ಮೊದಲು ನೋಡಿದ್ದ ಅಪರಿಚಿತನನ್ನು ಅವನು ಮತ್ತೆ ನೋಡಿದ. ಈ ಬಾರಿ ಆಗಂತುಕನು ಯೋಚ್ಚೈದನೊಂದಿಗೆ ಮಾತನಾಡಿ ಚದುರಂಗದ ಆಟಕ್ಕೆ ಆಹ್ವಾನಿಸಿದ. ಅದರಲ್ಲಿ ಯೋಚ್ಚೈದ್ ಗೆದ್ದ. ಪಣವಾಗಿ ಅವನು ಮಿದಿರ್‌ನನ್ನು ಅನರ್ಘ್ಯ ಸಂಪತ್ತು ಕೊಡುವಂತೆ ಕೇಳಿದ. ಅರಸ ಇನ್ನೊಂದು ಆಟಕ್ಕೆ ಪಣವನ್ನು ಸ್ವೀಕರಿಸಿದ. ಈ ಬಾರಿ ಯೋಧನೇ ಗೆದ್ದ.

"ನೀನೇನನ್ನು ಬಯಸುವೆ?" ರಾಜನು ಆಗಂತುಕನನ್ನು ಕೇಳಿದ. "ನನ್ನ ಬಾಹುಗಳಿಂದ ಐಟ್ಟೈನಳನ್ನು ಬಂಧಿಸಿ, ಅವಳನ್ನು ಚುಂಬಿಸ ಬಯಸುವೆ," ಎಂದು ಆತ ಉತ್ತರಿಸಿದ.

ಯೋಚ್ಚೈದ್ ಮೆಟ್ಟಿಬಿದ್ದ. ಆದರೆ ಪಣವನ್ನು ನಿರಾಕರಿಸುವಂತಿರಲಿಲ್ಲ.

"ಒಂದು ತಿಂಗಳ ನಂತರ ಇಲ್ಲಿಗೆ ಪುನಃ ಬಾ. ನಿನ್ನ ಆಸೆಯು ಪೂರೈಸಲ್ಪಡುವುದು," ಎಂದು ಅವನನ್ನು ಸಾಗ ಹಾಕಿದ.

ಈ ಘಟನೆ ಕೆಲವು ದಿನಗಳಲ್ಲಿಯೇ ಮರೆತು ಹೋಯಿತು. ಯೋಚ್ಚೈದ್ ಹಾಗೂ ಐಟ್ಟೈನ್ ಪುನಃ ಸುಖದಲ್ಲಿ ಕಾಲ ಕಳೆದರು. ಒಂದು ತಿಂಗಳ ತರುವಾಯ ಅರಸನು 'ಶಸ್ತ್ರ ಸಜ್ಜಿತ'ರಾದ ಕೆಲವು ಜನರನ್ನು ಅರಮನೆಗೆ ಭೋಜನಕ್ಕಾಗಿ ಆಮಂತ್ರಿಸಿದ್ದನು. ಅತಿಥಿಗಳನ್ನು ಬಿಟ್ಟು ಇನ್ನಾರೂ ಬರದಿದ್ದಂತೆ ಬಾಗಿಲುಗಳನ್ನೂ ಭದ್ರಪಡಿಸಲಾಗಿತ್ತು. ಸುಂದರಿ ಐಟ್ಟೈನ್ ಅತಿಥಿಗಳಿಗೆಲ್ಲ ಮದ್ಯವನ್ನು ನೀಡಿದಳು. ಚದುರಂಗದಲ್ಲಿ ಗೆದ್ದ ಯೋಧ ಅಲ್ಲಿ ಒಮ್ಮೆಲೇ ಪ್ರತ್ಯಕ್ಷನಾದ.

ಯೋಚ್ಚೈದ್‌ನಿಗೆ ಅವನು ಹೇಳಿದ. "ಪಣದಲ್ಲಿ ಕೇಳಿದ ನನ ಆಸೆಯನ್ನು ಪೂರೈಸಿಕೊಳ್ಳಲು ಬಂದಿದ್ದೇನೆ." ಇದನ್ನು ನಿರಾಕರಿಸುವುದು ಶಕ್ಯವಿಲ್ಲವೆಂಬುದನ್ನು ತಿಳಿದ ರಾಜ, ಐಟ್ಟೈನ್‌ಳಿಗೆ ಅಪರಿಚಿತನ ಹತ್ತಿರ ಹೋಗಲು ಹೇಳಿ, ಅವಳನ್ನು ಚುಂಬಿಸಲು ಅವನಿಗೆ ಅನುಮತಿಸಿದ. ಐಟ್ಟೈನ್ ಗೊಂದಲಕ್ಕೀಡಾದಳು. ತನ್ನ ಮೈದುನನು ಮಲಗಿದಾಗ ಬಂದ ಅಪರಿಚಿತನ ನೆನಪು ಈಗ ಅವಳಿಗಾಯಿತು.

ಮನಸ್ಸಿಲ್ಲದೆ ದುಃಖಿತಳಾಗಿ ಅವಳು ಅಪರಿಚಿತನೆಡೆಗೆ ಹೋದಳು. ಅವನು ತನ್ನ ಬಾಹುಗಳಿಂದ ಅವಳನ್ನು ಬಂಧಿಸಿದೊಡನೆಯೇ ದೇವತೆಗಳ ನಾಡಿನಲ್ಲಿ ಅವನಲ್ಲಿ ಅವಳಿಗಾದ ಪ್ರೇಮ ಅವಳಿಗೆ ನೆನಪಾಯಿತು. ಮಿದಿರ್‌ನ ಬಹು ದಿನದ ವಿರಹ ವೇದನೆಯಿಂದ ಅವಳೀಗ ಮುಕ್ತಳಾಗಿದ್ದಳು. ಅವನ ಪ್ರೇಮ ಪಾಶದಲ್ಲಿ ಪುನಃ ಸಿಲುಕಿ ಅವಳು ಅವನೊಂದಿಗೆ ಆಕಾಶ ಮಾರ್ಗವಾಗಿ ತೆರಳಿದಳು.

ಐಟ್ಟೈನ್‌ಳನ್ನು ರಕ್ಷಿಸಲು ರಾಜನೂ ಸೇವಕರೂ ಅರಮನೆಯ ಹೊರಗೆ ಓಡಿದರು. ಆದರೆ ಶುಭ್ರವಾದ ಆಕಾಶದಲ್ಲಿ ವಿಹರಿಸುತ್ತ ಹೊರಟ ಹಂಸಗಳ ಜೊತೆಯನ್ನು ಮಾತ್ರ ಅವರು ನೋಡಿದರು. ✡

"ಏನೋ, ಇಂಥಾ ಪ್ರಶ್ನೆಗಳನ್ನೂ ಉತ್ತರಿಸಲಾಗುವುದಿಲ್ಲವೇನೋ ನಿನಗೆ? ಕೇಳಿದರೆ ಶತಮೂರ್ಖ ಸಹ ಉತ್ತರಿಸಿಯಾನು."

"ಇದಕ್ಕಾಗಿಯೆ ನಾನು ಉತ್ತರಿಸುತ್ತಿಲ್ಲ ಗುರುಗಳೆ."

ನಗೆಮಲ್ಲಿಗೆ

ಯಾರು ಹಿತವರು ನಿನಗೆ....

ಡಾಕ್ಟರು : ಹೆಂಡ ಅಥವಾ ಹೆಂಗಸರು– ಎರಡರಲ್ಲಿ ಒಂದನ್ನು ನೀವು ಬಿಡಲೇ ಬೇಕು, ಮಿಸ್ಟರ್ ಧರಂ ಗರಂ.

ರೋಗಿ : ಹಾಗಿದ್ದರೆ ಹೆಂಡ ಬಿಡ್ತೀನಿ ಡಾಕ್ಟರೇ; ವಯಸ್ಸಾದ ಮೇಲೆ ಬೇಕಾದರೂ ಅದನ್ನು ಕುಡೀಬಹುದು.

—ಎಸ್. ವಿಶ್ವನಾಥ

ಅದು ಕಾಫಿಯೆ

ಚಳಿಗಾಲದ ಒಂದು ಬೆಳಿಗ್ಗೆ. ಗುಂಡನಿಗೆ ಬಿಸಿ ಬಿಸಿಯಾದ ಕಾಫಿ ಕುಡಿಯಬೇಕೆನ್ನಿಸಿ ಎದುರಿಗೆ ಇದ್ದ ಉಡುಪಿ ಹೊಟೆಲಿಗೆ ನುಗ್ಗಿದ. ಮಾಣಿ ಕಾಫಿ ತಂದಿಟ್ಟಾಗ ಲೋಟದಿಂದೇಳುತ್ತಿದ್ದ ಹೊಗೆ ನೋಡಿ ಹಿತವೆನಿಸಿತು. ಆದರೆ ಒಂದು ತೊಟ್ಟು ಕಾಫಿ ನಾಲಿಗೆಯ ಮೇಲೆ ಬಿದ್ದ ತಕ್ಷಣ ಮುಖ ಕೆಟ್ಟದು ಮಾಡಿಕೊಂಡು ಮಾಣಿಯನ್ನು ಕೂಗಿ ದಬಾಯಿಸಿದ: "ಏನ್ರಿ ಇದು ದರಿದ್ರ? ಒಳ್ಳೆ ಟರ್ಪಂಟೈನ್ ರುಚಿಯಿದೆ?"

"ಹಾಗಾದರೆ ಇದು ಕಾಫಿ ಮಾರಾಯ್ರೆ! ಇಲ್ಲಿ ಟೀಗೆ ಸೀಮೆ ಎಣ್ಣೆ ರುಚಿಯುಂಟು!" ಮಾಣಿ ತಕ್ಷಣ ಉತ್ತರಿಸಿದ.

—ಎಸ್. ಜಿ. ಶಿವಶಂಕರ

ಕಂಡೆ ಬುದ್ಧೀ!

ಭಿಕ್ಷುಕರ ಹಾವಳಿ ತಡೆಯಲಾರದೆ ಓರ್ವ ಮಹಾಶಯರು ಮುಂದಿನ ಬಾಗಿಲಿಗೆ ಬೀಗ ಹಾಕಿ ಹಿಂದಿನ ಬಾಗಿಲ ಮೂಲಕ ಓಡಾಡುತ್ತಿದ್ದರು.

ಒಂದು ದಿನ ಒಬ್ಬ ಕುರುಡ ಮನೆಯ ಬಾಗಿಲಲ್ಲಿ ಬಂದುನಿಂತು ಕುರುಡನಿಗೆ ಕಣ್ಣಿಲ್ಲ, ಕುರುಡನಿಗೆ ಕಣ್ಣಿಲ್ಲ, ಭಿಕ್ಷೆ ನೀಡಿ ಎಂದು ಕಷ್ಟ ಧ್ವನಿಯಲ್ಲಿ ಕೂಗುತ್ತಿದ್ದನ್ನು ತಡೆಯಲಾರದೆ—

ಯಜಮಾನ :– ಏಯ್, ಮನೆಗೆ ಬೀಗ ಹಾಕಿದೆ. ಮನೆಯಲ್ಲಿ ಯಾರೂ ಇಲ್ಲ ಎಂದು ಕಾಣುತ್ತಿದಿಲ್ಲವೇ! ಎಂದು ಗರ್ಜಿಸಿದ.

ಕುರುಡ :– ನೀವು ಬೀಗ ಹಾಕಿ ಹಿಂದಿನ ಬಾಗಿಲಾಗೆ ಒಳಗೋದ್ದು ಕಂಡೆ ಬುದ್ಧೀ!

ಯಜಮಾನ :– ಕಣ್ಣಿಲ್ಲ ಎಂದು ಹೇಳುತ್ತೀಯ ನಾನು ಬಂದಿದ್ದನ್ನು ಹೇಗೆ ನೋಡಿದೆಯೋ?

ಕುರುಡ :– ಕಣ್ಣಿಲ್ಲದ್ಕೆ ಬೀಗ ಆಕಿದ್ದ ನೋಡ್ಲಯ್ಯಂತೆ, ನೀವು ಒಳಗೋದ್ದು ನೋಡ ಕಾಗಕಿಲ್ವಾ ಬುದ್ಧೀ? ಎಂದ.

—ಸಿ. ಜಿ. ಕಾನಸೂರ

ಕಲ್ಯಾಣ ಕಾರ್ಯ

ನ್ಯಾಯಾಧೀಶ– (ಕಿಸೆಗಳ್ಳನಿಗೆ) "ಮಾನವ ಕೋಟಿಗೆ ಒಳ್ಳೆಯದಾಗುವ ಯಾವ ಕೆಲಸವನ್ನು ಮಾಡಿರುವೆ?"

ಕಿಸೆಗಳ್ಳ– "ಮೂರು ಅಥವಾ ನಾಲ್ಕು ಪತ್ತೇದಾರರನ್ನು ಯಾವಾಗಲೂ ಕೆಲಸದಲ್ಲಿ ತೊಡಗಿಸಿದ್ದೇನೆ." —ಎಸ್. ಪಿ ಹೆಗಡೆ

ಅಭ್ಯಾಸ ಬಲ

ಡಾಕ್ಟರ– ನಿದ್ದೆ ಬರೊಲ್ಲ ಅಂತೀರಲ್ಲ ಈ ಮಾತ್ರೇನಾ ಉಪಯೋಗಿಸ್ತಾ ಬನ್ನಿ.

ರೋಗಿ– ಛೇ ಛೇ ಆಮೇಲೆ ಅದೇ ಅಭ್ಯಾಸವಾಗುತ್ತೆ.

ಡಾಕ್ಟರ– ಹೇಗೆ ಆಗುತ್ತೆ? ನಾನು ಅದನ್ನೇ ಹತ್ತು ವರ್ಷಗಳಿಂದ ಬಳಸ್ತಿದೀನಲ್ಲ. ನನಗೆ ಆಗಿದೆಯೋ?

—ರಾಮಚಂದ್ರ ಇಬ್ರಾಹಿಮಪುರ

ಟೂ ಬೈ ಒನ್

ಮೂವರಲ್ಲಿ ಒಬ್ಬ : ಟು ಬೈತ್ರಿ ಕಾಫಿ ಕೊಡಪ್ಪ.

ಉಳಿದಿಬ್ಬರು : ಸ್ವಲ್ಪ ಬೇಗ ತರ್ಬೇಕು.

"ಇಲ್ಲಾಂದ್ರೆ ಬಸ್ ಹೊರಟು ಹೋಗುತ್ತೆ."

ಒಬ್ಬ: ನೀನು ಕಾಫಿ ತರೋ ಅಷ್ಟರೊಳಗೆ ಬಸ್ ಬಂತು. ಅವರು ಹೊರಟೇ ಹೋದ್ರು.

ಮಾಣಿ: ಹಾಗಾದ್ರೆ, ಟು ಬೈ ಒನ್ ಮಾಡ್ಲಾ ಸಾರ್... —ಎಂ. ಕೆಂಪರಾಜ

ಪಾರ್ಕ್‌ನಲ್ಲಿ

"ಪಾರ್ಕ್‌ಗೆ ನಾಯಿಯನ್ನು ಕರೆತರಬಾರದು. ಈ ನಾಯಿ ನಿಮ್ಮದೆ?" ಪೋಲೀಸ್‌ನವನು ಒಬ್ಬ ವ್ಯಕ್ತಿಯನ್ನು ಕೇಳಿದ.

ಆ ವ್ಯಕ್ತಿ ನುಡಿದ, "ಈ ನಾಯಿ ನನ್ನದಲ್ಲ."

"ನಾಯಿ ತಮ್ಮನ್ನೇ ಹಿಂಬಾಲಿಸಿಕೊಂಡು ಬರುತ್ತಿದೆ," ಪೋಲೀಸ್‌ನವ ನುಡಿದ.

"ನನ್ನ ಹಿಂದೆ ತಾವೂ ಸಹ ಬರುತ್ತಿರುವಿರಿ?" ಆ ವ್ಯಕ್ತಿ ಹಿಂದಕ್ಕೆ ತಿರುಗಿ ನುಡಿದ.

—ಎನ್. ಕೆ. ನರಸಿಂಹಮೂರ್ತಿ

ಅದು ಹೇಗೆ?

ತಮ್ಮ ಹೊಸ ಚಿತ್ರದ ಜ್ಞಾಪಕಾರ್ಥವಾಗಿ ನಿರ್ಮಾಪಕರೊಬ್ಬರು ಭಾರಿ ಔತಣ ಕೂಟ ಏರ್ಪಡಿಸಿದ್ದರು. ತಮ್ಮ ಚಿತ್ರವನ್ನು ಹೊಗಳುತ್ತಾ, ತಮ್ಮ ಚಿತ್ರದಲ್ಲಿ ನಟಿಸಿರುವ ತಾರೆಯ ಉಡುಪುಗಳಿಗೆ ಲಕ್ಷಾಂತರ ರೂ ಖರ್ಚು ಮಾಡಿದ್ದೇನೆ ಎಂದರು. ಅಲ್ಲಿ ಇದ್ದ ಒಬ್ಬ ಕಿಲಾಡಿ ಕೇಳಿದ "ಅದು ಹೇಗೆ? ಅವಳು ಯಾವ ದೃಶ್ಯದಲ್ಲೂ ಬಟ್ಟೆನೆ ಹಾಕಿರುವುದಿಲ್ಲವಲ್ಲ"

—ಎಚ್. ವಿ. ಶ್ರೀಕಾಂತ

ಸಮಯ ಹಾಳು

ಪತ್ನಿ– ರ್ರೀ... ಇವತ್ತು ಹೇಗೂ ಭಾನುವಾರ. ಮ್ಯಾಟನಿಗೆ ಹೋಗೋಣವೆಂದ್ರಿ?

ಪತಿ– ಛಿ! ಥೂ, ಬೇಡ ಕಣೆ ಇರೊ ಭಾನುವಾರಾನ ಚೆನ್ನಾಗಿ ನಿದ್ದೆ ಮಾಡಿ ಕಳೀತೀನಿ ಬಿಡು.

ಪತ್ನಿ– ಹಾಗೆ ಯಾಕೆ ಅನ್ತೀರ್ರಿ? ನಾಳೆ ಹೇಗೂ ಆಫೀಸು ಇದೆ. ಸುಮ್ನೆ ಮನೇಲಿ ನಿದ್ದೆ ಮಾಡ್ಕೊಂಡು ಸಮಯಾನಾ ಯಾಕ್ ಹಾಳ್ ಮಾಡ್ಬೇಕೂಂತ?

–ಜಯಂತಿ ಹೆಬ್ಬಾರ

ಮಳೆಗಾಲ ಕಂಡಿಲ್ಲ

ಅದೇ ತಾನೆ ಮನೋರೋಗಕ್ಕೆ ಬಲಿಯಾದವನೊಬ್ಬನನ್ನು ಪರೀಕ್ಷಿಸುವಾಗ ಡಾಕ್ಟರರು ಆತನನ್ನು ಪ್ರಶ್ನಿಸಿದರು:

ಡಾಕ್ಟರ: "ನಿನಗೆಷ್ಟು ವಯಸ್ಸು?"

ಮನೋರೋಗಿ– "ಇಪ್ಪತ್ನಾಲ್ಕು ವರ್ಷ"

ಡಾಕ್ಟರ– ಹಾಗಾದರೆ ಈ ಅವಧಿಯಲ್ಲಿ ನೀನು ಇಪ್ಪತ್ನಾಲ್ಕು ಮಳೆಗಾಲಗಳನ್ನು ಕಂಡಿರಬೇಕಲ್ಲವೆ?

ಮನೋರೋಗಿ– ಇಲ್ಲ. ಒಂದೂ ಇಲ್ಲ!

ಆಶ್ಚರ್ಯಚಕಿತರಾಗಿ ಡಾಕ್ಟರರು ಮತ್ತೆ ಪ್ರಶ್ನಿಸಿದರು.

ಡಾಕ್ಟರ– ಅದು ಹೇಗೆ?

ಮನೋರೋಗಿ– ಮಳೆಗಾಲ ಬಂದಾಗಲೆಲ್ಲ ನಾನು ಊರಲ್ಲಿ ಇರುತ್ತಿರಲಿಲ್ಲ ಡಾಕ್ಟರ. ನನ್ನ ಚಿಕ್ಕಪ್ಪನ ಊರಲ್ಲಿ ಇರುತ್ತಿದ್ದೆ.

—ಎಚ್. ಎಸ್. ಮಂಜವರ

ವನಭೋಜನ

ಆಫೀಸಿನವರೆಲ್ಲ ಕೂಡಿ ವನಭೋಜನಕ್ಕೆ ಹೋಗಬೇಕೆಂದು ನಿರ್ಧರಿಸಿದರು. ವೆಂಕಟರಾಯರೆಂದರು "ನಾನು ಮನೆಯಿಂದ ಲಾಡು ಮಾಡಿಸಿ ತರುತ್ತೇನೆ. ರುಚಿಯಾಗಿರುತ್ತೆ." ಶಾಸ್ತ್ರಿಗಳೆಂದರು, "ನಾನು ಮೊಸರನ್ನ ತರುತ್ತೇನೆ." ಮೂರ್ತಿ ಹೇಳಿದ; "ನಾನು ಹುಳಿಯನ್ನ ತರುತ್ತೇನೆ." ಹೀಗೆ ಹಲವರು ಚಕ್ಕುಲಿ, ಬಾಳೆಹಣ್ಣು, ಹೋಳಿಗೆ ಮುಂತಾಗಿ ತರುವುದಾಗಿ ಹೇಳಿದರು. ಎಲ್ಲವನ್ನು ಕೇಳುತ್ತಿದ್ದ ಜವಾನ ಲಿಂಗಯ್ಯ, ಕೊನೆಯಲ್ಲಿ ಹೇಳಿದ, "ನಾನು ಹೆಂಡತಿ-ಮಕ್ಕಳನ್ನು ಕರೆತರುತ್ತೇನೆ, ಸ್ವಾಮಿ!"

—ಮ. ಸು. ಭಟ್ಟ

ಅನುಕಂಪದ ಬಂಧನವೊ?
ವಂಚಕರ ತಂತ್ರವೊ?

ಹೆಣಗಳಿಂದಲೂ ಕೋಟಿಗಟ್ಟಲೆ ಸಂಪಾದನೆ!

ಕೋಹಿ

ವಿಯೆತ್‌ನಾಮ್ ಯುದ್ಧ ಭೀಷಣವಾಗಿ ಮುಂದುವರಿದಿತ್ತು. ಎರಡೂ ಪಕ್ಷಗಳ ಸಹಸ್ರಾವಧಿ ಜನರನ್ನದು ಪ್ರತಿದಿನ ಬಲಿ ತೆಗೆದುಕೊಳ್ಳುತ್ತಿತ್ತು. ಅಮೇರಿಕನ್ ನಾಗರಿಕರಿಗೆ ಇದೊಂದು ಬೆನ್ನುಬಿಡದ ಭೂತವೇ ಆಗಿತ್ತು. ಯಾರದೋ ಮಗ, ಇನ್ನಾರದೋ ಸೋದರ, ಮತ್ತ್ಯಾರದೋ ಗಂಡ ಸತ್ತ ಸುದ್ದಿ ಯಾವ ಕ್ಷಣಕ್ಕೂ ಬರಬಹುದಾಗಿತ್ತು. ಹೀಗೆ ಮರಣಭಯದಿಂದ ಆತಂಕಗೊಂಡವರಲ್ಲಿ ನ್ಯೂಯಾರ್ಕಿಗೆ ಸಮೀಪದ ಹಳ್ಳಿಯೊಂದರಲ್ಲಿ ವಾಸಿಸುತ್ತಿದ್ದ ಡೈಲಾ ಮ್ಯೆಕ್ ಫಾರ್ಸನ್ ಎಂಬ ವಿಧವೆಯೂ ಒಬ್ಬಳು.

ಅಂಚೆ ಪೇದೆಗಳು ಕಪ್ಪು ಬಣ್ಣದ ಟೆಲಿಗ್ರಾಫ್ ಕವರಿನ ಬಂಡಲುಗಳನ್ನು ಹೊತ್ತು ತಂದಾಗ ಇಂದು ಯಾರ ಸಂಬಂಧಿಕ ಯುದ್ಧದಲ್ಲಿ ಹತನಾಗಿದ್ದಾನೋ ಎಂದು ಎಲ್ಲರೂ ಒಂದು ತರಹದ ಅವ್ಯಕ್ತ ಭಯದಿಂದ ತತ್ತರಿಸುತಿದರು. ಆ ಕವರು ಮನೆಯನ್ನು ತಲುಪುವುದೇ ತಡ, ಸ್ವಾಭಾವಿಕವಾಗಿಯೆ ಅಲ್ಲಿ ಆಕಂದನ ಪ್ರಾರಂಭವಾಗುತ್ತಿತ್ತು. ಆ ದಿನಗಳಲ್ಲಿ ಯುದ್ಧ ತೀವ್ರವಾದ ಕಾರಣ ಕವರುಗಳಸಂಖ್ಯೆಯೂ ಹೆಚ್ಚಾಗಿತ್ತು.

ಒಂದು ದಿನ ಇಂತಹ ಒಂದು ಕವರು ಡೈಲಾಗೂ ಬಂತು. ಅದನ್ನು ಕಂಡವಳೆ ಆಕೆ ನಿಶ್ಚೇಷ್ಟಿತಳಾಗಿ ನೆಲಕ್ಕುರುಳಿದಳು. ಆತನ ಮಗ ಎಡ್ಡಿ ಫಾರ್ಸನ್ ಯುದ್ಧದ ಪಾಶವೀಯತೆಗೆ ಬಲಿಯಾಗಿದ್ದ.

ಹಳ್ಳಿಯೆಂದ ಮೇಲೆ ಕೇಳಬೇಕೆ? ಸುದ್ದಿ ಮನೆಯಿಂದ ಮನೆಗೆ ಹರಡಲು ತಡವಾಗಲಿಲ್ಲ. ಆಕೆಯ ಆಪ್ತವರ್ಗದವರೆಲ್ಲ ಮನೆಗೆ ಧಾವಿಸಿ ಡೈಲಾಗೆ ಸಾಂತ್ವನ ಹೇಳಿದರು. ಪಾಪ! ಅದನ್ನೊಂದುಳಿದು ಬೇರೆ ಇನ್ನೇನು ಮಾಡಲು ತಾನೆ ಅವರಿಗೆ ಸಾಧ್ಯ?

ಆದರೆ ಹೀಗೆ ಸಂತೈಸುವವರಲ್ಲಿ ಸದ್ಗೃಹಸ್ಥನಂತೆ ಕಾಣುವ ಹ್ಯಾರಿ ಸ್ಮಿತ್ ಎಂಬವನೂ ಇದ್ದ. ಅವನ ಸಮಾಧಾನ ಉಳಿದೆಲ್ಲರಿಗಿಂತ ಹೆಚ್ಚು ಅರ್ಥಪೂರ್ಣವಾಗಿ ಕಂಡಿತು. "ಆತನ ಅಂತಿಮ ಸಂಸ್ಕಾರವನ್ನು ಅಮೇರಿಕದಲ್ಲೇ ಏಕೆ ಮಾಡಬಾರದು? ಹೀಗೆ ಮಾಡಿದರೆ ತಾಯಿಗೆ ಮಗನ ದರ್ಶನ ಸಿಕ್ಕಂತಾಗುತ್ತದೆ; ಯೋಧನೊಬ್ಬನನ್ನು ಯಥೋಚಿತವಾಗಿ ಸನ್ಮಾನಿಸಿದಂತೆಯೂ ಆಗುತ್ತದೆ," ಎಂದು ಆತ ನೆರೆದವರೆದುರು ಪ್ರಸ್ತಾಪಿಸಿದ.

ಆದರೆ ಯಃಕಶ್ಚಿತ್ ಸಿಪಾಯಿಯೊಬ್ಬನ ಶವವನ್ನು ಸಾವಿರಾರು ಮೈಲು ದೂರದಿಂದ ಅಮೇರಿಕಕ್ಕೆ ತರಲು ಅಪಾರ ಹಣ ಬೇಕು. ಅದನ್ನು ಕೊಡುವವರು ಯಾರು? ಡೈಲಾ

ಫಾರ್ಸನ್ನಳ ಪಾಲಿಗಂತೂ ಈ ವೆಚ್ಚವನ್ನು ಭರಿಸುವುದು ಕನಸಿನ ಮಾತಾಗಿತ್ತು.

ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇರುತ್ತದೆ. ಅಮೇರಿಕದ ಪ್ರಜೆಯೊಬ್ಬ ಯಾವುದೇ ದೇಶದಲ್ಲಿ ಮರಣಹೊಂದಿದರೆ ಹಾಗೂ ಅವನ ವಾರಸುದಾರರಿಗೆ ಮರಣ ಹೊಂದಿದವನ ದೇಹವನ್ನು ಮಾತೃಭೂಮಿಗೆ ತರುವ ಯೋಗ್ಯತೆಯಿಲ್ಲದಿದ್ದರೆ ಕೆಲವು ಅಮೇರಿಕನ್ ಕಂಪನಿಗಳು ಈ ಕೆಲಸವನು ತಾವಾಗಿಯೆ ನಿರ್ವಹಿಸುತ್ತವೆ. ಕೆಲವು ವೇಳೆ ಅವು ಮೃತರ ಕುಟುಂಬಗಳಿಗೆ ಸಾಂತ್ವನಪರವಾಗಿ ಸ್ವಲ್ಪ ಹಣವನ್ನೂ ಕೊಡುವುದುಂಟು. ಕೇವಲ ಮಾನವೀಯ ಕಲ್ಯಾಣಕ್ಕಾಗಿ ಹುಟ್ಟಿಕೊಂಡಿರುವ ಈ ಕಂಪನಿಗಳ ಸಹಾಯವನ್ನೇಕೆ ಡೈಲಾ ಫಾರ್ಸನ್ ಪಡೆಯಬಾರದು ? ಎಂದು ಹ್ಯಾರಿ ಸ್ಮಿತ್ ಪ್ರತಿಪಾದಿಸಿದ.

ದುಃಖದ ಕಾರ್ಮೋಡಗಳು ಮಧ್ಯೆ ಬೆಳಕಿನ ಸೆಳಕೊಂದು ಗೋಚರಿಸಿದಂತಾಯಿತು. ಡೈಲಾಗೆ. ಹ್ಯಾರಿ ಸ್ಮಿತ್ ತಂದುಕೊಟ್ಟ ಫಾರ್ಮುಗಳಿಗೆ ಆಕೆ ಕೂಡಲೆ ಸಹಿ ಮಾಡಿದಳು.

ಈ ಕಂಪನಿಯ ಶಾಖೆಗಳು ಜಗತ್ತಿನಾದ್ಯಂತ ಹರಡಿದ್ದ ಕಾರಣ ಪ್ರಧಾನ ಕಚೇರಿಯು ಎಡ್ಡಿ ಫಾರ್ಸನ್ನನ ಶವವನ್ನು ಸೈನ್ಯಾಧಿಕಾರಿಗಳಿಂದ ವಶಪಡಿಸಿಕೊಂಡು ಅಂತ್ಯ ಸಂಸ್ಕಾರಕ್ಕಾಗಿ ಅಮೇರಿಕಕ್ಕೆ ಕಳಿಸುವಂತೆ ತನ್ನ ಸೈಗಾನ್ ಶಾಖೆಗೆ ಆದೇಶ ನೀಡಿತು.

ಇತರ ಇಪ್ಪತ್ತುನಾಲ್ಕು ಜವಾನರ ಶವಗಳೊಂದಿಗೆ ಎಡ್ಡಿ ಫಾರ್ಸನ್ನನ ಶವವನ್ನೂ ಹೊತ್ತ ವಿಮಾನ ನ್ಯೂಯಾರ್ಕನ್ನು ತಲುಪಿದಾಗ ಮಧ್ಯ ರಾತ್ರಿಯಾಗಿತ್ತು. ಹೊರಗೆ ಆ ಕಂಪನಿಯ ಆ್ಯಂಬುಲನ್ಸ್ ಗಾಡಿ ದಾರಿ ಕಾಯುತ್ತಿತ್ತು. ಕಸ್ಟಮ್ ಅಧಿಕಾರಿಗಳು ಎಂದಿನಂತೆ ತಮ್ಮ ಕಾರ್ಯ ಪೂರೈಸಿದರು. ಎಲ್ಲರ ಮುಖದ ಮೇಲೂ ದುಃಖದ ಚಿಹ್ನೆ. ಸುದೂರ ಯುದ್ಧದಲ್ಲಿ ಮಡಿದ ದೇಶಬಂಧುವಿಗಾಗಿ ಎಲ್ಲರೂ ಪರಿತಪಿಸುವವರೆ. ಒಬ್ಬ ಕಸ್ಟಮ್ಸ್ ಅಧಿಕಾರಿಯಂತೂ ದುಃಖ ತಡೆಯಲಾರದೆ ಅತ್ತುಬಿಟ್ಟ. ಅನಂತರ ಶವಗಳನ್ನು ಆ್ಯಂಬುಲನ್ಸಿನಲ್ಲಿರಿಸಿಕೊಂಡು ಕಂಪನಿಯ ಮುಖ್ಯ ಕಚೇರಿಗೆ ತರಲಾಯಿತು.

ಮರುದಿನ ನಸುಕಿನಲ್ಲಿ ಆ ಎಲ್ಲ ಶವಗಳನ್ನು ಶವದಾನಿಯಲ್ಲಿರಿಸಿ ಚರ್ಚಿಗೆ ತರಲಾಯಿತು. ಅಂತಿಮ ದರ್ಶನಕ್ಕಾಗಿಯೂ ಇತರ ಧಾರ್ಮಿಕ ವಿಧಿಗಳಿಗಾಗಿಯೂ ಮೃತರ ಬಂಧುಗಳನ್ನು ಆಗಲೆ ಕಂಪನಿಯ ವಾಹನಗಳಲ್ಲಿ ಕರೆತರಲಾಗಿತ್ತು. ಡೈಲಾ ಫಾರ್ಸನ್ ಮಗನ ಮುಖವನ್ನು ನೋಡಿ ಬಿಕ್ಕಿ ಬಿಕ್ಕಿ ಅತ್ತಳು. ಪಾಪ! ಮಾತನಾಡುವ ಸ್ಥಿತಿಯಲ್ಲಿಯೂ ಇರಲಿಲ್ಲ ಆಕೆ. ಅನಂತರ ಶವಗಳನ್ನು ರುದ್ರಭೂಮಿಗೆ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ವಿಧಿವತ್ತಾಗಿ ದಫನ ಮಾಡಲಾಯಿತು. ಎಲ್ಲರೂ ವಿಷಣ್ಣಭಾವದಿಂದ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಮರುದಿನ ಹ್ಯಾರಿ ಸ್ಮಿತ್ ಡೈಲಾಳ ಮನೆಗೆ ಬಂದು ಕಂಪನಿಯ ಪರವಾಗಿ ಐದು ಸಾವಿರ ಡಾಲರುಗಳನ್ನು ಸಹಾಯಧನವಾಗಿ ಕೊಟ್ಟ. ಅಮೇರಿಕದ ಸರಕಾರವೂ ಎಡ್ಡಿಯ ಸಾಮಾನುಗಳ ಸಹಿತ ಅವನಿಗೆ ಬರಬೇಕಾಗಿದ್ದ ಸಂಬಳವನ್ನೂ ಅವಳಿಗೆ ಒಪ್ಪಿಸಿತು.

ಇದಾಗಿ ಸುಮಾರು ಎರಡು ತಿಂಗಳು ಕಳೆದಿರಬೇಕು. ಒಂದು ದಿನ ಮನೆಯ ಕರೆಗಂಟೆ ಬಾರಿಸಿದಾಗ ಡೈಲಾ ಫಾರ್ಸನ್ ಬಾಗಿಲು ತೆರೆದಳು. ಹೊರಗೆ ಅಮೇರಿಕದ ಗುಪ್ತಚಾರ ದಳ (ಎಫ್. ಬಿ. ಐ.)ಕ್ಕೆ ಸೇರಿದ ಮೂವರು ಅಧಿಕಾರಿಗಳು ನಿಂತಿದ್ದರು. ಅವರು ಎಡ್ಡಿಯ ಶವದ ಬಗೆಗೆ ವಿಚಾರಿಸಿದಾಗ ಡೈಲಾ ತನಗೆ ತಿಳಿದಿದ್ದೆಲ್ಲವನ್ನೂ ಹೇಳಿದಳು. ಅವರು ಅದೆಲ್ಲವನ್ನು ತಮ್ಮ ಪುಸ್ತಕದಲ್ಲಿ ನಮೂದಿಸಿಕೊಂಡರು. ಆದರೆ ಇವರು ಬಂದದ್ದೇಕೆಂಬುದು ಅವಳಿಗೆ ಅರ್ಥವಾಗಲಿಲ್ಲ.

ಗುಪ್ತಚಾರ ದಳದ ಅಧಿಕಾರಿಗಳೇ ಅವಳ ಸಂಶಯವನ್ನು ಪರಿಹರಿಸಿದರು. ಹ್ಯಾರಿ ಸ್ಮಿತ್ ಹೇಳಿದ ಸಂಸ್ಥೆ ಮಾನವೀಯ ಅನುಕಂಪೆಯಿಂದಾಗಿ ಹುಟ್ಟಿದ್ದಾಗಿರದೆ ವಾಸ್ತವ

ವಾಗಿ ಅದೊಂದು ಕಳ್ಳಸಾಗಾಟಗಾರರ ಕೇಂದ್ರವಾಗಿತ್ತು. ವಿದೇಶಗಳಲ್ಲಿ ಸತ್ತ ಅಮೇರಿಕನ್ನರ ಶವಗಳನ್ನು ಸ್ವದೇಶಕ್ಕೆ ಸಾಗಿಸುವ ನೆಪದಲ್ಲಿ ಅದು ಗಾಂಜಾ, ಅಫೀಮು, ಹೆರಾಯಿನ್, ಎಲ್. ಎಸ್. ಡಿ. ಯಂತಹ ನಿಷಿದ್ಧ ವಸ್ತುಗಳನ್ನು ಕಳ್ಳತನದಿಂದ ಅಮೇರಿಕಕ್ಕೆ ಸಾಗಿಸುತ್ತಿತ್ತು. ಅದಕ್ಕಾಗಿ ಅದು ವಿದೇಶಗಳಲ್ಲಿ ಸತ್ತ ಅಮೇರಿಕನ್ನರ ಶವಗಳನ್ನು ವಾಹಕ ಪೆಟ್ಟಿಗೆಗಳಂತೆ ಬಳಸಿಕೊಳ್ಳುತ್ತಿತ್ತು. ಅವಳ ಮಗ ಎಡ್ಡಿಯ ಮೃತ ಶರೀರವೂ ಮಾನವೀಯ ಅನುಕಂಪೆಯ ಹೆಸರಿನಲ್ಲಿ ಇಂಥದೊಂದು ಪೆಟ್ಟಿಗೆಯಂಪದ ಉಪಯೋಗವಾಗಿತ್ತು.

ಈ ಕಂಪನಿಯ ಸಂಚು ಹೊರಬಿದ್ದುದು ತೀರ ಅಕಸ್ಮಾತ್ತಾಗಿ. ನ್ಯೂಯಾರ್ಕ್ ವಿಮಾನ ನಿಲ್ದಾಣದಲ್ಲಿ ಒಂದು ರಾತ್ರಿ ವಿಮಾನದಿಂದ ಶವಗಳನ್ನು ಇಳಿಸುವಾಗ ಒಬ್ಬಾತ ಕಾಲುಜಾರಿ ತಾನು ಹೊತ್ತು ನಡೆದಿದ್ದ ಹೆಣದೊಡನೆ ನೆಲಕ್ಕುರುಳಿದ. ಆಗ ಸಂಯೋಗವಶಾತ್ ಹೆಣದ ಮೇಲೆ ಹೊದಿಸಿದ ವಸ್ತ್ರ ಸ್ವಲ್ಪ ಸರಿಯಿತು. ಅಲ್ಲಿಯೇ ನಡೆದಿದ್ದ ಕಸ್ಟಮ್ಸ್ ಅಧಿಕಾರಿಯ ದೃಷ್ಟಿ ಅಕಸ್ಮಾತ್ತಾಗಿ ಹೆಣದ ಮೇಲೆ ಬಿದ್ದಾಗ ಅದರ ಹೊಟ್ಟೆಯನ್ನು ಹೊಲಿದದ್ದು ಕಾಣಿಸಿತು. ಯುದ್ಧದಲ್ಲಿ ಗಾಯಗೊಂಡು ಸತ್ತವನ ಹೊಟ್ಟೆಗೆ ಶಸ್ತ್ರಕ್ರಿಯೆಯ ನಂತರ ಹಾಕುವಂಥ ಹೊಲಿಗೆಯನ್ನು ಕುಡು ಅವನಿಗೇನೋ ಸಂಶಯ ಬಂತು. ಈ ಬಗ್ಗೆ ತನಿಖೆ ನಡೆಸಲು ಆತ ಮೇಲಧಿಕಾರಿಗಳೊಡನೆ ಸಮಾಲೋಚಿಸಿ ಒಂದಿರುಗುವಷ್ಟರಲ್ಲೇ ಆ ಕಂಪನಿಯ ಸೇವಕರು ಫರಾರಿಯಾಗಿದ್ದರು. ಇದರ ರಹಸ್ಯವೇನೆಂದು ನೋಡಲು ಅಂದು ಬಂದಿದ್ದ ಎಲ್ಲ ಶವಗಳ ಹೊಟ್ಟೆಯನ್ನೂ ಬಗೆದು ನೋಡಿದಾಗ ನಿಷಿದ್ಧ ಮಾದಕ ಪದಾರ್ಥಗಳನ್ನಿರಿಸಲಾಗಿದ್ದ ಪ್ಲಾಸ್ಟಿಕ್ ಚೀಲಗಳು ದೊರೆತವು. ಪೋಲೀಸರು ಈ ಸಂಸ್ಥೆಯ ಮುಖ್ಯ ಕಚೇರಿಗೆ ಮುತ್ತಿಗೆ ಹಾಕುವಷ್ಟರಲ್ಲೇ ಪಂಜರದೊಳಗಿನ ಪಕ್ಷಿಗಳೆಲ್ಲ ಹಾರಿಹೋಗಿದ್ದವು. ಅಲ್ಲಿ ಕೆಲವು ಶವಗಳು ಹಾಗೂ ಮಾದಕ ವಸ್ತುಗಳ ಹೊರತಾಗಿ ಬೇರೇನೂ ಅವರಿಗೆ ದೊರೆಯಲಿಲ್ಲ.

ಈ ಸಮಾಚಾರವನ್ನು ಕೂಡಲೇ ಎಲ್ಲ ಸಂಬಂಧಿಸಿದ ದೇಶಗಳಿಗೆ ತಿಳಿಸಲಾಯಿತು. ಕಂಪನಿಯ ಸೈಗಾನ್ ಶಾಖೆಯಲ್ಲಿ ಕೆಲಸಕ್ಕಿದ್ದ ಎಲ್ಲ ಖದೀಮರೂ ಸಿಕ್ಕುಬಿದ್ದರು. ಅವರ ಕಚೇರಿಯನ್ನು ಶೋಧಿಸಲಾಗಿ ಅಲ್ಲಿ ಸುಸಜ್ಜಿತ ಆಪರೇಶನ್ ಥಿಯೇಟರ್ ಒಂದಿದ್ದುದು ಕಂಡು ಬಂದಿತು. ನುರಿತ ಶಸ್ತ್ರಚಿಕಿತ್ಸಕರು ಅಲ್ಲಿ ಹೆಣಗಳ ಹೊಟ್ಟೆಯನ್ನು ಬಗೆದು ಅದರೊಳಗಿನ ಅವಯವಗಳನ್ನು ಕತ್ತರಿಸಿ ಹೊರದೆಗೆದು ಮಾದಕ ಪದಾರ್ಥಗಳನ್ನು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಒಳಗಿಟ್ಟು ಹೊಲಿದುಬಿಡುತ್ತಿದ್ದರು. ತಪ್ಪೊಪ್ಪಿಗೆ ಕೊಟ್ಟ ಒಬ್ಬ ಖದೀಮನ ಹೇಳಿಕೆಯ ಮೇರೆಗೆ ಈ ದುರ್ವ್ಯವಹಾರದಲ್ಲಿ ಪಾಲುದಾರರಾಗಿದ್ದ ದಕ್ಷಿಣ ವಿಯೆತ್‌ನಾಮಿನಲ್ಲಿಯ ಕೆಲ ಅಮೇರಿಕನ್ ಸೇನಾಧಿಕಾರಿಗಳನ್ನು ಬಂಧಿಸಲಾಯಿತು.

ಒಂದೊಂದು ಶವದಿಂದಲೂ ಈ ಕಂಪನಿ ಲಕ್ಷಾವಧಿ ಡಾಲರುಗಳನ್ನು ಸಂಪಾದಿಸುತ್ತಿತ್ತು. ಸಂಯೋಗವಶಾತ್ ಆ ದಿನ ಶವ ಕೆಳಕ್ಕೆ ಬಿದ್ದು ಪ್ರಕರಣ ಬೆಳಕಿಗೆ ಬಾರದಿದ್ದರೆ ಎಷ್ಟು ದಿನ ಈ ಕಾರ್ಯ ಮುಂದುವರಿಯುತ್ತಿತ್ತೋ ದೇವರೇ ಬಲ್ಲ. ಪೋಲೀಸರು ಎಷ್ಟು ಶೋಧಿಸಿದರೂ ಹ್ಯಾರಿ ಸ್ಮಿತ್ ಸಿಗಲೇ ಇಲ್ಲ.

ಕಳ್ಳ ಸಾಗಾಟಕ್ಕಾಗಿ ಶವಗಳನ್ನು ಈ ಮೊದಲು ಬಳಸಿಕೊಂಡ ಪ್ರಸಂಗಗಳು ಇಲ್ಲದೆ ಇಲ್ಲ. ಆದರೆ ಬೃಹದ್ಗಾತ್ರದಲ್ಲಿ ಈ ತಂತ್ರವನ್ನು ದೇಶಭಕ್ತಿಯ ನೆಪದಲ್ಲಿ ಉಪಯೋಗಿಸಿ ಇಷ್ಟು ದೀರ್ಘ ಕಾಲದವರೆಗೆ ಜನತೆಯ, ಹಾಗೆಯೇ ಅಧಿಕಾರಿಗಳ ಕಣ್ಣಿಗೆ ಮಣ್ಣೆರಚಿದ್ದು ಪ್ರಾಯಶಃ ಇದೇ ಮೊದಲ ಸಲವೇನೋ.

✲

‘ನವಭಾರತ ಟೈಮ್ಸ್’ನಲ್ಲಿ ರಫಿಕ್ ಸಾದಾನಿಯವರ ಲೇಖನದ ಆಧಾರದಿಂದ

ಅವರು ಸಂಗೀತವನ್ನು
ಅರಮನೆಯ ಬಂಧನದಿಂದ ಬಿಡಿಸಿದರು

ರಸಋಷಿ ಪಲುಸ್ಕರ

ಎಸ್. ಬಾಲಚಂದ್ರರಾವ್

ಭಾರತೀಯ ಸಂಸ್ಕೃತಿಯ ಮುಖ್ಯವಾದ ಅಂಗಗಳೆಂದರೆ ಧರ್ಮ, ದರ್ಶನ, ಕಲೆ, ಸಂಗೀತ, ನೃತ್ಯ ಮತ್ತು ಸಾಹಿತ್ಯ. ಇವುಗಳಲ್ಲಿ ಒಂದೊಂದರ ಧ್ಯೇಯವೂ ಐಹಿಕ ಮತ್ತು ಆಮುಷ್ಮಿಕ ಶ್ರೇಯಃಪ್ರಾಪ್ತಿ. ವಿಶೇಷವಾಗಿ (ಸಂ)ಗೀತದ ವಿಷಯದಲ್ಲಿ "ತಸ್ಯ ಗೀತಸ್ಯ... ಧರ್ಮಾರ್ಥಕಾಮಮೋಕ್ಷಾಣಾಮಿದಮೇವೈಕ ಸಾಧನಂ" ಎಂದು ಚತುರ್ವಿಧ ಪುರುಷಾರ್ಥಗಳಿಗೆ ಸಂಗೀತವು ಏಕೈಕ ಸಾಧನವೆಂದು ಶಾಸ್ತ್ರಕಾರರು ಸಾರಿದ್ದಾರೆ. ಭಾರತೀಯ ಸಂಗೀತ ಶಾಸ್ತ್ರಕ್ಕೆ ಸಾಮವೇದವು ಆಧಾರವಷ್ಟೆ. ಅಲ್ಲಿಂದ ಮುಂದುವರಿದ ಸಂಗೀತದ ವಿಕಾಸ ಮಾರ್ಗದಲ್ಲಿ ಅನೇಕಾನೇಕ ವಾಗ್ಗೇಯಕಾರರ ಅತ್ಯಮೂಲ್ಯ ಕೊಡುಗೆಯು ಸೇರಿದೆ. ಅವರಲ್ಲಿ ಮುಖ್ಯರಾದವರೆಲ್ಲ ಮಹಾಜ್ಞಾನಿಗಳು, ಯೋಗಿಗಳು ಮತ್ತು ಪುರಂದರದಾಸ ತ್ಯಾಗರಾಜರಂತಹ ಭಾಗವತೋತ್ತಮರು.

ಕಾಲಕ್ರಮೇಣ ಐತಿಹಾಸಿಕ ಕಾರಣಗಳಿಂದ ನಮ್ಮ ದೇಶದಲ್ಲಿ ಮುಖ್ಯವಾಗಿ ಶಾಸ್ತ್ರೀಯ ಸಂಗೀತವು ಇಬ್ಬಗೆಯಾಗಿ ಬೆಳೆದುಬಂದಿದೆ- ಉತ್ತರಾದಿ (ಹಿಂದುಸ್ಥಾನಿ) ಮತ್ತು ದಕ್ಷಿಣಾದಿ (ಕರ್ಣಾಟಕೀ). ಇವೆರಡು ಪದ್ಧತಿಗಳಿಗೂ ಮೂಲ ಒಂದೇ. ಬಹುಶಃ ಈ ರೀತಿಯ ದ್ವಿವಿಧ ಪದ್ಧತಿಯು ಮೊದಲಾಗಿ ಐದಾರು ಶತಮಾನಗಳಾಗಿರಬಹುದು.

ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದಲ್ಲಿ ಕಾರಣಾಂತರಗಳಿಂದ ಶಾಸ್ತ್ರೀಯತೆಯು ಇಳಿಮುಖವಾಗುತ್ತ ಸಂಗೀತದ ಮುಖ್ಯಧ್ಯೇಯವು ಮರೆಯಾಗುತ್ತಿರಲು ಅದನ್ನೆಲ್ಲಾ ಸರಿಪಡಿಸುವುದಕ್ಕಾಗಿಯೇ ಎಂಬಂತೆ ಶ್ರೀ ವಿಷ್ಣು ದಿಗಂಬರ ಪಲುಸ್ಕರರು ಜನಿಸಿದರು. ಉತ್ತರಾದಿ ಸಂಗೀತವು ಶಾಸ್ತ್ರೀಯವಾದ ಅಡಿಪಾಯವನ್ನು ಹೊಂದಿ ಲೋಕಪ್ರಿಯವಾಗಲು ಈ ಶತಮಾನದ ಆದಿಯಲ್ಲಿದ್ದ ವಿಷ್ಣುದ್ವಯರು ಕಾರಣರು—ಒಬ್ಬರು ವಿಷ್ಣು ದಿಗಂಬರ ಪಲುಸ್ಕರ್, ಇನ್ನೊಬ್ಬರು ವಿಷ್ಣು ನಾರಾಯಣ ಭಾತಖಂಡೆಯವರು. ಪಂ. ಪಲುಸ್ಕರರು ಸಂಗೀತವನ್ನು ಭಕ್ತಿಭಾವಗಳ ಮಾಧ್ಯಮವಾಗಿ ಲೋಕಪ್ರಿಯವಾಗಿಸಿದ್ದಲ್ಲದೆ ಸಂಗೀತಕ್ಕೂ ಸಂಗೀತಗಾರರಿಗೂ ಸಮಾಜದಲ್ಲಿ ಬಹಳ ಗೌರವವನ್ನು ಸಂಪಾದಿಸಿಕೊಟ್ಟರು. ಪಂ. ಭಾತಖಂಡೆಯವರು ಪ್ರಾಚೀನ ಮತ್ತು ಅರ್ವಾಚೀನ ಸಂಗೀತದ ವಿಷಯದಲ್ಲಿ ಶಾಸ್ತ್ರೀಯವಾಗಿ ಸಂಶೋಧನೆಯನ್ನು ನಡೆಸಿ ಸಂಗೀತಶಾಸ್ತ್ರಕ್ಕೆ ಒಂದು ನಿಶ್ಚಿತ ಆಕಾರವನ್ನು ಒದಗಿಸಿದರು.

ವಿಷ್ಣು ದಿಗಂಬರ ಪಲುಸ್ಕರರು ಕ್ರಿ. ಶ. ೧೮೭೨ರ ಆಗಸ್ಟ್ ೧೮ ರಂದು ಮಹಾರಾಷ್ಟ್ರದ ಕುರುಂದವಾಡ ಎಂಬಲ್ಲಿ ಜನ್ಮ ತಾಳಿದರು. ಇವರ ತಂದೆಯವರು ಶ್ರೇಷ್ಠ ಕೀರ್ತನಕಾರ.

ತಂದೆಯುವರು ಕೀರ್ತನೆಮಾಡುವ ಸಂದರ್ಭದಲ್ಲಿ ಅವರೊಂದಿಗೆ "ಸಾಥಿ"ಯಿರುತ್ತಿದ್ದ ವಿಷ್ಣುವಿಗೆ ಸಂಗೀತದಲ್ಲಿ ಮೊದಲನೆಯ ಪಾಠಗಳು ದೊರೆತವು. ಅವನು ಆಗಲೇ ಸುಮಧುರವಾದ ಕಂಠಶ್ರೀಯನ್ನೂ ಭಾವಪರವಶತೆಯಿಂದ ಹಾಡುವ ಅಭ್ಯಾಸವನ್ನೂ ಬೆಳೆಸಿಕೊಂಡನು. ಅಂತೆಯೇ ಇಂಗ್ಲಿಷ್ ಆರನೇ ತರಗತಿಯವರೆಗೆ ಸ್ಕೂಲಿನ ಶಿಕ್ಷಣವನ್ನೂ ಪಡೆದನು. ಆಗಿನ ಸಾಮಾಜಿಕ ಪದ್ಧತಿಯಂತೆ ಆ ಸಣ್ಣ ವಯಸ್ಸಿನಲ್ಲಿಯೇ ವಿಷ್ಣುವಿಗೆ ವಿವಾಹವನ್ನೂ ಮಾಡಿದರು. ಈಗ ವಿಷ್ಣುವಿನ ಮುಂದೆ ಬೃಹದಾಕಾರವಾಗಿ ನಿಂತ ಸಮಸ್ಯೆಯೆಂದರೆ ತಂದೆಯಂತೆಯೇ ಕೀರ್ತನಕಾರನಾಗುವುದೇ ಅಥವಾ ಒಂದು ಆಫೀಸಿನಲ್ಲಿ ಕಾರಕೂನನಾಗುವುದೇ ಎಂಬುದು. ಆದರೆ ವಿಧಿವಶಾತ್ ಜರುಗಿದ ಒಂದು ಅನಾಹುತದಿಂದ ಆತನ ಕಣ್ಣುಗಳಿಗೆ ತೀವ್ರವಾದ ಏಟು



ಬಿದ್ದು ದೃಷ್ಟಿಯನ್ನು ಹೆಚ್ಚುಕಡಿಮೆ ಕಳೆದುಕೊಂಡಂತೆಯೇ ಆಯಿತು. ಇದರಿಂದ ಆತನಿಗೆ ಕೀರ್ತನಕಾರನಾಗುವುದೊಂದೇ ಉಳಿದ ಮಾರ್ಗ.

ಹತ್ತಿರದಲ್ಲಿಯೇ ಇದ್ದ ದೊಡ್ಡ ಪಟ್ಟಣವಾದ ಮಿರಜಿಯಲ್ಲಿ ಅಲ್ಲಿಯ ಮಹಾರಾಜರ ಕೃಪೆಯಿಂದ ಅಲ್ಲಿಯ ಪ್ರಸಿದ್ಧ ವೈದ್ಯರಾದ ಡಾ. ಭಡಭಡೆಯವರು ವಿಷ್ಣುವಿನ ಕಣ್ಣುಗಳಿಗೆ ಚಿಕಿತ್ಸೆ ನೀಡಲಾರಂಭಿಸಿದರು. ಆ ಚಿಕಿತ್ಸೆಯಿಂದ ಯಾವ ಅನುಕೂಲವಾಗದಿದ್ದರೂ ವಿಷ್ಣು ದಿಗಂಬರರ ಮುಂದಿನ ಜೀವನಕ್ಕೆ ಬೇಕಾದ ಪ್ರೋತ್ಸಾಹ ದೊರೆಯಲು ಅನುಕೂಲವಾಯಿತು. ವಿಷ್ಣುವು ಆಗಿಂದಾಗ್ಗೆ ಭಕ್ತಿಪರವಶನಾಗಿ ಹಾಡುತ್ತಿದ್ದ ದೇವರನಾಮಗಳನ್ನು ಕೇಳಿ ಡಾ. ಭಡಭಡೆಯವರು ಬಹಳ ಪ್ರಭಾವಿತರಾಗಿ ಆತನನ್ನು ಬಹಳ ಮಟ್ಟಿಗೆ ಪ್ರೋತ್ಸಾಹಿಸಿದರು. ಈತನ ಶ್ರೇಯೋಭಿಲಾಷಿಗಳಾದ ಡಾ. ಭಡಭಡೆಯವರು ಮತ್ತು ಮಿರಜಿಯ ಮಹಾರಾಜರು ವಿಷ್ಣುವಿನ ಭವಿಷ್ಯದ ಬಗ್ಗೆ ಬಹಳ ಕಾಳಜಿಯನ್ನು ವಹಿಸಿಕೊಂಡರು. ಈತನಿಗೆ ಗಾನದಲ್ಲಿದ್ದ ಶ್ರದ್ಧೆಯನ್ನು ಕಂಡು ಮಹಾರಾಜರ ಆಸ್ಥಾನಗಾಯಕರಾದ ಪಂಡಿತ ಬಾಲಕೃಷ್ಣ ಬುವಾ ಈಚಲಕರಂಜೀಕರ ಅವರಲ್ಲಿ ವಿಷ್ಣು ದಿಗಂಬರರು ಸಂಗೀತಾಭ್ಯಾಸಮಾಡುವಂತೆ ವ್ಯವಸ್ಥೆ ಮಾಡಿದರು.

ಪಂ. ಬಾಲಕೃಷ್ಣ ಬುವಾರವರು ಅನೇಕ ಶತಮಾನಗಳಿಂದ (ಉತ್ತರಾದಿ) ಸಂಗೀತದ ವಾರಾಣಸಿಯೆನಿಸಿಕೊಂಡ ಗ್ವಾಲಿಯರಿನಲ್ಲಿ ಸಂಗೀತಾಭ್ಯಾಸಮಾಡಿ ಪ್ರಸಿದ್ಧವಾದ ಗ್ವಾಲಿಯರ್ ಘರಾಣೆಯ ಶ್ರೇಷ್ಠ ಮಟ್ಟದ ಗಾಯಕರೆನಿಸಿಕೊಂಡಿದ್ದರು. ಇಂತಹ ಶ್ರೇಷ್ಠ ಗುರುಗಳಲ್ಲಿ ವಿಷ್ಣು ದಿಗಂಬರರ ಶಿಷ್ಯವೃತ್ತಿಯು ಇವರ ಹದಿನೈದನೆಯ ವಯಸ್ಸಿನಲ್ಲಿ ಪ್ರಾರಂಭವಾಯಿತು.

ಆ ಕಾಲದಲ್ಲಿ ಸಂಗೀತಾಭ್ಯಾಸಮಾಡುವುದು ಕಷ್ಟಾತ್ ಕಷ್ಟಕರವಾದ ಸಾಹಸವೇ ಸರಿ.

ರ್ಥಿಯು ತನ್ನ ಗುರುವಿನ ಮನೆಯಲ್ಲಿ ಎಲ್ಲಾ ರೀತಿಯ ಜೀತವನ್ನೂ ಮಾಡಬೇಕಾಗಿತ್ತು. ವಿನಾಕಾರಣ ಗುರುವಿನ ಕೋಪತಾಪಗಳಿಗೆ ಗುರಿಯಾಗಬೇಕಾಗಿತ್ತು. ಪಾಠಕ್ಕೆ ನಿಯಮಿತವಾದ ವೇಳೆಯಾಗಲೀ, ಕ್ರಮಬದ್ಧವಾದ ಶಿಕ್ಷಣ ಪದ್ಧತಿಯಾಗಲೀ ಇರಲಿಲ್ಲ. ಅಂತೆಯೇ ರಾಗಗಳ ಲಕ್ಷಣವನ್ನು ಶಾಸ್ತ್ರೀಯವಾಗಿ ತಿಳಿಸುವ ಮತ್ತು ಶುದ್ಧವಾದ ಸಾಹಿತ್ಯವನ್ನು ಒದಗಿಸುವ ಪುಸ್ತಕಗಳಿರಲಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಶಿಷ್ಯನಿಗಿದ್ದ ಒಂದೇ ಮಾರ್ಗವೆಂದರೆ ಗುರುವು ಹಾಡುವುದನ್ನೇ ಅಂಧವಾಗಿ ಅನುಕರಿಸುವುದು. ಇದರಿಂದ ಗುರುವಿನ ಗಾಯಕಿಯಲ್ಲಿದ್ದ ದೋಷಗಳು ಹಾಗೆಯೇ ಪರಂಪರಾಗತವಾಗಿ ಮುಂದುವರೆಯುವುದಲ್ಲದೇ ಶಿಷ್ಯನಿಗೆ ತನ್ನ ಸ್ವಂತ ಪ್ರತಿಭೆಯನ್ನು ಬೆಳೆಸಿಕೊಳ್ಳುವ ಅವಕಾಶವೇ ಇರುತ್ತಿರಲಿಲ್ಲ.

ಇಂತಹ ಒಂದು ಕಷ್ಟದ ವಾತಾವರಣದಲ್ಲಿ ವಿಷ್ಣು ದಿಗಂಬರರು ಬಾಲಕೃಷ್ಣ ಬುವಾರವರಲ್ಲಿ ಒಂಬತ್ತು ವರ್ಷಗಳ ಕಾಲ ಬಹಳ ಶ್ರಮವಹಿಸಿ ಶ್ರದ್ಧೆಯಿಂದ ಸಂಗೀತ ಸಾಧನೆಯನ್ನು ಮಾಡಿದರು. ತೀವ್ರಗತಿಯ ತಾನಗಳನ್ನು ಹೊಂದಿದ ಗ್ವಾಲಿಯರ್ ಘರಾಣೆಯ ಶೈಲಿಗೆ ಅವರ ಪೂರ್ಣವಾದ ಧ್ವನಿಯಿಂದೊಡಗೂಡಿದ ಸ್ವಲ್ಪ ಮಂದಗತಿಯ ಗಾಯಕಿಯನ್ನು ಅಳವಡಿಸಿಕೊಳ್ಳಲು ಅವರು ಬಹಳ ಶ್ರಮವಹಿಸಬೇಕಾಯಿತು. ದಿನದಲ್ಲಿ ಬಹಳಷ್ಟು ಕಾಲ ವಿಷ್ಣು ದಿಗಂಬರರು ಕ್ರಮಬದ್ಧವಾದ ರಿಯಾಜ್ (ಅಭ್ಯಾಸ) ಮಾಡುತ್ತಿದ್ದರು. ಈ ರೀತಿಯ ಒಂದು ತಪಸ್ಸಿನಿಂದ ಪಲುಸ್ಕರರು ಗಾಂಧರ್ವ ವಿದ್ಯೆಯನ್ನು ಸಾಧಿಸಿಕೊಂಡರು.

ಅಂದಿನ ಸಮಾಜದಲ್ಲಿ ಸಂಗೀತದ ಮತ್ತು ಗಾಯಕರ ವಿಷಯದಲ್ಲಿದ್ದ ಉದಾಸೀನತೆ ಮತ್ತು ತಿರಸ್ಕಾರ ಮನೋಭಾವನೆಯನ್ನು ತಮ್ಮ ಚುರುಕು ಬುದ್ಧಿಯಿಂದ ಮನಗಂಡ ಪಲುಸ್ಕರರಿಗೆ ಬಹಳ ಖೇದವೆನಿಸಿತು. ಗಣ್ಯವ್ಯಕ್ತಿಗಳು ಸೇರಿದಂತಹ ಸಭೆಗಳಲ್ಲಿ ಸಂಗೀತಗಾರರಿಗೆ ಅವಕಾಶವೇ ಇರುತ್ತಿರಲಿಲ್ಲ. ಆಸ್ಥಾನ ವಿದ್ವಾಂಸರಾದ ಪಂ. ಬಾಲಕೃಷ್ಣ ಬುವಾರವರಿಗೇ ಅಂತಹ ಎಷ್ಟೋ ಸಭೆಗಳಿಗೆ ಆಹ್ವಾನವಿರುತ್ತಿರಲಿಲ್ಲ. ಇದಕ್ಕೆ ಎರಡು ಕಾರಣಗಳಿದ್ದವು–ಸಂಗೀತದ ಬಗ್ಗೆ ಸಮಾಜದಲ್ಲಿದ್ದ ಅನಾಸಕ್ತಿ ಹಾಗೂ ತಿರಸ್ಕಾರ ಮತ್ತು ಸಂಗೀತಗಾರರ ಕೀಳು ಮಟ್ಟದ ಜೀವನ. ಇವೆಲ್ಲ ಪಲುಸ್ಕರರ ಸೂಕ್ಷ್ಮವಾದ ಮನಸ್ಸಿನಲ್ಲಿ ಮೂಡಿದ ಪರಿಣಾಮದಿಂದ ಅವರು ತಮ್ಮ ಮುಂದಿನ ಜೀವನದಲ್ಲಿ ಸಂಗೀತಕ್ಕೆ ಮತ್ತು ಸಂಗೀತಜ್ಞರಿಗೆ ಸಮಾಜದಲ್ಲಿ ಒಳ್ಳೆಯ ಗೌರವದ ಸ್ಥಾನವನ್ನು ಸಂಪಾದಿಸಿಕೊಡಬೇಕೆಂದು ನಿರ್ಧರಿಸಿಕೊಂಡರು.

ಪಲುಸ್ಕರರು ತಮ್ಮ ಗುರುಗಳೊಂದಿಗೆ ಪ್ರತಿಯೊಂದು ಸಂಗೀತ ಕಚೇರಿಯಲ್ಲೂ ಸಾಥಿಯಾಗಿ ಕೂಡಲಾರಂಭಿಸಿದರು. ಕೆಲವೊಮ್ಮೆ ಅವರಿಗೆ ಅರಿವಿಲ್ಲದಂತೆಯೇ ಗಾನದಲ್ಲಿ ಗುರುಗಳನ್ನೂ ಮೀರಿಸುತ್ತಿದ್ದರು. ಇದರ ಜೊತೆಯಲ್ಲಿ ಪಲುಸ್ಕರರ ಭಾವಪರವಶತೆ ಮತ್ತು ಸುಮಧುರ ಕಂಠದಿಂದ ಅವರ ಸಹಪಾಠಿಗಳಿಗೆ ವಿಷ್ಣು ದಿಗಂಬರರ ಬಗ್ಗೆ ಬಹಳ ಈರ್ಷೆಯುಂಟಾಗಿ ಅವರು ಗುರುಗಳ ಕಿವಿಯಲ್ಲಿ ಈತನ ಬಗ್ಗೆ ಇಲ್ಲಸಲ್ಲದ ಚಾಡಿಯ ಮಾತುಗಳನ್ನು ಚುಚ್ಚುವುದರಿಂದ ಪಲುಸ್ಕರರ ವಿಷಯದಲ್ಲಿ ಗುರುಗಳಿಗೆ ಬಹಳ ಮನಸ್ತಾಪವುಂಟಾಗಿ ತಾತ್ಸಾರ ಬೆಳೆಯತೊಡಗಿತು.

ತಮ್ಮ ಸ್ವಂತ ಪ್ರತಿಭೆಯಿಂದ ಸಂಗೀತ ಕ್ಷೇತ್ರದಲ್ಲಿಯೇ ಒಂದು ಬೃಹತ್ ಕ್ರಾಂತಿಯನ್ನು ಎಬ್ಬಿಸಬೇಕೆಂಬ ದೃಢನಿರ್ಧಾರದೊಂದಿಗೆ ವಿಷ್ಣು ದಿಗಂಬರರು ತಮ್ಮ ಇಪ್ಪತ್ತನಾಲ್ಕನೆಯ ವರ್ಷದಲ್ಲಿ ತಮ್ಮ ಒತ್ತೈಷಿಗಳೂ ಸಹಪಾಠಿಗಳೂ ಆದ ಶ್ರೀ ಹೇರಲೇಕರ ಮತ್ತು ಶ್ರೀ ಕಾಣೆಯವರೊಂದಿಗೆ ತಮ್ಮ ಗುರುಗಳ ಸಹವಾಸದಿಂದ ಬೇರ್ಪಟ್ಟು ಮಿರಜನ್ನು ಬಿಟ್ಟರು. ಅಲ್ಲಿಂದ ಹೊರಟು ಸಾತಾರಾದಲ್ಲಿ ತಮ್ಮ ಮೊಟ್ಟಮೊದಲನೆಯ ಸ್ವತಂತ್ರವಾದ ಸಂಗೀತ ಕಚೇರಿಯನ್ನು ಕೊಟ್ಟು ಅನಂತರ ಬಡೋದೆಗೆ ತೆರಳಿದರು.

ಬಡೋದೆಯು ಗ್ವಾಲಿಯರಿನಂತೆಯೇ ಉತ್ತರಾದಿ ಸಂಗೀತದ ಕಾಶಿಯಾಗಿತ್ತು. ಅಲ್ಲಿ ಒಂದು ರಾಮಮಂದಿರದಲ್ಲಿ ಕೆಲವು ದಿನ ವಾಸಮಾಡುತ್ತ ತಮ್ಮ ಸಂಗೀತದ ರಿಯಾಜ್‌ನಿಂದ ಬರೋಡೆಯ ಜನಮನವನ್ನು ಸೆಳೆದರು. ಈ ಆಗಂತುಕರ ಪ್ರಭಾವಯುತ ಗಾನದ ವಿಷಯವನ್ನು ಕೇಳಿ ಅಲ್ಲಿಯ ಮಹಾರಾಣಿ ಜಮುನಾಬಾಯಿಯವರು ತಮ್ಮ ದರ್ಬಾರಿನಲ್ಲಿ ಹಾಡಲು ಪಲುಸ್ಕರರನ್ನು ಆಹ್ವಾನಿಸಿದರು. ಅಲ್ಲಿಯ ಪದ್ಧತಿಯಂತೆ ಬಡೋದೆಯ ಆಸ್ಥಾನ ವಿದ್ವಾಂಸರು ಮೊದಲು ಹಾಡಿದ ನಂತರ ಅತಿಥಿ ಗಾಯಕರ ಹಾಡುಗಾರಿಕೆಯು ನಡೆಯಬೇಕಿತ್ತು. ಆದರೆ ಪಲುಸ್ಕರರು ವಯಸ್ಸಿನಲ್ಲಿ ಚಿಕ್ಕವರಾದ್ದರಿಂದ ಮತ್ತು ಬಹುಶಃ ಇವರ ಬಗ್ಗೆ ಆ ವಿದ್ವಾಂಸರಿಗಿದ್ದ ತಿರಸ್ಕಾರದ ಕಾರಣದಿಂದ ಇವರೇ ಮೊದಲು ಹಾಡಬೇಕಾಯಿತು. ಅಲ್ಲಿಯ ವಿದ್ವಾಂಸರಲ್ಲಿದ್ದ ತಿರಸ್ಕಾರವನ್ನು ಮನಗಂಡ ವಿಷ್ಣು ದಿಗಂಬರರು ತಮ್ಮ ತಂಬೂರಿಯನ್ನು ಶ್ರುತಿಮಾಡಿ ತಮಗೆ ಸ್ವಭಾವಸಿದ್ಧವಾದ ದೈವೀಭಾವದೊಂದಿಗೆ ಉಚ್ಚಸ್ಥಾಯಿಯಲ್ಲಿ ಗಾಂಧರ್ವ ವಿದ್ಯೆಯ ಹೊನಲನ್ನೇ ಹರಿಸಿಬಿಟ್ಟರು. ಇದರಿಂದ ಮಂತ್ರಮುಗ್ಧವಾದ ವಿದ್ವತ್ಸಭೆಯಲ್ಲಿ ಇವರನ್ನು ಮೀರಿಸುವ ಧೈರ್ಯ ಯಾವ ಲೌಕಿಕ ಮಟ್ಟದ ಗಾಯಕನಿಗೆ ತಾನೇ ಬರಲು ಸಾಧ್ಯ? ಇವರ ನಂತರ ಹಾಡಿದ ಅಲ್ಲಿಯ ಸುಪ್ರಸಿದ್ಧ ಆಸ್ಥಾನ ಗಾಯಕರಾಗಿದ್ದ ಉಸ್ತಾದ್ ಫಯಾಜ್ ಮಹಮ್ಮದಖಾನರಿಂದಲೂ ಶ್ರೋತೃಗಳನ್ನು ಮೆಚ್ಚಿಸಲು ಸಾಧ್ಯವಾಗಲಿಲ್ಲ.

ಈ ಘಟನೆಯಿಂದ ಪಲುಸ್ಕರರು ಒಬ್ಬ ಶ್ರೇಷ್ಠ ಮಟ್ಟದ ಸಂಗೀತಜ್ಞರೆಂದು ವಿದ್ವಾಂಸರಿಂದ ಪರಿಗಣಿತರಾದರು. ಬಡೋದೆಯಲ್ಲಿ ಸಾಧಿಸಿದ ವಿಜಯದ ನಂತರ ವಿಷ್ಣು ದಿಗಂಬರರು ಸೌರಾಷ್ಟ್ರದಲ್ಲಿ ತಮ್ಮ ಸಂಗೀತ ಕಚೇರಿಗಳನ್ನು ನಡೆಸಲಾರಂಭಿಸಿದರು. ಆಗಿನ ಕಾಲದಲ್ಲಿ ಸಂಗೀತ ಕಚೇರಿಗಳು ನಡೆಯುತ್ತಿದ್ದದ್ದು ಕೇವಲ ಮಹಾರಾಜರ ಅರಮನೆಗಳಲ್ಲಿ ಮತ್ತು ಶ್ರೀಮಂತರ ಆಶ್ರಯದಲ್ಲಿ. ಇಂತಹ ಕಚೇರಿಗಳಿಗೆ ಸಂಗೀತದಲ್ಲಿ ಆಸಕ್ತಿಯುಳ್ಳ ಶ್ರೀಸಾಮಾನ್ಯರಿಗೆ ಆಹ್ವಾನವೇ ಇರುತ್ತಿರಲಿಲ್ಲ. ಇದರಿಂದ ಬೇಸರಗೊಂಡ ಪಲುಸ್ಕರರು ಪ್ರತಿಯೊಬ್ಬ ಸಂಗೀತಪ್ರೇಮಿಗೂ ಸಂಗೀತವನ್ನು ಕೇಳುವ ಸದವಕಾಶವನ್ನು ಕಲ್ಪಿಸಿಕೊಡುವುದಕ್ಕೋಸ್ಕರ ಟಿಕೆಟ್ಟುಗಳನ್ನಿಟ್ಟು ಸಾರ್ವಜನಿಕ ಸಂಗೀತ ಕಚೇರಿಗಳನ್ನು ಏರ್ಪಡಿಸಲಾರಂಭಿಸಿದರು. ಈ ರೀತಿಯ ಹೊಸ ಪದ್ಧತಿಯನ್ನು ನಮ್ಮ ದೇಶದಲ್ಲಿ ಮೊಟ್ಟಮೊದಲಿಗೆ ಕಾರ್ಯಗತ ಮಾಡಿದ ಕೀರ್ತಿ ವಿಷ್ಣು ದಿಗಂಬರರದು; ಇಂತಹ ಸಾರ್ವಜನಿಕ ಕಚೇರಿಗಳಿಗೆ ಎಲ್ಲಾ ಶ್ರೋತೃಗಳಿಗೂ ಪ್ರವೇಶವಿರುತ್ತಿದ್ದರಿಂದ ಸಹಸ್ರ ಸಂಖ್ಯೆಗಳಲ್ಲಿ ಜನರು ಸಂಗೀತದಲ್ಲಿ ಒಳ್ಳೆಯ ಅಭಿರುಚಿಯನ್ನು ಬೆಳೆಸಿಕೊಳ್ಳಲು ಅನುಕೂಲವಾಯಿತು.

ಪಲುಸ್ಕರರು ಸೌರಾಷ್ಟ್ರದಲ್ಲಿ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಇವರ ಜೀವನದ ಮೇಲೆ ಬಹಳ ಪರಿಣಾಮ ಮಾಡಿದಂತಹ ಒಂದು ಮಹತ್ವದ ಘಟನೆಯು ಜರುಗಿತು. ಗಿರನಾರ ಪರ್ವತದ ಮೇಲಿರುವ ದೇವಿಯ ದರ್ಶನಕ್ಕಾಗಿ ಪಲುಸ್ಕರರು ತಮ್ಮ ಶಿಷ್ಯರೊಂದಿಗೆ ಹೊರಟರು. ಮಾರ್ಗಮಧ್ಯದಲ್ಲಿ ಇವರು ಶಿಷ್ಯರನ್ನು ಮುಂದೆ ಹೊರಡುವಂತೆ ಹೇಳಿ ತಾವು ಅಲ್ಲಿರುವ ಪ್ರಕೃತಿ ಸೊಬಗನ್ನು ಅನುಭವಿಸಲು ಉಳಿದುಕೊಂಡರು. ಅಂತಹ ಒಂದು ಪ್ರಶಾಂತವಾದ ಸನ್ನಿವೇಶದಿಂದ ಪ್ರಚೋದಿತರಾಗಿ ಭಾವಪರವಶತೆಯಿಂದ ತದೇಕಚಿತ್ತರಾಗಿ ಹಾಡಲಾರಂಭಿಸಿದರು. ಸ್ವಲ್ಪ ಕಾಲದ ನಂತರ ತಮ್ಮ ಸಮೀಪದಲ್ಲೇ ತಮ್ಮ ಗಾಯನವನ್ನು ಆಸಕ್ತಿಯಿಂದ ಕೇಳುತ್ತಿದ್ದ ಒಬ್ಬ ಬೈರಾಗಿಯನ್ನು ಕಂಡರು. ತಮ್ಮ ಏಕಾಂತಕ್ಕೆ ಉಂಟಾದ ಅಡಚಣೆಯಿಂದ ಸ್ವಲ್ಪ ಕೋಪಗೊಂಡು ಆ ಬೈರಾಗಿಯನ್ನು ಒಂದು ರೀತಿಯ ತಿರಸ್ಕಾರದಿಂದ, "ನಿನಗೇನಾದರೂ ಸಂಗೀತದ ಗಂಧವಿದೆಯೇ?" ಎಂದು ಪ್ರಶ್ನಿಸಿದರು. ಆತನು ಹೌದು ಎನ್ನಲಾಗಿ, "ನನ್ನ ಹಾಡುಗಾರಿಕೆಯ ಬಗ್ಗೆ ನಿನ್ನ ಅಭಿ-

ಪ್ರಾಯವೇನು?" ಎಂದು ಪಲುಸ್ಕರರು ಪ್ರಶ್ನಿಸಿದರು. ಅದಕ್ಕೆ ಬೈರಾಗಿಯು, "ನಿನ್ನ ಸಂಗೀತವು ಒಟ್ಟಿನಲ್ಲಿ ಪರವಾಗಿಲ್ಲ. ಆದರೆ ಅದರಲ್ಲಿ ಒಂದು ಮಹತ್ತರವಾದ ನ್ಯೂನತೆಯಿದೆ," ಎಂದನು. ಆತನ ಈ ಮಾತಿನಿಂದ ತೇಜೋಭಂಗವಾದಂತಾಗಿ ಪಲುಸ್ಕರರು, "ಹಾಗಾದರೆ ನೀನು ನನ್ನೊಂದಿಗೆ ಹಾಡುತ್ತ ನನ್ನ ಗಾಯನದಲ್ಲಿರುವ ದೋಷವನ್ನು ತೋರಿಸು ನೋಡೋಣ," ಎಂದರು. ಆತನಾದರೋ "ನಾನು ಕೇಳಿದ್ದರಿಂದ ನೀನು ಹಾಡುತ್ತಿರಲಿಲ್ಲ. ಅಂತೆಯೇ ನೀನು ಕೇಳಿದ ಮಾತ್ರಕ್ಕೆ ನಾನೇನೂ ಹಾಡಬೇಕೆಂದಿಲ್ಲ. ನಿನಗೆ ಅದೃಷ್ಟವಿದ್ದರೆ ನನ್ನ ಗಾನವನ್ನು ಕೇಳುವ ಭಾಗ್ಯವನ್ನು ಹೊಂದುವೆ," ಎಂದುತ್ತರಿಸಿ ಹೊರಟುಹೋದನು. ಈ ಯಃಕಶ್ಚಿತ ಬೈರಾಗಿಯ ಮಾತೂ ಪಲುಸ್ಕರರ ಮನಸ್ಸಿನ ಮೇಲೆ ಬಹಳ ಪರಿಣಾಮ ಮಾಡಿತು. ಹೀಗೆಯೇ ಅವರು ಮುಂದೆ ನಡೆದುಕೊಂಡು ಹೋಗುತ್ತಿರುವಾಗ ಎಲ್ಲಿಂದಲೋ ಕಾಡಿನಲ್ಲಿ ಸುಶ್ರಾವ್ಯವಾದ ನಾದತರಂಗಗಳು ಬರುತ್ತಿರುವಂತೆ ತೋರಿತು. ಆ ದಿಕ್ಕಿನಲ್ಲಿಯೇ ಮುಂದೆ ನಡೆದಾಗ ಹಿಂದೆ ಇವರೊಂದಿಗೆ ಮಾತನಾಡಿದ ಬೈರಾಗಿಯೂ ಕಂಡನು. ಒಂದು ದೇವಸ್ಥಾನದಲ್ಲಿ ಆತನು ದೇವಿಯ ಮುಂದೆ ಕುಳಿತು ಬಾಹ್ಯ ಪ್ರಜ್ಞೆಯನ್ನೇ ಕಳೆದುಕೊಂಡಂತೆ ತದೇಕಚಿತ್ತದಿಂದ ದೈವೀಭಾವದೊಂದಿಗೆ ಬಹಳ ಉನ್ನತ ಮಟ್ಟದ ಗಾನದಲ್ಲಿ ತಲ್ಲೀನನಾಗಿದ್ದನು. ಇಂತಹ ದೈವೀಗಾನದ ಮುಂದೆ ಪಲುಸ್ಕರರು ತಮ್ಮದು ಗಾಯನವೇ ಅಲ್ಲವೆಂದೆಣಿಸಿದರು. ತಮ್ಮಲ್ಲಿದ್ದ ಅಹಂಭಾವವನ್ನು ಪೂರ್ತಿಯಾಗಿ ಬಿಟ್ಟು ಆ ಸಂನ್ಯಾಸಿಯ ಕಾಲಡಿಗಳಲ್ಲಿ ಎರಗಿದರು. ಪಲುಸ್ಕರರು ಆತನಲ್ಲಿ ಕ್ಷಮೆ ಕೋರಿ ತಮಗೆ ಆ ದಿವ್ಯ ಗಾನದ ಮಾರ್ಗವನ್ನು ತೋರಬೇಕೆಂದು ಬಹಳ ಭಕ್ತಿಯಿಂದ ಕೇಳಿಕೊಂಡರು. ದಯಾರ್ದ್ರನಾದ ಬೈರಾಗಿಯು ಪಲುಸ್ಕರರಿಗೆ "ಬಾಹ್ಯ ಆಡಂಬರಗಳನ್ನೆಲ್ಲಾ ತ್ಯಜಿಸಿ ಭಗವಂತನಲ್ಲಿ ನಿಶ್ಚಲವಾದ ಭಕ್ತಿಯನ್ನಿಟ್ಟು ಭಗವದ್ಭಾವದಿಂದ ಸಾಧನೆ ಮಾಡು," ಎಂದು ಆದೇಶವಿತ್ತನು. ಹಾಗೆಯೇ "ನೀನು ಉತ್ತರದಲ್ಲಿ ಪಂಜಾಬಿನ ಕಡೆಗೆ ಸಾಗಿದರೆ ನಿನ್ನ ಇಷ್ಟಾರ್ಥಗಳು ಕೈಗೂಡುವುವು," ಎಂದು ಆಶೀರ್ವದಿಸಿ ಬೈರಾಗಿಯು ತನ್ನ ದಾರಿಯನ್ನು ತಾನು ಹಿಡಿದನು. ಈ ಘಟನೆಯಿಂದ ವಿಷ್ಣು ದಿಗಂಬರರ ಜೀವನದ ಧ್ಯೇಯವು ಬಹಳಷ್ಟು ಪ್ರಭಾವಿತವಾಗಿ ಸಂಗೀತವನ್ನು ಭಗವದ್ಭಕ್ತಿಯ ಶ್ರೇಷ್ಠ ಸಾಧನವನ್ನಾಗಿ ಅವರು ಕಾಣಲಾರಂಭಿಸಿದರು.

ಅನಂತರ ಪಲುಸ್ಕರರು ತಮ್ಮ ಘರಾಣೆಯ ತವರೂರಾದ ಗ್ವಾಲಿಯರಿನಲ್ಲಿ ಅನೇಕ ಸಂಗೀತ ಕಚೇರಿಗಳನ್ನು ಕೊಟ್ಟು ಅಲ್ಲಿಯ ಗ್ವಾಲಿಯರ್ ಘರಾಣೆಯ ಅತಿರಥ ಮಹಾರಥರ ಮೆಚ್ಚುಗೆಯನ್ನು ಪಡೆದು, ಅಲ್ಲಿಂದ ಮಥುರೆಗೆ ಹೊರಟರು. ಅಲ್ಲಿ ಮುಂದಿನ ಕಾರ್ಯಕ್ಷೇತ್ರದಲ್ಲಿ ಅನುಕೂಲವಾಗುವಂತೆ ಅಲ್ಲಿಯ "ಬ್ರಜ" ಭಾಷೆಯನ್ನು ಕಲಿತು ಅಲ್ಲಿಯ ಪಂಡಿತರ ಸಹಾಯದಿಂದ ಸಂಗೀತಕ್ಕೆ ಸಂಬಂಧಪಟ್ಟ ಪ್ರಾಚೀನ ಗ್ರಂಥಗಳನ್ನು ಅಧ್ಯಯನ ಮಾಡುವುದಲ್ಲದೆ ಪ್ರಸಿದ್ಧವಾದ ಧ್ರುಪದ ಶೈಲಿಯ ಗಾಯಕಿಯನ್ನೂ ಸಾಧಿಸಿಕೊಂಡರು.

ಅಲ್ಲಿಂದ ಹೊರಟು ಭರತಪುರ ಮತ್ತು ದೆಹಲಿಯಲ್ಲಿ ಬಹಳಷ್ಟು ದಿನ ಇದ್ದರು. ಈ ಸ್ಥಳಗಳಲ್ಲಿ ತಮ್ಮ ಕಚೇರಿಗಳಲ್ಲಿ ಸಂಗೀತ ಮತ್ತು ಅದಕ್ಕೆ ಸಂಬಂಧಪಟ್ಟ ಸಾಹಿತ್ಯದ ವಿಷಯವಾಗಿ ಬಹಳ ಪ್ರಭಾವಮಯವಾದ ಭಾಷಣವನ್ನು ಮಾಡುವ ಕಲೆಯನ್ನು ಕರಗತ ಮಾಡಿಕೊಂಡರು. ಇದರಿಂದಾಗಿ ಸಹಸ್ರಾವಧಿ ಶ್ರೋತೃಗಳಿಗೆ ಶಾಸ್ತ್ರೀಯ ಸಂಗೀತದ ಪರಿಚಯ ಮಾಡಿಕೊಟ್ಟು ಅದರಲ್ಲಿ ಒಳ್ಳೆಯ ಅಭಿರುಚಿಯನ್ನು ಹೆಚ್ಚಿಸಲು ಸಾಧ್ಯವಾಯಿತು. ಆ ಸಂದರ್ಭದಲ್ಲಿಯೇ ಪಲುಸ್ಕರರಿಗೆ ಪಂಜಾಬಿನಲ್ಲಿ ತಮ್ಮ ವಿಜಯವನ್ನು ಸಾಧಿಸುವ ಸದವಕಾಶವು ಲಭಿಸಿತು. ದಕ್ಷಿಣದಲ್ಲಿ ಶ್ರೀ ತ್ಯಾಗರಾಜರ ಆರಾಧನೆಯನ್ನು

ಆಚರಿಸುವಂತೆಯೇ ಪಂಜಾಬಿನ ಜಲಂಧರದಲ್ಲಿ ಸಂತಶ್ರೇಷ್ಠರೂ ವಾಗ್ಗೇಯಕಾರರೂ ಆದ ಶ್ರೀ ಹರಿವಲ್ಲಭ ಸ್ವಾಮಿಯವರ ಆರಾಧನೆಯ ಸಂದರ್ಭದಲ್ಲಿ ಪ್ರಸಿದ್ಧ ಗಾಯಕರೆಲ್ಲಾ ಸೇರಿ ತಮ್ಮ ಗಾನ ಸೇವೆಯನ್ನು ಸಲ್ಲಿಸುತ್ತಿದ್ದರು. ಇಂತಹ ಒಂದು ಆರಾಧನಾ ಸಭೆಗೆ ಈಗಾಗಲೇ ಬಹಳ ಪ್ರಸಿದ್ಧಿಯನ್ನು ಪಡೆದಿದ್ದ ವಿಷ್ಣು ದಿಗಂಬರರನ್ನು ಆಹ್ವಾನಿಸಲಾಯಿತು. ಪಲುಸ್ಕರರು ತಮ್ಮ ಶುದ್ಧ ಗ್ವಾಲಿಯರ್ ಘರಾಣೆಯ ಶೈಲಿಯ ಮತ್ತು ತಾವೇ ಸಂಪಾದಿಸಿಕೊಂಡ ಸುಮಧುರ ಕಂಠದ ಗಾಯನದಿಂದ ಎಲ್ಲರನ್ನೂ ಮೀರಿಸಿ ಪಂಜಾಬಿನಲ್ಲಿಯೂ ತಮ್ಮ ಖ್ಯಾತಿಯನ್ನು ಸ್ಥಾಪಿಸಿದರು.

ಇನ್ನು ಮುಂದೆ ಸಂಗೀತಕ್ಷೇತ್ರದಲ್ಲಿ ತಾವು ವಿಶೇಷವಾಗಿ ಮಾಡಬೇಕೆಂದಿದ್ದ ಸೇವೆಗೋಸ್ಕರ ಕ್ರಮಬದ್ಧವಾದ ಯೋಜನೆಗಳನ್ನು ಹಾಕಿಕೊಂಡರು: (೧) ಸಂಗೀತದ ಅಭ್ಯಾಸಕ್ಕೆ ಸುಲಭವಾಗುವಂತೆ ಒಂದು ನಿಯಮಿತ ಪಠ್ಯಕ್ರಮಕ್ಕನುಸಾರವಾಗಿ ಪುಸ್ತಕಗಳ ರಚನೆ; (೨) ಹಿಂದಿನ ಪದ್ಧತಿಯಂತೆ ಗುರುವಿನ ಕೇವಲ ಅಂಧ ಅನುಕರಣೆ ಮಾಡುವುದನ್ನು ಬಿಟ್ಟು ಶಾಸ್ತ್ರೀಯವಾಗಿ ಪಠ್ಯ ಪುಸ್ತಕಗಳ ಆಧಾರದಿಂದ ಗುರುಮುಖೇನ ಗಾಯನವನ್ನು ಕಲಿತು ಅಭ್ಯಾಸಿಗಳು ತಮ್ಮ ಸ್ವಂತ ಪ್ರತಿಭೆಯನ್ನು ಬೆಳೆಸಿಕೊಳ್ಳುವಂತೆ ಮಾಡುವುದು; (೩) ಪಾಶ್ಚಾತ್ಯ ಸಂಗೀತದಲ್ಲಿ ಇರುವಂತೆ ನೊಟೇಶನ್ ಪದ್ಧತಿಯನ್ನು ಭಾರತೀಯ ಸಂಗೀತಕ್ಕೆ ಅಳವಡಿಸಿಕೊಳ್ಳುವುದು. ನಮ್ಮ ಸಂಗೀತಕ್ಕೆ ಅನುಕೂಲವಾಗುವಂತೆ ಹೊಸ ಸಂಕೇತಗಳನ್ನೂ ಸೃಷ್ಟಿಸಿ ಅನೇಕ ಪ್ರಸಿದ್ಧ ಗಾನಕೃತಿಗಳನ್ನೂ ಈ ಹೊಸ ನೊಟೇಶನ್ ಪದ್ಧತಿಯಲ್ಲಿ ಬರೆದರು. ಭಾರತೀಯ ಸಂಗೀತಕ್ಕೆ ಈ ನೊಟೇಶನ್ ಪದ್ಧತಿಯನ್ನು ಅಳವಡಿಸಿ ಸಂಗೀತ ಜಿಜ್ಞಾಸುಗಳಲ್ಲಿ ಅದನ್ನು ಜನಪ್ರಿಯ ಮಾಡಿದ ಕೀರ್ತಿ ವಿಷ್ಣು ದಿಗಂಬರರದು.

ಅವರು ಹಾಕಿಕೊಂಡ ಯೋಜನೆಗಳೆಲ್ಲ ಒಂದೊಂದಾಗಿ ಕೈಗೂಡಲಾರಂಭಿಸಿದವು. ಈ ಯೋಜನೆಗಳಿಗೆಲ್ಲಾ ಮೂಲ ಕಾರ್ಯಾಲಯವಾದ ಗಾಂಧರ್ವ ಮಹಾವಿದ್ಯಾಲಯವನ್ನು ಲಾಹೋರಿನಲ್ಲಿ ೧೯೦೧ ರಲ್ಲಿ ಸ್ಥಾಪಿಸಿದರು. ಈ ಮಹಾವಿದ್ಯಾಲಯದ ಸ್ಥಾಪನೆಯು ಭಾರತೀಯ ಸಂಗೀತಶಾಸ್ತ್ರದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆಯುವಂತಹದು. ಭಾರತದಲ್ಲಿಯೇ ಇದು ಮೊಟ್ಟ ಮೊದಲನೆಯ ಸಾರ್ವಜನಿಕ ಸಂಗೀತ ವಿದ್ಯಾಲಯ. ಇದನ್ನು ಸಾರ್ವಜನಿಕರ ಧನಸಹಾಯದಿಂದ ನಡೆಸಲಾರಂಭಿಸಿದರು. ಈ ಮಹಾವಿದ್ಯಾಲಯದಲ್ಲಿ ಪಲುಸ್ಕರರೇ ರೂಪಿಸಿದಂತಹ ಪದ್ಧತಿ ಮತ್ತು ವ್ಯವಸೆಗಳಿಗನುಗುಣವಾಗಿ ನೂರಾರು ಅಧ್ಯಾಪಕರನ್ನೂ ವಿದ್ಯಾರ್ಥಿಗಳನ್ನೂ ತಯಾರು ಮಾಡಲಾಯಿತು. ಸದಾಚಾರ ಮತ್ತು ಶಿಸ್ತುಗಳಿಗೆ ಗಾಂಧರ್ವ ಮಹಾವಿದ್ಯಾಲಯವು ಬಹಳ ಹೆಸರುವಾಸಿಯಾಯಿತು. ಧನಸಂಗ್ರಹಕ್ಕೋಸ್ಕರ ಪಲುಸ್ಕರರು ತಮ್ಮ ಶಿಷ್ಯರೊಂದಿಗೆ ಅನೇಕ ಕಚೇರಿಗಳನ್ನು ಏರ್ಪಡಿಸಿಕೊಂಡು ಪ್ರವಾಸಗಳನ್ನು ಕೈಗೊಳ್ಳುತ್ತಿದ್ದರು. ಹೋದ ಕಡೆಗಳಲ್ಲೆಲ್ಲ ಸಂಗೀತದ ಮತ್ತು ಸಂಗೀತಗಾರರ ಬಗ್ಗೆ ಜನಗಳಲ್ಲಿ ಗೌರವವನ್ನು ಹುಟ್ಟಿಸುವುದಲ್ಲದೆ ಶ್ರೋತೃಗಳಲ್ಲಿ ಸದಭಿರುಚಿಯುಂಟಾಗುವಂತೆ ಮಾಡುತ್ತಿದ್ದರು.

ಕಾಶ್ಮೀರ ಮತ್ತು ಉದಯಪುರದಂತಹ ರಾಜಧಾನಿಗಳಲ್ಲಿ ಅಲ್ಲಿಯ ಮಹಾರಾಜರುಗಳ ಆಹ್ವಾನದ ಮೇಲೆ ಸಂಗೀತ ಕಚೇರಿಗಳನ್ನು ನಡೆಸಿ ಸನ್ಮಾನಿತರಾಗಿ ತಮ್ಮ ಮಹಾವಿದ್ಯಾಲಯದ ಸಲುವಾಗಿ ದ್ರವ್ಯಸಹಾಯವನ್ನೂ ಪಡೆದರು. ಇವರ ಕಚೇರಿಗಳಲ್ಲಿ ಶುದ್ಧ ಶಾಸ್ತ್ರೀಯ ರಾಗಗಳ ಗಾಯನದೊಂದಿಗೆ ಅನೇಕಾನೇಕ ಸಂತರ ಭಜನೆಗಳನ್ನೂ ಹಾಡುತ್ತ ಅವುಗಳನ್ನು ಬಹಳ ಜನಪ್ರಿಯವಾಗಿಸಿದರು. ಈಗಲೂ ಅವರು ಹಾಡುತ್ತಿದ್ದ "ಜಬ ಜಾನಕೀ ನಾಥ ಸಹಾಯ ಕರೇ" "ನಿರ್ಬಲಕೇ ಬಲರಾಮ," "ರಘುಪತಿ ರಾಘವ ರಾಜಾರಾಮ"

ಎಂಬ ರಾಮಧುನ್‌ಗಳು ಬಹಳ ಪ್ರಸಿದ್ಧ ವಾಗಿವೆ.

ಪಲುಸ್ಕರರ ಮತ್ತು ಅವರ ಗಾಂಧರ್ವ ಮಹಾವಿದ್ಯಾಲಯದ ಖ್ಯಾತಿಯು ಬಹಳ ಹಬ್ಬಿ ಪ್ರಸಿದ್ಧವಾದ ವಿದ್ಯಾಪೀಠಗಳಲ್ಲಿ ಮತ್ತು ಆಶ್ರಮಗಳಲ್ಲಿ ಸಂಗೀತ ಅಧ್ಯಾಪನ ಕ್ಕಾಗಿ ಅವರ ಶಿಷ್ಯರನ್ನು ಕಳಿಸಿಕೊಡುವಂತೆ ಅವರನ್ನನೇಕರು ಕೇಳಿಕೊಳ್ಳಲಾರಂಭಿಸಿದರು. ಡಾ. ಅನ್ನಿ ಬೆಸೆಂಟ್‌ರವರ ಕೋರಿಕೆಯ ಮೇರೆಗೆ ವಾರಾಣಸಿಯ ಹಿಂದೂ ಕಾಲೇಜಿಗೆ ಶ್ರೀ ಹೇರಲೇಕರರವರನ್ನು ಪಲುಸ್ಕರರು ಕಳುಹಿಸಿಕೊಟ್ಟರು. ಅಂತೆಯೇ ಮಹಾತ್ಮ ಗಾಂಧಿಯವರ ಸಾಬರಮತಿ ಆಶ್ರಮಕ್ಕೆ ತಮ್ಮ ಆಪ್ತಶಿಷ್ಯರಾದ ಶ್ರೀ ನಾರಾಯಣರಾವ್ ಖರೆ ಯವರನ್ನು ಕಳುಹಿಸಿಕೊಟ್ಟರು.

ಆಗ ನಮ್ಮ ದೇಶದಲ್ಲಿ ಜನಮನಗಳೆಲ್ಲ ಕೇಂದ್ರಿತವಾದ ಸ್ವಾತಂತ್ರ್ಯ ಚಳುವಳಿ ಮತ್ತು ಸ್ವದೇಶಿ ಹಾಗೂ ರಾಷ್ಟ್ರೀಯತಾವಾದಗಳಲ್ಲಿ ವಿಷ್ಣು ದಿಗಂಬರರಿಗೆ ಜೀವಂತ ಶ್ರದ್ಧೆಯಿತ್ತು. ಅವರೂ ಅವುಗಳಲ್ಲಿ ತಮ್ಮದೇ ಆದ ಒಂದು ರೀತಿಯಲ್ಲಿ ಭಾಗವಹಿಸುತ್ತಿದ್ದರು. ತಮ್ಮ ಗಾಯನ ಕಚೇರಿಗಳಲ್ಲಿ ದೇಶಭಕ್ತಿ ಗೀತೆಗಳನ್ನು ಹಾಡಿ ಎಂಥವರಲ್ಲಿಯೂ ದೇಶಭಕ್ತಿಯು ಉಕ್ಕಿ ಹರಿಯುವಂತೆ ಮಾಡುವ ಸಾಮರ್ಥ್ಯ ಅವರಿಗಿತ್ತು. ತಾವು ಹೋದೆಡೆಯಲೆಲ್ಲಾ ಆಗ ಪ್ರಸಿದ್ಧ ರಾಷ್ಟ್ರಗೀತೆಯಾಗಿದ್ದ "ವಂದೇ ಮಾತರಂ" ಬಹಳ ಆವೇಶಪೂರ್ಣವಾಗಿ ಹಾಡುತ್ತಿದ್ದರು.

ಕ್ರಿ. ಶ. ೧೯೧೫ರ ನಂತರದ ಎಲ್ಲಾ ಕಾಂಗ್ರೆಸ್ ಅಧಿವೇಶನಗಳಲ್ಲಿಯೂ ಪಲುಸ್ಕರರ ಹಾಡುಗಾರಿಕೆಯು ಇರುತ್ತಿತ್ತು. ೧೯೨೩ ರಲ್ಲಿ ಕಾಕಿನಾಡಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಇವರು "ವಂದೇ ಮಾತರಂ" ಗೀತೆಯನ್ನು ಹಾಡಲಾರಂಭಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಅಧ್ಯಕ್ಷಸ್ಥಾನದಲ್ಲಿದ್ದ ಮಹಮ್ಮದ್ ಅಲಿಯವರು ಮತೀಯ ಗೀತೆಯನ್ನು ಹಾಡ ಬಾರದೆಂದು ಆಕ್ಷೇಪಿಸಿದರೂ ಅದಕ್ಕೆ ಮಣೆ ಹಾಕದೆ ಆ ಗೀತೆಯನ್ನು ಮುಂದುವರಿಸಿ ಎಲ್ಲಾ

ಸಭಿಕರ ಮನ್ನಣೆಯನ್ನು ಪಡೆದರು.

ಪಲುಸ್ಕರರ ಸಮಕಾಲೀನರೂ ಪ್ರಸಿದ್ಧ ಸಂಗೀತಶಾಸ್ತ್ರಜ್ಞರೂ ಆಗಿದ್ದ ಪಂ. ಭಾತ-ಖಂಡೆಯವರು ಬಡೋದೆಯಲ್ಲಿ ಏರ್ಪಡಿಸಿದ ಪ್ರಪ್ರಥಮ ಅಖಿಲಭಾರತ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿ ವಿಷ್ಣು ದಿಗಂಬರರು ತಮ್ಮ ನೊಟೇಶನ್ ಪದ್ಧತಿಯ ಮೇಲೆ ಉಪನ್ಯಾಸ ಮಾಡಿದರು. ಆ ಸಭೆಯಲ್ಲಿ ಪಲುಸ್ಕರರಿಗೂ ಒಬ್ಬ ವಿಮರ್ಶಕಳಿಗೂ ವಾಗ್ವಾದವಾಯಿತು. ಆಕೆಯು ವ್ಯಂಗ್ಯವಾಗಿ "ಪಂಡಿತ್‌ಜೀ, ತಾವು ಎಷ್ಟು ಮಂದಿ ತಾನ-ಸೇನರನ್ನು ತಯಾರು ಮಾಡಿದ್ದೀರಾ?" ಎಂದು ಪ್ರಶ್ನಿಸಿದ್ದಕ್ಕೆ ಪಲುಸ್ಕರರು ತಕ್ಷಣ ಕೊಟ್ಟ ಉತ್ತರ: "ಹೌದಮ್ಮ ತಾಯಿ, ಸ್ವತಃ ತಾನಸೇನನೇ ಇನ್ನೊಬ್ಬ ತಾನಸೇನನನ್ನು ತಯಾರು ಮಾಡಲಾಗಲಿಲ್ಲ. ಆದರೆ ಮಹಾತ್ಮನಾದ ತಾನಸೇನನ ಗಾನಸೌಂದರ್ಯವನ್ನು ಮೆಚ್ಚಬಲ್ಲ ಸಹಸ್ರಾವಧಿ ಸಂಗೀತ ರಸಿಕರನ್ನು



ನಾನು ನಾಳೆ ಸಭೆಯಲ್ಲಿ ಭಾಷಣ ಮಾಡುವಾಗ ನನ್ನ ಅಂಗರಕ್ಷಣೆಗಾಗಿ ಒಬ್ಬ 'ಪೈಲ್ವಾನ್' ಬೇಕು ಕಣೋ....!

ನಮ್ಮ ದೇಶದಲ್ಲಿ ಮೊಟ್ಟಮೊದಲಬಾರಿಗೆ ತಯಾರುಮಾಡಿದ್ದೇನೆಂದು ಧೈರ್ಯವಾಗಿ ಹೇಳಬಲ್ಲೆ". ಈ ಸಂಗೀತಸಮ್ಮೇಳನದಲ್ಲಿ ಸಂಗೀತಜ್ಞರಿಗೇ ಸಾಕಷ್ಟು ಅವಕಾಶವಾಗಲೀ ಪ್ರಾಧಾನ್ಯವಾಗಲೀ ದೊರಕದಿದ್ದದ್ದರಿಂದ ಮುಂದೆ ಪಲುಸ್ಕರರೇ ಬಹಳ ಶ್ರೇಷ್ಠ ಪ್ರಮಾಣದಲ್ಲಿ ಸಂಗೀತ ಸಮ್ಮೇಳನಗಳನ್ನು ಏರ್ಪಡಿಸಲಾರಂಭಿಸಿದರು. ಅಂತಹ ಐದು ಸಮ್ಮೇಳನಗಳನ್ನು ತಮ್ಮ ಕಾಲದಲ್ಲೇ ಏರ್ಪಡಿಸಿದರು.

ಗಾಂಧರ್ವ ಮಹಾವಿದ್ಯಾಲಯದ ಒಂದು ದೊಡ್ಡ ಶಾಖೆಯನ್ನು ಮುಂಬಯಿ ಮಹಾನಗರದಲ್ಲಿ ಪ್ರಾರಂಭಿಸಲಾಯಿತು. ಅಲ್ಲಿ ಪ್ರತಿ ವರ್ಷ ಉಚ್ಚಮಟ್ಟದ ಸಂಗೀತ ಪರೀಕ್ಷೆಗಳನ್ನು ನಡೆಸಿ, ಉತ್ತೀರ್ಣರಾದವರಿಗೆ ಪದವಿಗಳನ್ನು ಕೊಡಲು ಘಟಿಕೋತ್ಸವಗಳನ್ನು ಗವ್ವರ್ನರ್ ಜನರಲ್‌ರಂಥವರ ಅಧ್ಯಕ್ಷತೆಯಲ್ಲಿ ನಡೆಸಿಕೊಂಡು ಬರಲಾರಂಭಿಸಲಾಯಿತು. ಈಗ ಗಾಂಧರ್ವ ಮಹಾವಿದ್ಯಾಲಯದ ಶಾಖೆಗಳಲ್ಲಿ ಸಾವಿರಾರು ಸಂಗೀತಾಭ್ಯಾಸಿಗಳು ತರಪೇತಿಯನ್ನು ಪಡೆಯುತ್ತಿದ್ದಾರೆ. ಪಂ. ವಿಷ್ಣು ದಿಗಂಬರರ ಪುತ್ರರಾದ ದತ್ತಾತ್ರೇಯ ವಿಷ್ಣು ಪಲುಸ್ಕರರು ತಮ್ಮ ಮಧುರ ಮತ್ತು ಕೋಮಲ ಕಂಠದ ಗಾಯನಕ್ಕೆ ಬಹಳ ಪ್ರಸಿದ್ಧರಾಗಿದ್ದರು. ತಮ್ಮ ತಂದೆಯವರು ಹಾಡುತ್ತಿದ್ದ ರಾಗಗಳನ್ನೂ ಭಜನೆಗಳನ್ನು ತಮ್ಮ ಧ್ವನಿಯಲ್ಲಿ ಹಾಡಿ ಅವುಗಳನ್ನು ಬಹಳ ಜನಪ್ರಿಯವಾಗಿಸಿದ್ದಾರೆ. ತಂದೆಯವರ ಧ್ವನಿಯನ್ನು ಕೇಳುವ ಭಾಗ್ಯವು ನಮಗಿಲ್ಲವಾದರೂ ಪುತ್ರರಾದ ಡಿ.ವಿ. ಪಲುಸ್ಕರರ ಧ್ವನಿಯನ್ನು ಅವರ ಧ್ವನಿ ಮುದ್ರಿತ ಸಂಗೀತದಿಂದ ಪಡೆಯಬಹುದಾದ ಸಂತೋಷವು ನಮ್ಮ ಪಾಲಿಗೆ ಉಳಿದಿದೆ. ವಿಧಿವಶಾತ್ ಅಕಾಲಮೃತ್ಯುವಿಗೆ ದತ್ತಾತ್ರೇಯ ಪಲುಸ್ಕರರು ತುತ್ತಾದರು. ವಿಷ್ಣು ದಿಗಂಬರರ ಇತರ ಶಿಷ್ಯರಲ್ಲಿ ಪಂ. ನಾರಾಯಣರಾವ್ ವ್ಯಾಸ, ಕೀರ್ತಿಶೇಷರಾದ ಪಂ. ಓಂಕಾರನಾಥ ಠಾಕೂರ ಮತ್ತು ಪಂ. ವಿನಾಯಕರಾವ್ ಪಟವರ್ಧನರವರು ಬಹಳ ಪ್ರಸಿದ್ಧಿಯನ್ನು ಪಡೆದ ಸಂಗೀತಗಾರರು.

ತಮ್ಮ ಜೀವನದ ಸಂಜೆಯಲ್ಲಿ ಪಟ್ಟಣದಿಂದ ಪಟ್ಟಣಕ್ಕೆ ತುಳಸೀ ರಾಮಾಯಣದ ಕೀರ್ತನ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತ ಪ್ರವಾಸಗಳನ್ನು ಕೈಗೊಳ್ಳುತ್ತಿದ್ದರು. ಇದರಿಂದಾಗಿ ಪಲುಸ್ಕರರ ಆರೋಗ್ಯ ಬಹಳ ಮಟ್ಟಿಗೆ ಕೆಡಲಾರಂಭಿಸಿತು. ೧೯೩೧ ರಲ್ಲಿ ನೇಪಾಳದ ಪ್ರವಾಸ ಕೈಗೊಂಡು, ಅಲ್ಲಿಂದ ಕಲ್ಕತ್ತ ಮತ್ತು ಬನಾರಸ್ ಪಟ್ಟಣಗಳಲ್ಲಿ ತಮ್ಮ ಗಾನಯಾತ್ರೆಯನ್ನು ಮುಗಿಸುವ ಹೊತ್ತಿಗೆ ಇವರ ಆರೋಗ್ಯ ಬಹಳೇ ಹದಗೆಟ್ಟಿತ್ತು. ಅಲ್ಲಿಂದ ಪಲುಸ್ಕರರನ್ನು ನಾಸಿಕ್ ಪಟ್ಟಣಕ್ಕೆ ಕರೆತರಲಾಯಿತು. ಅಲ್ಲಿಯೂ ಅವರ ಆರೋಗ್ಯವು ಸುಧಾರಿಸದಿರಲು, ಮಿರಜಿನ ಮಹಾರಾಜರ ಇಚ್ಛೆಯಂತೆ ಪಲುಸ್ಕರರು ತೀವ್ರ ಅನಾರೋಗ್ಯದ ಸ್ಥಿತಿಯಲ್ಲಿ ಮಿರಜಿಗೆ ಆಗಮಿಸಿದರು. ಮಿರಜಿನಲ್ಲಿ ಪ್ರಾರಂಭವಾದ ಇವರ ಸಂಗೀತ ಜೀವನವು ಮಿರಜಿನಲ್ಲಿಯೇ ಸಮಾಪನವಾಗುವಂತಾದುದು ಒಂದು ವಿಧಿನಿಯಮಿತ ಘಟನೆಯೇ. ಅವರಿದ್ದ ಕೊಠಡಿಯಲ್ಲಿ ಪಲುಸ್ಕರರ ಅಪ್ಪಣೆಯಂತೆ ತಂಬೂರಿಯ ಶ್ರುತಿಯೊಂದಿಗೆ ಅವರ ಆತ್ಮಕ್ಕೆ ಬಹಳ ಪ್ರಿಯವಾದ ಶ್ರೀರಾಮನಾಮವನ್ನು ಹಗಲೂ ರಾತ್ರಿ ನಿರಂತರವಾಗಿ ಅವರ ಶಿಷ್ಯರು ಪಠಿಸಲಾರಂಭಿಸಿದರು. ಹೀಗಿರಲು, ಪಂಡಿತ್ ವಿಷ್ಣು ದಿಗಂಬರ ಪಲುಸ್ಕರರು ತಮ್ಮ ಉನ್ನತ ಆದರ್ಶಗಳನ್ನೆಲ್ಲ ಸಾಧಿಸಿ, ಸಂಗೀತದ, ಸಂಗೀತ ತಜ್ಞರ, ಮತ್ತು ಸಂಗೀತ ರಸಿಕರ ಹಿಂದೆಂದೂ ಕಾಣದಂತಹ ಒಂದು ಬೃಹತ್ ಸಂಗೀತ ಸಾಮ್ರಾಜ್ಯವನ್ನೇ ಸ್ಥಾಪಿಸಿ ಅದರ ಏಕೈಕ ಅನಭಿಷಕ್ತ ಮಹಾ ಸಮ್ರಾಟರಾಗಿ ಕ್ರಿ. ಶ. ೧೯೩೧ ರ ಅಗಸ್ಟ್ ೨೧ ರಂದು ತಮ್ಮ ೫೯ನೇ ವಯಸ್ಸಿನ ಕೊನೆಯಲ್ಲಿ ತಮ್ಮ ತ್ರಿಕರಣಗಳಲ್ಲೂ ನಿನದಿಸುತ್ತಿದ್ದ ಶ್ರೀರಾಮನಾಮ ಧ್ಯಾನಮಾಧುರಿಯಲ್ಲಿ ಶಾಶ್ವತವಾಗಿ ಲೀನರಾದರು.

ಸರಳತೆಯ ಸಾಕಾರ

ಪಾಟಣಾದಲ್ಲಿಯ ಚಳಿಗಾಲದ ದಿನಗಳು ಅವು. ಅಂಥ ಒಂದಿನ ಖ್ಯಾತ ನಾಯಕ ಡಾ. ರಾಜೇಂದ್ರ ಪ್ರಸಾದರು 'ಲೀಡರ್' ದೈನಿಕದ ಸಂಪಾದಕ ಶ್ರೀ ಸಿ. ವೈ. ಚಿಂತಾಮಣಿ ಅವರನ್ನು ಕಾಣಲು ಸಂಜೆಗೆ ಅವರ ಪತ್ರಿಕಾ ಕಾರ್ಯಾಲಯಕ್ಕೆ ಹೋದರು. ಶ್ರೀ ಚಿಂತಾಮಣಿ ಅವರ ಕೋಣೆ ಅಟ್ಟದ ಮೇಲಿತ್ತು. ಇವರು ಅಲ್ಲಿಗೆ ಹೋಗಿ, ದ್ವಾರಪಾಲಕನ ಕೈಗೆ ತಮ್ಮ ಹೆಸರಿನ ಕಾರ್ಡನ್ನು ಕೊಟ್ಟು 'ಒಳಗೆ ಕೊಟ್ಟು ಬಾ' ಎಂದು ಹೇಳಿದರೆ ಆತ ಕದಲಲೇ ಇಲ್ಲ. ಇವರ ಸಾದಾ ವೇಷ ಕಂಡು ಆತನಿಗ ತಾತ್ಸಾರ ಉಂಟಾಗಿದ್ದಿರ ಬಹುದು. ಆದರೆ ಇವರು ಮತ್ತೊಮ್ಮೆ ಒತ್ತಾಯಪಡಿಸಲಾಗಿ ಆತ ಅನಿವಾರ್ಯವಾಗಿ ಒಳಗೆ ಹೋಗಿ ಆ ಕಾರ್ಡನ್ನು ಸಂಪಾದಕರ ಮೇಜಿನ ಮೇಲೆ ಇಟ್ಟು ಬಂದನು.

ಶ್ರೀ ಚಿಂತಾಮಣಿಯವರು ಅಂದಿನ ಸಂಪಾದಕೀಯ ಬರೆಯುವದರಲ್ಲಿ ಮಗ್ನರಾಗಿದ್ದರು. ಅವರು ಕಾರ್ಯನಿರತರಾಗಿದ್ದಾಗ ಯಾರೂ ಅವರನ್ನು ಮಾತಾಡಿಸುವಂತಿರಲಿಲ್ಲ. ಹೀಗಾಗಿ ಆ ಜವಾನನ ಕರ್ತವ್ಯ ಪ್ರಜ್ಞೆಯಿಂದಾಗಿ ಡಾ. ರಾಜೇಂದ್ರ ಪ್ರಸಾದರು, ಆತನ ಜೊತೆಗೇ, ಆತನ ಬೆಂಚಿನ ಮೇಲೆ ದಾರಿ ಕಾಯುತ್ತ ಕುಳಿತಿರಬೇಕಾಯಿತು.

ಅರ್ಧ ಗಂಟೆ ಕಳೆದರೂ ಎಲ್ಲವೂ ಸ್ತಬ್ಧ. ಡಾ. ರಾಜೇಂದ್ರ ಪ್ರಸಾದರಿಗೆ ಚಳಿ ಕೊರೆಯ ತೊಡಗಿತ್ತು. ಹಾಗೇ ಅವರು ಎದ್ದು ನೋಡಲಾಗಿ ಕೆಳಗಡೆ ಕೆಲವು ಆಳುಗಳು ತರಗೆಲೆಗಳಿಂದ ಕಟ್ಟಿಗೆ ತುಂಡುಗಳಿಂದ ಬೆಂಕಿ ಹೊತ್ತಿಸಿ ಕಾಸುತ್ತ ಕುಳಿತಿದ್ದು ಕಂಡು ಬಂದಿತು. ಅವರು ನೆಟ್ಟಗೆ ಅಲ್ಲಿಗೆ ನಡೆದು, ಅಲ್ಲಿಯೆ ಬೆಂಕಿ ಕಾಸುತ್ತ, ಅವರೊಡನೆ ಅವರ ಭಾಷೆಯಲ್ಲಿಯೆ ಸಂಭಾಷಣೆಯಲ್ಲಿ ತೊಡಗಿಬಿಟ್ಟರು.

ಸಮಗ್ರ ಒಂದು ಗಂಟೆ ಕಳೆದ ಬಳಿಕ ಶ್ರೀ ಚಿಂತಾಮಣಿಯವರು ತಮ್ಮ ಲೇಖನ ಕಾರ್ಯ ಮುಗಿಸಿ ನೋಡುತ್ತಾರೆ, ಮೇಜಿನ ಮೇಲೆ ಡಾ. ರಾಜೇಂದ್ರ ಪ್ರಸಾದರ ಹೆಸರಿನ ಕಾರ್ಡು! ಧಾವಿಸಿ ಹೊರಗೆ ಬಂದು ಜವಾನನನ್ನು ವಿಚಾರಿಸಿದರು. "ಅತಿಥಿಗಳು ಎಲ್ಲಿದ್ದಾರೆ?" ಎಂದು. ಆತ "ಇಷ್ಟು ಹೊತ್ತು ಇಲ್ಲಿಯೆ ನನ್ನ ಬೆಂಚಿನ ಮೇಲೆಯೆ ಕುಳಿತಿದ್ದರು. ಈಗಷ್ಟೇ ಚಳಿ ಎಂದು ಬೆಂಕಿ ಕಾಸಲು ಕೆಳಗೆ ಹೋಗಿದ್ದಾರೆ" ಎಂದ. ಶ್ರೀ ಚಿಂತಾ-ಮಣಿ ಅವರು ಧಾವಿಸಿ ಕೆಳಗಿಳಿದು ಬಂದು ಡಾ. ಪ್ರಸಾದರನ್ನು ಕಂಡು ಕ್ಷಮಾಯಾಚನೆ ಮಾಡಿ ತಮ್ಮ ಕೋಣೆಗೆ ಕರೆದುಕೊಂಡು ಬಂದರು.

"ನೀವು ಕೆಲಸದಲ್ಲಿದ್ದಿರಿ. ನಿಮಗೇಕೆ ತೊಂದರೆ ಕೊಡಬೇಕೆಂದು ನಾನು ಅಲ್ಲಿ ಹೋಗಿ ಬೆಂಕಿ ಕಾಸುತ್ತ ಕುಳಿತಿದ್ದೆ. ಅವರ ಸಂಭಾಷಣೆಯಲ್ಲಿ "ಅವರ ಜೀವನಕ್ಕೆ ಸಂಬಂಧಿಸಿದ ಅನೇಕ ಉಪಯುಕ್ತ ವಿಷಯಗಳು ತಿಳಿದು ಎಂದವು. ಎಂದು ಡಾ. ರಾಜೇಂದ್ರ ಪ್ರಸಾದರು ನಿವೇದಿಸಿದರು.

ಮುಂದೆ ಭಾರತದ ರಾಷ್ಟ್ರಪತಿ ಆದ ವ್ಯಕ್ತಿ ಎಷ್ಟೊಂದು ಸರಳ, ಎಷ್ಟೊಂದು ನಿರಾಡಂಬರ! ✱

ಬ್ರಿಟನ್ನಿನ ಮುಕ್ತ ವಿಶ್ವವಿದ್ಯಾಲಯ

ಸಿ. ಎಲ್. ಬೇಲ್ಜ್

ಇಂಗ್ಲೆಂಡಿನಲ್ಲಿ ೮೦ ರ ವೃದ್ಧನೊಬ್ಬ ತನ್ನ ಪ್ರಥಮ ಪದವಿಯನ್ನು ವಿಶ್ವವಿದ್ಯಾಲಯದಿಂದ ಪಡೆಯುತ್ತಾನೆ. ಲೀಡ್ಸದಲ್ಲಿಯ ಕಾರಖಾನೆಯೊಂದರ ೬ ಜನ ಕಾರ್ಮಿಕರು ಪದವಿ ಪಡೆಯುವದಕ್ಕಾಗಿ ತಮ್ಮ ಶಿಕ್ಷಣ ಸಾಗಿಸಿದ್ದಾರೆ. ವ್ಯಾನ್ ಡ್ರಾಯವ್ಹರ್‌ನೊಬ್ಬ ಉಚ್ಚ ಶಿಕ್ಷಣ ಪೂರೈಸಿ ಈಗ ಕಾಂಪ್ಯೂಟರ್ ಮೇಲ್ವಿಚಾರಕನಾಗಿದ್ದಾನೆ. ಉತ್ತರ ಬ್ರಿಟನ್ನಿನಲ್ಲಿ ಅಜ್ಜಿಯೊಬ್ಬಳು, ಮಾಧ್ಯಮಿಕ ಶಾಲೆಗೆ ಕೂಡ ಹೋಗಿರದಿದ್ದರೂ, ಈಗ ಬಿ. ಎ. ಪದವಿ ಪಡೆದಿದ್ದಾಳೆ. ಇವರೆಲ್ಲ ಕಾಲೇಜುಗಳಿಗೆ ಹೆಸರು ಹಚ್ಚಿ ಅಭ್ಯಾಸ ಮಾಡಿ ಪದವಿ ಗಳಿಸಿದ ಪೂರ್ಣಾವಧಿ ವಿದ್ಯಾರ್ಥಿಗಳಲ್ಲ. ಆದರೆ ತಮ್ಮ ವೃತ್ತಿಯನ್ನು ಮುಂದುವರೆಸುತ್ತ ಉಚ್ಚ ಶಿಕ್ಷಣವನ್ನೂ ಬಿಡುವಿನ ಅವಧಿಯಲ್ಲಿ ಸಾಗಿಸುತ್ತ ಪದವಿ ಪಡೆದ ಉತ್ಸಾಹಿ ವಿದ್ಯಾರ್ಥಿಗಳು. ಇವರಿಗೆ ಇಂಥ ಶಿಕ್ಷಣ ಒದಗಿಸಿ ಪದವೀಧರರನ್ನಾಗಿಸುವ ಸಂಸ್ಥೆ ಈಗ ಬ್ರಿಟನ್ನಿನಲ್ಲಿದೆ. ಅದೇ ಮುಕ್ತ ವಿಶ್ವವಿದ್ಯಾಲಯ.

ಬ್ರಿಟನ್ನಿನ ಈ ಮುಕ್ತ ವಿದ್ಯಾಲಯವು ಪ್ರಪಂಚದಲ್ಲಿಯೇ ಅಪೂರ್ವ ಶಿಕ್ಷಣ ಸಂಸ್ಥೆಯಾಗಿದೆ. ಕಳೆದ ಐದು ವರ್ಷಗಳಲ್ಲಿಯೇ ಈ ಮುಕ್ತ ವಿಶ್ವವಿದ್ಯಾಲಯದಿಂದ ಪದವೀಧರರಾದವರ ಸಂಖ್ಯೆ ಹತ್ತು ಸಾವಿರಕ್ಕೂ ಮಿಕ್ಕಿದೆ. ಇದರ ಇಂಥ ಉಜ್ವಲ ಯಶಸ್ಸನ್ನು ಕಂಡು ಇರಾಣ, ಇಸ್ರೇಲ್, ಪಾಕಿಸ್ತಾನ, ಸ್ಪೇನ್‌ಗಳು ತಮ್ಮಲ್ಲಿಯೂ ಈ ಯೋಜನೆ ಪ್ರಾರಂಭಿಸಲು ಆತುರಗೊಂಡಿವೆ. ಅಮೇರಿಕೆಯ ಸುಮಾರು ಇಪ್ಪತ್ತು ವಿಶ್ವವಿದ್ಯಾಲಯಗಳು ಈ ಮುಕ್ತ ವಿಶ್ವವಿದ್ಯಾಲಯದ ಶಿಕ್ಷಣ ಕ್ರಮವನ್ನು ಜಾರಿಗೆ ತರಲು ಉದ್ಯುಕ್ತವಾಗಿವೆ. ಬ್ರಿಟನ್ನಿನ ಎಸ್ಸೆಕ್ಸ್ ವಿಶ್ವವಿದ್ಯಾಲಯವೂ ಮುಕ್ತ ವಿಶ್ವವಿದ್ಯಾಲಯದ ಕೆಲವೊಂದು ಶಿಕ್ಷಣ ಕ್ರಮಗಳನ್ನು ಅಂಗೀಕರಿಸಿದೆ.

ಈ ಮುಕ್ತ ವಿಶ್ವವಿದ್ಯಾಲಯವನ್ನು ಪತ್ರ ವ್ಯವಹಾರ ಮುಖೇನ ಶಿಕ್ಷಣ ನೀಡುವ ಕಾಲೇಜು ಎಂದು ಹೇಳಬೇಕೆನಿಸಿದರೂ ಅದು ಅದರ ಯಥಾರ್ಥ ವಿವರಣೆ ಆಗಲಾರದು. ಮುಕ್ತ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಒಟ್ಟು ವೇಳೆಯಲ್ಲಿ ಪ್ರತಿಶತ ೬೫ ರಷ್ಟು ಕಾಲ ಪಠ್ಯ ಪುಸ್ತಕ, ಮತ್ತಿತರ ಪುಸ್ತಕಗಳ ವಾಚನದಲ್ಲಿ ಕಳೆದು ಹೋಗುವದಾದರೂ ಇತರ ಆಧುನಿಕ ಸಂಪರ್ಕ ಸಾಧನಗಳ ಮೂಲಕ ಅವರು ಪಡೆಯುವ ಶಿಕ್ಷಣವೂ ಸಾಕಷ್ಟು ಮಹತ್ವದ್ದಾಗಿರುತ್ತದೆ. ಬಿಬಿಸಿಯ ಆಕಾಶವಾಣಿ–ಟೆಲೆವಿಜನ್‌ಗಳ ಮೂಲಕ ವಿದ್ಯಾರ್ಥಿಗಳು ತಜ್ಞರ ಪಾಠ ಪ್ರವಚನಗಳನ್ನು ಆಲಿಸುತ್ತಾರೆ. ಪ್ರಯೋಗಗಳನ್ನು ವೀಕ್ಷಿಸುತ್ತಾರೆ. ಅವರಿಗಾಗಿಯೇ ಪ್ರತ್ಯೇಕವಾಗಿ ಸಿದ್ಧಪಡಿಸಿದ ಕಾರ್ಯಕ್ರಮಗಳನ್ನು ಆಲಿಸುತ್ತಾರೆ.

ಬೇಸಿಗೆ ಶಾಲೆ

ಈ ಮುಕ್ತ ವಿಶ್ವವಿದ್ಯಾಲಯದ ಮುಖ್ಯ ಕಚೇರಿಯು ಲಂಡನ್ನಿನ ಉತ್ತರಕ್ಕೆ ಎಪ್ಪತ್ತು ಕಿಲೋಮೀಟರುಗಳ ದೂರದಲ್ಲಿ ಮಿಲ್ಟನ್ ಕೇನ್ಸ್ ಪಟ್ಟಣದಲ್ಲಿ ವಾಲ್ಟನ್ ಹಾಲ್ ಎಂಬ ಭವ್ಯ ಕಟ್ಟಡದಲ್ಲಿ ಇದೆಯಾದರೂ ಮುಕ್ತ ವಿಶ್ವವಿದ್ಯಾಲಯ ಬ್ರಿಟನ್ನಿನ ತುಂಬೆಲ್ಲ ಹರಡಿದೆ ಎಂದೇ ಹೇಳಬೇಕಾಗುವದು. ಆದುದರಿಂದ ಅಲ್ಲಲ್ಲಿ ಪ್ರಾದೇಶಿಕ ಕೇಂದ್ರಗಳಲ್ಲಿ ವಿಶ್ವ

ವಿದ್ಯಾಲಯದ ಶಿಕ್ಷಕರೂ ಸಲಹೆಗಾರರೂ ಇರುತ್ತಾರೆ. ವಿದ್ಯಾರ್ಥಿಗಳು ಇವರನ್ನು ಭೆಟ್ಟಿಯಾಗಿ ತಮ್ಮ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಪಡೆದುಕೊಳ್ಳಬಹುದು. ವಿದ್ಯಾರ್ಥಿಗಳ ಪಾಠ್ಯಕ್ರಮವನ್ನು ಮೊದಲೇ ರೂಪಿಸಲಾಗಿರುತ್ತದೆ. ವಿದ್ಯಾರ್ಥಿಗಳು ತಾವು ಆಯ್ದುಕೊಂಡ ಪಾಠ್ಯಕ್ರಮದ ಅಭ್ಯಾಸಕ್ಕಾಗಿ ಬೇಸಿಗೆ (ಬಿಡುವಿನ) ಶಾಲೆಗಳನ್ನು ಸೇರಬಹುದು. ಇಲ್ಲಿ ಶಿಕ್ಷಣ ಪಡೆದ ನಂತರ ಬೇಸಿಗೆ ಶಾಲೆ ಮುಚ್ಚುವ ಪೂರ್ವದಲ್ಲಿ ವಿದ್ಯಾರ್ಥಿಗಳ ಪರೀಕ್ಷೆ ನಡೆಸಲಾಗುವದು. ವಿದ್ಯಾರ್ಥಿಗಳು ಪದವಿ ಪಡೆಯುವ ಪೂರ್ವದಲ್ಲಿ ಒಂದಲ್ಲ, ಅನೇಕ ಪಾಠ್ಯ ಕ್ರಮಗಳನ್ನು ಪೂರೈಸಬೇಕಾಗುವದು.

ವೈಜ್ಞಾನಿಕ ಸಲಕರಣೆಗಳ ಪೆಟ್ಟಿಗೆ



ವೈಯಕ್ತಿಕ, ಸಾಮಾಜಿಕ, ಆರ್ಥಿಕ ಕಾರಣಗಳಿಂದಾಗಿ ಉಚ್ಚ ಶಿಕ್ಷಣ ಪಡೆಯದೇ ಹೋದ ಅರ್ಹರಿಗೆ ಉಚ್ಚ ಶಿಕ್ಷಣ ಸೌಕರ್ಯ ಒದಗಿಸುವದೇ ಮುಕ್ತ ವಿಶ್ವವಿದ್ಯಾಲಯದ ಗುರಿ ಆಗಿದೆ. ಉಚ್ಚ ಶಿಕ್ಷಣ ಪಡೆದು ಉದ್ಧಾರವಾಗಬಲ್ಲಂಥ ಪ್ರೌಢರ ಸಂಖ್ಯೆ ಸಾಕಷ್ಟಿದೆ ಎಂದು ರಾಬಿನ್ಸ (೧೯೬೩) ವರದಿಯಲ್ಲಿ ಕಾಣಿಸಲಾಗಿದೆ. ಬ್ರಿಟನ್ನಿನಲ್ಲಿಯ ಉಚ್ಚ ಶಿಕ್ಷಣದ ಸ್ಥಿತಿಗತಿ ಕುರಿತು ವರದಿ ಮಾಡಲು ಈ ರಾಬಿನ್ಸ ಸಮಿತಿ ನೇಮಕವಾಗಿದ್ದಿತು. ಉಚ್ಚ ಶಿಕ್ಷಣ ಪಡೆಯಲು ಅರ್ಹರಾದ ಇಂಥ ಪ್ರೌಢರಿಗೆ ಅಧ್ಯಯನಕ್ಕೆ ಅನುಕೂಲ ಮಾಡಿಕೊಡಬೇಕಾದರೆ ವಿಶಿಷ್ಟ ಮಾದರಿಯ ಶಿಕ್ಷಣ ಸಂಸ್ಥೆಯೇ ಬೇಕು. ಯಾಕೆಂದರೆ ಇವರು ಇತರ ಸಾಮಾನ್ಯ ವಿದ್ಯಾರ್ಥಿಗಳಂತೆ ಕಾಲೇಜು ಸೇರಿ ಏಕಪ್ರಕಾರವಾಗಿ ಓದಿ ಅಖಂಡಿತವಾಗಿ ತಮ್ಮ ಶಿಕ್ಷಣವನ್ನು ಪೂರೈಸಲಾರರು. ಅವರಿಗೆ ಬಿಡುವು ಇದ್ದಾಗ, ಅವರಾಗಿಯೇ ಮುಂದೆ ಬಂದಾಗ ಶಿಕ್ಷಣ ನೀಡಬೇಕು. ಅವರು ಪರೀಕ್ಷೆಗೆ ಕಟ್ಟಿದಾಗ ಅವರ ಅರ್ಹತೆ ಅಳೆದು, ಅವರಿಗೆ ಪದವಿ ದಯಪಾಲಿಸಬೇಕು. ಇದೆಲ್ಲ ಮುಕ್ತ ವಿಶ್ವವಿದ್ಯಾಲಯಕ್ಕೆ ಮಾತ್ರ ಸಾಧ್ಯ. ಈ ರೀತಿಯಲ್ಲಿ ಮುಕ್ತ ವಿಶ್ವವಿದ್ಯಾಲಯದ ಪ್ರಯೋಜನ ಪಡೆದವರಲ್ಲಿ ಗೃಹಿಣಿಯರ ಸಂಖ್ಯೆಯೇ ಹೆಚ್ಚು.

೧೯೬೩ ರಲ್ಲಿ ಬ್ರಿಟನ್ನಿನಲ್ಲಿ ವಿರೋಧಿ ಪಕ್ಷದ ಧುರೀಣರಾಗಿದ್ದ ಹ್ಯಾರೋಲ್ಡ ವಿಲ್ಸನ್ನರು "ಆಕಾಶದಲ್ಲಿಯ ವಿಶ್ವವಿದ್ಯಾಲಯ"ವೊಂದು ಬಿಬಿಸಿಯ ಆಕಾಶವಾಣಿ ಟೆಲಿವಿಜನ್‌ಗಳ ಮೂಲಕ ತನ್ನ ಅಧ್ಯಾಪನ ಕಾರ್ಯ ಸಾಗಿಸಿದೆ ಎಂದು ಪಾರ್ಲಿಮೆಂಟಿನಲ್ಲಿ ಹೇಳಿದ್ದರು. ಮುಂದೆ ತಾವೇ ಬ್ರಿಟನ್ನಿನ ಪ್ರಧಾನ ಮಂತ್ರಿಗಳಾದಾಗ ತಮ್ಮ ಸಚಿವರೊಬ್ಬರ ಮುಖಾಂತರ ಸಂಬಂಧಿಸಿದವರೊಡನೆ ಮುಕ್ತ ವಿಶ್ವವಿದ್ಯಾಲಯದ ಸ್ವರೂಪದ ಕುರಿತು ವಿಪುಲ ಚರ್ಚೆ ನಡೆಸಿ. ಆ ಬಗೆಗೆ ಶ್ವೇತಪತ್ರವೊಂದನ್ನು ಸಿದ್ಧಪಡಿಸಿದರು. ಹೀಗೆ ೧೯೬೯ ರಲ್ಲಿ ರೂಪುಗೊಂಡ ಮುಕ್ತ ವಿಶ್ವವಿದ್ಯಾಲಯ ೧೯೭೧ ರಲ್ಲಿ ತನ್ನ ಕಾರ್ಯಾರಂಭ ಮಾಡಿತು. ಆ ವರ್ಷ ಮುಕ್ತ ವಿಶ್ವವಿದ್ಯಾಲಯದಲ್ಲಿ ೨೪೦೦೦ ವಿದ್ಯಾರ್ಥಿಗಳಿದ್ದರು. ಇವರೆಲ್ಲ ನಾನಾ ವೃತ್ತಿಗಳಲ್ಲಿ ತೊಡಗಿದ್ದವರು, ಭಿನ್ನ ಭಿನ್ನ ವಯೋಮಾನದವರು. ಈ ಸಂಖ್ಯೆ ಹೆಚ್ಚುತ್ತಲೇ ಇದೆ. ಇವರಲ್ಲಿ ಅರ್ಧದಷ್ಟಾದರೂ ಪದವೀಧರರಾಗದೇ ಇರಲಾರರು.

ಮುಖ್ಯ ಕಾರ್ಯಾಲಯದಲ್ಲಿ

ಮಿಲ್ಟನ್ ಕೇನ್ಸ್‌ದ ವಾಲ್ಟನ್ ಹಾಲ್ ಈ ವಿಶ್ವವಿದ್ಯಾಲಯದ ಮುಖ್ಯ ಕಾರ್ಯಾಲಯದಲ್ಲಿ ಪ್ರಾಧ್ಯಾಪಕರು ಮತ್ತು ಆಡಳಿತ ವರ್ಗದವರು ಸೇರಿ ೧೫೦೦ ಜನರಿದ್ದಾರೆ. ಅಲ್ಲದೆ ಬಿಬಿಸಿಯ ೩೦೦ ಜನ ನೌಕರರೂ ಇದ್ದಾರೆ. ಆದರೆ ಅಲ್ಲಿ ವಿದ್ಯಾರ್ಥಿಗಳಿಲ್ಲ; ಅವರಿಗಾಗಿ ವಸತಿ ಸೌಕರ್ಯ ಕೂಡ ಇಲ್ಲ.

ಹೀಗಾಗಿ ವಿಶ್ವವಿದ್ಯಾಲಯದ ಮುಖ್ಯ ಕಾರ್ಯಾಲಯ ಮಿಲ್ಟನ್ ಕೇನ್ಸ್‌ದಲ್ಲಿ ಇದೆಯಾದರೂ ವಿಶ್ವವಿದ್ಯಾಲಯವು ದೇಶದ ತುಂಬೆಲ್ಲ ೧೩ ಪ್ರಾದೇಶಿಕ ಕೇಂದ್ರಗಳ ಮೂಲಕ ಹರಡಿನಿಂತಿದೆ. ಈ ಕೇಂದ್ರಗಳಲ್ಲಿ ೪೦೦೦ ಶಿಕ್ಷಕರೂ ೨೦೦೦ ಸಲಹೆಗಾರರೂ ಇದ್ದಾರೆ. ಇತರ ವಿಶ್ವವಿದ್ಯಾಲಯಗಳಲ್ಲಿರುವಂತೆ ಈ ವಿಶ್ವ-ವಿದ್ಯಾಲಯಕ್ಕೂ ಚಾನ್ಸಲರ್, ವೈಸ್-ಚಾನ್ಸಲರ್, ಸಿನೇಟ ಮುಂತಾದ್ದೆಲ್ಲ ಇವೆ. ಈ ಮುಕ್ತ ವಿಶ್ವವಿದ್ಯಾಲಯದ ಧೋರಣೆಗಳನ್ನು ರೂಪಿಸುವಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯವೂ ಇದೆ. ಈ ವಿಶ್ವವಿದ್ಯಾಲಯಕ್ಕೆ ಧನಸಹಾಯ ದೊರೆಯುವದು ಬ್ರಿಟಿಶ ಸರಕಾರ ಶಿಕ್ಷಣ- ವಿಜ್ಞಾನ ಶಾಖೆಯಿಂದ. ವಿದ್ಯಾರ್ಥಿಗಳಿಂದ ವಸೂಲು ಮಾಡುವ ಶುಲ್ಕ ಇತರ ವಿಶ್ವವಿದ್ಯಾಲಯಗಳಲ್ಲಿಗಿಂತ ಕಡಿಮೆ. ಪಠ್ಯ ಪುಸ್ತಕಗಳು ಮತ್ತು ಉಪಕರಣಗಳ ಮಾರಾಟದಿಂದ ಮತ್ತು ವಿದೇಶಗಳಿಗೆ ಶಿಕ್ಷಣ ಯೋಜನೆಗಳನ್ನು ಮಾರುವದರಿಂದಲೂ ವಿಶ್ವವಿದ್ಯಾಲಯಕ್ಕೆ ಹಣ ಒದಗುತ್ತದೆ.

ಇಲ್ಲಿಯ ಶಿಕ್ಷಣ ಪದ್ಧತಿಯನ್ನು ಸಾಕಷ್ಟು ಪರಿಶೀಲನಾಪೂರ್ವಕ ನಿರ್ಧರಿಸಲಾಗಿದೆ.

ಸಾಂಪ್ರದಾಯಿಕವಾದ ಪುರಾತನ ಪದ್ಧತಿಯನ್ನು ತ್ಯಜಿಸಿ ಅತ್ಯಾಧುನಿಕ ಶಿಕ್ಷಣ ಪದ್ಧತಿಯನ್ನು ರೂಪಿಸಬೇಕು ಎಂಬ ಹಂಬಲ ಈ ವಿಶ್ವವಿದ್ಯಾಲಯದ್ದು. ಜೊತೆಗೆ ತಾನು ನೀಡುವ ಪದವಿ ಹಾಸ್ಯಾಸ್ಪದವಾಗಬಾರದು, ವಿದ್ಯಾರ್ಥಿಗಳಿಗೆ ಆ ಪದವಿಗಳಿಂದ ತುಂಬಾ ಪ್ರಯೋಜನ ದೊರೆಯಬೇಕು ಎಂಬ ಉದ್ದೇಶದಿಂದ ಶಿಕ್ಷಣ ಪದ್ಧತಿಯು ಸಾಕಷ್ಟು ಉಚ್ಚ ದರ್ಜೆಯದಾಗಿರಬೇಕಾದ ಅಗತ್ಯವೂ ಇದ್ದಿತು. ಕಲೆ, ವಿಜ್ಞಾನ,ಗಣಿತ, ತಂತ್ರಜ್ಞಾನ ಹೀಗೆ ಆಯ್ಕೆಯ ವಿಷಯಗಳಲ್ಲಿ ಹಳೆತನವೇ ಕಂಡು ಬರುತ್ತಿದ್ದರೂ ಒಂದೊಂದು ವಿಷಯದಲ್ಲಿಯೂ ಸಾಕಷ್ಟು ವೈವಿಧ್ಯವನ್ನು ಮುಕ್ತ ವಿಶ್ವವಿದ್ಯಾಲಯ ಕಾಪಾಡಿಕೊಂಡು ಬಂದಿದ್ದಿತು. ಈ ವೈವಿಧ್ಯಪೂರ್ಣ ಶಿಕ್ಷಣಕ್ರಮದಿಂದಲೇ ಮುಕ್ತ ವಿಶ್ವವಿದ್ಯಾಲಯ ಅತಿ ಶೀಘ್ರದಲ್ಲಿಯೆ ಜನಪ್ರಿಯವಾಯಿತು ಎನ್ನಬೇಕಾಗಿದೆ.

ಶಿಕ್ಷಣ-ಪದ್ಧತಿಗಳು

ದೂರದಲ್ಲಿರುವ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ವಿಶಿಷ್ಟ ಶಿಕ್ಷಣ ಪದ್ಧತಿಗಳನ್ನು ರೂಪಿಸಬೇಕಾಯಿತು. ಶ್ರೇಷ್ಠ ಶಿಕ್ಷಣ ತಜ್ಞರಿಂದ ಪ್ರತ್ಯೇಕ ಪಠ್ಯಪುಸ್ತಕಗಳನ್ನು ಬರೆಯಿಸಲಾಯಿತು. ಟೆಲಿವಿಜನ್ನುಗಳ ಮೂಲಕ ಪಾಠಪ್ರವಚನಗಳನ್ನೂ ಪ್ರಯೋಗಾದಿಗಳನ್ನೂ ಆಕರ್ಷಕ ರೀತಿಯಲ್ಲಿ ನಡೆಸಿ ವಿದ್ಯಾರ್ಥಿಗಳನ್ನು ಉತ್ತೇಜಿಸಲಾಯಿತು. ವಿದ್ಯಾರ್ಥಿಗಳಿಗೆ ಅಭ್ಯಾಸ ಪತ್ರಿಕೆ ಒಪ್ಪಿಸಿ, ಅವರು ಶಿಕ್ಷಕರೊಡನೆ ಚರ್ಚಿಸಿ ಅದನ್ನು ಪೂರೈಸುವಂತೆಯೂ ಮಾಡಲಾಗುತ್ತಿದೆ. ಬೇಸಿಗೆ ಶಾಲೆಗಳಿಗೆ ಅವರ ಹಾಜರಾತಿ ಕಡ್ಡಾಯವಾಗಿರುವಂತೆ ನೋಡಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಆಯಾ ವಿಷಯದ ನಿಜವಾದ ಜ್ಞಾನ ಉಂಟಾಗುವ ರೀತಿಯಲ್ಲಿ ಶಿಕ್ಷಣ ಕ್ರಮವನ್ನು ಮುಂದುವರಿಸಲಾಗಿದೆ.

ಮುಕ್ತ ವಿಶ್ವವಿದ್ಯಾಲಯದ ಪದವಿ ಪಡೆಯಬೇಕಾದರೆ ಆರು 'ಅರ್ಹತೆ' ಗಳನ್ನು ಹೊಂದಬೇಕಾಗುತ್ತದೆ. 'ಆನರ್ಸ್ ಪದವಿ' ಪಡೆಯಬೇಕಾದರೆ ಎಂಟು 'ಅರ್ಹತೆ'ಗಳನ್ನು ಗಳಿಸಬೇಕಾಗುತ್ತದೆ. ಒಂದೊಂದು ವಿಷಯಕ್ಕೆ ಒಂದು ಅರ್ಹತೆ ದೊರೆಯುವದು. ಒಂದು ಅರ್ಹತೆ ಗಳಿಸಬೇಕಾದರೆ ಆ ವಿದ್ಯಾರ್ಥಿಯು ಸುಮಾರಾಗಿ ಒಂದು ವರ್ಷ ಅಧ್ಯಯನ ಮಾಡಬೇಕಾಗುತ್ತದೆ. ಚುರುಕಾಗಿರುವ ವಿದ್ಯಾರ್ಥಿಗಳು ಒಂದೇ ವರ್ಷದಲ್ಲಿ ಎರಡು ಅರ್ಹತೆಗಳನ್ನು ಸಂಪಾದಿಸುತ್ತಾರೆ. ಆದರೆ ಪ್ರಾರಂಭದಲ್ಲಿ ಒಂದು ಅರ್ಹತೆ ನೀಡುವ 'ಪ್ರಾಸ್ತಾವಿಕ ಶಿಕ್ಷಣ' ಕ್ರಮವನ್ನು ಎಲ್ಲ ವಿದ್ಯಾರ್ಥಿಗಳು ಪೂರೈಸಲೇಬೇಕಾಗುತ್ತದೆ. ಇದರಿಂದ ತಾವು ಪಡೆಯಬೇಕೆಂದಿರುವ ಶಿಕ್ಷಣದ ಸ್ವರೂಪಜ್ಞಾನ ಅವರಿಗೆ ಉಂಟಾಗುತ್ತದೆ. ಒಮ್ಮೊಮ್ಮೆ ಎರಡನೇ 'ಪ್ರಾಸ್ತಾವಿಕ ಶಿಕ್ಷಣ' ಕ್ರಮವನ್ನೂ ವಿದ್ಯಾರ್ಥಿಗಳು ಪೂರೈಸಬೇಕಾಗುತ್ತದೆ. ಮುಕ್ತವಿಶ್ವವಿದ್ಯಾಲಯ ಇಲ್ಲಿ ರಿಯಾಯತಿ ತೋರಿಸಬಲ್ಲದು.

ವಿಜ್ಞಾನ ವಿಷಯಗಳನ್ನು ಕಲಿಯಲು ಇಚ್ಛಿಸುವ ವಿದ್ಯಾರ್ಥಿಗೆ ಮುಕ್ತ ವಿಶ್ವವಿದ್ಯಾಲಯ ಉಪಕರಣಗಳ ಪೆಟ್ಟಿಗೆಯೊಂದನ್ನು ಒದಗಿಸುತ್ತದೆ. ತಾನೇ ರೂಪಿಸಿ ತಯಾರಿಸಿರುವ ಆ ಪೆಟ್ಟಿಗೆಯಲ್ಲಿ ವಿಶಿಷ್ಟವಾದ ಮ್ಯಾಕಾರ್ಥರ್ ಸೂಕ್ಷ್ಮದರ್ಶಕ ಯಂತ್ರವೂ ಇತರ ಸಲಕರಣೆಗಳೊಂದಿಗೆ ಇರುತ್ತದೆ. ತಂತ್ರಜ್ಞಾನ ಕಲಿಯುವವರಿಗಾಗಿ ಇರುವ ಪೆಟ್ಟಿಗೆಯಲ್ಲಿ ಟೇಪ್ ರೆಕಾರ್ಡರ್, ಧ್ವನಿಮೀಟರ್‌ದಂಥ ಉಪಯುಕ್ತ ಸಲಕರಣೆಗಳೂ ಇರುತ್ತವೆ.

ಮುಕ್ತ ವಿಶ್ವವಿದ್ಯಾಲಯವು ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನ ಪ್ರತಿಷ್ಠೆಯನ್ನು ಕಾಪಾಡಿಕೊಳ್ಳುವದಕ್ಕಾಗಿ ಸಂಶೋಧನಕಾರ್ಯದತ್ತ ಕೂಡ ವಿಶೇಷಗಮನ ನೀಡಬೇಕಾಗುತ್ತದೆ. ದೇಶದಲ್ಲಿನ ವಿಜ್ಞಾನ ಸಂಶೋಧನ ಮಂಡಳ, ವೈದ್ಯಕ ಸಂಶೋಧನ ಮಂಡಳ, ಸಮಾಜ ವಿಜ್ಞಾನ ಸಂಶೋಧನ ಮಂಡಳ, ಯುನಿವಾಕ್ ಮುಂತಾದವುಗಳ ಸಹಾಯದಿಂದ ಮುಕ್ತ ವಿಶ್ವವಿದ್ಯಾಲಯವುತನ್ನ ಸಂಶೋಧನ ವಿಭಾಗವನ್ನು ಕೇವಲ ೩೦ ತಿಂಗಳುಗಳ ಅವಧಿಯಲ್ಲಿ

ಇಮ್ಮಡಿ ವಿಸ್ತರಿಸಿದೆ. ಈ ಸಂಶೋಧನ ವಿಭಾಗದಲ್ಲಿ ಸದ್ಯಕ್ಕೆ ೬೦ ರಷ್ಟಿರುವ ಅಧ್ಯಾಪಕ ,ವಿದ್ಯಾರ್ಥಿಗಳ ಸಂಖ್ಯೆಯು ೧೯೭೯ ರ ಹೊತ್ತಿಗೆ ೧೩೫ಕ್ಕೇರಬಹುದಾಗಿದೆ. ಆ ಹೊತ್ತಿಗೆ ಸಂಶೋಧನ ವಿಭಾಗದ ವೆಚ್ಚದ ಅಂದಾಜು ೧೪ ಲಕ್ಷ ಪೌಂಡುಗಳಷ್ಟಾಗಬಹುದು.

ಲೋಹಗಳಲ್ಲಿ ಲಘುವಾಯುಗಳನ್ನು ಹಾಯಿಸುವದು, ಮಿದುಳಿನಲ್ಲಿ ಜೀವರಾಸಾಯನಿಕ ಪರಿವರ್ತನೆಗಳ ಕುರಿತು ಈ ವಿಶ್ವವಿದ್ಯಾಲಯದಲ್ಲಿ ಸದ್ಯ ಸಂಶೋಧನೆ ನಡೆದಿದೆ. ವಸತಿ ನಿರ್ಮಾಣ ಹಾಗೂ ಸಾರಿಗೆ ವ್ಯವಸ್ಥೆಯಲ್ಲಿ ಮಾರ್ಪಾಡೇನಾದರೂ ಸಾಧ್ಯವಿದೆಯೆಂಬ ಬಗ್ಗೆ ಕೂಡ ಸಂಶೋಧನೆ ಸಾಗಿದೆ. ಬ್ರಿಟನ್ನಿನ ಸಮಗ್ರ ಔದ್ಯೋಗಿಕ ಜಾಲದ ಕಂಪ್ಯೂಟರ ಮಾದರಿಯನ್ನೂ ತಯಾರಿಸುವ ಪ್ರಯತ್ನ ಇಲ್ಲಿ ನಡೆದಿದೆ. ಸುಮಾರು ೧೦೦ ಸಂಶೋಧನ ಪ್ರಬಂಧಗಳನ್ನು ಇದುವರೆಗೆ ಸಾದರಪಡಿಸಲಾಗಿದೆ.

ಆಧುನಿಕ ಅಭಿವೃದ್ಧಿ ವಿಷಯದಲ್ಲಿ ಅಧ್ಯಾವತ್ ಜ್ಞಾನ ಪಡೆಯಬೇಕೆಂಬುವವರಿಗಾಗಿ ಸ್ನಾತಕೋತ್ತರ ವಿಶೇಷ ಶಿಕ್ಷಣ ಕ್ರಮಗಳೂ ಈ ವಿಶ್ವವಿದ್ಯಾಲಯದಲ್ಲಿವೆ. ೩೦೦ ಸ್ನಾತಕೋತ್ತರ ವಿದ್ಯಾರ್ಥಿಗಳು ಈ ಯೋಜನೆಯ ಲಾಭ ಪಡೆಯಬಹುದಾಗಿದೆ.

ಈ ಮುಕ್ತ ವಿಶ್ವವಿದ್ಯಾಲಯದ ನೆರವಿನಿಂದ ಉದ್ಧಾರ ಹೊಂದಿದ ಒಂದೆರಡು ದೃಷ್ಟಾಂತಗಳನ್ನು ನೋಡಬಹುದು. ಲಿವ್ಹರ್ ಪೂಲ್‌ನಲ್ಲಿಯ ರಬ್ಬರ್ ಕಾರಖಾನೆಯಲ್ಲಿಯ ಒಬ್ಬ ಕಾರ್ಮಿಕ. ಆಗಲೇ ಮೂರು ಮಕ್ಕಳ ತಂದೆ. ಹದಿನಾರು ವರ್ಷದವನಿದ್ದಾಗ ಶಾಲೆಗೆ ಶರಣು ಹೊಡೆದಿದ್ದ. ಆತ ಮುಕ್ತ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪ್ರಾರಂಭಿಸಿದ ಕೂಡಲೆ ಆತನಿಗೆ ಟೆಕ್ನಿಶಿಯನ್ (ತಾಂತ್ರಿಕ)ನೆಂದು ಬಡತಿ ದೊರೆಯಿತು. ಆತ ಪದವೀಧರನಾದ ಕೂಡಲೆ ಕಾರಖಾನೆಯ ತಾಂತ್ರಿಕ ಪ್ರಯೋಗ ಶಾಲೆಯಲ್ಲಿ ಆತನಿಗೆ ಅಧಿಕಾರಿಯ ಸ್ಥಾನ ಸಿಕ್ಕಿತು. ಇನ್ನೊಬ್ಬಾಕೆ ಗೃಹಿಣಿ. ಅಕ್ಟೋಬರದಲ್ಲಿ ಪರೀಕ್ಷೆ ಆದರೆ ಆ ತಿಂಗಳಲ್ಲೇ ಆಕೆಗೆ ಹೆರಿಗೆಯ ಸಮಯ. ಹೆರಿಗೆಯಾದ ನಂತರ ಪರೀಕ್ಷೆಗೆ ಕುಳಿತುಕೊಳ್ಳಲು ಆಕೆಗೆ ಅನುಮತಿ ನೀಡಲಾಯಿತು. ಈಗ ಆಕೆಯ ಮಗು ೧೫ ತಿಂಗಳದ್ದು, ಆಕೆ ಪದವೀಧರೆ ಆಗಿದ್ದಾಳೆ. ಲಂಡನ್ನಿನ ಬ್ರಿಟಿಶ್ ಸಿವಿಲ್ ಸರ್ವೀಸ್ ಕಚೇರಿಯಲ್ಲಿಯ ಆಫ್ರಿಕನ್ ನೌಕರನೊಬ್ಬ ಈ ವಿಶ್ವವಿದ್ಯಾಲಯದ ಪದವೀಧರನಾಗಿದ್ದಾನೆ. ಹೀಗೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು.

ಮುಕ್ತ ವಿಶ್ವವಿದ್ಯಾಲಯ ಅಸ್ತಿತ್ವದಲ್ಲಿ ಬಾರದೇ ಇದ್ದರೆ ಇಂಥವರಿಗೆಲ್ಲ ಉಚ್ಚ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಲೇ ಇರಲಿಲ್ಲ. ಇಲ್ಲಿ ಕೆಲವೇ 'ಅರ್ಹತೆ'ಗಳನ್ನು ಸಂಪಾದಿಸಿ ಬೇರೆ ವಿಶ್ವವಿದ್ಯಾಲಯದಲ್ಲಿ ತಮ್ಮ ವಿದ್ಯಾಭ್ಯಾಸ ಮುಂದುವರಿಸಬೇಕು ಎನ್ನುವ ವಿದ್ಯಾರ್ಥಿಗಳಿಗೆ, ಅವರ 'ಅರ್ಹತೆ' ಮನ್ನಿಸಿ ಪ್ರವೇಶ ನೀಡುವ ಬಗ್ಗೆ ಇತರ ವಿಶ್ವವಿದ್ಯಾಲಯಗಳು ಅನುಕೂಲವಾಗಿ ಆಲೋಚಿಸುತ್ತಿವೆ. ೧೯೭೧ ರಲ್ಲಿ ಈ ವಿಶ್ವವಿದ್ಯಾಲಯ ಸೇರಿ ಈಗ ಪದವೀಧರರಾಗಿರುವವರು ಇತರ ವಿಶ್ವವಿದ್ಯಾಲಯಗಳಲ್ಲಿ ಆಗ ಪ್ರವೇಶ ಪಡೆಯುವದು ಕೂಡ ದುಸ್ತರವಾಗಿತ್ತು. ಸದ್ಯಕ್ಕೆ ಈ ಮುಕ್ತ ವಿಶ್ವವಿದ್ಯಾಲಯದಲ್ಲಿ ಅರ್ಧ ಲಕ್ಷದಷ್ಟು ವಿದ್ಯಾರ್ಥಿಗಳು ಇದ್ದಾರೆ ಎಂಬುದೇ ಇದರ ಪ್ರತಿಷ್ಠೆಯ ಪ್ರತೀಕ, ಲೋಕಪ್ರಿಯತೆಯ ಹೆಗ್ಗುರುತು. ✡

ಕ್ಷಣಕ್ಷಣಕ್ಕೂ ಕಣಕಣವಾಗಿ ವಿದ್ಯೆಯನ್ನೂ ಧನವನ್ನೂ ಸಂಪಾದಿಸಬೇಕು.

—ಸುಭಾಷಿತ

ಹೊಸತು!

ಜೈಕಿಸಾನ್ ಸಂಪೂರ್ಣ

19: 19: 19
ಎನ್ ಪಿ ಕೆ

ನಿಮ್ಮ ಭೂಮಿ ಮತ್ತು
ಬೆಳೆಗಳಿಗೆ ಆದರ್ಶವಾದ,
ಸತ್ವಭರಿತ ಗೊಬ್ಬರ




ಈಗ ಜುವಾರಿಯವರು ನಿಮಗೆ ಅಧಿಕ ಪೋಷಕಾಂಶಗಳುಳ್ಳ, ಸಾರಜನಕ, ರಂಜಕ ಹಾಗೂ ಪೊಟ್ಯಾಶ್‌ಗಳನ್ನು ಸಮ ಪ್ರಮಾಣದಲ್ಲಿ ಹೊಂದಿರುವ ಸಂಪೂರ್ಣ 19:19:19 ರಾಸಾಯನಿಕ ಗೊಬ್ಬರವನ್ನು ತಂದಿದ್ದಾರೆ.

- ಇದು ನೀರಿನಲ್ಲಿ ಪೂರ್ಣವಾಗಿ ಕರಗುತ್ತದೆ. ವಿಶೇಷವಾಗಿ ಎಲ್ಲೇ ಆಗಲಿ, ಯಾವಾಗಲೇ ಆಗಲಿ ಪೊಟ್ಯಾಶನ್ನು ಶಿಫಾರಸು ಮಾಡಿದಾಗ ಮೂಲಗೊಬ್ಬರವಾಗಿ ಉಪಯೋಗಿಸಲು ಆದರ್ಶವಾಗಿದೆ.
- ಇದರ ಸತ್ವಪೂರ್ಣ ಘಟಕಗಳು ಸಮೃದ್ಧ ಬೆಳೆ, ಅಧಿಕ ಇಳುವರಿ ಮತ್ತು ಉತ್ತಮ ಫಸಲನ್ನು ಪಡೆಯುವುದಕ್ಕೆ ಬೇಕಾಗುವ ಎಲ್ಲ ಮಹತ್ವದ ಪೋಷಕಾಂಶಗಳನ್ನು ಒದಗಿಸುತ್ತವೆ.
- ಇದರ ಹರಳುಗಳು ಏಕಪ್ರಕಾರವಾಗಿದ್ದು, ಸಮಾನವಾಗಿರುವುದರಿಂದ ಪೋಷಕಾಂಶಗಳು ಸಮಾನವಾಗಿ ಹರಡಿಕೊಳ್ಳುತ್ತವೆ.
- ಜೈಕಿಸಾನ್ ಚಿಹ್ನೆಯಿರುವ, ಉಜ್ವಲ ಹಳದಿಬಣ್ಣದ ಅಂಗಡಿಯಲ್ಲಿ ದೊರೆಯುತ್ತವೆ.

ಅಧಿಕ ಸತ್ವದ ಸಾರಜನಕ ಮತ್ತು ರಂಜಕಗಳು ಬೇಕಾಗಿದ್ದಲ್ಲಿ ನಾವು ಶಿಫಾರಸು ಮಾಡುವ ಆದರ್ಶ ರಸಗೊಬ್ಬರ: ಜೈಕಿಸಾನ್ ಯೂರಿಯಾಫಾಸ್: 28:28:0 ಎನ್ ಪಿ ಕೆ.





ಜುವಾರಿ ಅಗ್ರೋ ಕೆಮಿಕಲ್ಸ್ ಲಿಮಿಟೆಡ್, ಗೋವಾ
ಪ್ರಾದೇಶಿಕ ಮಾರಾಟ ಕೇಂದ್ರಗಳು: ಕರ್ನೂಲು, ಸಿಕಂದರಾಬಾದ್, ಪಣಜಿ, ಬೆಂಗಳೂರು, ಹುಬ್ಬಳ್ಳಿ, ನಾಗಪುರ, ಪುಣೆ.

ಅಂಟಾಸ್ - ZUA, 38-77 KN (RM)

ಬಿ. ಶ್ರೀಧರ ಆಚಾರ್ಯ

ಅಕ್ಷರ ಶಿಲ್ಪಿ ಶ್ರೀ. ಅತ್ತಾವರ ಅನಂತಾಚಾರ್ಯ

ಮುದ್ರಣ ಒಂದು ಕಲೆ. ಮುದ್ರಣಕ್ಕೆ ವಿವಿಧ ರೀತಿಯ ಅಚ್ಚಿನ ಮೊಳೆಗಳು ಬೇಕು. ವಿವಿಧ ವಿನ್ಯಾಸದ ಸುಂದರ ಅಕ್ಷರಗಳಿರುವ ಈ ಮೊಳೆಗಳನ್ನು ಎರಕ ಹೊಯ್ದು ತಯಾರಿಸಲಾಗುತ್ತಿದೆ. ಕನ್ನಡದ ಅಚ್ಚುಮೊಳೆಗಳನ್ನು ಎರಕ ಹೊಯ್ದು ತಯಾರಿಸುವ ವಿಧಾನವನ್ನು ಮೊತ್ತಮೊದಲು ಕಂಡುಹಿಡಿದ ಕೀರ್ತಿ ಶ್ರೀ ಅತ್ತಾವರ ಅನಂತಾಚಾರ್ಯರಿಗೆ ಸಲ್ಲುವುದು.

ಕರ್ನಾಟಕ ರಾಜ್ಯದ ಮಂಗಳೂರಿನಲ್ಲಿ ಲೋಹಶಿಲ್ಪಿಗಳ ಮನೆತನದಲ್ಲಿ ಜನಿಸಿದ ಅನಂತಾಚಾರ್ಯರು ಸ್ವಪ್ರಯತ್ನದಿಂದ ಅಚ್ಚಿನ ಮೊಳೆಗಳನ್ನು ತಯಾರಿಸುವುದನ್ನು ಕಲಿತರು. ಮೊದಲು ಇವರು ಮಂಗಳೂರಿನ ಕೊಡಿಯಾಲ ಬೈಲಿನಲ್ಲಿರುವ ಮುದ್ರಣಾಲಯವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅನಂತರ ಈ ಕೆಲಸದಲ್ಲಿ ಹೆಚ್ಚಿನ ತರಬೇತಿಯನ್ನು ಪಡೆಯುವ ಉದ್ದೇಶದಿಂದ ಮುಂಬಯಿಗೆ ಹೋದರು. ಅಲ್ಲಿ ನಿರ್ಣಯ ಸಾಗರ ಮುದ್ರಣಾಲಯದಲ್ಲಿ ಹತ್ತು ವರ್ಷಗಳ ಕಾಲ ಶ್ರದ್ಧೆಯಿಂದ ಕೆಲಸ ಮಾಡಿದರು. ಅದೇ ಸಮಯದಲ್ಲಿ ಕನ್ನಡದ ಅಕ್ಷರಮಾಲೆಯ ಹದಿನಾರು ತರದ ಅಚ್ಚಿನ ಮೊಳೆಗಳನ್ನು ತಯಾರಿಸಿದರು. ಇದರಿಂದಾಗಿ ಆ ಮುದ್ರಣಾಲಯದ ಮಾಲಿಕರಾದ ತುಕಾರಾಮ ಜಾವಾಜಿಯವರಿಗೆ ತುಂಬ ಲಾಭ ದೊರೆಯಿತು. ಆಗ ಸಂತೋಷಗೊಂಡ ಅವರು ಬಹುಮಾನವನ್ನಿತ್ತು ಇವರನ್ನು ಗೌರವಿಸಿದರು.


ಅನಂತಾಚಾರ್ಯರು ಮುಂಬಯಿಯ ಗುಜರಾತಿ ಮೊಳೆಗಳನ್ನು ತಯಾರಿಸುವ ಕಾರ್ಖಾನೆಯಲ್ಲಿ ದೇವನಾಗರಿ ಲಿಪಿಯನ್ನು ಕೆತ್ತಿ ಎರಕ ಹೊಯ್ಯುವ ಕೆಲಸದಲ್ಲಿ ನೆರವಾದರು. ಅಲ್ಲದೆ ಹೈದರಾಬಾದಿನ ಸರಕಾರಿ ಮುದ್ರಣಾಲಯಕ್ಕೆ ಉರ್ದು ಲಿಪಿಯ ಅಚ್ಚಿನ ಮೊಳೆಗಳನ್ನು ತಯಾರಿಸಿಕೊಟ್ಟರು. ಅನಂತರ ಧಾರವಾಡಕ್ಕೆ ಬಂದು ಕರ್ನಾಟಕ ಮುದ್ರಣಾಲಯದಲ್ಲಿ ಕೆಲಸ ಮಾಡಿದರು. ಅಲ್ಲಿ ಕನ್ನಡದ ಅಚ್ಚು ಮೊಳೆಗಳನ್ನು ತಯಾರಿಸಿ ಸ್ಥಳೀಯ ಮುದ್ರಣಾಲಯಗಳಿಗೆ ಒದಗಿಸಿದರು. ಕೊನೆಗೆ ತನ್ನ ಹುಟ್ಟೂರಾದ ಮಂಗಳೂರಿಗೆ ಬಂದು ಇದೇ ಕೆಲಸವನ್ನು ಮುಂದುವರಿಸಿದರು. ಇವರು ತಯಾರಿಸಿದ ಮೊಳೆಗಳನ್ನು ಪ್ರಮುಖ ಮುದ್ರಣಾಲಯಗಳಾದ ಬೆಂಗಳೂರು ಪ್ರೆಸ್, ಧಾರವಾಡ ಪ್ರೆಸ್, ಧರ್ಮಪ್ರಕಾಶ ಪ್ರೆಸ್, ಶಾರದಾ ಪ್ರೆಸ್, ಕೆನರಾ ಪ್ರೆಸ್, ಬಾಸೆಲ್ ಮಿಶನ್ ಪ್ರೆಸ್ ಮತ್ತು ಉಡುಪಿಯ ಪ್ರಭಾಕರ ಪ್ರೆಸ್‌ಗಳು

ಉಪಯೋಗಿಸಿ ಜನಾದರಣೀಯಗೊಳಿಸಿದವು. ಅನಂತಾಚಾರ್ಯರು ಕೆತ್ತನೆಯ ಕೆಲಸದಲ್ಲೂ ನಿಪುಣರಾಗಿದ್ದರು. ಇವರು ಹಲವು ತರುಣರಿಗೆ "ಬ್ಲಾಕ್ ಮೇಕಿಂಗ್" ಕೆಲಸವನ್ನು ಕಲಿಸಿದರು. ಅವರೆಲ್ಲರೂ ಇಂದು ನಾಡಿನ ವಿವಿಧ ಮುದ್ರಣಾಲಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ತನ್ನ ವೃದ್ಧಾಪ್ಯಕಾಲದಲ್ಲಿ ಅನಂತಾಚಾರ್ಯರು ಅಚ್ಚಿನ ಮೊಳೆಗಳನ್ನು ತಯಾರಿಸುವ ಕೆಲಸಕ್ಕೆ ವಿರಾಮವನ್ನಿತ್ತು ಶ್ರೀ ವಾಗೀಶ್ವರಿ ಮುದ್ರಣಾಲಯವನ್ನು ಸ್ಥಾಪಿಸಿದರು. ಇದರಲ್ಲಿಯೇ ಅನೇಕ ವರ್ಷ ಕೆಲಸ ಮಾಡಿದರು. ಅಷ್ಟರಲ್ಲಿ ತನ್ನ ಏಕಮಾತ್ರ ಪುತ್ರನ ಅಕಾಲಮರಣದಿಂದಾಗಿ ನಿರುತ್ಸಾಹಗೊಂಡ ಇವರು ಮುದ್ರಣ ಕೆಲಸವನ್ನು ಮುಂದುವರಿಸಲಶಕ್ತರಾದರು.

ಅನಂತಾಚಾರ್ಯರು ಉದ್ಯೋಗಶೀಲ, ಮೇಧಾವಿ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. ಉತ್ತಮ ಸಮಾಜಸೇವಕರೂ ಆಗಿದ್ದರು. ವೈದ್ಯಕೀಯ ಮತ್ತು ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಿದ್ದರು. ಜೀವರಸಾಯನಿ (Bio-Chemic) ಮತ್ತು ಹೋಮಿಯೋಪಥಿ ವೈದ್ಯ ಶಾಸ್ತ್ರವನ್ನು ಅಭ್ಯಾಸ ಮಾಡಿದ್ದ ಇವರು ತಮ್ಮ ಊರಿನ ಜನರಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದರು. ಇವರು ಇಂಗ್ಲೀಷ್, ಹಿಂದಿ, ಮರಾಠಿ, ಸಂಸ್ಕೃತ ಭಾಷೆಗಳನ್ನು ಸ್ವಪ್ರಯತ್ನದಿಂದ ಕಲಿತುಕೊಂಡಿದ್ದರು.

ಕನ್ನಡದ ಅಚ್ಚಿನ ಮೊಳೆಗಳನ್ನು ಎರಕ ಹೊಯ್ಯುವ ವಿಧಾನವನ್ನು ಅನಂತಾಚಾರ್ಯರು ಪ್ರಪ್ರಥಮವಾಗಿ ಕಂಡು ಹಿಡಿದುದರ ಸ್ಮರಣಾರ್ಥವಾಗಿ ಪ್ರಾರಂಭದಲ್ಲಿ ಇವರಿಂದ ಕೆತ್ತಲ್ಪಟ್ಟ ಸುಂದರ ವಿನ್ಯಾಸವುಳ್ಳ ದೇವನಾಗರಿ ಲಿಪಿಯ ವರ್ಣಮಾಲೆಯನ್ನು "ಅನಂತ ಶೇಡ್" ಎಂದು ಕರೆಯಲಾಗುತ್ತಿದೆ. ಇವರು ತನ್ನದೇ ಆದ ವಿಶೇಷ ರೀತಿಯ ಕನ್ನಡದ ಅಚ್ಚಿನ ಮೊಳೆಗಳನ್ನು ತಯಾರಿಸಿದ್ದರು. ಅವೂ "ಅನಂತ ಶೇಡೆಡ್" ಎಂಬುದಾಗಿ ಪ್ರಸಿದ್ಧಿ ಹೊಂದಿದವು. ತನ್ನ ಹಸ್ತ ಕೌಶಲದಿಂದ ಅಕ್ಷರ ಶಿಲ್ಪದಲ್ಲಿ ಭಾರತದಲ್ಲಿಯೇ ಪ್ರಸಿದ್ಧರಾದ, ೮೩ ವರ್ಷಗಳ ಕಾಲ ಜೀವಿಸಿದ ಇವರು ೧೯೪೪ ರಲ್ಲಿ ನಿಧನರಾದರು. ಇಂದಿನ ಕನ್ನಡ ಅಕ್ಷರ ಮಾಲೆಯ ಸುಂದರ ರೂಪ ಮುದ್ರಣ ಕಲಾಕ್ಷೇತ್ರಕ್ಕೆ ಅನಂತಾಚಾರ್ಯರ ಕೊಡುಗೆ. ✡



ಜ್ಞಾನಮಾರ್ಗ – ಭಕ್ತಿಮಾರ್ಗ

ಬಾಳೆಯ ಹಣ್ಣಿನ ಸಿಪ್ಪೆಯನ್ನು ನಿರುಪಯುಕ್ತ ಎಂದು ಬಗೆದು ಎಸೆಯುವದು ಜ್ಞಾನಮಾರ್ಗ. ಆದರೆ ಅದೇ ಸಿಪ್ಪೆ ಕೂಡ ಉಪಯುಕ್ತ ಎಂದು ಭಾವಿಸಿ ಪ್ರೀತಿಯಿಂದ ಆಕಳಿಗೆ ತಿನಿಸುವದು ಭಕ್ತಿಮಾರ್ಗ. ಬೇಡವೆಂದಾದ ಸಿಪ್ಪೆಯನ್ನು ಹಾಗೇ ಎಸೆದು ಬಿಟ್ಟಿದ್ದರೆ ಯಾರಾದರೂ ಅದನ್ನು ತುಳಿದು ಜಾರಿಬಿದ್ದು ಅಪಘಾತಕ್ಕೀಡಾಗುವ ಸಂಭವ ಇದೆ, ಆದರೆ ಅದನ್ನೇ ಪ್ರೀತಿಯಿಂದ ಆಕಳಿಗೆ ತಿನಿಸಿದರೆ ಅದು ಹಾಲು ಆಗಿ ಪರಿವರ್ತನ ಹೊಂದಿ ಪುನಃ ದೇಹಕ್ಕೆ ಪೋಷಕವಾಗುತ್ತದೆ.

ಹೀಗೆ ಜ್ಞಾನಮಾರ್ಗದಲ್ಲಿ ಒಮ್ಮೊಮ್ಮೆ ಅಭಿಮಾನದಿಂದ ಪ್ರಮಾದಕ್ಕೆ ಅಸ್ಪದ ಉಂಟಾಗುತ್ತದೆ. ಆದರೆ ಭಕ್ತಿಮಾರ್ಗದಲ್ಲಿ ಮಾತ್ರ ಯಾವಾಗಲೂ ಎಲ್ಲೆಲ್ಲಿಯೂ ಪ್ರೀತಿಯೆ ಪ್ರೀತಿ, ಆನಂದವೇ ಆನಂದ.

—ಸಂತವಾಣಿ

ವಿಶ್ವಕ್ಕೆ ಆರ್ಯರ ಕಾಣಿಕೆ

ಕೃಷ್ಣಪ್ರಭ

ಗಣಿತ ಶಾಸ್ತ್ರ ಸಂಬಂಧವಾದ ಅನೇಕ ವಿಷಯಗಳನ್ನು ನಮ್ಮ ದಿನಬಳಕೆಯ ವ್ಯವಹಾರಗಳಲ್ಲಿ ಉಪಯೋಗಿಸುತ್ತೇವೆ. ಸಂತೆ ಲೆಕ್ಕಗಳಲ್ಲಿ, ಬ್ಯಾಂಕಿನ ವ್ಯವಹಾರಗಳಲ್ಲಿ, ಭೌತಶಾಸ್ತ್ರ, ರಸಾಯನ ಶಾಸ್ತ್ರಗಳಲ್ಲಿ ಮೊದಲಾದ ಅನೇಕ ವಿಷಯಗಳಲ್ಲಿ ಗಣಿತ ಹಾಸುಹೊಕ್ಕಾಗಿ ಉಪಯೋಗಿಸ್ಪಡುತ್ತಿದೆ. ಆದರೆ ಈ ಗಣಿತ ಶಾಸ್ತ್ರದ ಹುಟ್ಟು ಮತ್ತು ಅಭಿವೃದ್ಧಿ ಹೇಗೆ ಆಯಿತು? ಆ ಶಾಸ್ತ್ರವು ಸಾಂಪ್ರತ ಅವಸ್ಥೆಯನ್ನು ಹೇಗೆ ಹೊಂದಿತು? ಯಾರು ಈ ಶಾಸ್ತ್ರವನ್ನು ಶೋಧಿಸಿ ಬಳಕೆಗೆ ತಂದರು? ಗಣಿತ ಪಾಶ್ಚಿಮಾತ್ಯ ಭಾಷೆಗಳಲ್ಲಿ ಇದೆ. ಅದನ್ನು ಭಾರತೀಯ ಭಾಷಾ ಮಾಧ್ಯಮಗಳಲ್ಲಿ ಕಲಿಸುವದು ತುಂಬ ಕಷ್ಟ ಎಂಬ ಅಭಿಪ್ರಾಯ ನಮ್ಮಲ್ಲಿದೆ. ಆದರೆ ಇತಿಹಾಸದ ಪುಟಗಳನ್ನು ಮಗುಚಿ ಹಾಕುವಾಗ, ಭಾರತೀಯರೇ ಜಗತ್ತಿಗೆ ಗಣಿತವನ್ನು ಕಲಿಸಿಕೊಟ್ಟ ಗುರುಗಳೆಂಬುದು ಗೊತ್ತಾದಾಗ ವಿಸ್ಮಯವಾಗುವದು ಸಾಮಾನ್ಯ.

ಗಣಿತಶಾಸ್ತ್ರವು ಮಾನವ ಸಂಸ್ಕೃತಿಯ ಜನನದೊಡನೆಯೇ ಪ್ರಾರಂಭವಾಯಿತು. ಮಾನವ ಕೇವಲ ವನಚರಾವಸ್ಥೆಯನ್ನು ದಾಟಿ, ಮನೆಮಾರುಗಳನ್ನು ಮಾಡಿಕೊಂಡು ಇರಲಾರಂಭಿಸಿದ ಬಳಿಕ, ತನ್ನ ಹೊಲಗದ್ದೆಗಳನ್ನು ಹೇಗೆ ಅಳೆದು ಪಾಲು ಮಾಡಿಕೊಳ್ಳಬೇಕೆಂಬ ಪ್ರಶ್ನೆಯಾಗಲೀ, ತನ್ನ ಮಕ್ಕಳು-ಮರಿ, ದನಕರುಗಳು, ತನ್ನ ಉತ್ಪತ್ತಿಗಳ ಪ್ರಮಾಣವನ್ನು ಯಾವ ರೀತಿ ಗೊತ್ತುಹಚ್ಚಬೇಕೆಂಬ ಪ್ರಶ್ನೆಯಾಗಲೀ, ಆತನ ಬುದ್ಧಿಮತ್ತೆಯನ್ನು ಕೆಣಕಿರಬೇಕು. ಅದರ ಪರಿಹಾರಾರ್ಥವಾಗಿಯೇ ಆತ ಗಣಿತ (ಎಣಿಕೆ) ವನ್ನು ಕಂಡುಹಿಡಿದಿರಬೇಕು. ಇಂದಿಗೂ ಹಳ್ಳಿಗಾಡಿನ ಕೆಲ ಜನರು ತಮ್ಮ ಲೆಕ್ಕಗಳನ್ನು ಗೋಡೆಯ ಮೇಲೆ ಹಾಕುವ ಗೆರೆಗಳಿಂದ ಮಾಡುತ್ತಾರೆ. ದೂರದ ಪ್ರಮಾಣಗಳನ್ನಳೆಯಲು ಇಷ್ಟು ಕೂಗಳತೆಗಳು ಎಂದು ಹೇಳುತ್ತಾರೆ. ತಮ್ಮ ಉತ್ಪತ್ತಿಗಳನ್ನು ಹೇಳುವಾಗ ಸಂಖ್ಯೆಗಳನ್ನು ವಿಚಿತ್ರ ರೀತಿಯಿಂದ ಬಳಸುತ್ತಾರೆ. ನಾಲ್ಕರ ಗುಂಪಿಗೆ ಒಂದು "ವಡ್ಡಿ" ಎಂದು ಎಣಿಸಿ ನಾಲ್ಕು ವಡ್ಡಿ, ಐದು ವಡ್ಡಿಗಳೆಂದೂ ಹೇಳುತ್ತಾರೆ. ಉತ್ತರ ಕರ್ನಾಟಕದ ಹಳ್ಳಿಗಾಡು ಜನರು ಲೆಕ್ಕ ಮಾಡುವ ರೀತಿ ಇನ್ನೂ ಬೇರೆ. ಅರವತ್ತು ಎನ್ನಲು "ಮೂರಿಪ್ಪತ್ತು" ಎಂತಲೂ, ಎಂಬತ್ನಾಲ್ಕು ಹೇಳಲು "ನಾಕಿಪ್ಪತ್ತರದಾ ನಾಲ್ಕು" ಎಂದೂ ಉಪಯೋಗಿಸುತ್ತಾರೆ. ಅಂಕಿಗಳ ಉಪಯೋಗ ಎಂದಿನಿಂದ ಪ್ರಾರಂಭವಾಯಿತು ಎಂಬುದನ್ನು ನಿಶ್ಚಿತವಾಗಿ ಹೇಳಲು ಸಾಧ್ಯ

ವಿಲ್ಲ. ಆದರೆ ಕ್ರಿ. ಪೂ. ೨ನೆಯ ಶತಮಾನದಲ್ಲಿ ಹಿಂದೂ ಜನರು ಅಂಕಿಗಳನ್ನು ಉಪಯೋಗಿಸುತ್ತಿದ್ದರೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ನಾನಾಘಾಟದಲ್ಲಿನ ಶಿಲಾರೇಖದ ಮೇಲಿನಿಂದ ಆ ಕಾಲದಲ್ಲಿ ಅಂಕಿಗಳು ಪ್ರಚಾರದಲ್ಲಿದ್ದುವೆಂದು ಗೊತ್ತಾಗುತ್ತದೆ. ಕ್ರಿ. ಪೂ. ೨೫೬ ರಲ್ಲಿ ಅಶೋಕನು "ಮೈನರ್ ರಾಕ್"ದ ಮೇಲೆ ಕೊರೆಸಿದ ಅನುಶಾಸನದಲ್ಲಿ ಅಂಕಿಗಳ ಉಪಯೋಗವಿದೆ. ಡಬ್ಲ್ಯು. ರೌವಸ್‌ಬಾಲ್ ಎಂಬ ಗಣಿತ ಶಾಸ್ತ್ರಜ್ಞರ ಪ್ರಕಾರ "ಅಂಕೆಗಳ ಸಹಾಯದಿಂದ ಸಂಖ್ಯೆಯನ್ನು ಬರೆಯುವ ಪದ್ಧತಿ ಹಿಂದುಸ್ಥಾನದಲ್ಲಿ ಕ್ರಿ. ಶ. ೫ನೆಯ ಶತಮಾನದಲ್ಲಿ ಪ್ರಚಾರದಲ್ಲಿ ಬಂದಿತು." ಆದರೆ ಇದನ್ನು ಯಾರು ಪ್ರಚಾರದಲ್ಲಿ ತಂದರು ಎಂಬ ಬಗ್ಗೆ ಅವರು ಹೇಳಿಲ್ಲ. ಹಿಂದೂ ಆರ್ಯರ ಪೌರಾಣಿಕ ಗ್ರಂಥಗಳಾದ ರಾಮಾಯಣ-ಮಹಾಭಾರತ ಭಾಗವತಗಳಲ್ಲಿ, ಅತಿ ಪ್ರಾಚೀನ ಕಾಲದಲ್ಲಿ ಅವರಿಗೆ ಸಂಖ್ಯೆಯ ಕಲ್ಪನೆ ಇತ್ತೆಂದು ತಿಳಿದು ಬರುತ್ತದೆ. ಮಹಾಭಾರತದ ಆದಿ ಪರ್ವದ ಪ್ರಾರಂಭದಲ್ಲಿ ಅಕ್ಷೋಹಿಣಿ ಸೇನೆಯ ಪ್ರಮಾಣವು ವರ್ಣಿಸಲ್ಪಟ್ಟಿದೆ. ಅದರೊಳಗಿರುವ "ಏಕೋ ರಥೋ ಗಜಶ್ಚೈವ" ಇತ್ಯಾದಿ ಶ್ಲೋಕಗಳಲ್ಲಿ ತ್ರಿಗುಣ, ದಶಗುಣ, ಏಕವಿಂಶತಿ, ತಿಸ್ರಃ ಪಂಚಷಷ್ಟಿ ಸಹಸ್ರಾಣಿ, ಪಂಚಾಶತ್ ಸಪ್ತತಿ ಇವೇ ಮೊದಲಾದ ದಶಕ ಪದ್ಧತಿ ಮಾಡಿ ಎಣಿಸಿದ ಸಂಖ್ಯಾವಾಚಕ ಶಬ್ದಗಳು ಕಂಡುಬರುತ್ತವೆ. ಅದರಂತೆ ಭಾಗವತದ ೫ನೆಯ ಸ್ಕಂದದ ಹದಿನಾರನೆಯ ಅಧ್ಯಾಯದಲ್ಲಿ ವರ್ಣಿಸಿದ ಭೂಮಂಡಲದ ವರ್ಣನೆಯಲ್ಲಿ ದ್ವಾತ್ರಿಂಶತ್ (೩೨) ಷೋಡಶ ಸಹಸ್ರ (೧೬೦೦೦) ಏಕಾದಶ ಶತಂ (೧೧೦೦) ಇವೇ ಮೊದಲಾದ ದಶಕ ಪದ್ಧತಿಯ ಸಂಖ್ಯಾವಾಚಕಗಳು ಕಂಡುಬರುವವು. ಇವುಗಳ ಮೇಲಿಂದ ಪ್ರಾಚೀನ ಕಾಲದ ಆರ್ಯರಿಗೆ ಪದಾರ್ಥಗಳ ಎಣಿಕೆಯ ಹಾಗೂ ಆ ಕೆಲಸದಲ್ಲಿ ಇಂದು ಉಪಯೋಗಿಸುವ ಶಂಕು (Cone) ಏನಂತಹ ಸಾದಾ ಯಂತ್ರಗಳ ಉಪಯೋಗ ಗೊತ್ತಿತ್ತು.

ಡಿ. ಮಾರ್ಗನ್ ಎಂಬ ವಿದ್ವಾಂಸರು ಜಗತ್ತಿನಲ್ಲಿ ಪ್ರಚಾರದಲ್ಲಿರುವ ಅಂಕಿಗಳು ಹಾಗೂ ದಶಾಂಶ ಪದ್ಧತಿಯ ಶೋಧಕರಾದ ಹಿಂದೂ ಜನರು ತೀರ ಪ್ರಾಚೀನ ಕಾಲದಲ್ಲಿ ಉತ್ತಮ ಗಣಿತಜ್ಞರಾಗಿದ್ದರು. ಯಾವುದೊಂದು ಸಂಖ್ಯೆಯ ಬೇಕಾದಷ್ಟು ಪಟ್ಟು ಮಾಡುವದಾಗಲೀ, ವರ್ಗ ಮೂಲ, ಘನಮೂಲಗಳನ್ನು ಕಂಡುಹಿಡಿಯುವದಾಗಲೀ ಅವರಿಗೆ ತೀರ ಸಾಧಾರಣ ವಿಷಯವಾಗಿತ್ತು. ನಾವು ಸದ್ಯದಲ್ಲಿ ಉಪಯೋಗ ಮಾಡುವದು ಹಿಂದೂ ಜನರ ಅಂಕಗಣಿತವು. ಇದನ್ನು ಹಿಂದೂ ಜನರಿಂದ ಅರಬರು ಕಲಿತರು; ಅರಬರಿಂದ ಯುರೋಪಿಗೆ ಹೋಯಿತು ಎನ್ನುತ್ತಾರೆ.

ಅರಬರು ಸ್ವಲ್ಪ ಹೆಚ್ಚು ಕಡಿಮೆ ಮಾಡಿ ದೇವನಾಗರಿ ಅಂಕಿಗಳನ್ನು ಉಪಯೋಗಿಸತೊಡಗಿದರು. ಮೊದಮೊದಲು ಶೂನ್ಯ (೦) ವನ್ನು ಅವರು ತೆಗೆದುಕೊಳ್ಳಲಿಲ್ಲ. ಶೂನ್ಯಕ್ಕೆ ಅವರು ಶೂನ್ಯದ ಬೆಲೆಯನ್ನೇ ಕೊಟ್ಟರು. ಆದರೆ ಅದರಿಂದ ಒದಗುವ ತೊಂದರೆಗಳನ್ನು ಅವಲೋಕಿಸಿ ಶೂನ್ಯವನ್ನು ಬಳಸತೊಡಗಿದರು. ಈ ಅರಬೀ ಸಂಖ್ಯೆಗಳನ್ನುಪಯೋಗಿಸುವ ಪದ್ಧತಿ ಸ್ಪೇನ್ ಮತ್ತು ತುರ್ಕಸ್ತಾನ್ ದೇಶಗಳ ಮೂಲಕ ಪಶ್ಚಿಮ ಯುರೋಪಿಗೆ ಹೋಯಿತು.

ದಶಕ ಪದ್ಧತಿಯಿಂದ ಸಂಖ್ಯೆಗಳನ್ನು ಬರೆಯುವ ಕ್ರಮ ಪ್ರಾಚೀನ ಭಾರತದಲ್ಲಿಯೇ ಹುಟ್ಟಿತು. ಡಬ್ಲ್ಯೂ. ಆರ್. ಸ್ಮಿತ್ ಎಂಬವರು "ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕಾ" ದಲ್ಲಿ "ದಶಾಂಶ ಪದ್ಧತಿಯು ನಿಜವಾಗಿ ಹಿಂದುಸ್ಥಾನದಲ್ಲಿ ಉಗಮ ಹೊಂದಿತೆಂದು ಬರೆದಿದ್ದಾರೆ." ಕ್ರಿ. ಶ. ೪೭೬ರಲ್ಲಿ ಜನಿಸಿದ ಆರ್ಯಭಟನಿಗೆ ದಶಾಂಶ ಪದ್ಧತಿ ಗೊತ್ತಿತ್ತು. ಆತನಿಗೆ ವರ್ಗಮೂಲ ತೆಗೆಯುವ ನಿಯಮವೂ ಗೊತ್ತಿತ್ತು. ಆತನು ಹತ್ತೊಂಬತ್ತು ಸಂಖ್ಯಾಸ್ಥಾನಗಳನ್ನು ಉಲ್ಲೇಖಿಸಿದ್ದಾನೆ. ಈಗ ನಮ್ಮಲ್ಲಿ ಪ್ರಚಾರದಲ್ಲಿರುವ ಕೊನೆಯ ಸ್ಥಾನವಾದ ಪ್ರಾರ್ಧಕ್ಕಿಂತಲೂ ಒಂದು ಸ್ಥಾನ ಹೆಚ್ಚು. ಇದಲ್ಲದೆ ಇವನು ಗೋಲ

ಪಾದವೆಂಬ ಪ್ರಕರಣದಲ್ಲಿ ಸೌರ್ಯರಾಶಿ ಚಕ್ರದ ೧೨ ವಿಭಾಗಗಳ ಹೆಸರನ್ನು ಹೇಳಿದ್ದಲ್ಲದೆ, ಭೂಮಂಡಲದ ಪರಿಧಿ ೩೩೦೦ ಯೋಜನಗಳಷ್ಟಿದೆಯೆಂದೂ ಉಲ್ಲೇಖಿಸಿದ್ದಾನೆ, ಈ ಮಾನ ನೈಜ ಮಾನಕ್ಕೆ ಸಮೀಪದಲ್ಲಿದೆ.

ಕ್ರಿ. ಶ. ೫೯೮—೬೬೦ರಲ್ಲಿ ಇದ್ದ ಬ್ರಹ್ಮಗುಪ್ತ, ತನಗೆ ಈ ಅಂಕೆಗಳೂ ದಶಕ ಪದ್ಧತಿಯೂ ಗೊತ್ತಿದ್ದವೆಂದು ತನ್ನ "ಬ್ರಹ್ಮಸ್ಫುಟ ಸಿದ್ಧಾಂತ"ದಲ್ಲಿ ಬರೆದಿದ್ದಾನೆ. ೨೧ ಪ್ರಕರಣಗಳ ಈ ಗ್ರಂಥದ ಕೊನೆಯ ಪ್ರಕರಣದಲ್ಲಿ ಗೋಲಾಕೃತಿ ಗಣಿತವು ವಿವರಿಸಲ್ಪಟ್ಟಿದೆ.

ಅಂಕಿಗಳ ಮೂಲ ಬೆಲೆಯೂ ಅವುಗಳ ಸ್ಥಾನದ ಬೆಲೆಯೂ ಬೇರೆ ಬೇರೆಯಾಗಿರುತ್ತದೆಂದು ತಿಳಿದ ಕೂಡಲೇ ಸಹಜವಾಗಿ ಶೂನ್ಯದ ಕಲ್ಪನೆ ಹುಟ್ಟುತ್ತದೆ. "ಶೂನ್ಯ"ವೆಂದರೆ ಸಂಸ್ಕೃತದಲ್ಲಿ "ಏನೂ ಇಲ್ಲ"ವೆಂದು ಅರ್ಥ. ಕೆಲ ಪ್ರಸಂಗಗಳಲ್ಲಿ ಯಾವುದೊಂದು ಸ್ಥಾನದಲ್ಲಿ ಯಾವ ಅಂಕೆಯನ್ನೂ ಇಡಲಾಗುವದಿಲ್ಲ. ಇಂತಹ ಸಂದರ್ಭಗಳಲ್ಲಿ ಏನು ಮಾಡಬೇಕು ಎಂದು ವಿಚಾರ ಮಾಡುವಾಗ ಶೂನ್ಯದ ಕಲ್ಪನೆ ಹುಟ್ಟಿತು. ಶೂನ್ಯ ಇರದಿದ್ದರೂ ಆ ಶೂನ್ಯದ ಬೆಲೆಯನ್ನು ಹೋಲುವ ಮತ್ತಾವುದಾದರೂ ಸಂಕೇತವನ್ನು ಇಡಲೇ ಬೇಕಾಗುತ್ತದೆ. ಮಹಾವೀರನ ಗಣಿತಸಾರ ಸಂಗ್ರಹದಲ್ಲಿ, ಭಾಸ್ಕರಾಚಾರ್ಯನ ಲೀಲಾವತಿಯಲ್ಲಿ, ಬ್ರಹ್ಮಗುಪ್ತನ ಗ್ರಂಥದಲ್ಲಿ ಶೂನ್ಯದ ಬಗ್ಗೆ ಅಂಕಗಣಿತದ ಅನೇಕ ಕೋಷ್ಟಕಗಳಿವೆ.

ಸ್ಥಾನದ ಬೆಲೆಯ ಪದ್ಧತಿಯನ್ನು ಅರಬರು ಹಿಂದೂ ಜನರಿಂದ ತೆಗೆದುಕೊಂಡು ಕ್ರಿ. ಶ. ೭೭೩ರಲ್ಲಿ ಉಪಯೋಗಿಸತೊಡಗಿದರು. ಇದೇ ವರ್ಷದಲ್ಲಿ ಒಬ್ಬ ಹಿಂದೂ ನ್ಯಾಯ ಶಾಸ್ತ್ರಜ್ಞ ಜ್ಯೋತಿಷ್ಯ ಶಾಸ್ತ್ರದ ಕೆಲ ಕೋಷ್ಟಕಗಳನ್ನು ಬಗದಾದಿಗೆ ಕೈ ಕೊಂಡೊಯ್ದನು. ಖಲೀಫಹಾಲಿದಾ (ಕ್ರಿ. ಶ. ೭೮೬–೮೦೯) ಎಂಬವನ ಕಾಲದಲ್ಲಿ ಅರಬರಿಗೆ ಸ್ವತಂತ್ರವಾದ ಅಂಕೆಗಳು ಗೊತ್ತಿರಲಿಲ್ಲ. ಕ್ರಿ. ಶ. ೮೩೦ರ ಸುಮಾರಿಗೆ ಭಾರತಕ್ಕೆ ಬಂದಿದ್ದ ಅರಬಸ್ಥಾನದ ಗಣಿತಜ್ಞ ಮಹಮ್ಮದ ಇಬ್ನಮೂಸಾ ಅಬೂಜಾಫರ್ ಅಲ್ ಖ್ವಾರೀಝ್ಮಿ (ಕ್ರಿ. ಶ. ೮೧೩–೮೩೩) ತನ್ನ ದೇಶಕ್ಕೆ ಮರಳಿದ ನಂತರ ಬ್ರಹ್ಮಗುಪ್ತನ ಗ್ರಂಥದ ಆಧಾರದಿಂದ, ಬೀಜಗಣಿತ ಮತ್ತು ಅಂಕಗಣಿತಗಳ ಮೇಲೆ ಎರಡು ಪುಸ್ತಕಗಳನ್ನು ಬರೆದ. ಇವನು ಬರೆದ ಅಲ್‌ಜಬ್ರ್‌ವೀ—ಈ—ಮುಖಾಬಿಲಾ ಎಂಬ ಬೀಜಗಣಿತದ ಮೇಲಿಂದಲೇ ಅರಬಸ್ಥಾನದಲ್ಲಿ ಮತ್ತು ಯುರೋಪಿನಲ್ಲಿ ಬೀಜಗಣಿತ ಪ್ರಚಾರದಲ್ಲಿ ಬಂದಿತು.

ಸುಮಾರು ೧೨೦ ವರ್ಷಗಳ ಹಿಂದೆ ಪಾಶ್ಚಿಮಾತ್ಯ ಗಣಿತ ಶಾಸ್ತ್ರಜ್ಞನಾದ ಕೋಲ್‌ಬ್ರೂಕ್ ಈ ರೀತಿ ಬರೆದಿದ್ದಾನೆ: "ಗ್ರೀಸ್ ದೇಶದ ಗಣಿತ ಶಾಸ್ತ್ರಜ್ಞರು ಬೀಜ ಗಣಿತದ ಮೂಲ



"ನಿರೀಕ್ಷೆಗೆ ವಿರುದ್ಧವಾಗಿ ನಮ್ಮ ಹೊಸ ಹೋಂಸೈನ್ಸ್ ಕೋರ್ಸಿಗೆ ಬಂದ ಎಲ್ಲಾ ಅರ್ಜಿಗಳೂ ಹುಡುಗರದ್ದಾಗಿದ್ದು, ಅವರವರ ತಾಯಂದಿರ ಸಹಿಯನ್ನೊಳಗೊಂಡಿವೆಯಲ್ಲಾ ನೋಡು !"

ತತ್ತ್ವಗಳನ್ನು ಜನರಿಗೆ ಕಲಿಸಲಾರಂಭಿಸಿದ ಶತಕದ ಹಿಂದಿನ ಶತಮಾನದಲ್ಲಿ ಹಿಂದೂ ಜನರು ಈ ಶಾಸ್ತ್ರವನ್ನು ಚನ್ನಾಗಿ ಅಭ್ಯಸಿಸಿದ್ದರು. ಹಿಂದೂ ಜನರ ಉತ್ತಮವಾದ ಗಣಿತ ಪದ್ಧತಿಯು ಅವರಿಗೆ ಈ ವಿಷಯದಲ್ಲಿ ತುಂಬ ಅನುಕೂಲವಾಯಿತು. ಗ್ರೀಕರ ಪದ್ಧತಿ ಅವರಿಗೆ ಪ್ರತಿಕೂಲದ್ದಾಯಿತು. ಬೀಜ ಗಣಿತಕ್ಕೂ, ಅಂಕಗಣಿತಕ್ಕೂ ಒಳ್ಳೇ ಸಂಬಂಧವಿದೆಯಾದ್ದರಿಂದ ಗಣಿತ ಶಾಸ್ತ್ರವು ಸುಲಭವಾಗಿ ಪರಿಪೂರ್ಣದೆಶೆಯನ್ನು ಹೊಂದುವಂತಿರುವ ಜನರಿಗೆ ಬೀಜಗಣಿತ ಶಾಸ್ತ್ರದ ಗಣಿತ ಪದ್ಧತಿಯನ್ನು ಹುಡುಕಿ ತೆಗೆಯುವ ಕೆಲಸ ಸುಲಭವಾಯ್ತು. ಇವೆರಡೂ ಪದ್ಧತಿಗಳು ಒಂದೇ ಇಲ್ಲ. ಅದ್ದರಿಂದ ಒಂದು ದೇಶದವರು ಇನ್ನೊಂದು ದೇಶದವರಿಗೆ ಕಲಿಸಿದರೆಂದು ಹೇಳುವದು ಅಷ್ಟು ಸರಿಯಿಲ್ಲ."

"ಆದರೆ ಹಿಂದೂ ಜನರ ಪದ್ಧತಿಯ ಅಂಕುರ ಅಥವಾ ಬೀಜವು ಪ್ರತ್ಯಕ್ಷವಾಗಿ ಆಲೆಕ್ಸಾಂಡ್ರಿಯದ ಗ್ರೀಕ್‌ರಿಂದಾಗಲಿ, ಅಪ್ರತ್ಯಕ್ಷವಾಗಿ ಬ್ಯಾಕ್ಟ್ರಿಯಾದ ಗ್ರೀಕ್‌ರಿಂದಾಗಲೀ ಇವರಿಗೆ ದೊರೆತಿರಬೇಕೆಂದು ಊಹಿಸಿದರೆ, ಈ ಬೀಜವು ಹಿಂದೂ ಜನರ ಪ್ರತಿಭೆಯ ಮೂಲಕ ಬಹು ತೀವ್ರವಾಗಿ ಈ ದೇಶದಲ್ಲಿ ಬೆಳೆದು ಫಲ ನೀಡಿತೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ."


ದಶಾಂಶ ಪದ್ಧತಿಯು ಕ್ರಿ. ಶ. ೧೧—೧೨ ನೆಯ ಶತಮಾನದಲ್ಲಿ ಸ್ಪೇನ್ ದೇಶದ ಮೂರ್ ಜನಾಂಗದಿಂದ ಯುರೋಪಿಯನ್ನರಿಗೆ ಗೊತ್ತಾಯಿತು. ಆದರೂ ಆ ಕಾಲಕ್ಕೆ ಅದು ಪೂರ್ಣವಾಗಿ ಹಬ್ಬಲಿಲ್ಲ. ಕ್ರಿ. ಶ. ೧೨೦೨ರಲ್ಲಿ ಇಟಲಿಯ "ಲಿಯೋನಾರ್ಡೋ" ಎಂಬ ವರ್ತಕನು "ಆಲ್‌ಜಿಬ್ರಾ ಅಟ್-ಆಲ್ ಮುಕಾಬಿಲಾ" ಎಂಬ ಬೀಜಗಣಿತವನ್ನು ಬರೆದು ಅರಬೀ ಅಂಕಿಗಳನ್ನೂ ಹಿಂದೂ ಜನರ ಎಣಿಕೆಯ ಪದ್ಧತಿಯನ್ನು ಯುರೋಪಿನಲ್ಲಿ ಪ್ರಚುರ ಪಡಿಸಿದನು. ಈತ ಅರಬೀ ಸಂಖ್ಯಾ ಪದ್ಧತಿಯನ್ನೂ ಮುಹಮ್ಮದ ಮೂಸಾನ ಬೀಜ ಗಣಿತವನ್ನೂ ಕಲಿತಿದ್ದ "ಅಲ್‌ಬರೂನಿ" "ನಾವು ಈಗ ಉಪಯೋಗಿಸುತ್ತಿರುವ ಅಂಕಿಗಳು ಹಿಂದೂ ಜನರ ಸುಂದರ ಅಂಕಿಗಳಿಂದಲೇ ಉಂಟಾಗಿರುತ್ತವೆ," ಎಂದು ಹೇಳಿದನು. ಅಲಹಾಬಾದ್ ಸೆಂಟ್ರಲ್ ಕಾಲೇಜಿನ ಹಿಂದಿನ ಅಧ್ಯಾಪಕರಾದ ಮೌಲವಿ ಮೊಹಮ್ಮದ್ ರಫಿಕಉಲ್ಲಾ ಎಂಬವರು ತಮ್ಮ "ಅಜೈಬುಲ್ ಹಿಸಾಬ್" ಎಂಬ ಪುಸ್ತಕದಲ್ಲಿ "ಅರಬಸ್ತಾನದ ಖಲೀಫಾ ಮನ್ಸೂರ್. ಮುಹಮ್ಮದ ಬಿನ್ ಇಬ್ರಾಹಿಮ್ ಉಲ್-ಫಿರೋಜಿ ಮುಹಮ್ಮದ್ ಬಿನ್ ಮುಸಾ ಅಲ್‌ಖ್ವಾರಿ ಝ್ಮಿ ಮತ್ತು ಮಸೂದಿ ಎಂಬ ಪ್ರಸಿದ್ಧ ವಿದ್ವಾಂಸರು, ಗಣಿತ ಶಾಸ್ತ್ರದಲ್ಲಿನ ಅಂಕಿಗಳನ್ನು ಹಿಂದೂಜನರೇ ಹುಡುಕಿದರೆಂದೂ ತಾವು ಅವರಿಂದಲೇ ಕಲಿತುದಾಗಿಯೂ ಹೇಳಿದ್ದಾರೆ," ಎಂದು ಬರೆದಿದ್ದಾರೆ. ಇಜಿಪ್ತಿನ ಇತಿಹಾಸಕಾರ ಹಾಗೂ ಪತ್ರಿಕೋದ್ಯಮಿಯಾದ 'ರೆಫಡಾನ್ ಎಂಬವನು ತನ್ನ "ಆಲ್‌ಪಿಲಾಷ್ಫಟ್ ಆಲ್ ಲುಗುವಾಯಿತ್ ವಲಲಫರುನ್" ಎಂಬ ಪುಸ್ತಕದಲ್ಲಿ ಈ ರೀತಿ ಬರೆದಿದ್ದಾನೆ. "ಎಲ್ಲ ಸುಧಾರಿಸಿದ ಜನಾಂಗದವರು ಈ ಅಂಕಿಗಳನ್ನುಪಯೋಗಿಸುತ್ತಾರೆ. ಇವುಗಳಿಗೆ ಅರಬೀ ಅಂಕಿಗಳೆನ್ನುತ್ತಾರೆ. ಏಕೆಂದರೆ ಅರಬರು ಪ್ರಾಚೀನ ಕಾಲದಲ್ಲಿ ಹಿಂದೂಗಳಿಂದ ಇವುಗಳನ್ನು ಕಲಿತರು. ಇದರಲ್ಲಿನ ವೈಶಿಷ್ಟ್ಯವೆಂದರೆ ಶೂನ್ಯ, ಒಂದರಿಂದ ಒಂಬತ್ತರವರೆಗೆ ಪ್ರತಿಯೊಂದು ಅಂಕಿಗೂ ವಿಶಿಷ್ಟವಾದ ಚಿಹ್ನವಿದೆ. ಆದರೆ ಹತ್ತು ಮಾಡಲು ಒಂದರ ಮುಂದೆ ಶೂನ್ಯವನ್ನಿಟ್ಟರಾಯಿತು. ನೂರು ಮಾಡಲು ಎರಡು ಶೂನ್ಯಗಳನ್ನಿಟ್ಟು ರಚಿಸಬಹುದು. ಈ ರೀತಿ ಅಸಂಖ್ಯ ಸಂಖ್ಯೆಗಳನ್ನು ರಚಿಸಬಹುದು. ಹಿಜರೀ ಶಕದ ಎರಡನೆಯ ಶತಮಾನದಲ್ಲಿ ಅರಬರು ಹಿಂದೂ ಜನರಿಂದ ಖಗೋಲ ವಿದ್ಯೆ, ಜ್ಯೋತಿಷ್ಯ ಮೊದಲಾದ ವಿಷಯಗಳನ್ನು ಕಲಿತಂತೆ ಈ ಅಂಕಿಗಳನ್ನೂ ಕಲಿತರು. ಕ್ರಿ. ಶ. ೭೭೩ ರಲ್ಲಿ ಕೆಲ ಹಿಂದೂ ಜನರು ಬಗದಾದಿಗೆ ಹೋಗುವಾಗ

ಜ್ಯೋತಿಷ್ಯ ಶಾಸ್ತ್ರದ ಕೋಷ್ಟಕಗಳನ್ನು ಒಯ್ದರು ಎಂದು ಕೆಲ ವಿದ್ವಾಂಸರ ಅಭಿಪ್ರಾಯವಿದೆ. ಅಬೂಜಾಫರ್ ಮಹಮ್ಮದ್ ಅಲ್ ಖ್ವಾರಿಝ್ಮಿ ರಚಿಸಿದ ಗ್ರಂಥಕ್ಕೆ ಆತನ ಹೆಸರೇ ಇಡಲ್ಪಟ್ಟಿತು. ಈ ಗ್ರಂಥದ ಸಹಾಯದಿಂದಲೇ ಯುರೋಪಿಯನ್ನರು ಹನ್ನೆರಡನೆಯ ಶತಮಾನದಲ್ಲಿ ಗಣಿತವನ್ನು ಕಲಿತರು. ಈ ರೀತಿ ಹಿಂದೂ ಜನರ ಈ ಅಂಕೆಗಳು ಯುರೋಪಿನ ತುಂಬ ಹಬ್ಬಿದವು. ಯುರೋಪಿಯನ್ನರು ತಾವು ಅರಬರಿಂದ ಕಲಿತ ಕಾರಣ ಇವುಗಳಿಗೆ ಅರಬೀ ಅಂಕೆಗಳೆಂದರು. ಸದ್ಯಕ್ಕೆ ಯುರೋಪಿನಲ್ಲಿ ಪ್ರಚಾರದಲ್ಲಿರುವ ಎಲ್ಲ ಅಂಕೆಗಳು ಅರಬರಿಂದಲೇ ತೆಗೆದುಕೊಳ್ಳಲ್ಪಟ್ಟವೆಯೆಂದೂ, ಅರಬರು ಹಿಂದೂ ಜನರಿಂದ ತೆಗೆದುಕೊಂಡರೆಂದೂ ಎಲ್ಲ ಇತಿಹಾಸಕಾರರು ಒಪ್ಪಿಕೊಳ್ಳುತ್ತಾರೆ.

ಇತಿಹಾಸ ಪ್ರಸಿದ್ಧ ಭಾಸ್ಕರಾಚಾರ್ಯನು ೧೧೧೪ ರಲ್ಲಿ ಜನಿಸಿದನು. ಇವನು "ಸಿದ್ಧಾಂತ ಶಿರೋಮಣಿ" ಎಂಬ ಮಹಾಗ್ರಂಥವನ್ನು ರಚಿಸಿದನು (೧೧೫೦). ಈ ಗ್ರಂಥದ ಭಾಗವಾದ "ಲೀಲಾವತಿ"ಯನ್ನು ಕೋಲ್‌ಬ್ರೂಕ್ಮನು ಇಂಗ್ಲೀಷಿಗೆ ಭಾಷಾಂತರ ಮಾಡಿದ್ದಾನೆ. ಲೀಲಾವತಿಯಲ್ಲಿ ದಶಾಂಶ ಪದ್ಧತಿಯ ಬಗ್ಗೆ ಒಂದು ಸ್ವತಂತ್ರ ಅಧ್ಯಾಯವಿದೆ. ಮಿ. ಬಾಲ್ ಎಂಬುವನು ಲೀಲಾವತಿಯ ವಿಷಯವಾಗಿ ಹೇಳುವದೇನೆಂದರೆ, "ಈ ಲೀಲಾವತಿಯಲ್ಲಿ ದಶಾಂಶ ಪದ್ಧತಿಯ ಬಗ್ಗೆ ಕ್ರಮಬದ್ಧವಾದ ವಿವೇಚನೆಯಿದೆ. ಈ ಪ್ರಕಾರ ವಿವೇಚನೆ ಮಾಡಿದ ಪ್ರಾಚೀನ ಗ್ರಂಥಗಳಲ್ಲಿ ಇದೇ ಮೊದಲನೆಯದು."

ಭಾಸ್ಕರಾಚಾರ್ಯನ ಗ್ರಂಥದಲ್ಲಿ ಬಿಡಿಸಿದ ಕೆಲ ಉದಾಹರಣೆಗಳನ್ನು ಬಿಡಿಸುವದು ಯುರೋಪಿನ ಗಣಿತ ಶಾಸ್ತ್ರಜ್ಞರಿಂದ ೧೭-೧೮ನೆಯ ಶತಮಾನದವರೆಗೂ ಆಗಿರಲಿಲ್ಲ. ಬೀಜಗಣಿತವನ್ನು ಹಿಂದೂ ಜನರು ಚೆನ್ನಾಗಿ ಅಭಿವೃದ್ಧಿಪಡಿಸಿದ್ದರು. ಜ್ಯೋತಿಷ್ಯದ ಪ್ರಶ್ನೆಗಳನ್ನೂ, ಭೂಮಿತಿಗಳ ಪ್ರಶ್ನೆಗಳನ್ನೂ ಬೀಜಗಣಿತದಿಂದ ಬಿಡಿಸಲು ಕ್ರಮಗಳನ್ನು ಹಿಂದೂ ಜನರೇ ಮೊದಲು ಕಲ್ಪಿಸಿದರು. ತ್ರಿಕೋಣಮಿತಿ (Trigonometry) ಯಲ್ಲಿ ಹಿಂದೂ ಜನರೇ ಭೂಮಂಡಲದ ಆದಿಗುರುಗಳಾಗಿದ್ದರೆಂದು ತೋರುತ್ತದೆ.

ಈ ರೀತಿ ಗಣಿತವನ್ನು ಹಿಂದೂಗಳು ಶೋಧಿಸಿದರು. ಇದು ಅರಬರ ಮೂಲಕ ಯುರೋಪಿಗೂ ಅನಂತರ ಇಡೀ ಜಗತ್ತಿಗೂ ಪ್ರಸಾರವಾಯಿತು. ಇಂದು ಗಣಿತ ಇಡೀ ಜಗತ್ತಿನ ಸೊತ್ತಾಗಿದೆ. ಇದು ಭಾರತದ ಕಾಣಿಕೆಯೆಂಬುದು ಭಾರತೀಯರಿಗೆಲ್ಲ ಹೆಮ್ಮೆಯ ವಿಷಯ. ಆದರೆ ಈಗ ಭಾರತೀಯ ಅಂಕೆಗಳನ್ನು ಬಿಟ್ಟು ವಿದೇಶಿ ಅಂಕೆಗಳಿಂದಲೇ ನಮ್ಮ ಮಕ್ಕಳು ಗಣಿತ ಕಲಿಯುತ್ತಿರುವದು ನಮ್ಮ ದೌರ್ಭಾಗ್ಯವೇ ಸರಿ. ✡



ಕಾಲು ಮುರಿದುಕೊಂಡು ಬಂದಾತನನ್ನು ಉಪಚರಿಸುತ್ತಾ ಡಾಕ್ಟರರು ಅನುಕಂಪದಿಂದ 'ಏನಪ್ಪಾ, ಮದುವೆಯಾಗಿದೆಂತೂ ನಿನಗೆ?' ಎಂದು ಕೇಳಿದಾಗ ಆತ, 'ಅಂ..., ಊಂ..., ಉಹುಂ! ಮೋಟರಿನಲ್ಲಿ ಸಿಕ್ಕಿದ್ದರಿಂದ ಆದ ಗಾಯ ಇದು,' ಎಂದು ಉತ್ತರಿಸಿದ.

ಶಿವ ಪಾರ್ವತಿಯ ಪ್ರೇಮ ಪರೀಕ್ಷೆ

ಸಂಗ್ರಹ: ಎಂ. ನಟರಾಜ

ಜನಪದ ಸಾಹಿತ್ಯದಲ್ಲಿ ವಿಶ್ವದ ಮಾತಾಪಿತರಾದ ಶಿವ ಪಾರ್ವತಿಯರು ಒಬ್ಬರನ್ನು ಒಬ್ಬರು ಪರೀಕ್ಷಿಸುವ ಕತೆಯೊಂದಿದೆ.

ಶಿವನು ಪಾರ್ವತಿಯನ್ನು ಪರೀಕ್ಷಿಸಬೇಕೆಂದು ಬಯಸುತ್ತಾನೆ. ಗುಂಡಿಯಲ್ಲಿನ ಮೀನಿನ ಹೆಜ್ಜೆಯನ್ನು ಪತ್ತೆ ಹಚ್ಚುವುದು ಎಷ್ಟು ಕಷ್ಟವೋ ಹಾಗೆಯೇ ಹೆಣ್ಣಿನ ಮನವನ್ನು ಪತ್ತೆ ಹಚ್ಚುವುದು ಕಷ್ಟವೆಂದು ಭಾವಿಸುತ್ತಾನೆ.

ಹೆಂಡ್ರ ಮನವ ಕಂಡವರಾರುಂಟು
ಗುಂಡಿಯಲ್ಲಿ ಇರುವ ಕಿರುಮೀನ। ಹೆಜ್ಜೆಯ
ಕಂಡವರಾರುಂಟು ಉಮಾದೇವಿ

ತಾನು ಗಂಗೆಗೆ ಹೋಗುತ್ತೇನೆ. ಏಳು ದಿನಗಳ ವರೆಗೆ ಮಗುವನ್ನು ನೋಡಿಕೊಂಡಿರು. ಧರ್ಮಮಾರ್ಗವನ್ನು ಬಿಡಬೇಡ ಎಂದು ಹೇಳುತ್ತಾನ,

ನಾರಿ ಕೇಳುಮದೇವಿ ನಾ ಗಂಗೆಗೋದೇನು
ಬಾಲನಽಽ ಚಿನ್ನಽಽ ಕುವರನಾ। ಕಾದಿರು
ನಾ ಬಾರನೇಳು ದಿವಸಕ್ಕೆ

ಎಂದು ನುಡಿಯುತ್ತಾನೆ. ಶಿವನು ಹೊರಟು ಹೋದ ಮೇಲೆ ಉಮಾದೇವಿ ಮಗನನ್ನು ಲಾಲಿಸಲು ಪ್ರಯತ್ನಿಸುತ್ತಾಳೆ. ಆದರೆ ಪಟ್ಟೆ ಉಡಿಸಬೇಕೆಂದು ಅಳುವುದಕ್ಕಾರಂಭಿಸುತ್ತಾನೆ ಗಣಪ.

ಕರಿಯ ಕಬ್ಬಿನ ಕೋಲು ಗೊನೆಯ ಬಾಳೆ ಹಣ್ಣು
ಬಟ್ಟಲಲಿ ಹಾಲು ಕೊಡುವಳು। ಗಣಪ
ಪಟ್ಟೆ ಬೇಕೆಂದು ಅಳುವನು

ಹಟವನ್ನು ತಡೆಯಲಾರದೆ ಪಟ್ಟೆ ತಂದು ನೋಡಿದರೆ ಹರಿದು ಹೋಗಿದೆ. ಅಷ್ಟರಲ್ಲಿ ಶಿವನು ಪಾರ್ವತಿಯನ್ನು ಪರೀಕ್ಷಿಸಬೇಕೆಂದು ಗೊರವಯ್ಯನ ವೇಷದಲ್ಲಿ ಬರುತ್ತಾನೆ.

ಕಂಬಳಿಯ ಕರೆ ಚೌಕ ಹರಕನ್ನೇ ಹೊಲ್ಲುತ್ತ
ಹಲವು ಭಾಷೆಗಳಾ ನುಡಿವುತ್ತ। ತಮ್ಮಲ್ಲೇ
ಮಡದಿಯ ಗೆಲುವ ಕ್ಷಣದಲ್ಲಿ

ಎಂದುಕೊಂಡು ಹರಿದ ಬಟ್ಟೆಗಳನ್ನು ಹೊಲಿದು ಕೊಡುವೆನು ಎಂದು ಹೇಳಿ, ಹರಿದ ಪಟ್ಟೆಯನ್ನು ಹೊಲಿದು ಕೊಡುತ್ತಾನೆ. ಕೆಲಸಕ್ಕೆ ಪ್ರತಿಯಾಗಿ ಪಾರ್ವತಿ.

ಮುತ್ತು ಮಾಣಿಕವ ಮುಚ್ಚಳದಿ ತಂದಾರ
ಉತ್ತಮ ಕುಲದ ಉಮಾದೇವಿ। ಕೊಟ್ಟಽಽರ
ಮುತ್ತು ಯಾಕೆಂದ ಗೊರವಯ್ಯ
ಬೆಸೆಗೆಟ್ಟ ಗೊರವಗೆ ಹೊಸ ಮುತ್ತು ನನಗ್ಯಾಕೆ

ಹಸಿಯುವಳೆ ನಿನ್ನ ಕಡೆಗಣ್ಣ । ಭಾವಕ್ಕೆ
ನನ್ನ ಮೈ ನನ ವಶವಲ್ಲ

ಎಂದು ತನ್ನ ಮನಸ್ಸಿನ ಪ್ರೇಮಾತುರದ ವಿಚಾರವನ್ನು ಹೇಳಿ ಮನೆಯೊಳಗೆ ಬಂದು ಹಾಸಿಗೆಯ ಮೇಲೆಕುಳಿತುಕೊಳ್ಳುತ್ತಾನೆ. ಇದರಿಂದ ಪಾರ್ವತಿ ಬೆದರಿ ಬೆವರಿದಳು. ಅವಳನ್ನು ವಶಪಡಿಸಿಕೊಂಡ ಈಶ್ವರ.

ಕಡಗದ ಕೈಯವಳ ಹಿಡಿದರು ದೇವರು
ತಾನು ಮಡದಿಯ ತೋಳ್ವಿಡಿದು । ತಕ್ಕೈಸುತ್ತ
ಮಡದಿಯ ಗೆಲಿದೇ ಕ್ಷಣದಲಿ



ಎಂದು ಹೆಮ್ಮೆಯಿಂದ ಹೇಳಿಕೊಂಡು, ಅಡಿಗೆ ಮಾಡಲು ಹೇಳಿ ಸ್ನಾನಕ್ಕೆ ಹೊರಡುತ್ತಾನೆ. ಪಾರ್ವತಿಗೆ ಇದು ಶಿವನ ತಂತ್ರವೆಂದು ತಿಳಿಯುತ್ತದೆ; ಇದು ಒಳ್ಳೆಯ ಸಮಯವೆಂದು ಕೊಂಡು ಒಂದು ಉಪಾಯ ಹೂಡುತ್ತಾಳೆ.

ಪಟ್ಟೆ ತೆಗೆದಿಟ್ಟು ಸೊಪ್ಪನು ಅರಿದುಟ್ಟು
ಶಂಖದ ಮಣಿಯ ಸರವಽಽನೂ ।
ಕೊರಳಿಗ್ಹಾಕಿ
ಬೇಡವತಿಯಾಗಿ ಹೊರಟಾಳು

ಶಿವನು ಬರುವ ದಾರಿಯಲ್ಲಿ ಗೆಡ್ಡೆ ಗೆಣಸು ಅಗೆಯುತ್ತ ನಿಂತಳು. ಅವಳನ್ನು ನೋಡಿದ ಶಿವ ಮೋಹಿಸುತ್ತಾನೆ. ಶಿವನು ತನ್ನನ್ನು ಮೆಚ್ಚಿದ್ದನ್ನು ಕಂಡು ಅವನನ್ನು ಸೋಲಿಸುವ

ಕಾಲ ಬಂದಿತೆಂದು ಪಾರ್ವತಿಗೆ ಹಿಗ್ಗು. ಶಿವನು ಅವಳನ್ನು ಕರೆತರಲು ಹುಡುಗರನ್ನು ಅಟ್ಟುತ್ತಾನೆ. ಆದರೆ ಪಾರ್ವತಿ.

ಅಡಿಗಡಿಗೂ ಕಾಯೋ ಮುಡಿಗೂ
ಕಾಯೋ ಬಿಸಿಲು
ಗುಡಿ ಬಿಟ್ಟು ನಾ ಬರಲಾರೆ । ದೇವರಗೆ
ಅಡಿ ಮುಟ್ಟಿ ಗುಡಿಗೆ ಬರ ಹೇಳಿ

ಎಂದು ಹೇಳಿ ಕಳುಹಿಸುತ್ತಾಳೆ. ಶಿವ ಒಪ್ಪಿ ತಾನೇ ಬರುತ್ತಾನೆ. ಅವನು ಬರುವುದನ್ನು ಕಂಡು ಸೊಪ್ಪಿನಿಂದ ಮನೆಯನ್ನು ಸರಿಪಡಿಸುತ್ತ ಬೆಡಗಿನ ನಗು ನಗುತ್ತಾಳೆ.

ಬಂದಿssರಿ ದೇವರೆ ನಿಂದೀssರಿ ಅಂಗಳದಿ
ಕೂರುವೆಡೆ ಒಂದು ಮಣೆಯಿಲ್ಲ । ದೇವರೆ
ಕುಳ್ಳೀssರಿ ಗುಡಿಯಾ ತೆಣೆಯಲ್ಲಿ

ಎಂದು ಕೂರಿಸಿ, ನನ್ನಂಥ ಬಡ ಹೆಣ್ಣನ್ನು ಏಕೆ ಒಲಿದಿರಿ. ಗಂಡ ಬಂದರೆ ನನ್ನನ್ನು ಬಿಡುವನೇ ಎಂದು ಪ್ರಶ್ನಿಸುವಳು,

ಹಾರುವರ ಹೆಣ್ಣಲ್ಲ ಹಲವರ ಕೂಸಲ್ಲ
ಪಾತ್ರ ನೋಡಿದರ ವಧುವಲ್ಲ । ದೇವರೆ
ಕೀಳು ಕುಲಕೇನು ಒಲಿದಿರಿ

ಎಂದು ನುಡಿದಾಗ, ಶಿವನು ನಾನು ಮೇಲು ಕೀಳು ಭಾವಿಸುವುದಿಲ್ಲ.

ಕೀಳು ಮೇಲೆನ್ನದೆ ಭಾವವ ನೋಡದೆ
ನಾ ಬಂದೆ ನಿನ್ನ ವಶಕಾಗಿ । ಮೇರವತಿ
ಕಾಡದೆ ಎನ್ನೊಳು ಒಡಗೂಡು

ಎನ್ನುವನು. ಆಗ ಪಾರ್ವತಿ.

ಕಾಡದೆ ನಿನ್ನನು ಕೂಡಿದನೆಂದರೆ
ಬೇಡ ಬಂದೀಗ ಬಯ್ಯುವನು । ನನ್ನನು
ಬೇಡಾಗುವಾ ನಮ್ಮ ಸಭೆಯುಲಿ

ಎನಲು, ಶಿವನು.

ಹಾಳು ಬೇಡದ ಮಾತು ಹೇಳದಿರು
ಎಲೆ ಹೆಣ್ಣೆ
ಬೇಡನ ಭಯವೂ ನಿನಗಿಲ್ಲ । ಬೇಡವತಿ
ಕಾಡದೆ ಎನ್ನೊಳು ಒಡಗೂಡು

ಪಾರ್ವತಿ ಕೊನೆಗೆ ಒಪ್ಪಿಕೊಳ್ಳುತ್ತಾಳೆ. ಅವಳು ಶಿವನ ಕೊರಳಿನ ಹಾರವನ್ನು ನೀಡಲು ಕೇಳಿಕೊಳ್ಳುತ್ತಾಳೆ. ಆ ಹಾರವು ಪಾರ್ವತಿಗೆ ಮಾತ್ರ ಕಾಣುತ್ತಿತ್ತು.

ಬೇಡದಂಥ ವಸ್ತುವನು ಬೇಡುವಳು
ಬೇಡವತಿ
ದೇವರ ಕೊರಳಾ ಪದಕವಾ। ಬೇಡುವಳು
ಬೇಡವತಿಯಲ್ಲಿ ಉಮದೇವಿ!

ಎಂದು ಶಿವನಿಗೆ ಅರ್ಥವಾಗುತ್ತದೆ. ಹೆಂಡತಿಯನ್ನು ಪರೀಕ್ಷಿಸಲು ಆಗದೆ ತಾನು ಸೋತೆನೆಂದು ಒಪ್ಪಿಕೊಳ್ಳುತ್ತಾನೆ. ಪಾರ್ವತಿಯ ಮುಖದಲ್ಲಿ ಕಿರುನಗೆ ಹೊರ ಚೆಲ್ಲುತ್ತದೆ. ✡

ಹೇಳಿದವರು ; ಬಿ. ಎನ್. ಭಾಗೀರಥಮ್ಮ



ಅಂಗಪ್ರದರ್ಶನ ಹೆಂಗಸರಲ್ಲಿ ಫ್ಯಾಶನ್ನಾಗಿ ರೂಪುಗೊಳ್ಳುತ್ತಿದೆಯೇನೋ ನಿಜ. ಆದರೆ ಹತ್ತು ಸಾವಿರದಲ್ಲಿ ಒಬ್ಬಳಿಗೆ ಮಾತ್ರ ಸರಿಯಾದ ಶರೀರ ಸೌಷ್ಠವವಿರುವ ಸಾಧ್ಯತೆಯಿರುವುದರಿಂದ ಅದು ಅವರು ನಗ್ನರಾಗುವ ಮಟ್ಟಗೆ ಹೋಗುವುದೆಂದು ನವಗಣಿಸುವುದಿಲ್ಲ.

—ಅನೆಟ್ ಕೆಲ್ಲರ್‌ಮನ್

◈ ರಘುಸುತ



ಹವಾ ಮುನ್ಸೂಚನೆ

ಪತ್ರಿಕೆಗಳಲ್ಲಿ, ರೇಡಿಯೋಗಳ ಮುಖಾಂತರ ಪ್ರತಿ ದಿನದ ಹವಾಗುಣದ ವಿವರಗಳನ್ನು ನಾವು ತಿಳಿದುಕೊಳ್ಳುತ್ತೇವೆ. ಆಕಾಶವಾಣಿಯ ಮುಖಾಂತರ ಬೆಂಗಳೂರು, ಮೈಸೂರು ನಗರಗಳ ಹವಾಗುಣ ವಿವರಗಳನ್ನು ಬಿತ್ತರಿಸಲಾಗುತ್ತದೆ. ದಿಲ್ಲಿಯ ಆಕಾಶವಾಣಿಯು ಭಾರತಕ್ಕೆ ಅನ್ವಯವಾಗುವ ಹವಾಗುಣ ವಿವರಗಳನ್ನು ಬಿತ್ತರಿಸುತ್ತದೆ. ಇದರೊಂದಿಗೆ ಹವಾ ಮುನ್ಸೂಚನೆಯನ್ನೂ ಪ್ರಸಾರ ಮಾಡುತ್ತದೆ– 'ಮುಂದಿನ ೨೪ ಗಂಟೆಗಳ ಹವಾ ಮುನ್ಸೂಚನೆಯಂತೆ...' 'ರೈತರು ಗಮನಿಸಬೇಕಾದ್ದು...' ಇತ್ಯಾದಿ. ಪತ್ರಿಕೆಗಳಲ್ಲಿ ಭಾರತದ ನಕ್ಷೆಯ ಸಮೇತ ೨೪ ಗಂಟೆಗಳ ಅಲ್ಲದೆ ೪೮ ಗಂಟೆಗಳ ಹವಾ ಮುನ್ಸೂಚನೆಯ ವಿವರಗಳೂ ಬಂದಿರುತ್ತವೆ. ಹಾಗಿದ್ದರೆ ಈ ಹವಾ ಮುನ್ಸೂಚನೆ ಅಂದರೆ ಏನು ? ಇದನ್ನು ಹೇಗೆ ಕಂಡುಹಿಡಿಯುತ್ತಾರೆ ? ಇದಕ್ಕೆ ಅಗತ್ಯವಾದ ಸಾಧನ ಸಾಮಗ್ರಿಗಳು ಯಾವುವು ? ಇದರಿಂದ ನಾಗರಿಕರಿಗೆ, ರೈತರಿಗೆ ಸಾಕಷ್ಟು ಅನುಕೂಲವಾಗುತ್ತವೆಯೆ ? ಎಂಬೀ ಪ್ರಶ್ನೆಗಳು ಸಾಮಾನ್ಯವಾಗಿ ಎಲ್ಲರಲ್ಲೂ ತಲೆದೋರುತ್ತವೆ,

ವಿಜ್ಞಾನ ದಾಪುಗಾಲು ಹಾಕುತ್ತಾ ಮುನ್ನಡೆದಂತೆ, ಜನಜೀವನಕ್ಕೆ ಸಂಬಂಧಪಟ್ಟ ಅನೇಕ ಅಗತ್ಯಗಳನ್ನು ಪೂರೈಸುವುದರಲ್ಲಿ ಅದು ಪಡೆದ ಸ್ಥಾನ ಅದ್ಭುತವಾದುದು. ವಿಜ್ಞಾನದ ಮುನ್ನಡೆ ಮಾನವನ ಶಾಂತಿಯುತ ಜೀವನಕ್ಕೆ ಸಹಕಾರಿಯಾಗತೊಡಗಿದೆ. ಆದರೆ ಇದರಿಂದ ಪ್ರಕೃತಿಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗಿಲ್ಲ. ಅದು ಉಂಟುಮಾಡಬಹುದಾದ ಅನಾಹುತಗಳ ಬಗ್ಗೆ ಕೆಲವೊಂದು ವಿಷಯಗಳ ಹಾಗೂ ಅಂಕಿ ಅಂಶಗಳ ಆಧಾರದ ಮೇಲೆ ಮಾನವನಿಗೆ ಮೊದಲೇ ಸೂಚನೆಯನ್ನು ಕೊಡಬಲ್ಲಂತಹ ಶಕ್ತಿ ವಿಜ್ಞಾನಿ ಬೆಳೆಸಿಕೊಂಡಿದ್ದಾನೆ.

ಹವಾಗುಣದ ಬಗೆಗೂ ಅನೇಕ ಆಧುನಿಕ ಯಂತ್ರೋಪಕರಣಗಳು, ಸಾಧನಗಳು, ಅನ್ವೇಷಣೆಗಳು ಸಹಕಾರಿಯಾಗಿವೆ. ಈಗಿನ ಹವಾಗುಣದ ಪರಿಸ್ಥಿತಿ ಈ ರೀತಿ ಇದೆ. ನಿನ್ನೆ ಇಂತಿಂತಹ ಕಡೆಗಳಲ್ಲಿ ಇಷ್ಟಿಷ್ಟು ಮಳೆಯಾಯಿತು. ಉಷ್ಣಾಂಶ ಹೀಗಿತ್ತು; ಮುಂದೆ (ಅಥವಾ ನಾಳೆಯವರೆಗೆ) ಈ ರೀತಿಯ ಉಷ್ಣಾಂಶ ಇರಬಹುದು. ಇಂತಿಂತಹ ಕಡೆಗಳಲ್ಲಿ ಮಳೆಯಾಗಬಹುದು. ಎಂಬುದಾಗಿ ನಿರ್ದಿಷ್ಟವಾಗಿ ಮಾನವ ಊಹಿಸಬಲ್ಲವನಾಗಿದ್ದಾನೆ. ಇದಕ್ಕೆ ಆಧುನಿಕ ಯಂತ್ರೋಪಕರಣ

ಗಳು ಹಾಗೂ ಗತಕಾಲದ ಅನುಭವ—ಎರಡನ್ನು ಉಪಯೋಗಿಸಿಕೊಳ್ಳುತ್ತಾನೆ. ಮಾರನೇ ದಿನ ಅಥವಾ ನಾಳೆ ಇರಬಹುದಾದ ಉಷ್ಣಾಂಶ, ಆಗುವ ಮಳೆ ಇವುಗಳನ್ನು ಊಹಿಸಿ ಹೇಳುವುದೆ 'ಹವಾ ಮುನ್ಸೂಚನೆ.'

ಹೀಗೆ ಹೇಳುವ ಎಲ್ಲ ರೀತಿಯ ಮುನ್ಸೂಚನೆಗಳೂ ನೂರಕ್ಕೆ ನೂರರಷ್ಟು ಕರಾರುವಾಕ್ಕಾಗಿ ಇರುತ್ತವೆ ಎಂದು ಹೇಳಲಿಕ್ಕಾಗುವುದಿಲ್ಲ. ಬೆಂಗಳೂರಿನಲ್ಲಿ ಮುಂದಿನ ೨೪ ಗಂಟೆಗಳಲ್ಲಿ ಮಳೆಯಾಗುತ್ತದೆ ಎಂದರೆ ಬೆಂಗಳೂರಿನಲ್ಲೆ ಮಳೆಯಾಗುತ್ತದೆ ಎಂದು ತಿಳಿಯಬೇಕಾಗಿಲ್ಲ. ನಗರ ಕೇಂದ್ರದ ೨೫ ಮೈಲಿ ತ್ರಿಜ್ಯದಲ್ಲಿ ಎಲ್ಲಿ ಬೇಕಾದರೂ ಬೀಳಬಹುದು. ಮೆಜೆಸ್ಟಿಕ್ ಬಳಿ ಮಳೆ ಬೀಳದೆ ಇರಬಹುದು, ಆದರೆ ಅದೇ ದಿನ ಅದೇ ಸಮಯದಲ್ಲಿ ಯಶವಂತಪುರದಲ್ಲಿ ಭರ್ಜರಿ ಮಳೆ ಆಗಬಹುದು. ಹುಬ್ಬಳ್ಳಿಯ ಟ್ರಾಫಿಕ್ ಐಲ್ಯಾಂಡ್‌ನಲ್ಲಿ ಮಳೆ ಆಗದೆ ಇರಬಹುದು, ಆದರೆ ಧಾರವಾಡದ ಸಾಧನಕೇರಿಯಲ್ಲಿ ಮಳೆ ಆಗಿರಬಹುದು.

ಹವಾಮಾನದ ಬಹಳ ಮುಖ್ಯವಾದ ಅಂಶಗಳೆಂದರೆ ವಾಯುವಿನಲ್ಲಿರುವ ಉಷ್ಣಾಂಶ, ವಾಯುಮಂಡಲದ ಒತ್ತಡ, ಮಾರುತಗಳು ಬೀಸುವ ದಿಕ್ಕು ಮತ್ತು ಅವುಗಳ ವೇಗ, ಅವುಗಳಲ್ಲಿ ಆರ್ದ್ರತೆ, ಮೇಘತ್ವದ ರೀತಿ ಮತ್ತು ಪರಿಮಾಣ, ಮಳೆ ಬೀಳುವಿಕೆ (ಅವಪಾತ ದ್ರವ)ಯ ಪರಿಮಾಣ. ಈ ವಿವರಗಳನ್ನು ಗತ ಅನುಭವದ ಹಿನ್ನೆಲೆಯಲ್ಲಿ ಅರ್ಥೈಸಬೇಕಾಗುತ್ತದೆ. ಇವುಗಳ ಸಹಕಾರದಿಂದ ಹೆಚ್ಚು ಒತ್ತಡ ಹಾಗೂ ಕಡಿಮೆ ಒತ್ತಡಗಳು ಯಾವ ಪಥವನ್ನು ಅನುಸರಿಸುತ್ತವೆ ಎಂಬುದನ್ನು ಕಂಡುಹಿಡಿಯಬಹುದು. ವರ್ಷದ ವಿವಿಧ ಕಾಲಗಳಲ್ಲಿ ಇವು ಸಾಮಾನ್ಯವಾಗಿ ಚಲಿಸುವ ಗತಿಯನ್ನು ಸೂಚಿಸುತ್ತವೆ. ಎಲೆಕ್ಟ್ರಾನಿಕ್ ಕಂಪ್ಯೂಟರ್‌ಗಳು ಈ ಅಂಕಿ ಅಂಶಗಳನ್ನು ಸಂಗ್ರಹಿಸಿ, ಸೂಚ್ಯಂಕಗಳನ್ನು ನೀಡುತ್ತವೆ. ವಿವಿಧ ವಾಯು ಪುಂಜಗಳು, ಒತ್ತಡ ವಿನ್ಯಾಸಗಳು, ವಾಯು ಮುಂಚೂಣಿಗಳು ಮತ್ತು ಯಾವುದಾದರೊಂದು ಗೊತ್ತಾದ ಸಮಯದಲ್ಲಿನ ಅವುಗಳ ಚಲನೆಗಳು ಇವೆಲ್ಲವುಗಳ ಆಧಾರದ ಮೇಲೆ ಹವಾ ಮುನ್ಸೂಚನೆ ಆಧಾರಿತವಾಗಿರುತ್ತದೆ. ವಿವಿಧ ವಾಯುಪುಂಜಗಳು ಭಿನ್ನವಾದ ಭೂ–ಮೇಲ್ಮೈ ಪರಿಸ್ಥಿತಿಗಳಿಗೆ ಯಾವ ರೀತಿ ಪ್ರತಿಕ್ರಿಯೆ ತೋರುತ್ತವೆ ಎಂಬುದನ್ನು ಹವಾ ಮುನ್ಸೂಚಕನು ತಿಳಿದುಕೊಳ್ಳಬೇಕಾಗುತ್ತದೆ. ಇದರಿಂದ ಸಾಕಷ್ಟು ಕರಾರುವಾಕ್ಕಾಗಿ ಮುಂದಾಗುವ ಹವಾಗುಣ ಬದಲಾವಣೆಗಳ ಭವಿಷ್ಯ ಹೇಳಬಹುದು.

ಭಾರತದಲ್ಲಿ ಹವಾಗುಣ ಮುನ್ಸೂಚನೆಯ ವ್ಯವಸ್ಥೆಯು ಈ ರೀತಿ ಇದೆ. ನೂರಾರು ವೀಕ್ಷಣಾಲಯಗಳು ಭಾರತಾದ್ಯಂತ ಇವೆ. ಇವು ಜಲಪ್ರದೇಶ, ಭೂಪ್ರದೇಶ, ವಾಯು ಪ್ರದೇಶಗಳಲ್ಲಿನ ಉಷ್ಣಾಂಶ, ಒತ್ತಡ, ಮಾರುತಗಳು ಬೀಸುವ ದಿಕ್ಕು ಇತ್ಯಾದಿ ವಿವರಗಳನ್ನು ಸಂಗ್ರಹಿಸುತ್ತವೆ. ಈ ವಿವರಗಳು ನಿಷ್ಕರ್ಷೆಗೆ ಬರಲು ಸಾಧ್ಯವಾಗುತ್ತದೆ. ಜಿನೀವಾದಲ್ಲಿರುವ ವಿಶ್ವ ಪವನ ವಿಜ್ಞಾನ ಸಂಸ್ಥೆಯು ನಿರ್ಧರಿಸಿದ ಆಧಾರಾಂಶಗಳಿಗೆ ಅನುಗುಣವಾಗಿ ಇವನ್ನು ನಿರ್ಣಯಿಸಲಾಗುತ್ತದೆ. ಈ ವೀಕ್ಷಣಾಲಯಗಳು ತಾವು ಪಡೆದ ನಿಷ್ಕರ್ಷೆಗಳನ್ನು ತಮ್ಮ ಪ್ರಾದೇಶಿಕ ಕೇಂದ್ರಗಳಿಗೆ ಕಳುಹಿಸುತ್ತವೆ. ಭಾರತದಲ್ಲಿ ಇಂತಹ ಐದು ಪ್ರಾದೇಶಿಕ ಕೇಂದ್ರಗಳಿವೆ. ದಿಲ್ಲಿ, ಮುಂಬಯಿ, ಕಲ್ಕತ್ತ, ಮದರಾಸು ಮತ್ತು ನಾಗಪುರ. ಈ ಕೇಂದ್ರಗಳು ತಮ್ಮ ತಮ್ಮ ವಲಯಗಳಿಗೆ ಸಂಬಂಧಪಟ್ಟಂತೆ ಹವಾ ಮುನ್ಸೂಚನೆಯ ವಿಶ್ಲೇಷಣೆಗಳನ್ನು ಕಂಡು ಹಿಡಿಯುತ್ತವೆ. ಹೀಗೆ ಕಂಡು ಹಿಡಿದ ವಿಶ್ಲೇಷಣೆಗಳು ಹಾಗೂ ಅವಕ್ಕೆ ಸಂಬಂಧಪಟ್ಟ ವಿವರಗಳನ್ನು ಪುಣೆಯಲ್ಲಿರುವ ಭಾರತೀಯ ಪವನ ವಿಜ್ಞಾನ ಇಲಾಖೆಗೆ ಕಳುಹಿಸಲಾಗುವುದು. ಅಲ್ಲಿನ ವಿಜ್ಞಾನಿಗಳು ಈ ವಿವರಗಳನ್ನು ಸ್ಪಷ್ಟೀಕರಿಸಿ, ಆ ನಕ್ಷೆಗಳ ಸಹಾಯದಿಂದ, ರಾಷ್ಟ್ರೀಯ ಮಟ್ಟದ ಹವಾ ಮುನ್ಸೂಚನೆಯನ್ನು ತಯಾ

ರಿಸುತ್ತಾರೆ. ಬಳಿಕ ಇದನ್ನು ದಿಲ್ಲಿಯಲ್ಲಿರುವ ಹವಾ ವೀಕ್ಷಣಾಲಯಂಗಳ ಡೈರೆಕ್ಟರ್ ಜನರಲ್‌ರವರಿಗೆ ಕಳುಹಿಸಲಾಗುವುದು. ಅವರು ತಮಗೆ ಬಂದ ವಿವರಗಳನ್ನು ಆಕಾಶವಾಣಿಗೆ ಹಾಗೂ ಪತ್ರಿಕಾಲಯಂಗಳಿಗೆ ಕಳುಹಿಸುತ್ತಾರೆ. ಹೀಗೆ ಆಕಾಶವಾಣಿಯ ಮುಖಾಂತರ ಹಾಗೂ ಪತ್ರಿಕೆಗಳ ಮುಖಾಂತರ ಹವಾಗುಣ ವರದಿ, ಮುನ್ಸೂಚನೆ ಜನರಿಗೆ ತಿಳಿಯುತ್ತದೆ.

ಪ್ರಪಂಚದಲ್ಲಿ ಹವಾ-ಮುನ್ಸೂಚನಾ ಕಾರ್ಯಕ್ರಮವು ಸಾರ್ವಜನಿಕ ಉಪಯೋಗಕ್ಕಾಗಿ ಪ್ರಾರಂಭವಾದದ್ದು ಟೆಲಿಗ್ರಾಫ್ (೧೮೪೦ ರಲ್ಲಿ) ಅನ್ವೇಷಣೆಯ ನಂತರ. ಇದು ಹೆಚ್ಚು ವಿಸ್ತೃತ ರೂಪವನ್ನು ಹೊಂದಿದ್ದು ಸುಮಾರು ೧೯೦೦ ರಲ್ಲಿ ಆವಿಷ್ಕಾರಗೊಂಡ ರೇಡಿಯೋವಿನ ಮುಖಾಂತರ. ಇವೆರಡೂ ಆಧುನಿಕ ಹವಾ ಮುನ್ಸೂಚನಾ ವಿಧಾನಗಳಿಗೆ ಅತ್ಯಂತ ಅಗತ್ಯ ಪರಿಕರಗಳು.

ಹವಾಗುಣ ವಿಷಯ ಸಂಗ್ರಹಗಳಿಗಾಗಿ ಭಾರತದಲ್ಲಿ ಆಗಸ್ಟ್ ೧೮೭೫ ರಲ್ಲಿ ಭಾರತ ಪವನ ವಿಜ್ಞಾನ ಇಲಾಖೆಯು ಸ್ಥಾಪಿತವಾಯಿತು. ಬ್ರಿಟಿಷರು ಇದರ ಕೇಂದ್ರವನ್ನು ಅಂದಿನ ಬೇಸಿಗೆ ರಾಜಧಾನಿಯಾದ ಸಿಮ್ಲಾದಲ್ಲಿ ಸ್ಥಾಪಿಸಿದರು. ಆಗ ಭಾರತಾದ್ಯಂತ ೭೭ ವೀಕ್ಷಣಾಲಯಂಗಳು ಇದ್ದುವು. ೧೯೨೮ ರಲ್ಲಿ ವೈಭವೋಪೇತವಾದ ಕಟ್ಟಡವನ್ನು ಪುಣೆಯಲ್ಲಿ ನಿರ್ಮಾಣ ಮಾಡಿ ಇಲಾಖೆಯ ಕೇಂದ್ರವನ್ನು ಅಲ್ಲಿಗೆ ವರ್ಗಾಯಿಸಿದಾಗ, ಆ ಕಟ್ಟಡಕ್ಕೆ 'ಸಿಮ್ಲಾ ಆಫೀಸ್' ಎಂದೇ ಹೆಸರಿಡಲಾಯಿತು. ಇಂದಿಗೂ ಅದೇ ಹೆಸರಿದೆ.

ರೇಡಿಯೋ ಸಾಂಡೆ ಎನ್ನುವ ಉಪಕರಣವು ಪ್ರಪಂಚದಲ್ಲಿ ಮೊಟ್ಟ ಮೊದಲನೆಯದಾಗಿ ೧೯೩೦ ರಲ್ಲಿ ಹವಾಗುಣ ಪರಿಸ್ಥಿತಿಯನ್ನು ದಾಖಲು ಮಾಡಿತು. ಈಗ ಈ ಉಪಕರಣವು ಹವಾಗುಣ ಪರಿಸ್ಥಿತಿಗಳನ್ನು ಅರಿಯುವುದರಲ್ಲಿ ಅತ್ಯಂತ ಸಹಕಾರಿಯಾಗಿದೆ. ಇದೊಂದು ಆಕಾಶಬುಟ್ಟಿ ಉಪಕರಣ. ಇದನ್ನು 'ಹವಾಮಾನ ಆಕಾಶ ಬುಟ್ಟಿ' ಎಂದೂ ಕರೆಯುತ್ತಾರೆ. ಇದರಲ್ಲಿ ಉಷ್ಣಾಂಶ, ಒತ್ತಡ ಮತ್ತು ಆರ್ದ್ರತೆಗಳನ್ನು ಅಳೆಯುವ ಉಪಕರಣಗಳಿರುತ್ತವೆ. ಇದನ್ನು ಪ್ಯಾರಾಚೂಟ್ ಮುಖಾಂತರ ಮೇಲೇರಿಸಿದ ಕೂಡಲೇ ಬೆಲೂನ್ (ಆಕಾಶ ಬುಟ್ಟಿ) ದೊಡ್ಡದಾಗುತ್ತದೆ. ಇದು ಆಕಾಶದಲ್ಲಿ ಮುಂದುವರೆದಂತೆಲ್ಲ ಸ್ವಯಂಚಾಲಿತ ಸಂಜ್ಞೆಗಳನ್ನು ಪ್ರಸಾರ ಮಾಡುತ್ತದೆ. ಭೂಮಿಯ ಮೇಲಿರುವ ರಾಡಾರ್ ಉಪಕರಣವು ಈ ಆಕಾಶ ಬುಟ್ಟಿಯ ಪಥವನ್ನು ಅನುಸರಿಸಿ, ಅದು ಕಳುಹಿಸಿದ ಸಂಜ್ಞೆಗಳನ್ನು ಸ್ವೀಕರಿಸುತ್ತದೆ. ಈ ಸಂಜ್ಞೆಗಳು ವಾಯುವಿನ ಮೇಲ್‌ಸ್ತರದ ಉಷ್ಣಾಂಶ, ಒತ್ತಡ, ಮತ್ತು ಆರ್ದ್ರತೆಗಳನ್ನು ಸೂಚಿಸುತ್ತದೆ. ಆಕಾಶ ಬುಟ್ಟಿಯು ಸುಮಾರು ೨೦ ಮೈಲಿಗಳ ಔನ್ನತ್ಯದ ವರೆಗೂ ಮೇಲೇರಿ, ನಂತರ ಸಿಡಿಯುತ್ತದೆ. ಹಾಗೆ ಸಿಡಿದಾಗ ಉಪಕರಣಗಳು ಕೆಳಕ್ಕಿಳಿಯುತ್ತವೆ. ಭಾರತದಲ್ಲಿ ಇತ್ತೀಚೆಗೆ ಇಂತಹ ರಾಡಾರ್ ನಿಲ್ದಾಣಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸಲಾಗುತ್ತಿದೆ.

ಇಂದು ಭಾರತದಲ್ಲಿ ೪೯೦ ಭೂ-ಮೇಲ್ಮೈ ಅವಲೋಕನ ಕೇಂದ್ರಗಳು, ೫೫ ಮಾರ್ಗದರ್ಶಕ ಆಕಾಶ ಬುಟ್ಟಿ ವೀಕ್ಷಣಾಲಯಗಳು. ತಮ್ಮ ಜಾಲವನ್ನು ಹರಡಿವೆ. ಆಕಾಶ ಬುಟ್ಟಿ ವೀಕ್ಷಣಾಲಯಗಳು ದಿನಂಪ್ರತಿ ಎರಡರಿಂದ ನಾಲ್ಕು ಸಲ ಮೇಲ್‌ಸ್ತರ ವಾಯುಮಂಡಲದಲ್ಲಿ ಪ್ರಯೋಗಗಳನ್ನು ನಡೆಸುತ್ತವೆ. ೭೭ ಆಕಾಶಯಾನ ಹವಾಗುಣ ವೀಕ್ಷಣಾಲಯಗಳಿವೆ. ಇವು ವಿಮಾನ ನಿಲ್ದಾಣಗಳ ಬಳಿ ಮತ್ತು ವಾಯುಮಾರ್ಗಗಳ ಉದ್ದಕ್ಕೂ ಉಂಟಾಗುವ ಹವಾಗುಣ ಬದಲಾವಣೆಗಳ ಮೇಲೆ ನಿರಂತರ ನಿಗಾ ಇಟ್ಟಿರುತ್ತವೆ. ವಾಯು ಪ್ರವಾಹಗಳಲ್ಲಿ ಉಂಟಾಗಬಹುದಾದ ಬದಲಾವಣೆಗಳನ್ನು ಗುರ್ತಿಸಿ, ಸೂಕ್ತ ಸಂದೇಶ, ಸಲಹೆಗಳನ್ನು ವಿಮಾನ ನಿಲ್ದಾಣಗಳಿಗೆ ರವಾನಿಸುತ್ತವೆ. ಇವಲ್ಲದೆ ಬಿರುಗಾಳಿಗಳನ್ನು ಪತ್ತೆ ಮಾಡುವ ೧೦ ವೀಕ್ಷಣಾಲಯಗಳು, ೧೨೨ ಕೃಷಿ-ಪವನ ಶಾಸ್ತ್ರೀಯ ವೀಕ್ಷಣಾಲಯಂಗಳು, ೩೨ ಭೂಕಂಪನಮಾಪನ

ಕೇಂದ್ರಗಳು, ೩೦ ವಿಕಿರಣಮಾಪನ ಕೇಂದ್ರಗಳು ಇವೆ. ಇದಲ್ಲದೆ ಭಾರತದ ಅಧೀನದಲ್ಲಿರುವ ಜಲ ಪ್ರದೇಶಗಳ ವೀಕ್ಷಣೆಗಾಗಿ ನಮ್ಮ ನೌಕಾ ಸೈನ್ಯದಲ್ಲಿ ಪ್ರತ್ಯೇಕ ವಿಭಾಗವೇ ಇದೆ. 'ಇಂಡಿಯನ್ ವಾಲಂಟರಿ ಅಬ್‌ಸರ್ವಿಂಗ್ ಫ್ಲೀಟ್' ಎನ್ನುವ ಈ ನೌಕಾ ವಿಭಾಗವು ೧೯೯ ಹಡಗುಗಳನ್ನು ಹೊಂದಿದ್ದು ಭಾರತ ಪವನ ವಿಜ್ಞಾನ ಇಲಾಖೆಗಾಗಿ ವಿಷಯಗಳನ್ನು ದಾಖಲು ಮಾಡುತ್ತದೆ.

ಚಂಡ ಮಾರುತಗಳ ಹಾವಳಿ ಭಾರತಕ್ಕೆ ಒಂದು ಶಾಪ. ಹಿಂದೆ ಚಂಡ ಮಾರುತಗಳ ಸೂಚನೆಯನ್ನು ಕೇವಲ ಕೆಲವು ಗಂಟೆಗಳ ಮುಂಚೆ ತಿಳಿಸಲು ಸಾಧ್ಯವಾಗುತ್ತಿತ್ತು. ಇದರಿಂದ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ವ್ಯವಸ್ಥಾ ಕ್ರಮಗಳನ್ನು ಕೈಗೊಳ್ಳಲು ಬಹಳ ಕಡಿಮೆ ಸಮಯವಿರುತ್ತಿತ್ತು. ವಿವಿಧ ರಾಡಾರ್ ನಿಲ್ದಾಣಗಳು ಹಾಗೂ ಭೂ, ವಾಯು, ಜಲ ಪ್ರದೇಶಗಳಲ್ಲಿನ ವೀಕ್ಷಣಾಲಯಗಳು ರವಾನಿಸಿದ ವಿವರಗಳ ಆಧಾರದ ಮೇಲೆ ಚಂಡಮಾರುತ ಮೋಡಗಳ ಪಥವನ್ನು ನಕ್ಷೆಯ ಮೇಲೆ ಗುರುತಿಸಿ, ಅವುಗಳ ಆಧಾರದ ಮೇಲೆ ಮುನ್ಸೂಚನೆಗಳನ್ನು ನೀಡಲಾಗುವುದು. ಈಗ ಚಂಡಮಾರುತಗಳ ಸೂಚನೆಯನ್ನು ಒಂದು ದಿನ ಮುಂಚಿತವಾಗಿಯೇ ತಿಳಿಸಲಾಗುವುದು. ಇದರಿಂದ ಸಾವಿರಾರು ಜೀವಿಗಳನ್ನು ರಕ್ಷಿಸಬಹುದಲ್ಲದೆ, ಚಂಡ ಮಾರುತ ಸಂಭವಿಸಬಹುದಾದ ವಲಯದಿಂದ ಹಡಗುಗಳನ್ನು ದೂರವಿಡಲು ಸಾಧ್ಯ. ಈಗ ಆರು ಬೃಹತ್ ರಾಡಾರ್ ನಿಲಯಗಳನ್ನು ಭಾರತದ ಪೂರ್ವ ತೀರದಲ್ಲಿ ಕಲ್ಕತ್ತ, ಪರದೀಪ್, ವಿಶಾಖಪಟ್ಟಣ, ಮಚ್ಚಲಿಪಟ್ಟಣ, ಮದ್ರಾಸ್ ಮತ್ತು ಕಾರೈಕ್ಕಲ್ ಕೇಂದ್ರಗಳಲ್ಲಿ ಸ್ಥಾಪಿಸಲಾಗಿದೆ. ಇದೇ ರೀತಿಯ ಎರಡು ನಿಲ್ದಾಣಗಳನ್ನು ಪಶ್ಚಿಮ ಕರಾವಳಿಯಲ್ಲಿ ಮುಂಬಯಿ ಮತ್ತು ಗೋವಾಗಳಲ್ಲಿ ಸ್ಥಾಪಿಸಲಾಗಿದೆ. ಪ್ರತಿಯೊಂದು ನಿಲಯವೂ ೪೦೦ ಕಿ. ಮೀ. ವ್ಯಾಪ್ತಿಯನ್ನು ಹೊಂದಿರುತ್ತದೆ. ಇವುಗಳಲ್ಲಿ ನಾಲ್ಕು ಕಾರ್ಯಾಚರಣೆ ನಡೆಸುತ್ತಿವೆ. ಉಳಿದವು ಇಷ್ಟರಲ್ಲೇ ಪ್ರಾರಂಭಿಸಲಾಗುವುದು, ಇವೆಲ್ಲವನ್ನೂ ೧೯೭೦ರಿಂದೀಚೆಗೆ ಸ್ಥಾಪಿಸಲಾಯಿತು. ಅತ್ಯಂತ ಭಯಾನಕ ಆವರ್ತ ಚಂಡಮಾರುತವು ೧೯೭೧ನೇ ಇಸ್ವಿ ಆಕ್ಟೋಬರ್ ೨೯-೩೦ರಂದು ಬಂಗಾಳ ಕೊಲ್ಲಿಗೆ ಎದುರಾಗಿರುವ ಒರಿಸ್ಸಾದ ಬಂದರು ತೀರ ಹಾಗೂ ನಗರವಾದ ಪರದೀಪದ ಮೇಲೆ ದಾಳಿ ಮಾಡಿತು. ಕಡೆಯ ಪಕ್ಷ ೧೦,೦೦೦ ಜನರಾದರೂ ಆಗ ಸತ್ತಿರಬಹುದು; ಉಬ್ಬರವಿಳಿತದ ಅಲೆಗಳು ನಗರವನ್ನು ಸೀಳಿಕೊಂಡು ನುಗ್ಗಿ ಲಕ್ಷಾಂತರ ರೂಪಾಯಿಗಳ ಆಸ್ತಿಪಾಸ್ತಿಯನ್ನು ನಾಶಗೊಳಿಸಿದುವು. ಒಂದು ವರ್ಷದ ನಂತರ ಸೆಪ್ಟೆಂಬರ್ ೧೧ ಮತ್ತು ೨೨ರಂದು ಇದೇ ರೀತಿಯ ಚಂಡ ಮಾರುತಗಳು ಒರಿಸ್ಸಾದ ಕರಾವಳಿಯಲ್ಲಿರುವ ಗೋಪಾಲಪುರವನ್ನು ಅಪ್ಪಳಿಸಿದುವು. ಈ ಸಲ, ಸಾವು ನೋವು ಕಡಿಮೆಯಾಗಿತ್ತು. ಕಾರಣ, ಇವುಗಳ ಬಗ್ಗೆ ಮುನ್ಸೂಚನೆಯನ್ನು ಮುಂಚೆಯೇ ನೀಡಿದ್ದಿತಲ್ಲದೆ, ಮುನ್ನೆಚ್ಚರಿಕೆ ಕಾರ್ಯಕ್ರಮಗಳನ್ನೂ ಕೈಗೊಳ್ಳಲಾಗಿತ್ತು.

ಇತ್ತೀಚೆಗೆ ಆಕಾಶದಲ್ಲಿ ಹಾರಿ ಬಿಟ್ಟಿರುವ ವಿವಿಧ ಉಪಗ್ರಹಗಳು ಪವನ ವಿಜ್ಞಾನದಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದಿವೆ. ಈ ಉಪಗ್ರಹಗಳು ಆಕಾಶದಲ್ಲಿ (ಶೂನ್ಯದಲ್ಲಿ) ಸುತ್ತುತ್ತ ಭೂಮಿಯ ಎಲ್ಲ ಪ್ರದೇಶ ಚಿತ್ರಗಳನ್ನು ತೆಗೆಯುತ್ತಾ, ಹವಾಗುಣ ವಿವರಗಳನ್ನೂ ಸಂಗ್ರಹಿಸುತ್ತಾ, ಭೂಮಿಯ ಮೇಲಿರುವ ಪ್ರಸಾರ ಸ್ವೀಕಾರ ಕೇಂದ್ರಗಳಿಗೆ ಅವನ್ನು ರವಾನಿಸುತ್ತವೆ. ಅಮೇರಿಕ ಮತ್ತು ರಷ್ಯಾ ದೇಶಗಳ ಉಪಗ್ರಹಗಳು ಈ ರೀತಿಯ ಹವಾಗುಣ ಮುನ್ಸೂಚನೆಯಲ್ಲಿ ಅತ್ಯಂತ ಹೆಚ್ಚಿನ ರೀತಿಯಲ್ಲಿ ಸಹಾಯ ನೀಡಿವೆ.

ಅಮೇರಿಕದ ಸಂಯುಕ್ತ ಸಂಸ್ಥಾನಗಳು ಟೈರೊಸ್ I (ಟೆಲಿವಿಜನ್ ಇನ್‌ಫ್ರಾರೆಡ್ ಅಬ್‌ಸರ್ವೇಷನ್ ಸ್ಯಾಟಲೈಟ್) ಎನ್ನುವ ಪ್ರಥಮ ಉಪಗ್ರಹವನ್ನು ೧೯೬೦ರ ಏಪ್ರಿಲ್‌ನಲ್ಲಿ ಹಾರಿಸಿದವು. ಈ ಉಡಾವಣೆಯು

ಅತ್ಯಂತ ಜಯಪ್ರದವಾಗಿ, ಉಪಯುಕ್ತವಾದುದರಿಂದ, ನಂತರ ಅನೇಕ ಟೈರೊಸ್ ಉಪಗ್ರಹಗಳನ್ನು ಉಡಾಯಿಸಲಾಯಿತು. ಇವು, ಮೋಡಗಳು, ಹವಾಗುಣ ವಿನ್ಯಾಸಗಳು, ಮತ್ತು ಭೂ ಮೇಲ್ಮೈಯ ಟೆಲಿವಿಜನ್ ಚಿತ್ರಗಳನ್ನು ಭೂಮಿಗೆ ರವಾನಿಸುತ್ತವೆ. ಇವು ಭೂಮಿಯಿಂದ ೪೫೦ ರಿಂದ ೫೦೦ ಮೈಲಿಗಳ ಎತ್ತರದಲ್ಲಿ ಭೂಮಿಯ ಸುತ್ತಲೂ ವೃತ್ತಾಕಾರದಲ್ಲಿ ಪ್ರದಕ್ಷಣೆ ಹಾಕುತ್ತಿವೆ. ಒಂದು ಪ್ರದಕ್ಷಣೆಯನ್ನು ೧೦೦ ನಿಮಿಷಗಳಲ್ಲಿ ಮುಗಿಸುತ್ತದೆ. ಇದರಲ್ಲಿನ ಛಾಯಾಗ್ರಾಹಕಗಳು ೮೦೦ರಿಂದ ೮೦ ಮೈಲಿಗಳ ವಿಸ್ತೃತ ಪ್ರದೇಶದ ಛಾಯಾ ಚಿತ್ರಗಳನ್ನು ತೆಗೆದು, ತವ್ನಲ್ಲಿನ ಅಯಸ್ಕಾಂತೀಯ ಪಟ್ಟಿಯಲ್ಲಿ ಸಂಗ್ರಹಿಸಿಕೊಂಡಿರುತ್ತವೆ. ಸ್ವೀಕೃತ ಕೇಂದ್ರಗಳ ಮೇಲೆ ಹಾಯ್ದು ಹೋದಾಗ, ಆ ಚಿತ್ರಗಳನ್ನು ಪ್ರಸಾರ ಮಾಡುವಂತೆ ಭೂಮಿಯಿಂದ ಆಜ್ಞೆಯನ್ನು ಕಳಿಸಲಾಗುವುದು. ಅದರಂತೆ ಅವು ಆ ಚಿತ್ರಗಳನ್ನು ಪ್ರಸರಣ ಮಾಡುತ್ತವೆ. ಭೂಮಿಯ ಮೇಲಿನ A P T (Automatic Picture Transmission) ಉಪಕರಣದಲ್ಲಿ ಟೆಲಿವಿಜನ್ ರೀತಿಯ ನಳಿಕೆಯ ಮೇಲೆ ಉಪಗ್ರಹದಿಂದ ಬಂದ ಛಾಯಾಚಿತ್ರಗಳು ರೂಪುಗೊಳ್ಳುತ್ತವೆ. ನಂತರ ಹೀಗೆ ಮೂಡಿದ ಚಿತ್ರಗಳನ್ನು ನಕ್ಷೆಗಳ ಮೇಲೆ ಪ್ರಕ್ಷೇಪಿಸಲಾಗುವುದು. ಅದರಿಂದ ಬಂದ ಅಂಕಿ ಅಂಶಗಳನ್ನು ಭೂ ಮೇಲ್ಮೈನ ಹವಾಗುಣ ದಾಖಲಾತಿಗಳೊಂದಿಗೆ ಹೋಲಿಸಿ, ಸಂಬಂಧೀಕರಿಸಿ, ಹವಾಮಾನದ ಬಗ್ಗೆ ಊಹೆಗಳನ್ನು ನಿರ್ಣಯಿಸಲಾಗುವುದು.

ಭಾರತದಲ್ಲಿ A P T ಸ್ವೀಕೃತ ನಿಲ್ದಾಣಗಳು ಐದು ಕಡೆಗಳಲ್ಲಿವೆ. ಇವುಗಳಲ್ಲಿ ಮುಂಬಯಿ ಬಳಿಯ ಕೊಲಾಬಾದಲ್ಲಿರುವ ನಿಲ್ದಾಣವು ಅತ್ಯಂತ ಶಕ್ತಿಯುತವಾದುದು. ಇಲ್ಲಿನ ಉಪಕರಣಗಳು ಪೂರ್ತಿಯಾಗಿ ಅಮೇರಿಕದಿಂದ ಬಂದವುಗಳು. ಆದುದರಿಂದ ಅಮೇರಿಕನ್ ಉಪಗ್ರಹಗಳಿಂದ ಬಂದ ಚಿತ್ರಗಳನ್ನು ಮಾತ್ರ ಪ್ರತಿಫಲಿಸುತ್ತವೆ. ರಷ್ಯನ್ ಉಪಗ್ರಹಗಳಿಂದ ಬರುವ ಚಿತ್ರಗಳನ್ನು ಇವು ಸ್ವೀಕರಿಸುವುದಿಲ್ಲ. ಎರಡು ಉಪಗ್ರಹಗಳು ಮಾತ್ರ ೨೪ ಗಂಟೆಗಳಿಗೊಮ್ಮೆ ಭಾರತದ ಮೇಲೆ ೧೫೦೦ ಮೀಟರ್ ಎತ್ತರದಲ್ಲಿ ಹಾದು ಹೋಗುತ್ತದೆ. ಆಗೆಲ್ಲ ಚಿತ್ರಗಳನ್ನು ರವಾನಿಸುತವೆ. ಪ್ರತಿ ಚಿತ್ರವೂ ೨೫ ಮೈಲಿ ತ್ರಿಜ್ಯದ ಪ್ರದೇಶವನ್ನು ಬಿಂಬಿಸುತ್ತದೆ. ಈ ಚಿತ್ರಗಳನ್ನು ವಿಸ್ತಾರಗೊಳಿಸಿದಾಗ ಅತ್ಯಮೂಲ್ಯ ಹವಾಗುಣ ವಿವರಗಳು ತಿಳಿದು ಬಂದು ಹವಾಮಾನ ಸೂಚನೆಗೆ ಸಹಕಾರಿಯಾಗುತ್ತವೆ.

ಜಪಾನಿನ ಸಹಕಾರದೊಂದಿಗೆ ಭಾರತದ ಮೇಲೆ ೩೫೦೦೦ ಮೀಟರುಗಳ ಎತ್ತರದಲ್ಲಿ ಭೂ-ನಿಶ್ಚಲ ಉಪಗ್ರಹವೊಂದನ್ನು ಸ್ಥಾಪಿಸುವ ಯೋಜನೆಯೂ ಇದೆ. ಈ ಉಪಗ್ರಹದ ವೇಗವು ಭೂಮಿಯ ಚಲನೆಯ ವೇಗಕ್ಕೆ ಸಮನಾಗಿರುವುದರಿಂದ ಭಾರತದ ಮೇಲೆಯೇ ನಿರಂತರವಾಗಿ, ನಿಶ್ಚಲವಾಗಿ ನಿಂತಿರುವುದು, ಅರ್ಧ ಘಂಟೆಗೊಮ್ಮೆ ಚಿತ್ರಗಳನ್ನು ಪ್ರಸಾರ ಮಾಡುವುದು. ಇದಕ್ಕೆ ಸಂಬಂಧಪಟ್ಟ ಮಾತುಕತೆಗಳು ಸಫಲವಾದಲ್ಲಿ ೧೯೭೬ರಲ್ಲಿ ಈ ಉಪಗ್ರಹವನ್ನು ಹಾರಿಬಿಡಲಾಗುವುದು. ಈ ನಿಟ್ಟಿನಲ್ಲಿ ಇತ್ತೀಚೆಗೆ ಹಾರಿಸಲಾದ 'ಆರ್ಯಭಟ' ಉಪಗ್ರಹವು ಹೇರಳವಾದ ವಿಷಯಗಳನ್ನೂ ನೀಡುತ್ತಿದೆ.

ಈ ಉಪಗ್ರಹಗಳ ಉಪಯುಕ್ತತೆಯು ೧೯೭೨ರಲ್ಲಿ ಅತ್ಯುತ್ತಮ ರೀತಿಯಲ್ಲಿ ಪ್ರದರ್ಶಿಸಲ್ಪಟ್ಟಿತು. ೧೯೭೨ರ ಅಕ್ಟೋಬರ್ ೫ರಂದು ಹಿಂದೂ ಮಹಾಸಾಗರದಲ್ಲಿನ ಮಡಗಾಸ್ಕರ್ ದ್ವೀಪದ ಪೂರ್ವದಲ್ಲಿನ ಮಾರಿಷಸ್ ದ್ವೀಪದ ಬಳಿ ಯಾವುದೇ ರೀತಿಯ ಮೋಡಗಳ ದಾಳಿ ಕಂಡು ಬರಲಿಲ್ಲ. ಆದರೆ ಟೈರೋಸ್ I ಉಪಗ್ರಹ ನೀಡಿದ ಚಿತ್ರವು ಚಂಡಮಾರುತವೊಂದು ಆ ದ್ವೀಪವನ್ನು ಸಮೀಪಿಸುತ್ತಿರುವುದನ್ನು ತೋರಿಸಿತು. ಈ ಸುದ್ದಿಯನ್ನು ಕೇಬಲ್ ಮುಖಾಂತರ ಕೂಡಲೆ ಸಂಬಂಧಪಟ್ಟವರಿಗೆ ತಿಳಿಸಲಾಯಿತು. ಸೂಕ್ತ ವ್ಯವಸ್ಥೆಗಳನ್ನು ಮಾಡಿ, ಮುನ್ನೆಚರಿಕೆ ಕಾರ್ಯಕ್ರಮಗಳನ್ನು ಕೈಗೊಳ್ಳ

ಲಾಯಿತು. ಒಂದೆರಡು ದಿನಗಳ ನಂತರ ಚಂಡಮಾರುತವು ಮಾರಿಷಸ್ ದ್ವೀಪವನ್ನು ಅಪ್ಪಳಿಸಿತು. ಈ ರೀತಿ ಮುಂಗಡವಾಗಿ ನೀಡಿದ ವಾರ್ತೆಯು ತುಂಬಾ ಸಹಕಾರಿಯಾಗಿ, ಸಾವಿರಾರು ಜೀವಿಗಳು ಸಾವಿನ ದವಡೆಯಿಂದ ಪಾರಾದರು.

ಭಾರತ ಪವನ ವಿಜ್ಞಾನ ಇಲಾಖೆಯು ಈ ರೀತಿ ಹವಾ ಮುನ್ಸೂಚನೆ ಕಾರ್ಯಕ್ರಮಗಳನ್ನೇ ಅಲ್ಲದೆ ಇತರೇ ಗುರಿಗಳನ್ನು ಹೊಂದಿದೆ. ಅದರಲ್ಲಿ ಮುಖ್ಯವಾದುದು ಕೃತಕ ಮಳೆಯನ್ನು ಸುರಿಸುವುದು. ಈ ಸಂಸ್ಥೆಯ ಮುಖಾಂತರವೆ ಈಗ ಶರಾವತಿ ಜಲಾನಯನ ಪ್ರದೇಶದಲ್ಲಿ ಕೃತಕ ಮಳೆ ಸುರಿಸುವ ಪ್ರಯತ್ನಗಳು ಮುಂದುವರಿಯುತ್ತಿವೆ. ಪವನ ವಿಜ್ಞಾನವು ಇಂದು ಹೆಚ್ಚು ಹೆಚ್ಚು ಮುಂದುವರಿದಿದೆ. ಇದಕ್ಕೆ ಅನುಗುಣವಾಗಿ ಭಾರತ ಪವನ ವಿಜ್ಞಾನ ಇಲಾಖೆಯನ್ನು ನಾಲ್ಕು ವಿಭಾಗಗಳಾಗಿ ವಿಭಾಗಿಸಲಾಗಿದೆ ೧) ಮುನ್ಸೂಚನೆ ೨) ವಾಯುಗುಣ ವಿಜ್ಞಾನ ೩) ಕೃಷೀಯ ಪವನ ವಿಜ್ಞಾನ ೪) ಉಪಕರಣಗಳು. ಮುನ್ಸೂಚನೆಯ ವಿಭಾಗಗಳ ಕೆಲಸಕಾರ್ಯಗಳನ್ನು ಈಗಾಗಲೆ ವಿವರಿಸಲಾಗಿದೆ. ವಾಯುಗುಣ ವಿಜ್ಞಾನ ವಿಭಾಗವು ಕೈಗಾರಿಕೆಗಳಿಗೆ ನಗರ ಯೋಜನೆಗಳಿಗೆ ಸೂಕ್ತ ಸಲಹೆಗಳನ್ನು ನೀಡುತ್ತಿದೆ. ಅಂತೆಯೆ ಪರಿಸರ ಮಾಲಿನ್ಯದ ಬಗೆಗೂ ಸಂಶೋಧನೆಗಳನ್ನು ಮಾಡುತ್ತಿದೆ. ಕೃಷೀಯ ಪವನ ವಿಜ್ಞಾನ ವಿಭಾಗವು ವ್ಯವಸಾಯ ಹಾಗೂ ಆಹಾರಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳನ್ನು ಪರಿಹರಿಸುತ್ತದೆ. ಕ್ರಿಮಿ ಕೀಟಗಳ ಬಗ್ಗೆ, ಪಶುಪಾಲನೆ ಬಗ್ಗೆ, ಬೆಳೆಗಳ ಬಗ್ಗೆ ನೂರಾರು ಸಂಶೋಧನೆಗಳನ್ನು ಮಾಡಿದೆ. ಉಪಕರಣ ವಿಭಾಗವು ಈ ಇಲಾಖೆಗೆ ಬೇಕಾದ ಉಪಕರಣಗಳನ್ನು ಸಿದ್ಧಗೊಳಿಸುತ್ತದೆ. ಇದು ದಿಲ್ಲಿ ಮತ್ತು ಪುಣೆ ಈ ಎರಡೂ ಕಡೆಗಳಲ್ಲಿ ಕಾರ್ಯಾಗಾರಗಳನ್ನು ಹೊಂದಿದೆ. ಪುಣೆಯಲ್ಲಿರುವ ಕಾರ್ಯಾಗಾರ ಭೂ–ಮೇಲ್ಮೈಗೆ ಸಂಬಂಧಪಟ್ಟ ಉಪಕರಣಗಳನ್ನು ಸಿದ್ಧಗೊಳಿಸುತ್ತದೆ. ದಿಲ್ಲಿಯಲ್ಲಿ ವಾಯುಪ್ರದೇಶಕ್ಕೆ ಸಂಬಂಧಪಟ್ಟ ಉಪಕರಣಗಳನ್ನು ತಯಾರಿಸುತ್ತದೆ.

ಅನೇಕ ವರ್ಷಗಳಿಂದಲೂ ಪವನ ವಿಜ್ಞಾನ ಇಲಾಖೆಯ ತಾಂತ್ರಿಕ ಕೇಂದ್ರವು ಪುಣೆ ನಗರವಾಗಿತ್ತು, ಆಗಿದೆ. ಆದುದರಿಂದ ಇಂದಿಗೂ ಅದು ಪವನ ವಿಜ್ಞಾನದ ಕೇಂದ್ರವಾಗಿದೆ. ಈಗ ಪುಣೆಯ ಪ್ರಾಮುಖ್ಯತೆಯು ದಿಲ್ಲಿಗೆ ಬದಲಾಯಿಸಲ್ಪಟ್ಟಿದ್ದರೂ, ಅದು ನಾಮ ಮಾತ್ರವಷ್ಟೇ ಆಗಿದೆ. ಇಲಾಖೆಯ ಬೃಹತ್ ಕಂಪ್ಯೂಟರ್ I B M 360/44 ಎನ್ನುವುದನ್ನು ದಿಲ್ಲಿಯಲ್ಲಿ ಸ್ಥಾಪಿಸಲಾಗಿದೆ. 1BM/1600 ಎನ್ನುವ ಕಂಪ್ಯೂಟರ್ ಈಗ ಪುಣೆಯಲ್ಲಿದೆ. ಇದು ಕಿರುಪ್ರಮಾಣದ್ದು ಆದರೆ ಇದು ಈಗ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮೀಟಿಯೋರಾಲಜಿ ಎನ್ನುವ ವಿಭಾಗದ ಅಧೀನದಲ್ಲಿದೆ. ಮೊದಲು ಈ ವಿಭಾಗವೂ ಪವನ ವಿಜ್ಞಾನ ಇಲಾಖೆಯಲ್ಲಿದ್ದು ನಂತರ ಸ್ವಾಯತ್ತ ಸಂಸ್ಥೆಯಾಗಿ ಬದಲಾವಣೆಗೊಂಡಿತು.

ಭಾರತ ಪವನ ವಿಜ್ಞಾನ ಇಲಾಖೆಯು ತನ್ನ ಈ ನೂರು ವರ್ಷಗಳ ಅವಧಿಯಲ್ಲಿ ವೈಜ್ಞಾನಿಕ ಪ್ರಗತಿಯನ್ನು ಅನುಸರಿಸಿ, ಬೃಹತ್ ರೂಪವಾಗಿ ಬೆಳೆದು, ಮಾನವನಿಗೆ ಸಹಕಾರಿಯಾಗಿದೆ. ✡

ತಾವು ಲಕ್ಷಾಧೀಶರೆಂಬ ಕಾರಣದಿಂದಲೇ ತಮ್ಮನ್ನು ಅಮೌಲ್ಯರೆಂದು ಭಾವಿಸಿಕೊಂಡ ಜನರೂ ಕೆಲವರಿದ್ದಾರೆ.

— ಗಟೆ

ಮೂರು ಕವನಗಳು

......ಗೆ

ಅವಳು
ಚುಕ್ಕಿಯಂತೆ ಮೂಡಿ ಬಂದು
ಮನಸಿನಲ್ಲಿ ಬೆಳೆದು ನಿಂದು
ಹಕ್ಕಿಯಂತೆ ಮತ್ತೆ ಮತ್ತೆ
ಕೂಗಿ ಕರೆದಳು ನನ್ನ
ಸೂರೆಗೊಂಡಳು.
ಕನಸಿನಲ್ಲಿ ಕಂಡು ಕಾಡಿ
ಮನಸಿನಲ್ಲಿ ಮತ್ತೆ ಮೂಡಿ
ನನ್ನ ಎದುರು ಏಕೊ ಏನೊ
ಪ್ರಶ್ನೆಯಾದಳು ಅವಳು
ಮೌನವಾದಳು.
ಯಾವ ಊರೊ ಯಾರ ಮನೆಯೊ
ಏನೊ ಋಣದ ಬಂಧನ
ಪ್ರೀತಿ ಮಾತ್ರ ನಮ್ಮ ನಡುವೆ
ಎಂದಿಗೂ ಚಿರಂತನ
ಬಾಳಕಡಲ ದೋಣಿಯಲ್ಲಿ
ಒಂದು ಗೂಡಿ ನಿಂತ
ನಮ್ಮ ಗುರಿಯನಂತ
ನನ್ನ ಮನದಿ ನಿಂತವಳು
ನಿತ್ಯ ಶ್ವೇತ ಸುಂದರಿ
ಮತ್ತೆ ಮನ್ಮನೋಹರಿ
ನನ್ನ ಕಷ್ಟ ನನ್ನ ಗೆದ್ದ
ಇವಳು ಯಾರು ತಿಳಿಯದೆ
ಇವಳೆ ನನ್ನ ಶಾರದೆ! —ಜಿ. ವಿಜಯಕುಮಾರ

ಅನಿಸಿಕೆ

ಹೆಣ್ಣೇ
ನಾನಿನ್ನ
ಹಲವು ಬಾರಿ
ಗೆದ್ದರೂ
ನಾನೇ
ಸೋತಿದ್ದೇನೆ
ಅನ್ನಿಸುತ್ತದೆ.
ಮತ್ತೆ ಮತ್ತೆ
ಪ್ರಯತ್ನಿಸಿದರೂ
ನೀನು
ಎದೆಯುಬ್ಬಿಸಿ
ನಡೆಯುತ್ತಲೇ
ಇರುವೆ
ಶೀಘ್ರ ಭವಿಷ್ಯದಲ್ಲಿ
ನಾನು ನಿನ್ನ
ಗೆಲ್ಲುವೆನೆಂಬುದು
ಬರೀ ಒಂದು
ಅನಿಸಿಕೆ.

—ಕೆ. ನರಸಿಂಹ ಭಟ್

ಏಕಾಕಿ

ಸಮಾಜ- ಸಂಪ್ರದಾಯ- ಇತ್ಯಾದಿ
ಲಕ್ಷ್ಮಣಗೆರೆ ದಾಟದ ಅಪ್ಪ-
ನೀ ಚಂಡಕಂಡೀಯೆಂದು ಅಂಜಿ
ಅಡಿಯಿಂದ ಮುಡಿ ದಿಟ್ಟಿಸುವ ಅಮ್ಮ-
ಮನೆಯ ಮರ್ಯಾದೆ ಎಂದು
ಅಬ್ಬರಿಸಿ ಹಾರಾಡುವ ಅಣ್ಣ-
ಕತ್ತ- ಗಂಡು- ನೆರೆ- ಹೊರೆ-
ಅರ್ಥೈಸಲು ಹೆಣಗುವ ಅತ್ತಿಗೆ—
ಈ ಗೆರೆ- ಅಂಜಿಕೆ- ಮರ್ಯಾದೆ- ಅರ್ಥ-
ಅನರ್ಥಗಳ
ನಿರರ್ಥಕ ಕತ್ತಲೆಯಲ್ಲಿ
ಹೆಣ್ಣಾಗಲಾರದೆ
ನೆರೆಯಾಗಿ- ಹೊರೆಯಾಗಿ-
ನಿನ್ನ ಇರುವಿಕೆ- ಇರಬೇಕೆನ್ನುವಿಕೆಗಳಲ್ಲಿ
ಸತ್ತ ನಿನಗೆ
ನನ್ನ ಪ್ರೀತಿ ಪ್ರಾಮಾಣಿಕತೆ
ಮೈಗೆ ಮೆತ್ತಿಕೊಂಡು
ಅತಿ ಎನಿಸಿದಾಗ-
ಎಲ್ಲಾ ಬಿಟ್ಟು ಕಿತ್ತೊಗೆದು
ಬೆತ್ತಲಾಗಿ ಬದುಕುವ ಬಯಕೆಯು
ನಿನ್ನ ರಕ್ತ
ಬಿಸಿಯಾಗದೇ ಬಸಿರಾಗದೆ
ಏಕಾಕಿ ನಿಂತ
ಬರೀ ಅನಿಸಿಕೆ ಮಾತ್ರ—

— ಪುನರ್ವಸು ಕೇಶವಮೂರ್ತಿ

ಚಿಪ್ಕೋ ಆಂದೋಲನ

ರಂಗನಾಥ ದಿವಾಕರ

ಒಂದು ಕಾಡು ಹಳ್ಳಿ ಗೋಪೇಶ್ವರ ಎಂಬುದು. ಅದು ಕೂಡ ಹಿಮಾಲಯದ ತಪ್ಪಲಲ್ಲಿ. ಅಲ್ಲಿಯ ಜನ ನಿಸರ್ಗಮಾತೆಯ ಮಡಿಲಲ್ಲಿ ಬೆಳೆದ ಮಗುಗಳಂತೆ. ಅವರೇನು ಗಾಂಧಿ, ಸತ್ಯಾಗ್ರಹ ಈ ಶಬ್ದಗಳನ್ನು ಕೇಳಿದ್ದರೋ ಇಲ್ಲವೋ ಯಾರಿಗೆ ಗೊತ್ತು!

೧೯೭೩ರಲ್ಲಿ ಒಂದು ದಿನ ಸರಕಾರದವರಿಂದ ಮರಗಳನ್ನು ಕಡಿಯುವ ಗುತ್ತಿಗೆ ಪಡೆದ ಕಂತ್ರಾಟದಾರರು ಆ ಹಳ್ಳಿಗೆ ಬಂದರು. ಸಿಕ್ಕಾಪಟ್ಟೆ ಮನಬಂದಂತೆ ಮರಗಳನ್ನು ಕಡಿದು ತಮ್ಮ ಸುತ್ತಲಿನ ಕಾಡನ್ನೇ ಹಾಳುಗೆಡವುತ್ತಾರಲ್ಲ ಎಂಬ ಭಯ ಆ ಹಳ್ಳಿಯವರನ್ನು ಆವರಿಸಿತು. ಹಳ್ಳಿಯ ಹಿರಿಯರು ಕಂತ್ರಾಟದಾರರನ್ನು ಆದರದಿಂದ ಬರಮಾಡಿಕೊಂಡು ಆದರಾತಿಥ್ಯವನ್ನು ಸಲ್ಲಿಸಿದರು, ಅಲ್ಲದೆ ಒಡಹುಟ್ಟಿದವರಂತೆ ಇದ್ದ ಈ ನಮ್ಮ ಸುತ್ತಲಿದ್ದ ಮರಗಳನ್ನು ಕಡಿಯಬೇಡಿ ಎಂದು ಬೇಡಿಕೊಂಡರು. "ಅದೇಕೆ, ನಾವು ಸರಕಾರಕ್ಕೆ ಹಣ ತುಂಬಿದ್ದೇವೆ. ನಮಗೆ ಈ ದೊಡ್ಡ ದೊಡ್ಡ ಗಿಡಗಳನ್ನೇ ಕಡಿಯ ಬೇಕಾದೀತು, ಉಪಾಯವಿಲ್ಲ," ಎಂದು ಕಂತ್ರಾಟದಾರರು ಸ್ವಲ್ಪ ಬಿರುಸಿನಿಂದಲೇ ಹೇಳಿದರು.

ಆ ಹಳ್ಳಿಯವರಿಗೆ ಆ ಮಾತು ವಜ್ರಾಘಾತವಾದಂತೆ ಪರಿಣಮಿಸಿತು. ಹರೆಯದ ಹುಡುಗರು ಊರಲ್ಲಿ ಡಂಗುರ ಸಾರಿದರು. ಕೂಡಲೆ ದೊಡ್ಡ ಆಲದ ಮರದಡಿಯಲ್ಲಿ ಹೆಣ್ಣು ಗಂಡು, ಹಿರಿಯರು ಕಿರಿಯರು ಎಲ್ಲರೂ ನೆರೆದರು.

ಎಲ್ಲರೂ ಒಂದೊಂದು ಮರವನ್ನು ಆರಿಸಿ ಅಪ್ಪಿಕೊಂಡು ನಿಂತರು. ಕೊಡಲಿಯ ಪೆಟ್ಟು ಮೊದಲು ನಮ್ಮ ಮೇಲೆ, ಆಮೇಲೆ, ಮರದ ಮೇಲೆ, ಎಂದು ಎಲ್ಲರೂ ಕೂಗಿಟ್ಟರು. ಊರ ಹಿರಿಯ ಕಂತ್ರಾಟದಾರರಿಗೆ ವಂದಿಸಿ, ಈ ಮರಗಳು ನಮ್ಮ ಮನೆ ಮಕ್ಕಳಂತೆ. ನೋಡಿ, ಈ ಊರವರು ಅವುಗಳನ್ನು ಎಷ್ಟು ಪ್ರೀತಿಯಿಂದ ಅಪ್ಪಿ ನಿಂತಿದ್ದಾರೆ. ಕೊಡಲಿಯ ಕಾಯಕವನ್ನು ನಡೆಸುವದಿದ್ದರೆ ನಡೆಸಿರಿ. ಅದು ನಿಮ್ಮ ವಿಕ್ರಮ. ಮೊದಲು ಈ ನಮ್ಮ ಮಕ್ಕಳ ನೆತ್ತರದ ಕೋಡಿ ಹರಿದ ಬಳಿಕವೆ ನಿಮ್ಮ ಕೊಡಲಿಗಳು ಈ ಮರಗಳನ್ನು ಮುಟ್ಟಬಲ್ಲವು!

ಹಣೇ ಹಣೇ ಘಟ್ಟಿಸಿಕೊಂಡು, ಬಂದ ದಾರಿಗೆ ಸುಂಕವಿಲ್ಲ, ಎಂದು ಆ ಕಂತ್ರಾಟದಾರರು ತಮ್ಮ ಊರ ಹಾದಿ ಹಿಡಿದರು!

ಇದು ದಂತ ಕಥೆಯಲ್ಲ. ಆದ ಮಾತು, ನಡೆದ ಸಂಗತಿ, ಪತ್ರಿಕೆಗಳಲ್ಲಿ ಪ್ರಕಟವಾದ ಸತ್ಯಕಥೆ. ಸುದ್ದಿ ಸಮಾಚಾರಗಳ ಮೇಲೆ

ಬಿಗಿಯಾದ ಪತೋಟಿ ಇದ್ದ ಈ ಆಪತ್ ಕಾಲದಲ್ಲಿ ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಸತ್ಯಾಗ್ರಹದ ವಾರ್ತೆ ಇದು !

ನನ್ನ ಸ್ವಂತ ಅನುಭವ

ಅದು ೧೯೨೪ರ ಅಪರಾರ್ಧ. ಪುಣೆ ಪಟ್ಟಣದ ಹತ್ತಿರಿರುವ ಯರವಡಾ ಕಾರಾಗೃಹದ 'ಸೇಪರೇಟ್' ಎಂಬ ವಿಭಾಗದಲ್ಲಿ ನಾನೊಬ್ಬನೇ ಒಬ್ಬ ರಾಜಕೀಯ ಸೆರೆಯಾಳಾಗಿ (ರಾಜದ್ರೋಹದ ಆರೋಪ) ಇದ್ದೆನು. ಹಾಗೆ ನೋಡಿದರೆ ಪಂಜಾಬದ ಸುಮಾರು ಇಪ್ಪತ್ತು ಸೆರೆಯಾಳುಗಳು, ಅಂದಮಾನದಿಂದ ತರಲ್ಪಟ್ಟವರು ಅಲ್ಲಿಯೇ ಇಡಲಾಗಿದ್ದರು. ಅವರು ಬಂಡಾಯ ಹೂಡಿ ಆಜನ್ಮ ಶಿಕ್ಷೆ ಪಡೆದವರೆ. ಆದರೆ ಶಿಕ್ಷೆಯ ಕಲಮುಗಳು ಬೇರೆ. ಅದೇ ರೀತಿ ಅಂಧೇರಿ ಎಂಬ ವಿಭಾಗದಲ್ಲಿ ಸೇನಾಪತಿ ಬಾಪಟ ಹಾಗೂ ಅವರ ಇಬ್ಬರು ಜೊತೆಗಾರರು ಮುಳಸೀ ಪೇಟಾದಲ್ಲಿ "ಶುದ್ಧ ಸತ್ಯಾಗ್ರಹ" ಅಂದರೆ ಸಶಸ್ತ್ರ ಸತ್ಯಾಗ್ರಹ ಮಾಡಿದ್ದಕ್ಕಾಗಿ ಏಳು ವರುಷಗಳ ಶಿಕ್ಷೆ ಭೋಗಿಸುತ್ತ ಇದ್ದರು.

ಆಗ ಯರವಡೆಯಲ್ಲಿ ನಡೆದ ಒಂದು 'ಚಿಪಕೋ' ಮತ್ತು ಉಪವಾಸ ಸತ್ಯಾಗ್ರಹದ ಕಥೆಯನ್ನು ಹೇಳಲು ಹೊರಟಿರುವೆ.

ಆ ಸಂದರ್ಭದಲ್ಲಿ ಆ ಕಾರಾಗೃಹದಲ್ಲಿ ಸುಮಾರು ಎರಡು ಸಾವಿರಕ್ಕಿಂತ ಹೆಚ್ಚು ಸೆರೆಯಾಳುಗಳಿದ್ದರು. ರಾಜಕೀಯ ಸೆರೆಯಾಳುಗಳೆಲ್ಲ (೧೯೨೦–೨೨ ರಲ್ಲಿ ಬಂದವರು) ಬಿಡುಗಡೆ ಆಗಿ ಹೋಗಿಬಿಟ್ಟಿದ್ದರು. ೧೯೨೨ ಮೇ ತಿಂಗಳಲ್ಲಿ ಆರು ವರ್ಷಗಳ ಶಿಕ್ಷೆ ಕಟ್ಟಿಕೊಂಡು ಬಂದ ಮಹಾತ್ಮಾಗಾಂಧಿ ಅವರು ಸಹ ಕರಳು ಬೇನೆಯ ಶಸ್ತ್ರಚಿಕಿತ್ಸೆ ಪಡೆದು ೧೯೨೪ರ ಪೂರ್ವಾರ್ಧದಲ್ಲಿ ಮುಕ್ತರಾಗಿದ್ದರು.


ಮನಸಿಗೆ ಸಮಾಧಾನ

ಮಾನವನು ಎಲ್ಲಿದ್ದರೂ ಮನಸಿನ ಸಮಾಧಾನವನ್ನು ಬಯಸುವನು. ಆ ಬಗ್ಗೆ ಪ್ರಯತ್ನ ಮಾಡುವನು. ಸೆರೆಮನೆಯಲ್ಲಿದ್ದವರು ಸಹ ತಮ್ಮ ತಮ್ಮ ಮನಶ್ಶಾಂತಿಗಾಗಿ ಏನಾದರೊಂದು ಮಾರ್ಗವನ್ನು ಹುಡುಕುತ್ತಲೇ ಇರುತ್ತಾರೆ.

ಬಹುಕಾಲದಿಂದ ಯರವಡೆಯಲ್ಲಿ ಸ್ನಾನ ಮಾಡುವ ಕಟ್ಟೆಗಳ ಹತ್ತಿರ ಸೆರೆಯಾಳುಗಳು ಚಿಕ್ಕ ಪುಟ್ಟ ತುಲಸೀ ವೃಂದಾವನಗಳನ್ನೊ, ಶಿವಲಿಂಗಗಳನ್ನೊ, ಗಣೇಶನ ಇಲ್ಲವೆ ಹನುಮನ ಸದ್ದಾಮುದ್ದು ಮೂರ್ತಿಗಳನ್ನೊ ಮಾಡಿಟ್ಟುಕೊಂಡು ಅವುಗಳನ್ನು ಸ್ನಾನದ ನಂತರ ಪೂಜಿಸಿ, ಕ್ಷಣ ಹೊತ್ತು ಧ್ಯಾನ ಮಾಡಿ ತಮ್ಮ ಕೊಠಡಿಗಳಿಗೆ ಹೋಗುವ ಪರಿಪಾಠವನ್ನಿಟ್ಟುಕೊಂಡಿದ್ದರು. ಸುಮಾರು ವರುಷಗಳಿಂದ ಆ ಪರಂಪರೆ ನಡೆದಿರಲಿಕ್ಕೆ ಸಾಕು.

ಕಿತ್ತಿ ಹಾಕಿ ಬಿಡಿ

ಯಾವ ಪುಣ್ಯವಂತನು ಏನು ಹೇಳಿ ಮೇಲಧಿಕಾರಿಯ ಮನಸನ್ನು ಕೆಣಕಿ ಆಯಾ ಕಟ್ಟೆ ಮುಂತಾದವುಗಳನ್ನು ಕಿತ್ತಿ ಹಾಕಲು



ಆಜ್ಞೆ ಕೊಡಿಸಿದನೋ! ಆಗ ಜೇಲ್ ಸುಪರಿಂಟೆಂಡಂಟನಿದ್ದ ಮೇಜರ್ ಡಾಯಲ್ ಎಂಬವನು ಆಜ್ಞೆ ಹೊರಡಿಸಿ ಬಿಟ್ಟನು. ಕೇಳುವದೇನಿದೆ? ಜೇಲಿನ ಎಲ್ಲ ಭಾಗಗಳಲ್ಲಿದ್ದ ತುಳಸೀ ಕಟ್ಟೆಗಳು, ಶಿವಲಿಂಗಗಳು, ರಾಮಕೃಷ್ಣ, ಹನುಮ ಗಣೇಶರ ಮೂರ್ತಿಗಳು ಇತ್ಯಾದಿಗಳೆಲ್ಲ ಕಿತ್ತಿಹಾಕಲ್ಪಡಲಾರಂಭಿಸಿದವು. ಸೆರೆಯಾಳುಗಳೆಲ್ಲ ಕಕ್ಕಾವಿಕ್ಕಿ ಆದರು! ಅವರಲ್ಲೊಬ್ಬನು ಅವನು ಕನ್ನಡಿಗನಿದ್ದನು- ಮುಂದಾಳು ಆಗಿ, ಹೀಗೆಲ್ಲ ಆದರೆ ನಾವು ಉಪವಾಸ ಮಾಡುತ್ತೇವೆ ಎಂದು ಅಧಿಕಾರಿಗಳಿಗೆ ಹೇಳಿಕಳಿಸಿದನು. ಅಂದು ಶನಿವಾರವಿದ್ದಂತೆ ನನಗೆ ನೆನಪಿದೆ. ಯಾವ ಅಧಿಕಾರಿಗಳೂ ಸೆರೆಯಾಳುಗಳ ಮಾತಿನ ಕಡೆಗೆ ಲಕ್ಷ್ಯಗೊಡಲಿಲ್ಲ. ಕಟ್ಟೆ ಮಟ್ಟೆಗಳನ್ನೆಲ್ಲ ನಿರ್ದಯತೆಯಿಂದ ಕಿತ್ತಿ ಹಾಕುವ ಕೆಲಸವನ್ನು ಪೂರೈಸುವದರಲ್ಲಿ ಕೆಳಗಿನ ಅಧಿಕಾರಿಗಳು ಮಗ್ನರಾಗಿಬಿಟ್ಟರು.

ಅತ್ತ ೧೨೦೦ ಸೆರೆಯಾಳುಗಳು ನಿರಶನ ವ್ರತವನ್ನು ಕೈಕೊಂಡರು. ಜೇಲಿನ ತುಂಬ ನಡೆದದ್ದನ್ನೆಲ್ಲ ಹಲವು ಕನ್ನಡ ವಾರ್ಡರರು ನನಗೆ ಬಂದು ಸೇಪರೇಟ್ ವಿಭಾಗದಲ್ಲಿ ಹೇಳುತ್ತಿದ್ದರು. ನಾನು ಆಯಾ ಮೂರ್ತಿ- ಮುಂತಾದವುಗಳನ್ನು ಪೂಜಿಸುತ್ತಿರಲಿಲ್ಲವಾದರೂ ಅವು ನೂರಾರು ಜನರಿಗೆ ಮನಸಿನ ಸಮಾಧಾನವನ್ನುಂಟು ಮಾಡುತ್ತಿದ್ದವು ಎಂಬುದನ್ನು ಅರಿತಿದ್ದೆನು. ಆದುದರಿಂದ ಅವರ ಪವಿತ್ರ ಭಾವನೆಗಳಿಗೆ ಮನ್ನಣೆ ಕೊಡುವ ಉದ್ದೇಶದಿಂದ, ಅವರಿಗೆ ಸಹಾನುಭೂತಿ ತೋರುವ ದೃಷ್ಟಿಯಿಂದ ನಾನೂ ನಿರಶನ ವ್ರತವನ್ನು ಕೈಕೊಂಡೆನು.

ನನ್ನ ಚಿಪಕೋ ಸತ್ಯಾಗ್ರಹ

ಮಾರನೇ ದಿನ ನಾನು ಇದ್ದ ಸೇಪರೇಟ್ ವಿಭಾಗದಲ್ಲಿದ್ದ ತುಳಸೀಕಟ್ಟೆಯ ಮೇಲೆ ದಾಳಿ ಬಂದಿತು! ಆ ಭಾಗದ ವಾರ್ಡರನು ಇಬ್ಬರು ಸಲಿಕೆ ಗುದ್ದಲಿ ಹಿಡಿದುಕೊಂಡವರನ್ನು ಕರೆದುಕೊಂಡು ಅಲ್ಲಿಯ ಕಟ್ಟೆಯ ಹತ್ತಿರ ಬಂದನು.

ನಾನು ಅವನ ಬಳಿ ಹೋಗಿ ಅತ್ಯಂತ ನಮ್ರತೆಯಿಂದ, "ನೀನು ಈ ಕೆಲಸವನ್ನು ಮಾಡುವದು ಯೋಗ್ಯವಲ್ಲ" ಎಂದು ಬಿನ್ನವಿಸಿದೆನು. ಅದಕ್ಕೆ ಅವನು, "ನಾನು ಹುಕುಮಿನ ನೌಕರನು. ಹುಕುಮನ್ನು ಅಮಲಿನಲ್ಲಿ ತರುವದೇ ನನ್ನ ಕರ್ತವ್ಯ." ಎಂದನು. ನಾನು- "ಇಕೋ ಈ ಮೂರ್ತಿಯು ದೇವರೆಂದು ನಂಬಿ ಇಲ್ಲಿರುವ ಕೈದಿಗಳೆಲ್ಲ ಪೂಜ್ಯ ಭಾವದಿಂದ ಅದಕ್ಕೆ ನಮಿಸುತ್ತಾರೆ. ಮನಸಿಗೆ ಸಮಾಧಾನ ಹಚ್ಚಿಕೊಳ್ಳುತ್ತಾರೆ. ಜೇಲಿನಂಥ ದುಃಖ ಕಷ್ಟಗಳ ತವರೂರಲ್ಲಿ ಅವರಿಗೆ ಇದೇ ಒಂದು ಆಧಾರ. ಅದನ್ನು ನಾಶಪಡಿಸುವದು ನಿನ್ನ ಕರ್ತವ್ಯ ಎಂದು ನೀನು ತಿಳಿಯುವದು ತಪ್ಪು. 'ಅಂಥ ಹುಕುಮು ಕೊಡುವವರದೂ ತಪ್ಪು." ವಾರ್ಡರನು- "ಹುಕುಮು ಕೊಡುವವರದು ತಪ್ಪಾದರೆ ನನ್ನದೇನು ತಪ್ಪು? ನಾನು ಅದನ್ನು ಪಾಲಿಸಿಯೇ ತೀರಬೇಕಲ್ಲವೇ?"

ನಾನು- "ಹಾಗಾದರೆ ನಾಳೆ 'ನಿನ್ನ ಮಗನನ್ನು ಕೊಂದು ಬಿಡು' ಎಂದು ಮೇಲಧಿಕಾರಿಗಳು ಹುಕುಮು ಕೊಟ್ಟರೆ ನೀನು ಅದನ್ನು ಪಾಲಿಸುವಿಯಾ? ಅದು ನಿನ್ನ ಕರ್ತವ್ಯವಾಗಬಲ್ಲದೇ?"

ವಾರ್ಡರನು- "ಇದು ನಮ್ಮ ಹೊಟ್ಟೆ ಬಟ್ಟೆಯ ಪ್ರಶ್ನೆ. ನಮಗೆ ಅಡ್ಡೀ ಮಾಡಬೇಡಿ. ಈಗ ಇಲ್ಲಿ ಆಳುಗಳು ಬಂದಿದ್ದಾರೆ. ಅವರು ತಮ್ಮ ಕೆಲಸವನ್ನು ಸಾಗಿಸಲಿ."

ನಾನು- "ನೀನು ನಿನ್ನ ಕೆಲಸವನ್ನು, ಅವರು ತಮ್ಮ ಕೆಲಸವನ್ನು ಸಾಗಿಸುವುದಾದರೆ ನಾನೂ ನನ್ನ ಕೆಲಸವನ್ನು ಮಾಡಬೇಕಾಗುವದು. ಇಕೋ ಇದು ಶಿವಲಿಂಗ. ಇದರ ಮೇಲೆ ನಾನು ಬಾಗಿ ನಿಲ್ಲುವೆ. ಬಂಧುಗಳೇ, ಅಧಿಕಾರಿಗಳೇ, ನಿಮ್ಮ ಗುದ್ದಲಿಯ ಪೆಟ್ಟು ನನ್ನ ಬೆನ್ನ ಮೇಲೆ ಮೊದಲು ಬೀಳಲಿ. ಆ ಮೇಲೆ ನನ್ನ ನೆತ್ತರದ ಮಹಾಭಿಷೇಕದಿಂದ ಶುದ್ಧವಾದ ಶಿವಲಿಂಗದ ಮೇಲೆ ನಿಮ್ಮ ಆಸುರೀ ಆಘಾತ ನಡೆಯಲಿ."

ಅದೊಂದು ಮಾನವ ಮನಸಿನ ಕ್ರಾಂತಿಯ-ಸಂಕ್ರಾಂತಿಯ ಕ್ಷಣ!

ವಾರ್ಡರನು–"ನಾನು ಅಸಹಾಯ ಸೇವಕ. ಮೇಲಧಿಕಾರಿಗಳಿಗೆ ರಿಪೋರ್ಟು ಮಾಡುವೆ. ನಿಮ್ಮ ಜೀವಕ್ಕೆ ಧಕ್ಕೆಯಾಗುವ ಕೃತ್ಯವನ್ನು ಮಾಡುವ ಕ್ರೂರತೆ ನನ್ನಲ್ಲಿಲ್ಲ."

ಆಯಿತು, ಜೇಲಿನಲ್ಲಿಯ ಎಲ್ಲ ತುಳಸೀಕಟ್ಟೆಗಳಿಗೆ, ದೇವತಾ ಮೂರ್ತಿಗಳಿಗೆ ಕಪಾಳ ಮೋಕ್ಷವಾಯಿತು. ಸೇಪರೇಟಿನಲ್ಲಿರುವ ಕಟ್ಟೆ ಮೂರ್ತಿಗಳು ಬದುಕಿಕೊಂಡವು.

ಹೊಸ ಕಟ್ಟೆಗಳು

ಮರು ದಿವಸ ಮೇಜರ್ ಡಾಯಲರು ಜೇಲು ಸುತ್ತುವ ಸಂದರ್ಭದಲ್ಲಿ ನಾನಿರುವ ವಾರ್ಡಿಗೆ ಬಂದರು. ಅಷ್ಟರಲ್ಲಿ ತಾವು ಕೊಟ್ಟ ಹುಕುಮು ಎಷ್ಟು ಕಠೋರವಾಗಿತ್ತು, ಸಾವಿರದ ಇನ್ನೂರು ಜನರು ಉಪವಾಸವನ್ನು ಮೂರು ದಿನಗಳ ವರೆಗೆ ನಡೆಸುವಂತಾಯಿತು; ಏನಾದರೊಂದು ಉಪಾಯ ಮಾಡಿ ಈ ಸಮಸ್ಯೆಯನ್ನು ಬಿಡಿಸಬೇಕು ಎಂಬ ಅರಿವು ಸಾಹೇಬರಿಗೆ ಹುಟ್ಟಿತ್ತು. ಸಾಹೇಬರು "ಅಸ್ತವ್ಯಸ್ತವಾಗಿ, ಅಲ್ಲಿ ಇಲ್ಲಿ ಸಿಕ್ಕಸಿಕ್ಕವರು ಸಿಕ್ಕಸಿಕ್ಕಂತೆ ಅಪದ್ಧ ಮೂರ್ತಿಗಳನ್ನು ಮಾಡಿ ಅಲ್ಲಿ ಇಲ್ಲಿ ಒಟ್ಟಿದ್ದರು. ಅದಕ್ಕೆಲ್ಲ ಒಂದು ಸರಿಯಾದ ರೂಪವನ್ನು ಕೊಡಬೇಕೆಂದಿದ್ದೇನೆ."

ನಾನು–"ಸರಿ. ಹಾಗಾದರೆ ಜನರು ಅದನ್ನು ಸ್ವಾಗತಿಸಬಹುದು. ಅವರಿಗೆಲ್ಲರಿಗೂ ಮುಖ್ಯವಾಗಿ ತಮ್ಮ ಪೂಜ್ಯ ಭಾವವನ್ನೂ ತೋರಿಸುವ, ಕ್ಷಣ ಹೊತ್ತು ಧ್ಯಾನಿಸುವ ಸಂದರ್ಭ ಬೇಕು."

ಸಾಹೇಬರು–"ಸ್ನಾನದ ಘಟ್ಟಗಳಿದ್ದಲ್ಲೆಲ್ಲ ಇಟ್ಟಂಗಿಯ ಒಂದೇ ಮಾದರಿಯ ತುಳಸೀ ಕಟ್ಟೆಗಳು ಕಟ್ಟಲಾಗುವವು. ಉಳಿದ ಯಾವ ಯದ್ವಾತದ್ವಾ ದೇವದೇವತೆಗಳನ್ನು ಕೈದಿಗಳು ಮಾಡಿಡಲು ಹವಣಿಸಕೂಡದು. ಇದೇ ನನ್ನ ಉದ್ದೇಶ."

ನಾನು–"ಆ ಕೆಲಸ ಬೇಗನೆ ಪೂರೈಸಲಿ. ಈಗ ಮೂರು ದಿನ ಉಪವಾಸ ನಡೆದಿದೆ. ೨೦೦ ಜನ ಆ ವ್ರತವನ್ನು ಕೈಕೊಂಡಿದ್ದಾರೆ. ಕೆಲಸ ಮಾಡುವದನ್ನು ಯಾರೂ ನಿರಾಕರಿಸಿಲ್ಲ. ಹಲವರು ಕೆಲಸ ಮಾಡ ಮಾಡುತ್ತಲೇ ಎಚ್ಚರ ತಪ್ಪಿ ಬಿದ್ದಿದ್ದಾರೆ. ಹೀಗೆಯೇ ಕಾಲಹರಣ ಮಾಡಿದರೆ ಹಲವರ ಜೀವಕ್ಕೆ ಅಪಾಯವಾಗಬಲ್ಲದು."

ಸಾಹೇಬರು ಆ ಮಾತನ್ನು ಕೇಳಿ ಮುಂದೆ ಮುಂದೆ ಸಾಗಿದರು. ನನ್ನನ್ನು ಕರಕೊಂಡು ಹೋಗಿ ನಿರಶನ ವ್ರತ ಹೂಡಿದವರ ಮುಖಂಡನ ಭೆಟ್ಟಿ ಮಾಡಿಸಿದರು. ನಾನು ಅವನಿಗೆ, ಇಟ್ಟಂಗಿಯ ಪಕ್ಕಾ ತುಳಸೀ ಕಟ್ಟೆಗಳನ್ನು ಕಟ್ಟಿ ಕೊಡುವ ಸಾಹೇಬರ ವಚನವನ್ನು ಮನ್ನಿಸಲು ಅಡ್ಡಿ ಇಲ್ಲ. ಆ ಕೆಲಸವು ನಡೆದು ಬಿಟ್ಟದೆ. ಅದು ಪೂರೈಸಿದೊಡನೆ ಅನಶನ ವ್ರತವನ್ನು ಬಿಡಲು ಅಡ್ಡಿ ಇಲ್ಲವಲ್ಲ." ಎಂದೆನು. ಅದಕ್ಕೆ ಅವನು ಒಪ್ಪಿದನು.

ಅದೇ ಕಾಲಕ್ಕೆ ನನ್ನ ಕಿವಿಗೆ ಬಿದ್ದ ಇನ್ನೊಂದು ಪ್ರಶ್ನೆಯನ್ನು ಸಾಹೇಬರಿಗೆ ಅರಿಕೆ ಮಾಡಿದೆನು. ಅದೇನೆಂದರೆ, "ಶಾಕಾಹಾರಿ, ಮಾಂಸಾಹಾರಿ ಅಡಿಗೆ ಅದೇ ಪಾತ್ರೆಗಳಲ್ಲಿ ಮಾಡಲಾಗುವದು. ಹಾಗೂ ಬಡಿಸುವ ಪಾತ್ರೆಗಳೂ ಅವೇ ಬಳಸಲಾಗುವವು. ಹಾಗೆ ಆಗಕೂಡದು. ಆ ಎರಡು ಅಡಿಗೆಗಳಿಗೆ ಹಾಗೂ ಬಡಿಸುವದಕ್ಕೆ ಬೇರೆ ಬೇರೆ ಪಾತ್ರೆಗಳಿರಬೇಕು."

ಆ ಸಂದರ್ಭದಲ್ಲಿ ಮೇಜರ್ ಡಾಯಲ್ ಅವರು ನನ್ನನ್ನು ಅಡಿಗೆ ಮನೆಗೆ ಕರೆದೊಯ್ದು, "ಇಕೋ ಈ ಪಾತ್ರೆಗಳು ಬೇರೆ ಬೇರೆ ಇವೆ. ಅಪ್ಪಿ ತಪ್ಪಿ ಅಥವಾ ದುರ್ಲಕ್ಷದಿಂದ ಏನಾದರೂ ಗೊಂದಲವಾಗಿದ್ದರೆ ಒಳ್ಳೆ ದಕ್ಷತೆಯನ್ನು ವಹಿಸಲು ನಾನು ಅವರಿಗೆ ಎಚ್ಚರ ಕೊಡುವೆ," ಎಂದು ಹೇಳಿದರು.

ಮರುದಿನ ಮುಂಜಾನೆ ಅಷ್ಟೊತ್ತಿಗೆ ಮೂರಡಿ ಎತ್ತರದ ಪಕ್ಕಾ ತುಳಸೀಕಟ್ಟೆಗಳು ಎಲ್ಲ ಭಾಗಗಳಲ್ಲಿ ಸಿದ್ಧವಾಗಿದ್ದವು. ಊರಿಂದ ಪುರೋಹಿತರು ಬಂದು ಪ್ರಥಮ ಪೂಜೆ ಮಾಡಿದ ಬಳಿಕ ನಿರಶನ ವ್ರತದವರು ಪಾರಣೆ ಮಾಡಬೇಕೆಂದು ಗೊತ್ತಾಗಿತ್ತು.

ಎಂದಿನಂತೆ ಸಾಹೇಬರು ನಾನಿದ್ದಲ್ಲಿಗೆ ಬಂದರು.

ಸಾಹೇಬರು– "ನಿಮ್ಮಲ್ಲಿಯ ಕಟ್ಟೆಯಂತೂ ಹಾಳಾಗಿಲ್ಲ. ನೀವೇಕೆ ಉಪವಾಸ ಮಾಡಿದಿರಿ?"

ನಾನು– "ನಾನಿದ್ದ ಈ ಸೇಪರೇಟ್ ವಿಭಾಗವಷ್ಟೇ ನನ್ನ ಸೆರೆಮನೆಯಲ್ಲ. ಈ ವಿಭಾಗದಲ್ಲಿದ್ದ ೬೦–೭೦ ಸೆರೆಯಾಳುಗಳಷ್ಟೇ ನನ್ನ ಬಾಂಧವರಲ್ಲ. ಇಡೀ ಯರವಡಾ ಜೇಲು ನನ್ನ ಜೇಲು. ಇಲ್ಲಿರುವ ಸುಮಾರು ಎರಡು ಸಾವಿರ ಕೈದಿಗಳೆಲ್ಲ ನನ್ನ ಅಣ್ಣ ತಮ್ಮಂದಿರು. ಅಂದ ಬಳಿಕ ಅವರ ಭಾವನೆಗಳೇ ನನ್ನ ಭಾವನೆಗಳು. ಅವರ ಆಶೋತ್ತರಗಳೇ ನನ್ನ ಆಶೋತ್ತರಗಳು."

ಸಾಹೇಬರು–"ಸರಿ ಈಗ ಎಲ್ಲ ಕಡೆಗೆ ಕಟ್ಟೆಗಳು ಸಿದ್ಧವಾದವು. ನೀವು ಪಾರಣೆ ಮಾಡಬೇಕು."

ನಾನು– "ಊರಿನಿಂದ ಅಂದರೆ ಪುಣೆಯಿಂದ ಪುರೋಹಿತರು ಬಂದು ಕಟ್ಟೆಗಳ ಪೂಜೆ ಮಾಡಿದೊಡನೆ ಉಪವಾಸ ಬಿಡಲು ಎಲ್ಲರಿಗೂ ಮುಕ್ತದ್ವಾರ. ನಾನು ಎಲ್ಲರನ್ನೂ ಅನುಸರಿಸುವೆ ?"

ಸಾಹೇಬರ ಭಾವೋದ್ರೇಕಕ್ಕೆ ಎಷ್ಟೇ ಕಾರಣಗಳಿದ್ದರೂ ಎಲ್ಲವೂ ಸುಸೂತ್ರ ಹಾಗೂ ಸರಿಯಾಗಿ ನಡೆದುಹೋಯಿತು. ಇದೇ ಒಂದು ಮಹತ್ವದ ಮಾತು. ಈ ರೀತಿ 'ಚಿಪಕೋ' ಆಂದೋಲನದ ವಾರ್ತೆ ಓದಿ ನೆನಪಾದುದನ್ನು ಬರೆದಿರುವೆ. ಚಿಪಕೋ ಅಂದರೆ 'ಅಪ್ಪಿಕೊಳ್ಳು'. ಅಲ್ಲಿ ಗೋಪೇಶ್ವರ ಹಳ್ಳಿಯವರು ಮರಗಳನ್ನು ಅಪ್ಪಿ ಅವುಗಳನ್ನು ಉಳಿಸಿಕೊಂಡರು. ನಾನು ಶಿವಲಿಂಗಾದಿ ಮೂರ್ತಿಗಳಿಗೆ ಛತ್ರರೂಪನಾಗಿ ನಿಂತು ಅವುಗಳನ್ನು ಉಳಿಸಿಕೊಂಡೆ. ಎರಡೂ ಒಂದೇ ಮಾದರಿಯ ನಿಸರ್ಗಪ್ರೇರಿತ ಸತ್ಯಾಗ್ರಹಗಳು !! ✡

ಕಿಬ್ಬಳ್ಳಿಯ ಒಂದು ಪತ್ರಿಕಾ ಸಂಸ್ಥೆ ಪಾರಿವಾಳಗಳನ್ನು ಸಂದೇಶವಾಹಕರನ್ನಾಗಿ ಉಪಯೋಗಿಸುತ್ತಿತ್ತು. ಒಮ್ಮೆ ಮಂತ್ರಿವರ್ಯರಿಂದ ಮಹತ್ವದ ಸಂದೇಶ ತರಬೇಕಾದಾಗ ಸಂಪಾದಕ ಮಹಾಶಯರು ವಾಡಿಕೆಯಂತೆ ಹೆಚ್ಚು ಅನುಭವಿಕವಾದ ಪಾರಿವಾಳವನ್ನು ತಂಗಳೂರಿಗೆ ಕಳಿಸಿದರು. ಸಂದೇಶ ಬರುತ್ತದೆಂದು ಸಂಪಾದಕರು ಕಾದೇ ಕಾದರು. ಆದರೆ ಪೇಪರಿನ ಮುದ್ರಣ ಪ್ರಾರಂಭವಾಗುವ ಸಮಯವಾದರೂ ಪಾರಿವಾಳ ಬರುವ ಲಕ್ಷಣವೇ ಕಾಣಲಿಲ್ಲ. ಕೊನೆಗೆ ಸಂಪಾದಕರು ನಿರಾಶರಾಗಿ ನಿರುಪಾಯಭಾವದಿಂದ ಪೇಪರನ್ನು ಅಚ್ಚುಮಾಡುವಂತೆ ಆಜ್ಞೆ ನೀಡಿದರು.

ಅಷ್ಟರಲ್ಲಿ ಭರ್ರನೆ ಒಂದು ಟ್ಯಾಕ್ಸಿ ಬಂದು ಪತ್ರಿಕಾಲಯದ ಮುಂದೆ ನಿಂತಿತು. ಅದರ ಚಾಲಕ ಪಾರಿವಾಳವೊಂದನ್ನು ಕೈಯಲ್ಲಿ ಹಿಡಿದುಕೊಂಡು ಬಂದು, "ರಾಯರೆ, ಇನ್ನೂರು ರೂಪಾಯಿ ಬಿಲ್ ಆಗಿದೆ," ಎಂದು ಸಂಪಾದಕರಿಗೆ ಹೇಳಿದ.

ಸಂದೇಶ ಸಕಾಲದಲ್ಲಿ ತಲುಪದ್ದರಿಂದ ಸಂಪಾದಕರ ತಲೆ ಬಿಸಿಯಾಗಿ ಹೋಗಿತ್ತು. "ಏಕೋ ಹೇಗಾಯಿತು ಇನ್ನೂರು ರೂಪಾಯಿಗಳಷ್ಟು ಬಿಲ್ಲು?" ಎಂದು ಸ್ವಲ್ಪ ಕಠೋರವಾಗಿಯೇ ಟ್ಯಾಕ್ಸಿ ಚಾಲಕನನ್ನು ಪ್ರಶ್ನಿಸಿದರು.

ಸಕಾಲದಲ್ಲಿ ಆ ಪಾರಿವಾಳ ಅವನ ನೆರವಿಗೆ ಬಂತು. "ತಂಗಳೂರಿನಿಂದ ಬರುವಾಗ ಮಳೆ ಬರುತ್ತಿದ್ದುದರಿಂದ ಟ್ಯಾಕ್ಸಿ ಮಾಡಿಕೊಂಡು ಬಂದೆ, ಬಾಸ್," ಪಾರಿವಾಳ ತಲೆ ತಗ್ಗಿಸಿ ವಿನೀತಭಾವದಿಂದ ಹೇಳಿತು.

ಶ್ಯಾಪಸ್ ವೀಕ್ಲಿಯಿಂದ


ಐಟೆಕ್ಸ್
ಸೌಂದರ್ಯ ಸಾಧನಗಳು
EYETEX BINDI
EYETEX BINDI DELUXE MATT FINISH
EYETEX BINDI DELUXE
EYETEX
REGD.
EYETEX KUMKUM PASTE
ARAVIND LABORATORIES MADRAS-600 033

ರಾಲ್ಫ್ ನೆಡರ್

ಕಾಣಿಸಿಕೊಳ್ಳುತ್ತಾರೆ. ಆಗ ನೂರಾರು ಜನ ಅವರನ್ನು ಸುತ್ತುಗಟ್ಟಿ ಅನೇಕ ವಿಷಯಗಳ ಕುರಿತು ಪ್ರಶ್ನೆ ಕೇಳುತ್ತಾರೆ. ಮತ್ತು ತಮ್ಮ ಸ್ವಂತದ ತೊಂದರೆ ತಾಪತ್ರಯಗಳನ್ನು ನಿವೇದಿಸಿಕೊಳ್ಳುತ್ತಾರೆ. ಅವರೆಲ್ಲರಿಗೆ ರಾಲ್ಫ್, "ನಿಮ್ಮ ಎಲ್ಲ ತಕರಾರುಗಳನ್ನೂ ಬರೆದು ನನಗೆ ಕಳಿಸಿಕೊಡಿರಿ. ನನ್ನ ವಿಳಾಸ ತೀರ ಸುಲಭ; ರಾಲ್ಫ್ ನೆಡರ್, ವಾಶಿಂಗ್‌ಟನ್ ಡಿ. ಸಿ. ಇಷ್ಟೆ," ಎಂದು ಹೇಳುತ್ತಾರೆ.

ತಮ್ಮ ಖಟ್ಲೆಗಳನ್ನು ರಾಲ್ಫ್ ಸರಿಯಾದ ವೇಳೆಗೆ ಪ್ರಾರಂಭಿಸುವುದನ್ನು ಬಲು ಕಟ್ಟು ನಿಟ್ಟಾಗಿ ಪಾಲಿಸುತ್ತಾರೆ. ಒಂದು ವೇಳೆ ಅತಿ ಮಹತ್ವದ್ದೆನಿಸುವ ಮೋಸದ ಅಥವಾ ಭ್ರಷ್ಟಾಚಾರದ ಪ್ರಕರಣಗಳನ್ನು ಬಹಿರಂಗ ಪಡಿಸುವುದಿದ್ದರೆ, ಶುಕ್ರವಾರ ರಾತ್ರಿ ಇಲ್ಲವೆ ಶನಿವಾರ ಬೆಳಿಗ್ಗೆ ಗುಪ್ತವಾಗಿಟ್ಟು ವಿಷಯದ ಪೂರ್ವಾಪರ ವಿವರವನ್ನು ಪತ್ರಿಕೆಯ ಸುದ್ದಿಗಾರರ ಕೈಯಲ್ಲಿ ಕೊಡುತ್ತಾರೆ. ಇದರಿಂದ ರವಿವಾರದ ಪತ್ರಿಕೆಯಲ್ಲಿ ಸಾರ್ವಜನಿಕರ ಲಕ್ಷ್ಯ ಸೆಳೆಯುವಂತೆ ಪ್ರಮುಖ ಸ್ಥಾನ ಅವರ ಸುದ್ದಿಗೆ ಸಿಗುತ್ತದೆ. ರವಿವಾರ ಎಲ್ಲ ಸಂಘ ಸಂಸ್ಥೆಗಳಿಗೆ, ಕೋರ್ಟು–ಕಚೇರಿಗಳಿಗೆ ರಜೆ ಇದ್ದುದರಿಂದ ಅವರು ಆಪಾದನೆ ಮಾಡಿದ ವ್ಯಕ್ತಿಗಳಿಂದಾಗಲಿ, ಸಂಘ ಸಂಸ್ಥೆಗಳಿಂದಾಗಲಿ ತಮ್ಮ ಮೇಲೆ ಮಾಡಿದ ಆರೋಪವನ್ನು ನಿರಾಕರಿಸಿ ಅಥವಾ ಖಂಡಿಸಿ ತಟ್ಟನೆ ಹೇಳಿಕೆ ಕೊಡಲು ಸಾಧ್ಯವೇ ಆಗುವುದಿಲ್ಲ.

"ಬೆಳೆಯುವ ಪೈರನ್ನು ಮೊಳಕೆಯಲ್ಲಿ ನೋಡು" ಎಂಬ ನಾಣ್ಣುಡಿಯು ಬಹು ಅಂಶ ರಾಲ್ಫರಿಗೆ ಅನ್ವಯಿಸುತ್ತದೆ. ೧೯೩೪ ಫೆಬ್ರುವರಿ ೨೭ ರಂದು ಕನೆಕ್ಟಿಕಟ್ ರಾಜ್ಯದ ವಿನ್‌ಸೆಂಟ್ ಎಂಬ ಹತ್ತು ಸಾವಿರ ಜನವಸತಿಯ ಊರಲ್ಲಿ ರಾಲ್ಫ್ ಜನ್ಮ ತಾಳಿದರು. ಅವರ ತಂದೆ ನಾದ್ರಾ ನೆಡರ್ ಲೆಬನಾನಿನಿಂದ ಬಂದು, ಇಲ್ಲಿ ವಾಸ್ತವ್ಯ ಮಾಡಿ, ಇಂದು ಇಲ್ಲಿಯೇ ಒಂದು ಹೊಟೆಲ್ ನಡೆಸುತ್ತಿದ್ದಾರೆ. ರಾಲ್ಫ್ ೪ ವರ್ಷದವರಿದ್ದಾಗ ಅವರ ತಾಯಿ ಒಂದು ವರ್ಷದ ಮಟ್ಟಿಗೆ ಚಿಕ್ಕ ರಾಲ್ಫನೊಂದಿಗೆ ಲೆಬನಾನಿಗೆ ಹೋಗಿದ್ದಳು.

ಶಾಲೆಗಳಲ್ಲಿರುವ ಗಿಡಗಳಿಗೆ ಡಿ ಡಿ ಟಿ ಸಿಂಪಡಿಸುವುದರಿಂದ ಅವುಗಳ ಮೇಲೆ ಹಾರಾಡುವ ನಿಷ್ಪಾಪ ಪಾತರಗಿತ್ತಿಗಳು ವಿನಾಕಾರಣ ಸತ್ತು ಹೋಗುತ್ತವೆಂದೂ ಗಿಡಗಳಿಗೆ ಡಿ ಡಿ ಟಿ ಸಿಂಪಡಿಸಬಾರದೆಂದೂ ರಾಲ್ಫರು ವಿದ್ಯಾರ್ಥಿಯಾಗಿರುವಾಗಲೇ ಚಳವಳಿಯ ದೀಕ್ಷೆ ತೊಟ್ಟಿದ್ದ. ಆ ನಂತರ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಅಭ್ಯಾಸ ಮಾಡುತ್ತಿರುವಾಗಲೂ ಸಹ, "ಈ ವಿಶ್ವವಿದ್ಯಾಲಯವೆಂದರೆ ಸಾಕಷ್ಟು ಖರ್ಚಿನ ಯಂತ್ರ ತಯಾರಿಸುವ ಕಾರಖಾನೆಯಾಗಿದೆ," ಎಂದು ಅಲ್ಲಿಯ ಶಿಕ್ಷಣ ಪದ್ಧತಿಯನ್ನು ಖಂಡಿಸಿದ್ದರು,

"ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವದ ರಕ್ಷಣೆಗೋಸುಗ ನ್ಯಾಯವಾಗಿ ಹೋರಾಡುವುದು ತೀರ ಅವಶ್ಯವಿದೆಯೆಂಬ ಮಾತನ್ನು ನಾನು, ನನ್ನ ಮಗ ರಾಲ್ಫನ ಮನಸ್ಸಿನ ಮೇಲೆ ಬಿಂಬಿಸಲು ಪ್ರಯತ್ನಿಸಿದೆ. ಮತ್ತು ಯಾವಾಗಲೂ ಎಂಥ ಬಿಕ್ಕಟ್ಟಿನ ಪ್ರಸಂಗದಲ್ಲಿಯೂ ಇನ್ನೊಬ್ಬರ ಮುಲಾಜಿಗೆ ಒಳಗಾಗಿ ಅವರು ಹೇಳಿದ್ದಕ್ಕೆ ಹೂಂಗುಟ್ಟಬೇಡ, ಮತ್ತು ಯಾರನ್ನೂ ತುಚ್ಛ ಭಾವನೆಯಿಂದ ಕಾಣಬೇಡ ಎಂದು ನಾನು, ನನ್ನ ಮಗನಿಗೆ ಪದೇಪದೇ ಹೇಳುತ್ತ ಬಂದಿದ್ದೇನೆ," ಎಂದು ರಾಲ್ಫರ ತಂದೆ ಒಮ್ಮೆ ಉದ್ಗಾರ ತೆಗೆದರು.

ರಾಲ್ಫರ ವಿಚಾರಸರಣಿ ಜಟಿಲವಿಲ್ಲ. ಅವರು ಬಿಚ್ಚು ಮನಸ್ಸಿನಿಂದ "ಈ ಅತಿರಥಿ ಮಹಾರಥಿ ಕಂಪನಿ ಅಧಿಕಾರಿಗಳು ಇರಬೇಕಾದ ನಿಜವಾದ

ಸ್ಥಾನ ಸೆರೆಮನೆಯೇ. ಏಕೆಂದರೆ, ತಾವು ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡುವಾಗ, 'ಗಿರಾಕಿಗಳಿಗೆ ಮೋಸ ಮಾಡುತ್ತಾರೆ; ಹೆದರಿಸುತ್ತಾರೆ. ತಿನ್ನುವ ಪದಾರ್ಥಗಳಲ್ಲಿ ತಿಳಿದೂ ವಿಷ ಮಿಶ್ರಣ ಮಾಡಿ ತಯಾರಿಸುತ್ತಾರೆ. ಅವುಗಳನ್ನು ಕೊಂಡು ತಿಂದ ಗಿರಾಕಿಗಳು ಕೆಲಸಕ್ಕೆಬಾರದ ನಿರುಪಯೋಗಿಗಳಾಗುತ್ತಾರೆ ಇಲ್ಲವೆ ಸಾವನ್ನಪ್ಪುತ್ತಾರೆ. ಇಂತಹ ಕೆಲಸದಲ್ಲಿ ಅಪರೋಕ್ಷ ಸಹಾಯ ನೀಡುವ ಸರಕಾರೀ ನೌಕರರಿಗೂ ಕೂಡ ಸೆರೆಮನೆಯಲ್ಲಿಯೇ ಸ್ಥಾನವಿದೆ," ಎಂದು ಹೇಳುತ್ತಾರೆ.

೧೯೭೨ ರಲ್ಲಿ ರಾಲ್ಫ್ ಮತ್ತು ಅವರ ಸಂಗಡಿಗರು ಕೂಡಿಕೊಂಡು 'Who Runs Congress' ಎಂಬ ಪುಸ್ತಕ ಬರೆದು, ಅಮೇರಿಕದ ಸರಕಾರ ಮತ್ತು ಅದರ ಆಡಳಿತ ವೈಖರಿಯ ತೇಜೋವಧೆ ಮಾಡಿದರು. ಈ ವಿಚಾರಸರಣಿ ಓದಿದಾಗ ಕೆಲವರು ರಾಲ್ಫರಿಗೆ ರಾಜಕೀಯ ಆಕಾಂಕ್ಷೆಯಿದೆಯೆಂದು ಭಾವಿಸಿದರು. ಆದರೆ ವಸ್ತುಸ್ಥಿತಿ ಹಾಗಿಲ್ಲ. ಒಂದು ಸಣ್ಣ ರಾಜಕೀಯ ಪಕ್ಷವು ೧೯೭೨ ರಲ್ಲಿ ಅಧ್ಯಕ್ಷೀಯ ಚುನಾವಣೆಗೆ ಹುರಿಯಾಳಾಗಿ ನಿಲ್ಲಲು ತುಂಬ ಆಗ್ರಹಪಡಿಸಿತು. ಆದರೆ ರಾಲ್ಫ್ ನೆಡೆರ್, "ನನಗೆ ರಾಜಕೀಯ ಅಧಿಕಾರ ಸ್ಥಾನದಲ್ಲಿ ಅಭಿಲಾಷೆ ಇಲ್ಲ," ಎಂದು ಸ್ಪಷ್ಟ ಉತ್ತರಿಸಿದರು.

ರಾಲ್ಫ್ ನೆಡರ್ ರಾಜಕೀಯ ಪ್ರವೇಶಿಸಲಿ ಅಥವಾ ಬಿಡಲಿ ಆದರೆ ಅವರು ಜನಸಾಮಾನ್ಯದ ಮನಸ್ಸಿನ ಮೇಲೆ ತುಂಬ ಪ್ರಭಾವ ಬೀರಿದ್ದಾರೆ. ಕಂಪ್ಯೂಟರ್ ಮುಖಾಂತರ ಕೆಲಸ ಮಾಡಿಸಿಕೊಳ್ಳುವಷ್ಟು ಮುಂದುವರಿದ ಇಂದಿನ ಸಮಾಜದಲ್ಲಿ ರಾಲ್ಫ್ ನೆಡರ್ ಒಬ್ಬಂಟಿಗರಾಗಿ ಗ್ರಾಹಕ ವರ್ಗದ ಹಕ್ಕುಗಳ ಸಾಧನೆಗಳಿಗಾಗಿ ಹೋರಾಡುತ್ತಿದ್ದಾರೆಂದೇ ಅಮೇರಿಕದ ಯುವಜನಾಂಗ ಅವರನ್ನು ತುಂಬ ಪ್ರಶಂಸಿಸುತ್ತಾರೆ. ದೊಡ್ಡವರನ್ನಿಸಿಪಡಿಸುತ್ತಾರೆ.

ಕೊಳ್ಳುವ ಜನ ರಾಲ್ಫರಿಂದ ಪ್ರಭಾವಿತರಾಗಿದ್ದಾರೆ. ಇದಕ್ಕೆ ಕಾರಣವೆಂದರೆ ನೆಡರ್ ಇಂದಿನ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಇದ್ದೂ ಸುಧಾರಣೆಗಾಗಿ ಹೋರಾಟ ನಡೆಸಿದ್ದಾರೆ. ರಾಲ್ಫ್ ಒಂದು ಉದಾತ್ತ ಉದ್ದೇಶಕ್ಕಾಗಿ ಪರಿಶ್ರಮಿಸುತ್ತಿದ್ದರೂ ಸಹ ಅವರನ್ನು ಟೀಕಿಸುವ ಜನರೂ ಇದ್ದಾರೆ. ತನ್ನ ಸ್ವಂತದ ಪ್ರಸಿದ್ಧಿಗಾಗಿ ಇಷ್ಟೆಲ್ಲ ತತ್ತ್ವ ಮಾತಾಡುತ್ತಾನೆಂದು ರಾಲ್ಫರನ್ನು ಮೂದಲಿಸುವ ವ್ಯಾಪಾರಸ್ಥರ ವರ್ಗವೂ ಉಂಟು. ಆದರೆ ಇದೇ ವ್ಯಾಪಾರೀ ವರ್ಗ ಅವರಿಗೆ ಕೈತುಂಬ ಸಂಬಳದ ಅಧಿಕಾರ ಸ್ಥಾನ ಕೊಡಲು ಮುಂದಾಗಿದ್ದರು. ೧೯೬೬ ರಲ್ಲಿ ಜನರಲ್ ಮೋಟರ್ಸ್ ಕಂಪನಿ ತಮಗೆ ಒಂದು ದೊಡ್ಡ ಅಧಿಕಾರ ಸ್ಥಾನ ಕೊಡಲು ಸಿದ್ಧವಾಗಿದ್ದಾಗ ತಾನು ಅದನ್ನು ನಿರಾಕರಿಸಿದೆನೆಂದು ಸ್ವತಃ ಅವರೇ ಹೇಳುತ್ತಾರೆ.

ರಾಲ್ಫರು ಸತತ ಹೋರಾಟ ನಡೆಸಿ, ಅಮೇರಿಕದ ಗ್ರಾಹಕ ವರ್ಗವನ್ನು ಇಂದಿನ ಸ್ವಾರ್ಥಿ ಹಾಗೂ ಯಾರೊಬ್ಬರಿಗೂ ಮಣಿಯದ ವ್ಯಾಪಾರಸ್ಥರ ಕುತಂತ್ರದ ವಿರುದ್ಧ ತಮ್ಮ ಹಕ್ಕುಗಳ ಸಾಧನೆಗಾಗಿ ಹೇಗೆ ಹೋರಾಡಬೇಕೆಂಬುದನ್ನು ತೋರಿಸಿಕೊಟ್ಟಿದ್ದಾರೆಂಬುದು ನಿಶ್ಚಿತ. ತಮ್ಮ ಈ ಸಂಘಟನೆ, ಈ ಹೋರಾಟ ತೀರ ಸಾಮಾನ್ಯ. ಸಮಸ್ಯೆಗಳ ಸ್ವರೂಪವನ್ನು ಸಮಗ್ರವಾಗಿ ಕಂಡಾಗ ತಾನು ಮಾಡುವ ಯತ್ನ ಸಮುದ್ರದಲ್ಲಿಯ ಒಂದು ಹನಿ ಮಾತ್ರವೆಂದು ರಾಲ್ಫ್ ಹೇಳುತ್ತಾರೆ. ಮತ್ತು ಅಮೇರಿಕದಲ್ಲಿಂದು ತಾವು ತಿದ್ದುತ್ತಿರುವ ತಪ್ಪುಗಳು ಭವಿಷ್ಯದಲ್ಲಿ ಜಗತ್ತಿನ ಇತರ ಕಡೆಗೆ ಸಂಭವಿಸಿದಾಗ ತಮ್ಮ ಹೋರಾಟ ಅಲ್ಲಲ್ಲಿಯ ಜನತೆಗೆ ಮಾರ್ಗದರ್ಶನ ಮಾಡೀತೆಂಬ ವಿಶ್ವಾಸವನ್ನು ರಾಲ್ಫ್ ವ್ಯಕ್ತ ✡


ಅದಾ
ಮೂಲ ಉರ್ದು :
ಮಿರ್ಜಾ ರುಸ್ವಾ
ಶಾಂತರಸ

ಉಮರಾವ್ ಜಾನ್ ಅದಾ

[ಮಿರ್ಜಾ ರುಸ್ವಾ ಕ್ರಿ. ಶ. ೧೮೫೭ ರಲ್ಲಿ ಲಖ್ನೋದಲ್ಲಿ ಜನಿಸಿದ. ಆತನ ಪೂರ್ಣ ಹೆಸರು: ಮಿರ್ಜಾ ಮುಹಮ್ಮದ ಹಾದಿ ರುಸ್ವಾ. 'ರುಸ್ವಾ' ಎನ್ನುವುದು ಆತನ ಕಾವ್ಯನಾಮ. ಉರ್ದು ಫಾರಸೀ, ಅರೇಬಿಕ್, ಹಿಬ್ರು, ಇಂಗ್ಲೀಷ, ಲ್ಯಾಟೀನ್, ಗ್ರೀಕ್, ಹಿಂದಿ ಮತ್ತು ಸಂಸ್ಕೃತಗಳನ್ನು ಬಲ್ಲ ರುಸ್ವಾನದು ದ್ವಂದ್ವಮಯ ವ್ಯಕ್ತಿತ್ವ. ದೀರ್ಘ ಅಧ್ಯಯನ, ಪ್ರೌಢ ಸಾಹಿತ್ಯ ರಚನೆ, ತತ್ವಗಳಲ್ಲಿ ತಲ್ಲೀನತೆ ಒಂದು ಮುಖ ವಾದರೆ, ನಗರದ ವೇಶ್ಯಾಗೃಹಗಳಿಗೆ ಭೆಟ್ಟಿ, ಕೀಳು ದರ್ಜೆಯ ಬರವಣಿಗೆ ಇನ್ನೊಂದು ಮುಖ. 'ಉಮರಾವ್ ಜಾನ್ ಅದಾ' ಕಾದಂಬರಿ ಅವನಿಗೆ ಸಾಹಿತ್ಯ ಲೋಕದಲ್ಲಿ ಒಂದು ಸ್ಥಿರವಾದ ಉನ್ನತವಾದ ಸ್ಥಾನವನ್ನು ತಂದುಕೊಟ್ಟಿತು. ಇದೊಂದು ಲಖ್ನೋದ ಜೀವನ ಮತ್ತು ಸಂಸ್ಕೃತಿಯ ಕಥಾನಕ. ರುಸ್ವಾನ ಭಾಷಾ ಸತ್ವವನ್ನು, ಸೌಂದರ್ಯ ವನ್ನು ಹಿರಿಯರೂ ಗೆಳೆಯರೂ ವಿಮರ್ಶಕರು ತುಂಬು ಮನಸ್ಸಿನಿಂದ ಹೊಗಳಿದರು. ಅವನ ಇತರ ಕಾದಂಬರಿಗಳು, 'ಜಾತೆ ಷರೀಫ್' 'ಷರೀಫ್ ಜಾದಾ' 'ಅಖ್ತರೀ ಬೇಗಮ್' ಮುಂತಾದವುಗಳಲ್ಲದೆ, ಷಿಯಾ ಧರ್ಮದ ಕುರಿತು ಇಪ್ಪತ್ತು ಸಂಪುಟ ಗಳನ್ನು ಬರೆದಿದ್ದಾನೆ.

ಉಮ್‌ರಾವ್ ಜಾನ್ ಕಾಲ್ಪನಿಕ ವ್ಯಕ್ತಿಯಲ್ಲ. ಆಕೆ ಲಖ್ನೋದ ಪ್ರಸಿದ್ಧ ವೇಶ್ಯೆ. ನರ್ತಕಿ ಸಂಗೀತ ವಿದುಷಿ. ರುಸ್ವಾ ಅವಳೊಡನೆ ಸಂಬಂಧವುಳ್ಳವನಾಗಿದ್ದ. ಕ್ರಿ. ಶ. ೧೯೩೧ ರಲ್ಲಿ 'ರುಸ್ವಾ' ಹೈದರಾಬಾದಿನಲ್ಲಿ ತನ್ನ ಇಹಲೋಕ ಯಾತ್ರೆಯನ್ನು ಮುಗಿಸಿದನು.

ಉಮ್‌ರಾವ್ ಜಾನ್ ಅದಾ ಕಾದಂಬರಿಯನ್ನು, ಹೊಸದೆಹಲಿಯ ಸಾಹಿತ್ಯ ಅಕಾಡೆಮಿಯವರು ಕನ್ನಡದಲ್ಲಿ ೧೯೭೫ ಪ್ರಕಟಿಸಿದ್ದಾರೆ]

ಓದುಗರೇ, ಈ ಕಥೆಯ ದಿವ್ಯ ಘನತೆ ಹೀಗಿದೆ.

ಹತ್ತು ಹನ್ನೆರಡು ವರುಷಗಳ ಹಿಂದಿನ ಸಂಗತಿ. ದಿಲ್ಲಿಯ ಅಂಚಿನಲ್ಲಿ ವಾಸಿಸುವ ನನ್ನ ಗೆಳೆಯ ಮುನಷೀ ಅಹ್ಮದ್ ಹುಸೇನ್ ಎಂಬವರು ವಿಹಾರಕ್ಕೆಂದು ಲಖ್ನೋಕ್ಕೆ ಬಂದಿದ್ದರು. ಚೌಕದಲ್ಲಿ ಸೈಯ್ಯದ್ ಹುಸೇನರ ಫಾಟಕದ ಹತ್ತಿರ ಒಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದರು. ಇಲ್ಲಿಗೆ ಸಾಯಂಕಾಲ ಅನೇಕ ಗೆಳೆಯರು ಬರುತ್ತಿದ್ದರು. ಬಹು ಸ್ವಾರಸ್ಯವಾದ ಗೋಷ್ಠಿ ನಡೆಯುತ್ತಿತ್ತು.

ಇದೇ ಕೋಣೆಗೆ ಹೊಂದಿಕೊಂಡು ಇನ್ನೊಂದು ಕೋಣೆಯಿತ್ತು. ಅದರಲ್ಲಿ ಒಬ್ಬ ವೇಶ್ಯೆ ಇರುತ್ತಿದ್ದಳು. ಅವಳ ಇರುವಿಕೆ ಇನ್ನಿತರ ಸೂಳೆಯರಿಗಿಂತ ಬೇರೆಯೇ ಆಗಿತ್ತು. ದಾರಿಗೆ ಹೊಂದಿ ಕೋಣೆಯ ಮುಂದೆ ಅವಳು ಕುಳಿತುದನ್ನು ಯಾರೂ ಕಂಡಿರಲಿಲ್ಲ. ಅಲ್ಲದೆ ಅವಳ ಕೋಣೆಗೆ ಯಾರ ಬರು–ಹೋಗುವಿಕೆಯೂ ಇರಲಿಲ್ಲ. ಅವಳ

ಹೆಸರು ಉಮ್‌ರಾವ್ ಜಾನ್ ಎಂದು. ನಾನು ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದುದನ್ನು ಕಂಡು ಅವಳೂ ನಮ್ಮ ಕವಿಗೋಷ್ಠಿಯಲ್ಲಿ ಭಾಗವಹಿಸಲು ಬರುತ್ತಿದ್ದಳು. ಎಲ್ಲ ಗೆಳೆಯರು ತಮ್ಮ ತಮ್ಮ ಕವನಗಳನ್ನು ಓದಬೇಕು. ಮತ್ತು ಆಕೆಯೂ ತನ್ನ ಅನುಭವದ ಕವನಗಳನ್ನು ಹಾಡಬೇಕು. ಇಂಥ ಕವಿಗೋಷ್ಠಿಯಲ್ಲಿಯೇ ಮುನಷೀ ಅಹ್ಮದ್ ಹುಸೇನರು ಉಮ್‌ರಾವ್ ಜಾನಳಿಗೆ ಹೇಳಿದ್ದರು.

'ನಿಮ್ಮ ಜೀವನದ ಸಂಗತಿಗಳು ಬಹಳ ಆಕರ್ಷಣೀಯವಾಗಿರುವುದರಲ್ಲಿ ಸಂದೇಹವಿಲ್ಲ. ನೀವು ನಿಮ್ಮ ಕಳೆದ ಜೀವನವನ್ನು ವರ್ಣಿಸಿ ಬರೆದರೆ ಬಹು ರಸವತ್ತಾದ ಕೃತಿಯಾಗುವುದು.'

ನಾನೂ ಕೂಡ ಮುನ್‌ಷಿಯವರ ಮಾತುಗಳನ್ನು ಅನುಮೋದಿಸಿದೆ. ಆದರೆ ಉಮ್‌ರಾವ್ ಜಾನ್ ಕಿವಿಗೊಡಲಿಲ್ಲ. ನಾವು ಹಿಡಿದ ಪಟ್ಟು ಬಿಡಲಿಲ್ಲ. ಕೊನೆಗೆ ಮುನ್‌ಷಿಯವರ ಇಚ್ಛೆ ಹಾಗೂ ನನ್ನ ಒತ್ತಾಯಗಳಿಗೆ ಮಣಿದು ಉಮ್‌ರಾವ್ ತನ್ನ ಗತ ಜೀವನದ ಕಥೆಯನ್ನು ಹೇಳಲು ಒಪ್ಪಿದಳು.

ಆಕೆಯ ಹೇಳಿಕೆ ಸೊಗಸಾಗಿತ್ತು. ಭಾಷೆ ಶುದ್ಧವಾಗಿತ್ತು. ಆಕೆ ಓದು ಬರಹ ಬಲ್ಲವಳು. ಉಚ್ಚಮಟ್ಟದ ಸೂಳೆಯರಲ್ಲಿ ಬೆಳೆದು ದೊಡ್ಡವಳಾದವಳು. ನವಾಬರ ಮತ್ತು ರಾಜಕುಮಾರರ ಸಹವಾಸ ಮಾಡಿದಳು. ಅರಸರ ಅರಮನೆಗಳನ್ನು ಕಂಡವಳು. ಅವಳು ಕಣ್ಣುಗಳಿಂದ ನೋಡಿದುದನ್ನು ಜನರು ಕಿವಿಯಿಂದ ಕೇಳಿರಲಿಲ್ಲ.

ಆಕೆ ತನ್ನ ಕಥೆ ಹೇಳಿದಂತೆ ನಾನದನ್ನು ಗುಪ್ತವಾಗಿ ಬರೆಯುತ್ತಿದ್ದೆ. ಎಲ್ಲ ಮುಗಿದ ಬಳಿಕ ಅದರ ಕರಡನ್ನು ಅವಳಿಗೆ ತೋರಿಸಿದಾಗ ಅವಳು ಬಹಳ ರೇಗಿದಳು. ಆಮೇಲೆ ತಿಳಿವು ತಂದುಕೊಂಡು ಅಲ್ಲಲ್ಲಿ ತಿದ್ದಿ ಸರಿಪಡಿಸಿದಳು.

ಉಮ್‌ರಾವ್ ಜಾನ್‌ಳಿಗೆ ನವಾಬ ಸಾಹೇಬರ ಸಹವಾಸವಿದ್ದಂದಿನಿಂದ ನಾನಾಕೆಯನ್ನು ಬಲ್ಲೆ. ಈ ಕಥೆಯಲ್ಲಿ ಬಂದ ಘಟನೆಗಳೆಲ್ಲ ಅಕ್ಷರಶಃ ನಿಜವಾಗಿವೆಯೆಂಬುದರಲ್ಲಿ ಸಂಶಯವಿಲ್ಲ. ಇದು ನನ್ನ ಸ್ವಂತದ ಅಭಿಪ್ರಾಯ. ಆದರೆ ಓದುಗರಿಗೆ ಬೇಕಾದುದನ್ನು ಭಾವಿಸುವ ಸ್ವಾತಂತ್ರ್ಯವಿದೆ.

—ಮಿರ್ಜಾ ರುಸ್ವಾ

೧

ಸ್ವಾರಸ್ಯವಿಹುದಾವ ಕಥೆಗಳಲ್ಲಿ
ಏನೋ ತಿಳಿಯದು.
ನನ್ನ ಕಥೆ ಹೇಳಲೊ ಜಗದ ಕಥೆ
ಹೇಳಲೊ ಹೊಳೆಯದು!

ಕೇಳಿರಿ ಮಿರ್ಜಾ ಸಾಹೇಬರೇ, ನನ್ನನ್ನು ಎಷ್ಟು ಕೆದರಿ, ಕೆದರಿ ಕೇಳುತ್ತಿದ್ದೀರಲ್ಲ. ನನ್ನಂಥ ದುರ್ದೈವಿಯ ಕಥೆಯಲ್ಲಿ ಏನು ಸೊಗಸಿರುವುದೋ? ಅಸುಖಿಯು, ಅತೃಪ್ತಳು, ದೇಶಭ್ರಷ್ಟಳು, ಮನೆತನ ಹಾಳು ಮಾಡಿ ಅದರ ಮರ್ಯಾದೆ ಮಣ್ಣುಗೂಡಿಸಿದವಳು, ನಾಚಿಕೆ ಇಲ್ಲದವಳು ನಾನು, ಇಂಥವಳ ಚರಿತ್ರೆಯನ್ನು ಕೇಳಿ ನೀವು ಸಂತೋಷಪಡುವಿರೆಂದು ನಾನೆಂದೂ ನಂಬುವುದಿಲ್ಲ.

ಒಳ್ಳೇದು ಕೇಳಿರಿ, ಚೆನ್ನಾಗಿ ಕೇಳಿರಿ.

ಫೈಜಾಬಾದ ಪಟ್ಟಣದ ಅಂಚಿನ ಯಾವುದೋ ಓಣಿಯಲ್ಲಿ ನಮ್ಮ ಮನೆಯಿತ್ತು. ನಮ್ಮ ಮನೆಯಲ್ಲದೆ ಇನ್ನೊಂದು ಎತ್ತರವಾದ ಮನೆ ಆ ಓಣಿಯಲ್ಲಿತ್ತು. ಆ ಮನೆಯ ಯಜಮಾನ ದಿಲಾವರ್ ಖಾನ್.

ನನ್ನ ತಂದೆ, ಬಹೂಬೇಗಮ್ ಸಮಾಧಿಯಲ್ಲಿ ನೌಕರಿಯಿದ್ದರು. ಅಲ್ಲಿ ಆತ ದೀಪ ಹಚ್ಚುವ ಕೆಲಸ ಮಾಡುತ್ತಿದ್ದ. ಜನರು ಆತನಿಗೆ ಜಮೆದಾರ ಎನ್ನುತ್ತಿದ್ದರು.

ರೂಪ ಮತ್ತು ಬಣ್ಣದಲ್ಲಿ ನಾನು ಓರಗೆಯವರಿಗಿಂತ ಚೆನ್ನಾಗಿದ್ದೆ. ಸುಂದರಿಯರಲ್ಲೇನೂ ನನ್ನ ಎಣಿಕೆಯಾಗುತ್ತಿರಲಿಲ್ಲ. ನನ್ನ ಮದುವೆ ನನ್ನ ಸೋದರತ್ತೆಯ ಮಗ

ನೊಂದಿಗೆ ಆಗುವುದಿತ್ತು. ನನ್ನ ಒಂಬತ್ತನೆಯ ವಯಸ್ಸಿನಲ್ಲಿಯೇ ನಿಶ್ಚಯವಾಗಿತ್ತು. ನಾನು ವರನನ್ನು ನೋಡಿದ್ದೆ. ಅವನ ಕೂಡ ಆಡಿದ್ದೆ. ಅಪ್ಪ ಬಳುವಳಿಯ ಸಾಮಾನುಗಳನ್ನು ಕೂಡಿಸಿದ್ದರು. ಸ್ವಲ್ಪ ಹಣ ಮಾತ್ರ ಬೇಕಿತ್ತು. ರಜಬ್ ತಿಂಗಳಲ್ಲಿ ಮದುವೆ ಇಟ್ಟಿದ್ದರು.

ರಾತ್ರಿ, ಅಮ್ಮ ಅಪ್ಪ ಇಬ್ಬರಲ್ಲಿ ಮದುವೆಯ ಬಗ್ಗೆ ಮಾತುಕತೆ ನಡೆದಾಗ ನಾನು ಮಲಗಿದಲ್ಲಿಯೇ ಕೇಳುತ್ತಿದ್ದೆ. ಒಳಗೊಳಗೇ ಸಂತೋಷಪಡುತ್ತಿದ್ದೆ. ವಾಹ್ ! ನನ್ನ ವರನ ರೂಪ ಕರೀಮುನ್ನಳ (ನನ್ನ ವಯಸ್ಸಿನ ಪಿಂಜಾರನ ಮಗಳು) ವರನಿಗಿಂತಲೂ ಚೆನ್ನಾಗಿದೆ.

ಒಟ್ಟಾರೆ ನಾನು ಆ ಸ್ಥಿತಿಯಲ್ಲಿ ಸಂತೋಷದಿಂದಿದ್ದೆ. ಅದರ ಮುಂದಿನದು ಏನು ಹೇಳಲಿ ?...ಹೇಗೆ ಹೇಳಲಿ ? ಆ ತರುವಾಯ ನಾನು ಉಡಾಳಳಾದೆ. ಕೆಟ್ಟ ಚಾಳಿಗೆ ಬಲಿಯಾದೆ ಎಂಬ ಭಾವನೆ ಬರುವುದು ಸಹಜ. ಆದರೆ ನನ್ನ ಸ್ಥಿತಿಯೇ ಬೇರೆಯಾಗಿತ್ತು. ಯಾವುದು ವೈರಿಗೂ ಆಗಬಾರದಾಗಿತ್ತೋ ಅದು ಆಯಿತು. ದೈವ ಮತ್ತು ಪರಿಸ್ಥಿತಿ ಇವೆರಡೂ ಸಂಚುಮಾಡಿ ಘೋರಾರಣ್ಯದಲ್ಲಿ ನನ್ನನ್ನೊಯ್ದು ಕೆಡವಿದವು. ದಾರಿ ತಪ್ಪುವುದೊಂದೇ ಅಲ್ಲಿ ದಾರಿಯಾಗಿತ್ತು.

ದಿಲಾವರ್‌ಖಾನ್ ಒಬ್ಬ ಮಹಾ ಕಳ್ಳನಾಗಿದ್ದ. ಅಪ್ಪನೊಡನೆ ಬಹಳ ವೈರತ್ವ ಬೆಳಸಿದ್ದ. ಒಂದು ದಿನ ಸಂಜೆಯ ಕಡೆ ಯಾಕೋ ನಾನು ಬಾಗಿಲು ದಾಟಿ ಹೊರಗೆ ಹೋದೆ. ದಿಲಾವರ್‌ಖಾನ್ ಹುಣಸೀಮರದ ಕೆಳಗೆ ನಿಂತಿದ್ದ. 'ನಿಮ್ಮ ತಂದೆ ರೊಕ್ಕ ಕೊಟ್ಟಿದ್ದಾನೆ. ಪಾರಿವಾಳ ತರುವಿಯಂತೆ ಬಾ ಮಗು, ಎಂದ. ನಾನವನ ಬಲೆಯಲ್ಲಿ ಬಿದ್ದೆ. ಅವನ ಹಿಂದೆ ಹೋದೆ. ನಾನು ಅವನ ಮನೆಯಲ್ಲಿ ಕಾಲಿಟ್ಟ ಕೂಡಲೆ ಬಾಗಿಲು ಮುಚ್ಚಿ ಕೊಂಡಿ ಹಾಕಿದ. ಚೀರಬೇಕೆಂದೆ. ಅವನು ನನ್ನ ಬಾಯಲ್ಲಿ ಬಟ್ಟೆ ತುರುಕಿದ. ನನ್ನ ಕೈಗಳನ್ನು ಪಾವಡದಿಂದ ಕಟ್ಟಿದ. ಹಿಂದಿನ ಬಾಗಿಲಿನಿಂದ ಪೀರಬಕ್ಷ ಬಂದ. ಇಬ್ಬರೂ ಕೂಡಿ ನನ್ನನ್ನು ಒಂದು ಎತ್ತಿನ ಬಂಡಿಯಲ್ಲಿ ಹತ್ತಿಸಿದರು. ಬಂಡಿ ಸಾಗಿತು. ಅವರು ಮಾತು ಮಾತಿಗೆ ನನ್ನನ್ನು, ನನ್ನ ತಂದೆ ತಾಯಿಗಳನ್ನು ಬೈಯುತ್ತಿದ್ದರು. ದಿಲಾವರ್‌ಖಾನ್ ತಂದೆಯ ಸೇಡನ್ನು ತೀರಿಸಿಕೊಂಡೆನೆಂದು ಜಂಬ ಕೊಚ್ಚಿಕೊಳ್ಳುತ್ತಿದ್ದನು.

ರಾತ್ರಿಯೆಲ್ಲ ಬಂಡಿ ಸಾಗಿತು. ನನ್ನ ಜೀವ ಆಪತ್ತಿನಲ್ಲಿತ್ತು. ಲಖ್ನೋದಲ್ಲಿ ಗೋಮತಿ ನದಿಯ ಆಚೆಯ ದಂಡೆಯಲ್ಲಿದ್ದ ಕರೀಮನ ಅತ್ತೆಯ ಮನೆಯಲ್ಲಿ ನನ್ನನ್ನು ಇಳಿಸಿದರು. ಕರೀಮ ಪೀರಬಕ್ಷನ ಅಳಿಯ, ಹುಡಿಗೆಯರನ್ನು ಹಿಡಿದುಕೊಂಡು ಹೋಗಿ ಲಖ್ನೋದಲ್ಲಿ ಮಾರುತ್ತಿದ್ದ.

ಕರೀಮನ ಮನೆಯಲ್ಲಿ ಎರಡು ದಿನ ಕಳೆದವು. ಮೂರನೆಯ ದಿನ ನನಗಿಂತ ಒಂದೆರಡು ವರುಷ ದೊಡ್ಡವಳಾದ ಇನ್ನೊಂದು ಹುಡುಗೆಯನ್ನು ತಂದು ನನ್ನ ಕೋಣೆಯಲ್ಲಿ ಹಾಕಿದರು. ಕರೀಮ ಅವಳನ್ನು ಪುಸಲಾಯಿಸಿ ತಂದಿದ್ದ. ಪಾಪ, ಬಿಕ್ಕಿ, ಬಿಕ್ಕಿ ಅಳುತ್ತಿದ್ದಳು. ಆಕೆ ಬಣಜಿಗನ ಮಗಳು. ರಾಮ-ದಯ್ ಎಂದು ಹೆಸರು. ಸೀತಾಪುರಕ್ಕೆ ಸಮೀಪದ ಯಾವುದೋ ಹಳ್ಳಿಯವಳು. ಅವಳು ಬಂದದ್ದರಿಂದ ನನಗೆ ಜೊತೆ ಸಿಕ್ಕಂತಾಗಿತ್ತು. ಆದರೆ ನಾಲ್ಕನೆಯ ದಿನ ಅವಳಿಗೆ ಈ ಕತ್ತಲೆಯ ಕೋಣೆಯಿಂದ ಬಿಡುಗಡೆಯಾಯಿತು. ನಾನಲ್ಲೇ ಉಳಿದೆ. ಮತ್ತೆ ಮೂರು ದಿನಗಳು ಕಳೆದ ನಂತರ ಒಂದು ರಾತ್ರಿ, ದಿಲಾವರ್‌ಖಾನ್ ಮತ್ತು ಪೀರಬಕ್ಷ ಬಂದು ನನ್ನನ್ನು ಆ ಕತ್ತಲೆ ಕೋಣೆಯಿಂದ ಹೊರ-ತೆಗೆದರು. ತಮ್ಮೊಡನೆ ಕರೆದೊಯ್ದರು. ವ್ಯವಹಾರ ಮೊದಲೇ ಕುದುರಿತ್ತು. ಖಾನಮ್ ಜಾನಳ ಮನೆಗೆ ಹೋದ ಮೇಲೆ ದಿಲಾವರ್‌ಖಾನ್ ಮತ್ತು ಪೀರಬಕ್ಷ ಅವ-ಳೊಡನೆ ತುಸು ಮಾತನಾಡಿದರು. ಆಮೇಲೆ ಖಾನ್‌ಮ್‌ಜಾನ್ ಬುವಾಹುಸೇನಿಯನ್ನು ಕರೆದಳು. ದಪ್ಪ ದೇಹದ ಎಣ್ಣೆಗಂಪಿನ

ಮಧ್ಯಮ ವಯಸ್ಸಿನ ಹುಸೇನಿ ಬಂದು ನಿಂತಳು.

ಖಾನಮ್: ಆ ಚಿಕ್ಕ ಪೆಟ್ಟಿಗೆ ತಾ.

ಹುಸೇನಿ ಹೋಗಿ ಪೆಟ್ಟಿಗೆ ತಂದಳು. ಖಾನಮ್ ಸಾಹೇಬಳು ಆ ಪೆಟ್ಟಿಗೆ ತೆರೆದು ಬಹಳಷ್ಟು ರೂಪಾಯಿಗಳನ್ನು ದಿಲಾವರ್ ಖಾನನ ಮುಂದಿಟ್ಟಳು. ನೂರಾಯಿಪ್ಪತ್ತೈದು ಎಂದು ಆಮೇಲೆ ತಿಳಿಯಿತು. ಕೆಲವು ರೂಪಾಯಿಗಳನ್ನು ಎಣಿಸಿ ಪೀರಬಕ್ಷ ತನ್ನ ಸೆಲ್ಲೆಯಲ್ಲಿ ಕಟ್ಟಿಕೊಂಡ. ಉಳಿದವನ್ನು ದಿಲಾವರ್‌ಖಾನ್ ಟೊಂಕದಲ್ಲಿಟ್ಟುಕೊಂಡ. ಅವರಿಬ್ಬರು ವಂದಿಸಿ ಹೊರಟು ಹೋದರು. ಈಗ ಕೋಣೆಯಲ್ಲಿ ನಾನು, ಖಾನಮ್ ಸಾಹೇಬ ಮತ್ತು ಹುಸೇನಿ ಉಳಿದೆವು.

ಖಾನಮ್ : ಹುಸೇನಿ, ಈ ಹುಡುಗಿಗೆ ಕೊಟ್ಟ ಬೆಲೆ ತುಟ್ಟಿಯೇನೂ ಆಗಲಿಲ್ಲವಲ್ಲ?

ಹುಸೇನಿ : ತುಟ್ಟಿ...? ಇಲ್ಲ. ಅಗ್ಗ.

ಖಾನಮ್ : ಅಗ್ಗವೂ ಅಲ್ಲ. ಮುಖವೇನೋ ಮುಗ್ಧ ಕಳೆಯಿಂದ ತುಂಬಿದೆ. ಯಾರ ಮಗಳೊ? ದೇವರೇ ಬಲ್ಲ. ಅಯ್ಯೋ ತಂದೆ ತಾಯಿಗಳ ಸ್ಥಿತಿ ಏನಾಗಿರಬೇಕು? ಹುಸೇನಿ, ನಮ್ಮ ಕಡೆಗಂತೂ ಏನೇನೂ ತಪ್ಪಿಲ್ಲ. ಪುಣ್ಯ-ಪಾಪದ ಫಲ ಅವರಿಗೇ ಸೇರಿದ್ದು. ಇದರಲ್ಲಿ ನಮ್ಮದೇನೂ ಕೈವಾಡವಿಲ್ಲ. ಇಲ್ಲಿ ಮಾರಾಟವಾಗದಿದ್ದರೆ ಇನ್ನೊಂದು ಕಡೆಗೆ ಮಾರಾಟವಾಗುತ್ತಿತ್ತು.

ಹುಸೇನಿ : ಬೇಬಿ, ಈ ಹುಡಿಗೆಯನ್ನು ನನಗೆ ಕೊಡಿರಿ, ನಾನು ಸಾಕುವೆ. ವಸ್ತು ನಿಮ್ಮದು. ಸೇವೆ ನನ್ನದು.

ಖಾನಮ್ : ನೀನೇ ಸಾಕು.

ಇಲ್ಲಿಯವರೆಗೆ ಹುಸೇನಿ ನಿಂತಿದ್ದಳು. ಈ ಮಾತುಗಳಾದ ಮೇಲೆ ನನ್ನ ಬಳಿ ಕುಳಿತಳು. ನನ್ನೊಡನೆ ಮಾತನಾಡತೊಡಗಿದಳು.

ಹುಸೇನಿ : ನಿನ್ನ ಹೆಸರೇನು ?

ನಾನು : ಅಮೀರನ್.

ಖಾನಮ್ : ಈ ಹೆಸರಂತೂ ನನಗೆ ಸರಿಯಿಲ್ಲ. ನಾನು ಇನ್ನು ಮೇಲೆ ಉಮ್ರಾವ್ ಎಂದು ಕರೆಯುವೆ.

ನಿಜಕ್ಕೂ ಬುವಾಹುಸೇನಿ ಒಳ್ಳೆಯ ಸ್ವಭಾವದವಳು. ಆಕೆ ನನ್ನ ಮೇಲೆ ಬಹಳ ಮಮತೆಯನ್ನು ತೋರಿಸಿದಳು. ಆದ್ದರಿಂದ ಕೆಲವೇ ದಿನಗಳಲ್ಲಿ ನನ್ನ ತಂದೆ ತಾಯಿಗಳನ್ನು ಮರೆತುಬಿಟ್ಟೆ. ಮಿರ್ಜಾಸಾಹೇಬ 'ಇವಳು ಬಹಳ ಕಠಿಣ ಮನಸ್ಸಿನವಳು, ಬಹು ತೀವ್ರ ತಂದೆ ತಾಯಿಗಳನ್ನು ಮರೆತಳು ಎಂದು ನೀವು ಅನ್ನಬಹುದು. ಆದರೆ ನನ್ನ ವಯಸ್ಸು ಚಿಕ್ಕದು. ಜೀವನದ ತುಂಬ ಇಲ್ಲಿಯೇ ಇರಬೇಕಾಗುವುದೆಂಬ ಮಾತಿನ ಅರಿವು ನನ್ನಲ್ಲಿ ಮೂಡಿತು. ಹೊಸ ಮೊದಲಗಿತ್ತಿ, ಅತ್ತೆಯ ಮನೆಗೆ ಹೋದ ಬಳಿಕ "ನಾನಿಲ್ಲಿ ಎರಡು ದಿನಗಳ ಸಲುವಾಗಿ ಬಂದಿಲ್ಲ. ಸಾಯುವವರೆಗೆ ಇಲ್ಲಿಯೇ ಇರಲು ಬಂದಿದ್ದೇನೆ,'' ಎಂದು ತಿಳಿಯುವಳು. ಅದೇ ಸ್ಥಿತಿ ನನ್ನದಾಗಿತ್ತು.

೨

ಒಂದೇ ಸ್ಥಿತಿಯಲಿ ಮನುಜ
ಬಾಳುವುದು ಕಠಿಣ.
ಬೇರೆಯಾಗುವುದೊಳಿತು ಈಗ
ಬದುಕಿನ ಬಣ್ಣ.

ಖಾನಮ್ ಸಾಕಿದ ಸೂಳೆಯರಿಗೆ ಹಾಡು ನರ್ತನವನ್ನಷ್ಟೇ ಕಲಿಸುತ್ತಿರಲಿಲ್ಲ. ಓದು ಬರಹವನ್ನೂ ಕಲಿಸಲಾಗುತ್ತಿತ್ತು. ಅದಕ್ಕಾಗಿ ಪ್ರತ್ಯೇಕ ಒಂದು ಶಾಲೆಯಿತ್ತು. ಮೌಲ್ವಿ ಸಾಹೇಬರು ಓದು ಬರಹ ಕಲಿಸಲು ನೌಕರಿಯಿದ್ದರು. ಎಲ್ಲರಂತೆ ನನ್ನನ್ನೂ ಶಾಲೆಗೆ ಕಳಿಸಿದರು. ಮೌಲ್ವಿ ಸಾಹೇಬರು ಬಹಳ ಪ್ರೀತಿಯಿಂದ ನನ್ನನ್ನು ಓದಿಸಿದರು. ಉತ್ತಮ ಅಭಿರುಚಿಯ ಮೌಲ್ವಿ ಸಾಹೇಬರಿಗೂ ಬುವಾಹುಸೇನಿಗೂ ಯಾವುದೋ ಕಾಲದಿಂದ ಸಂಬಂಧ ಬೆಳೆದು ಬಂದಿತ್ತು. ಇಂದಿಗೂ ಅವರು ಉಳಿಸಿಕೊಂಡು ಬಂದಿದ್ದಾರೆ. ಬುವಾಹುಸೇನಿಯೂ ಅವರನ್ನು ಇಹಪರದ ಗಂಡನೆಂದೇ ಭಾವಿಸಿದ್ದಳು.

ನನ್ನ ಪಾಲನೆಯ ಹೊಣೆಯನ್ನು ಬುವಾ

ಹುಸೇನಿ ವಹಿಸಿಕೊಂಡ ವಿಷಯ ನಿಮಗೆ ಗೊತ್ತಿದೆ. ಆದುದರಿಂದ ಮೌಲ್ವಿ ಸಾಹೇಬರು ವಿಶೇಷವಾಗಿ ನನ್ನ ಬಗ್ಗೆ ಲಕ್ಷ್ಯ ವಹಿಸಿದ್ದರು. ಏಳೆಂಟು ವರುಷ ಅವರಲ್ಲಿ ನನ್ನ ಅಭ್ಯಾಸ ವಾಯಿತು. ಕಾವ್ಯಾಭಿರುಚಿಯ ಪ್ರಾರಂಭ ಮತ್ತು ಬೆಳವಣಿಗೆಯ ಬಗ್ಗೆ ನಿಮಗೆ ಚೆನ್ನಾಗಿ ಗೊತ್ತಿದೆ. ಅದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ.

ಶಾಲೆಯಲ್ಲಿ ನನ್ನನ್ನು ಕೂಡಿಸಿ ಮೂವರು ಹುಡುಗಿಯರಿದ್ದೆವು. ಒಬ್ಬ ಹುಡುಗನಿದ್ದ. ಗೌಹರ್ ಮಿರ್ಜಾ ಎಂದು ಅವನ ಹೆಸರು. ಬಹಳ ತುಂಟ. ಹೇಳಿ ಮಾಡಿಸಿದ ಕೆಟ್ಟ ಸ್ವಭಾವದವ. ಎಲ್ಲ ಹುಡುಗಿಯರನ್ನೂ ಗೋಳಾಡಿಸುತ್ತಿದ್ದ. ಗೌಹರ್ ಮಿರ್ಜಾ ಮತ್ತು ನನ್ನ ವಯಸ್ಸಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಅವನು ನನಗಿಂತ ಒಂದೆರಡು ವರ್ಷ ದೊಡ್ಡವನಿರಬಹುದು. ನಾನಾಗ ಹದಿಮೂರು ವರುಷದವಳಿದ್ದೆ. ಗೌಹರ್ ಮಿರ್ಜಾ ಹದಿನಾಲ್ಕು ಅಥವಾ ಹದಿನೈದು ವರುಷದವನಿರಬಹುದು.

ಮಿರ್ಜಾ ರುಸ್ವಾ ಸಾಹೇಬ್, ನನಗೆ ತಿಳಿದಂತೆ, ತನ್ನನ್ನು ಯಾರಾದರೂ ಪ್ರೀತಿಸಲಿ ಎಂಬ ಇಚ್ಛೆಯು ಕಾಲ ಪ್ರತಿಯೊಬ್ಬ ಹೆಂಗಸಿನ ಜೀವನದಲ್ಲಿ ಬರುತ್ತದೆ. ಆ ಇಚ್ಛೆ ಕೇವಲ ಕೆಲವೇ ದಿನದ್ದೆಂದು ಭಾವಿಸಬೇಡಿರಿ. ಯೌವನದ ಪ್ರಾರಂಭಕ್ಕೆ ಇಚ್ಛೆ ಉಂಟಾಗಿ, ವಯಸ್ಸಿನ ಜೊತೆಗೆ ಅದು ಬೆಳೆಯುತ್ತ ಹೋಗುತ್ತದೆ. ವಯಸ್ಸು ಹೆಚ್ಚಾದಂತೆ, ಆ ಇಚ್ಛೆಯೂ ಹೆಚ್ಚಾಗುತ್ತದೆ.

ಖಾನಮ್ ಜಾನಳ ಮಗಳು, ಬಿಸ್ಮಿಲ್ಲಾಳ ಹೆಣ್ಣು ಮಾಡುವ ಸಮಾರಂಭ ನೋಡಿದೆ. ಖುರ್ಶೀದ್ ಮತ್ತು ಅಮೀರ್ ಜಾನ್‌ಳ (ಉಳಿದ ಸೂಳೆಯರು) ಕಾರ್ಯಗಳನ್ನು ಕಂಡೆ. ಇದರಿಂದ ನನ್ನ ಮನಸ್ಸಿನಲ್ಲಿ ಒಂದು ವಿಶಿಷ್ಟ ಬಗೆಯ ಆಸೆ ಮೂಡಿ ನಿಂತಿತು. ಒಂದು ವಿಶಿಷ್ಟ ಸಂಪ್ರದಾಯವನ್ನು ಆಚರಿಸಿದ ಬಳಿಕ (ಅದರ ಸಂಪೂರ್ಣ ತಿಳುವಳಿಕೆ ನನಗಿರಲಿಲ್ಲ) ಬಿಸ್ಮಿಲ್ಲಾಳು ಬಿಸ್ಮಿಲ್ಲಾ ಜಾನ್ ಆದಳು. ಖುರ್ಶೀದ ಖುರ್ಶೀದ್ ಜಾನ್ ಆದಳು. ನಿರ್ಭೀತಿಯ ಸನದು ಅವರಿಗೆ ಸಿಕ್ಕಿತು. ಅವರು ಗಂಡಸರೊಂದಿಗೆ ನಿಸ್ಸಂಕೋಚವಾಗಿ ವಿನೋದ ಮಾಡತೊಡಗಿದ್ದರು. ಅವರಿಗೆ ಬೇರೆ ಬೇರೆ ಶೃಂಗರಿಸಿದ ಕೋಣೆಗಳನ್ನು ಕೊಟ್ಟಿದ್ದರು.

ಈಗ ನನ್ನ ವಯಸ್ಸು ಹದಿನಾಲ್ಕು ವರುಷ. ಮೊದ ಮೊದಲು ನನಗೆ ಕನ್ನಡಿ ನೋಡಿಕೊಳ್ಳುವುದರಲ್ಲಿ ಆಸಕ್ತಿಯುಂಟಾಯಿತು. ಬುವಾ ಹುಸೇನಿ ಹೊರಗೆ ಹೋದ ಕೂಡಲೇ ನಾನು ಪೆಟ್ಟಿಗೆಯಿಂದ ಕನ್ನಡಿ ತೆಗೆದು ಮುಖಕ್ಕೆ ಹಿಡಿದುಕೊಳ್ಳುತ್ತಿದ್ದೆ. ಇನ್ನುಳಿದ ಸೂಳೆಯರೊಡನೆ ಹೋಲಿಸುತ್ತಿದ್ದೆ. ಇನ್ನುಳಿದವರಿಗಿಂತ ನಾನೇ ಚೆಲುವೆಯೆಂದು ಭಾವಿಸುತ್ತಿದ್ದೆ. ಆದರೆ ನಿಜವಾಗಿ ಹಾಗಿರಲಿಲ್ಲ.

ಮಿರ್ಜಾಸಾಹೇಬ್, ಈ ಕಾಲದಲ್ಲಿ ಇಂಥ ಪರಿಸ್ಥಿತಿಯಲ್ಲಿ ಗೌಹರ್ ಮಿರ್ಜಾ ನನ್ನ ಪಾಲಿಗೆ ಏನಾಗಿ ಕಾಣುತ್ತಿರಬಹುದೆಂದು ನೀವು ಊಹಿಸಿ ತಿಳಿಯಬಲ್ಲಿರಿ. ಅವನು ಪ್ರೀತಿಯ ಮಾತಾಡುತ್ತಿದ್ದ. ನಾನವನನ್ನು ರೇಗಿಸುತ್ತಿದ್ದೆ, ಅವನು ನನ್ನನ್ನು ಪೀಡಿಸುತ್ತಿದ್ದ. ಈ ದಿನಗಳಲ್ಲಿಯೇ ಒಂದು ದಿನ ರಾತ್ರಿ ಯಾರಿಗೂ ಗೊತ್ತಿರದಂತೆ ಗೌಹರ್ ಮಿರ್ಜಾ ಕೆಲಸ ಮುಗಿಸಿ ಬಿಟ್ಟ. ಆದರೆ ಗೊತ್ತಿರದ ನಾನು ಹೌಹಾರಿದೆ. ಗಂಟಲಿನಿಂದ ಧ್ವನಿ ಹೊರಡಲಿಲ್ಲ. ಪ್ರಜ್ಞೆ ತಪ್ಪಿತ್ತು.

ಬೆಳಿಗ್ಗೆ ಕಳ್ಳನನ್ನು ಹುಡುಕಿಸಿದರು. ಅವನೆಲ್ಲಿಂದ ಸಿಗಬೇಕು? ಎಲ್ಲರೂ ನನ್ನನ್ನು ಕೇಳಿ ಕೇಳಿ ದಣಿದರು. ಆದರೆ ನನಗೆ ಗೊತ್ತಿದ್ದರಲ್ಲವೇ ಹೇಳುವುದು? ಈ ಪ್ರಕರಣವನ್ನು ಏನೂ ನಡೆದಿಲ್ಲವೆಂಬಂತೆ ಖಾನಮ್ ಅಲ್ಲಿಗೇ ಮುಚ್ಚಿ ಬಿಟ್ಟಳು. ಎಲ್ಲವೂ ಮೊದಲಿನಂತೆಯೇ ಇದೆಯೆಂದು ತೋರಿಸಲು ಆಕೆ ಮಾಡಿದ ಉಪಾಯಗಳು ಮತ್ತಾರಿಗೂ ಸಾಧ್ಯವಿಲ್ಲ.

ಈಗ ಕಣ್ಣಿದ್ದೂ ಕುರುಡನಂತಿರುವ ಒಬ್ಬ ಶ್ರೀಮಂತನನ್ನು ಹುಡುಕತೊಡಗಿದರು. ಕಡೆಗೆ ಒಂದು ಹಕ್ಕಿ ಬಲೆಗೆ ಬಿತ್ತು. ಐದು ಸಾವಿ

ರಕ್ಕೆ ಒಪ್ಪಂದವಾಯಿತು. ನನ್ನನ್ನು ಅವನ ವಶಕ್ಕೆ ಕೊಟ್ಟರು. ಆರು ತಿಂಗಳ ವರೆಗೆ ಅವರು ಲಖ್ನೋದಲ್ಲಿದ್ದರು. ತಿಂಗಳಿಗೆ ನೂರು ರೂಪಾಯಿಗಳನ್ನು ಕೊಡುತ್ತಿದ್ದರು. ನಾನು ಆಸೆ ಮಾಡಿ ಬೇಡಿ ಪಡೆದದ್ದು ಲೆಕ್ಕವಿಲ್ಲ. ಮುಂಚ್ಚು ಮರೆಯಿಂದ ನನಗೆ ಕೊಟ್ಟಿದ್ದೆಲ್ಲ ಬುವಾಹುಸೇನಿಯಲ್ಲಿರುತ್ತಿತ್ತು. ಖಾನಮ್‌ಳಿಗೆ ಇದು ಗೊತ್ತಿರಲಿಲ್ಲ. ನಾನೀಗ ಸ್ವತಂತ್ರಳಾಗಿದ್ದೆ. ಇಬ್ಬರು ದಾಸಿಯರು, ಇಬ್ಬರು ಸೇವಕರು ನೇಮಕರಾದರು. ಬಾಗಿಲ ಹತ್ತಿರದ ಕೋಣೆಯನ್ನು ನನಗಾಗಿ ಸಿದ್ಧಗೊಳಿಸಿದರು. ನಾಲ್ಕೆಂಟು ಜನ ರಸಿಕ ನವಾಬರು ನನ್ನಲ್ಲಿಗೂ ಬಂದು ಕುಳಿತುಕೊಳ್ಳ ಹತ್ತಿದರು.

ಈ ಹೂವನ್ನು ಮೊದಲಿಗೆ ಮೂಸಿದವ ಗೌಹರ್ ಮಿರ್ಜಾ. ಆತ ಎಲ್ಲ ಕಾಲಕ್ಕೂ ನನ್ನಲ್ಲಿಗೆ ಬರುತ್ತಿದ್ದ. ಖಾನಮ್ ಮತ್ತು ಬುವಾಹುಸೇನಿಯವರು ಅವನನ್ನು ಕಂಡರೆ ಉರಿಯುತ್ತಿದ್ದರು. ಆದರೆ ಅವನಲ್ಲಿ ನನಗೆ ಪ್ರೀತಿ ಇತ್ತು. ಆದ ಕಾರಣ ಯಾರೂ ಅವನನ್ನು ತಡೆಯಲು ಶಕ್ತರಾಗಿರಲಿಲ್ಲ.

ಯಾವನೋ ಒಬ್ಬನನ್ನು ತಮ್ಮವನನ್ನಾಗಿ ಮಾಡಿಕೊಳ್ಳುವುದು ಎಲ್ಲ ಸೂಳೆಯರ ನೇಮವಾಗಿದೆ. ಅಂಥ ವ್ಯಕ್ತಿಯಿಂದ ಬಹಳ ಲಾಭವಾಗುತ್ತದೆ. ಒಂದನೆಯದಾಗಿ ಯಾರೂ ದಿಕ್ಕಿಲ್ಲದಾಗ ಅವನಿಂದಲೇ ರಮಿಸಿಕೊಂಡು ಸಂತೋಷಪಡಬಹುದು. ಬೇಟೆಗಳನ್ನು ಹಿಡಿದು ತರುವರು. ಸಂಗೀತ ನರ್ತನ ನಡೆದಲ್ಲಿ ಪ್ರೇಕ್ಷಕರು ಈ ಪುರುಷರ ಪ್ರಭಾವಕ್ಕೊಳಗಾಗಿ ಸುಮ್ಮನೆ ಕೊಡುತ್ತಾರೆ. ಅಲ್ಲದೆ ಈ ಪುರುಷರು ತಮ್ಮ ಸೂಳೆಯ ಬಗ್ಗೆ ಏನು ಮಾಡಲೂ ಸಿದ್ಧರು. ಬೇನೆ ಬಿದ್ದರೆ ಶಕ್ತಿ ಮೀರಿ ಆರೈಕೆ ಮಾಡುವರು. ನಾನಾ ರೀತಿಯಿಂದ ವಿರಾಮವೊದಗಿಸುವರು. ರಾತ್ರಿಯಿಡೀ ಕಾಲೊತ್ತುವರು!

ಅಮೀರ್‌ಜಾನ್‌ಳು ಕಾಜಿಮ್ ಅಲಿಯವರಿಗೆ ಜೀವ ಕೊಡುತ್ತಿದ್ದಳು. ಖುರ್ಶೀದಳಿಗೆ ಪ್ಯಾರೇಸಾಹೇಬರೆಂದರೆ ಪಂಚಪ್ರಾಣ. ಬೇರೆಯವರ ಸುದ್ದಿಯೇಕೆ? ಖಾನಮ್ ಏನು ಕಡಿಮೆಯೇ? ಐವತ್ತು ಐವತ್ತೈದು ವರ್ಷ ವಯಸ್ಸಿನಲ್ಲಿ ಅವಳು ಮೀರ್ ಅಪ್‌ಲಾದ ಅಲಿಯವರೆಂದರೆ ಪ್ರಾಣ ಬಿಡುತ್ತಿದ್ದಳು! ಮೀರ್ ಸಾಹೇಬರ ವಯಸ್ಸು ಹದಿನೆಂಟು ಹತ್ತೊಂಬತ್ತು ಇರಬೇಕು. ರೂಪುಳ್ಳವರು, ಯೌವನಸ್ಥರು ಒಳ್ಳೊಳ್ಳೇ ತರುಣಿಯರ ದೃಷ್ಟಿಗಳು ಅವರ ಮೇಲೆ ಬೀಳುತ್ತಿದ್ದುವು. ಆದರೆ ಖಾನಮಳ ಪ್ರಭಾವ! ಯಾರ ಧೈರ್ಯ, ಅವರೊಡನೆ ಮಾತನಾಡುವುದು?

ಗೌಹರ್ ಮಿರ್ಜಾ ನನಗೆ ಬೇಕಾದವನಿದ್ದ. ಆದರೆ ಅವನ ಪ್ರೀತಿ ಬೇರೆ ರೀತಿಯದಾಗಿತ್ತು. ನನ್ನ ಮನಸ್ಸು ಯಾವುದನ್ನು ಬಯಸಿ ಹುಡುಕುತ್ತಿತ್ತೋ ಅದರ ಕೊರತೆಯಿತ್ತು. ಗೌಹರ ಮಿರ್ಜಾನ ಪ್ರೀತಿಯಲ್ಲಿ ಧೈರ್ಯ, ಸಾಹಸ, ಗಂಡಸುತನಗಳು ಇರಲಿಲ್ಲ. ನನ್ನ ಆಸೆ ಆಕಾಂಕ್ಷೆಗಳನ್ನು ಪೂರೈಸುವ, ಮನದೆರೆದು ಹಣ ವೆಚ್ಚ ಮಾಡಿ ತಿನ್ನಿಸುವ, ಉಣ್ಣಿಸುವ ಒಬ್ಬ ಪ್ರಿಯನಿಗಾಗಿ ನನ್ನ ಮನಸ್ಸು ತವಕಗೊಳ್ಳುತ್ತಿತ್ತು. ನವಾಬ್ ಸುಲ್ತಾನ ಸಾಹೇಬರು (ಇದೇ ಅವರ ಹೆಸರೆಂದು ನೌಕರ ಹೇಳಿದ್ದ) ಆ ಸ್ಥಳವನ್ನು ತುಸು ಮಟ್ಟಿಗೆ ತುಂಬಿದ್ದರು.

ನವಾಬ್ ಘುಜಾಅತ್ ಅಲೀಖಾನರ ಮದುವೆಯಲ್ಲಿ ನನ್ನ ಮೊದಲ ಮುಜರಾ (ನರ್ತನ ಕಾರ್ಯಕ್ರಮ) ನಡೆದಾಗ ಸುಲ್ತಾನ ಸಾಹೇಬರು ನನ್ನನ್ನು ನೋಡಿ ಮೋಹಿಸಿದ್ದರು. ಮಾರನೆಯ ದಿನ ನವಾಬ ಸಾಹೇಬರು ಬಂದು ಬುವಾಹುಸೇನಿಯೊಂದಿಗೆ ಮಾತನಾಡಿದರು. ಒತ್ತೆಯ ನಿರ್ಣಯವಾಗಿ ಕೋಣೆಯಲ್ಲಿ ಏಕಾಂತಕ್ಕೆ ಅಣಿಗೊಳಿಸಲಾಯಿತು. ಸುಲ್ತಾನ ಸಾಹೇಬರು ನನ್ನನ್ನು ಖಾಯಂ ಆಗಿ ಇರಿಸಿಕೊಳ್ಳಲಿಲ್ಲ ಎಂಬುದು ಆ ಮೇಲೆ ತಿಳಿಯಿತು. ಯಾವಾಗಾದರೂ ರಾತ್ರಿ ಒಂದೆರಡು ತಾಸುಗಳ ವರೆಗೆ ಬರುವರೆಂದು ಮಾತಾಗಿತ್ತು. ವಯಸ್ಸು ಹದಿನೆಂಟು ಹತ್ತೊಂಬತ್ತು ಇರಬಹುದು. ಬಹಳ ಕಡಿಮೆ ಮಾತಿನ ಮುಗ್ಧ ಸ್ವಭಾವದವರಾಗಿದ್ದರು.

ಕವಿ ಮನೆತನದ ಅವರು ಮಾತು ಮಾತಿಗೆ ಸ್ವರಚಿತ ಪ್ರೇಮದ ಕವನಗಳನ್ನು ಹೇಳುತ್ತಿದ್ದರು. ಅವರು ಒಂದು ರೀತಿಯ ಕಟ್ಟುನಿಟ್ಟಿನವರಾಗಿದ್ದರು. ತಾವು ಬಂದಾಗ ಇನ್ನಾರೂ ಬರಬಾರದೆಂಬುದನ್ನು ಅವರು ಮೊದಲೆಯೇ ಹೇಳಿದ್ದರು. ಆದರೆ ಮೊದಲ ರಾತ್ರಿಯೇ ಖಾನ್ ಸಾಹೇಬ್ ಎಲ್ಲಿಂದ ಉಚ್ಚಿಬಿದ್ದನೋ ದೇವರೇ ಬಲ್ಲ. ಅವನು ಬಂದು ನಾನೇ ಬೇಕೆಂದು ಹಟ ಹಿಡಿದ. ಆ ಮೇಲೆ ಅವನನ್ನು ಓಡಿಸಿದೆವಾದರೂ ಆಟ ಕೆಟ್ಟು ಹೋಯಿತು.

ಆ ದಿನದಿಂದ ಸುಲ್ತಾನ ಸಾಹೇಬರು ಎಂದೂ ಖಾನಮ್ಮಳ ಮನೆಗೆ ಬರಲಿಲ್ಲ. ವಾರದಲ್ಲಿ ಎರಡು ಮೂರು ಸಲ ನವಾಬ್ ಗಂಜದಲ್ಲಿರುವ ನವಾಬ ಬನ್ನೇಸಾಹೇಬರ ಮನೆಗೆ ನನ್ನನ್ನು ಕರೆಸಿಕೊಳ್ಳುತ್ತಿದ್ದರು. ಒಂದು ರೀತಿಯ ಮೋಹಕವಾದ ಸೊಗಸಾದ ಗೋಷ್ಠಿ ಇರುತ್ತಿತ್ತು. ಒಮ್ಮೊಮ್ಮೆ ಕಾವ್ಯದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಮತ್ತೊಮ್ಮೆ ನವಾಬ್ ಬನ್ನೇಸಾಹೇಬರು ತಬಲಾ ಬಾರಿಸುತ್ತಿದ್ದರು. ನಾನು ಹಾಡುತ್ತಿದ್ದೆ. ಸುಲ್ತಾನ ಸಾಹೇಬರೂ ಸ್ವತಃ ಹಾಡುತ್ತಿದ್ದರು. ತಾಳ ಲಯದ ಪರಿಚಯ ಅವರಿಗೆ ಅಷ್ಟೇನೂ ಇರಲಿಲ್ಲ. ಆದರೆ ತಮ್ಮ ಗಝಲನ್ನು ತಾವು ಚೆನ್ನಾಗಿ ಹಾಡುತ್ತಿದ್ದರು.

ಪ್ರಣಯ ಪಾಷದ ರುಚಿಯನೇನೆಂದು
ಹೇಳುವುದು ಕೇಳಬೇಡ
ಈ ಗೋಳಿನಾ ನೆನಪು ಸ್ವರ್ಗದಲ್ಲಿಯೂ
ಬಿಡದೆ ಬಂತು ನೋಡ

ನಿಜವಾಗಿಯೂ ನನಗೆ ಸುಲ್ತಾನರಲ್ಲಿ ಮತ್ತು ಸುಲ್ತಾನರಿಗೆ ನನ್ನಲ್ಲಿ ಪ್ರೀತಿಯಿತ್ತು.

ಇಬ್ಬರ ಪ್ರಭಾವ, ಸದಭಿರುಚಿ ಒಂದೇಯಾಗಿದ್ದವು. ಜೀವನದ ತುಂಬ ನಾವಿಬ್ಬರೂ ಕೂಡಿ ಇದ್ದರೂ ವ್ಯಥೆಯಾಗುತ್ತಿರಲಿಲ್ಲ. ಸುಲ್ತಾನರಿಗೆ ಕಾವ್ಯಾಭಿರುಚಿ ಬಲವಾಗಿತ್ತು. ನನಗೂ ಚಿಕ್ಕಂದಿನಿಂದ ಈ ಹವ್ಯಾಸ ಅಂಟಿಕೊಂಡಿತ್ತು. ಸುಲ್ತಾನ್‌ಸಾಹೇಬರಲ್ಲಿ ನನ್ನ ಮನಸ್ಸು ಮೋಹಗೊಂಡಂತೆ ಮತ್ತಾರಲ್ಲಿಯೂ ಮೋಹಗೊಳ್ಳಲಿಲ್ಲ. ಅವರೂ ನನ್ನಲ್ಲಿ ಗಾಢ ಪ್ರೇಮವನ್ನಿಟ್ಟಿದ್ದರು. ಮಾತು ಮಾತಿಗೆ ಪದ್ಯ ಓದುತ್ತಿದ್ದರು. ನಾನದಕ್ಕೆ ಕವನದಲ್ಲಿಯೇ ಉತ್ತರ ಕೊಡುತ್ತಿದ್ದೆ. ಆದರೆ ಈ ಸುಖದಾಯಕ ಗೋಷ್ಠಿಯನ್ನು ಕಂಡು ಆಗಸ ಕರುಬಿತು. ಎಷ್ಟಾದರೂ ಅದರ ಸ್ವಭಾವ ಒಡಕು ಹುಟ್ಟಿಸುವಂತಹುದು. ಸರಿ, ಈ ಸರಸ ಗೋಷ್ಠಿಗೆ ತೀವ್ರವೇ ಕೊನೆ ಬಂತು.

ಚುಕ್ಕಿ ಚಂದಪ್ಪರಾ ಅಗಲಿಕೆಯು
ಕಂಡಿಂತು ನುಡಿಯುವುದು ಮನವು
ಅಯ್ಯೋ ಎಂಥ ಸುಖದ ಇರುಳು
ಗೋಷ್ಠಿಗಳೆಲ್ಲ ಏಳು ಪೇರಾಡುವು.

೩

ಅದೇ ಕಾಲಕ್ಕೆ ನಾನು ನವಾಬ್ ಜಾಫರ್ ಅಲಿಖಾನ ಸಾಹೇಬರ ಸೇವಕಳಾದೆ.* ಅವರ ವಯಸ್ಸು ಎಪ್ಪತ್ತಕ್ಕೆ ಸಮೀಪವಿರಬೇಕು. ಬಾಯಲ್ಲಿ ಒಂದೂ ಹಲ್ಲಿರಲಿಲ್ಲ. ತಲೆ ಪೂರ್ಣ ಬೆಳ್ಳಗೆ, ಬೆನ್ನು ಬಾಗಿತ್ತು. ಆದರೂ ಅವರಿನ್ನೂ ಪ್ರೀತಿ ಮಾಡಲು ಶಕ್ತರೆಂದು ತಿಳಿದಿದ್ದರು.

ಈ ವಯಸ್ಸಿನಲ್ಲಿ ಸೂಳೆಯರನ್ನಿಟ್ಟುಕೊಳ್ಳುವ ಅವಶ್ಯಕತೆಯಾದರೂ ಏನಿತ್ತೆಂದು ನೀವು ಕೇಳಬಹುದು. ಕೇಳಿರಿ ಮಿರ್ಜಾಸಾಹೇಬರೇ, ಇದು ಆ ಕಾಲದ 'ಫ್ಯಾಶನ್' ಆಗಿತ್ತು. ಸೂಳೆಯನ್ನಿಟ್ಟುಕೊಳ್ಳಲಾರದ ಶ್ರೀಮಂತ ನವಾಬ ಒಬ್ಬನೂ ಸಿಗುತ್ತಿರಲಿಲ್ಲ. ನವಾಬಸಾಹೇಬರ ಕಚೇರಿಯಲ್ಲಿ ಘನತೆ ಗೌರವಗಳನ್ನು ಸಾರುವ ಅನೇಕ ವಸ್ತುಗಳು. ಅಲ್ಲಿ ಸಭೆ ನಡೆದಾಗ ನವಾಬರಿಗೆ ಒಳ್ಳೆಯದಾಗಲೆಂದು ಪ್ರಾರ್ಥಿಸಲು ಒಬ್ಬ ವೇಶ್ಯೆ ಬೇಡವೆ? ಆ ಕೆಲಸಕ್ಕೆ ನಾನು ನೇಮಿತಳಾದೆ. ತಿಂಗಳಿಗೆ ಎಪ್ಪತ್ತೈದು ರೂಪಾಯಿ. ಎರಡು ತಾಸುಗಳವರೆಗೆ ಅವರ ಸಹವಾಸದಲ್ಲಿದ್ದು ಬರುತ್ತಿದ್ದೆ.

ಒಂದು ದಿನ ಒಬ್ಬ ಸಾಹೇಬರ ಆಗಮನವಾಯಿತು. ಪಟ್ಟಣದ ರಸಿಕರಂತೆ ಕಾಣುತ್ತಿದ್ದರು. ಕೇಳದೇನೆ ಅವರು ನೇರವಾಗಿ ನನ್ನ ಕೋಣೆಗೆ ತೂರಿ ಬಂದು ಜಮಖಾನದ ತುದಿಗೆ ಕುಳಿತರು. ಆಗ ಕೋಣೆಯಲ್ಲಿ ನಾನೊಬ್ಬಳೇ ಕುಳಿತಿದ್ದೆ. ಬುವಾ ಹುಸೇನಿಯನ್ನು ಕೂಗಿ ಕರೆದೆ. ಅವಳು ಬಂದಳು. ಅವಳು ಬಂದ ಕೂಡಲೇ ಅವರು ಎದ್ದು ನಿಂತು ಅತಿ ಸಲುಗೆಯಿಂದ ಬುವಾ ಹುಸೇನಿಯ ಕೈಹಿಡಿದು ಪಕ್ಕಕ್ಕೆ ಕರೆದೊಯ್ದು, ಏನೇನೋ ಹೇಳಿದರು. ನನಗೆ ತುಸು ಕೇಳಿಸಿತು. ತುಸು ಕೇಳಿಸಲಿಲ್ಲ. ಆ ಬಳಿಕ ಬುವಾ ಹುಸೇನಿ ಖಾನಮ್‌ಳ ಹತ್ತಿರ ಹೋದಳು. ಅಂತು ಒತ್ತೆ ನಿರ್ಣಯವಾದ ಬಳಿಕ, ಆ ಸಾಹೇಬರು ಅಂದು ನನ್ನ ಕೋಣೆಯಲ್ಲಿಯೇ ಮಲಗಿದರು. ಇನ್ನೂ ಸ್ವಲ್ಪ ಹೊತ್ತಿರಬೇಕು. ಕೋಣೆಯ ಕೆಳಗೆ ಯಾರೋ ಬಾಗಿಲು ಬಡಿದಂತಾಯಿತು. ಅವರು ಕೂಡಲೇ ಎದ್ದು ಕುಳಿತರು. 'ನಾನೀಗ ಹೋಗುವೆ. ನಾಳೆ ರಾತ್ರಿ ಮತ್ತೆ ಬರುವೆ;' ಎಂದು ಹೋಗುವಾಗ ಐದು ಬಂಗಾರದ ನಾಣ್ಯಗಳನ್ನು, ಕೆಂಪು, ನೀಲಿ, ಬಿಳಿ ಮೂರು ಹರಳಿನ ಉಂಗುರಗಳನ್ನು ನನಗೆ ಕೊಟ್ಟರು. ಚಿಕ್ಕ ಪೆಟ್ಟಿಗೆ ತೆಗೆದು ಚೋರಖಾನೆಯಲ್ಲಿ ಬಂಗಾರದ ನಾಣ್ಯ ಮತ್ತು ಉಂಗುರಗಳನ್ನಿಟ್ಟೆ.

ಮರುದಿನ ರಾತ್ರಿ ಮತ್ತೆ ಅದೇ ಸಾಹೇಬ್ ಬಂದರು. ಆ ಸಾಹೇಬರ ಹೆಸರು ಫೈಜ್ ಅಲಿ ಎಂದು. ರಾತ್ರಿ ಒಂದು, ಒಂದೂವರೆ ಜಾವದ ಬಳಿಕ ಬರುತ್ತಿದ್ದರು. ಒಮ್ಮೊಮ್ಮೆ ಅರ್ಧ ರಾತ್ರಿಯಲ್ಲಿಯೇ ಎದ್ದು ಹೋಗುತ್ತಿದ್ದರು. ಒಮ್ಮೊಮ್ಮೆ ಬೆಳಗಾಗಲು ಒಂದು ಜಾವ

---

* ಖಾಯಂ ಇಟ್ಟುಕೊಳ್ಳುವುದಕ್ಕೆ ಸೇವಕ ವೃತ್ತಿ ವಹಿಸುವುದು ಎಂದರ್ಥ.

ಇರುವಾಗ ಹೋಗುತ್ತಿದ್ದರು. ಒಂದೆರಡು ತಿಂಗಳುಗಳಲ್ಲಿ ನಾನು, ಎಷ್ಟೋ ಸಲ ಬಾಗಿಲು ಬಡಿದ ಶಬ್ದ, ಇಲ್ಲವೆ ಸಿಳ್ಳಿನ ಧ್ವನಿ ಕೇಳಿದೆ. ಅದನ್ನು ಕೇಳಿದ ಕೂಡಲೇ ಫೈಜ್ ಅಲಿ ಎದ್ದು ಹೋಗುತ್ತಿದ್ದರು. ಅವರ ಸಂಬಂಧವಾದ ತಿಂಗಳೊಪ್ಪತ್ತಿನಲ್ಲಿಯೇ ನನ್ನ ಪೆಟ್ಟಿಗೆ, ಬಂಗಾರ ಮತ್ತು ವಜ್ರದ ಆಭರಣಗಳಿಂದ ತುಂಬಿ ಹೋಯಿತು. ವರಹ ಮತ್ತು ರೂಪಾಯಿಗಳಿಗೆ ಲೆಕ್ಕವಿರಲಿಲ್ಲ. ಖಾನಮ್ ಮತ್ತು ಬುವಾ ಹುಸೇನಿಯರಿಗೆ ತಿಳಿಯದಂತೆ ಮುಚ್ಚಿಟ್ಟ ಸುಮಾರು ಹನ್ನೆರಡು ಸಾವಿರ ಬೆಲೆ ಬಾಳುವ ವಸ್ತುಗಳು ಈಗ ನನ್ನಲ್ಲಿದ್ದವು.

ಎಂದಿನಂತೆ ಒಂದು ದಿನ ಫೈಜ್‌ಅಲಿ ರಾತ್ರಿ ಒಂದು ಜಾವದ ಬಳಿಕ ಬಂದರು. ಕೋಣೆಯಲ್ಲಿ ನಾವಿಬ್ಬರೇ. ಬಂದ ಕೂಡಲೇ 'ಇವತ್ತು ನಾನು ಊರು ಬಿಟ್ಟು ಹೋಗುತ್ತಿದ್ದೇನೆ. ನಾಡಿದ್ದು ಬರುವೆನು. ನೋಡು ಉಮ್‌ರಾವ್ ಜಾನ್ ನಾನು ನಿನಗೇನೇನೊ ಕೊಟ್ಟಿರುವೆನಲ್ಲ. ಅದನ್ನು ಯಾರಿಗೂ ತೋರಿಸಬೇಡ. ನಿನ್ನ ಕೆಲಸಕ್ಕೆ ಬಂದೀತು. ನಾನು ನಾಡಿದ್ದು ಖಂಡಿತ ಬರುವೆ. ಒಂದು ಮಾತು, ನೀನು ನನ್ನೊಡನೆ, ಕೆಲವು ದಿನ ಬೇರೆ ಕಡೆಗೆ ಹೋಗೋಣ, ಬರುವೆಯಾ? ಎಂದರು.

ಫೈಜ್‌ಅಲಿ ನನ್ನೊಡನೆ ನಡೆದುಕೊಂಡ ರೀತಿ ಅಸಾಧಾರಣವಾಗಿತ್ತು. ಇದಕ್ಕಾಗಿ ನಾನು ಸ್ವತಂತ್ರಳಾಗಿದ್ದರೆ ಅವರೊಡನೆ ಹೋಗಲು ನಿರಾಕರಿಸುತ್ತಿರಲಿಲ್ಲ. 'ಈ ಮನುಷ್ಯ ಪರ ಊರಿನಲ್ಲಿ ಇಷ್ಟು ಮಾಡಿರುವವನಾದರೆ, ಸ್ವಂತ ಊರಿನಲ್ಲಿ ಏನು ಮಾಡುವನೋ? ಬೇಕು– ಬೇಕಾದ್ದನ್ನು ಕೊಟ್ಟು ನನ್ನನ್ನು ತೃಪ್ತಿ ಪಡಿಸಬಹುದು'. ಆದರೆ ಖಾನಮ್‌ಳು ನನ್ನನ್ನು ಕಳಿಸಲು ಒಪ್ಪಲಿಲ್ಲ. ಬುವಾಹುಸೇನಿ ಈ ವಿಷಯವನು ತಿಳಿಸಿ ಹೋದ ಮೇಲೆ ಫೈಜ್ ಅಲಿಯ ಕಣ್ಣುಗಳಿಂದ ಬಳ ಬಳ ನೀರು ಸುರಿಯುವುದನ್ನು ನಾನು ನೋಡಿದೆ. ಅವರ ಸ್ಥಿತಿ ಕಂಡು ನನ್ನ ಕರುಣೆ ಉಕ್ಕಿ ಬಂತು, ಅವರೊಡನೆ ಹೋಗಬೇಕೆಂದು ಮನಸ್ಸಿನಲ್ಲಿ ಗಟ್ಟಿಮಾಡಿಕೊಂಡೆ.

ನಾನು– ನಿಮ್ಮೊಡನೆ ಬರುವೆ.

ಫೈಜ್ ಅಲಿ– ಬರುವೆ?

ನಾನು– ಹೌದು, ಅವರು ಅಪ್ಪಣೆ ಕೊಟ್ಟರೇನು, ಬಿಟ್ಟರೇನು, ನಾನು ಖಂಡಿತ ಬರುವೆ.?

ಫೈಜ್ ಅಲಿ– ಹೇಗೆ ಬರುವೆ?

ನಾನು–ಗುಪ್ತವಾಗಿ,

ಫೈಜ್ ಅಲಿ– ಒಳ್ಳೇದು ನಾಡಿದ್ದು ರಾತ್ರಿ ನಾನು ಬರುವೆ, ಇನ್ನೂ ರಾತ್ರಿ ಇರುವಾಗ ಇಲ್ಲಿಂದ ನಿನ್ನನ್ನು ಕರೆದೊಯ್ಯುವೆ. ನೋಡು ಮೋಸ ಮಾಡಬಾರದು. ಹಾಗೆ ಮಾಡಿದರೆ ಒಳ್ಳೆಯದಾಗಲಿಕ್ಕಿಲ್ಲ.

ಅಂದು ರಾತ್ರಿ ಮಾತು ಕೊಟ್ಟಂತೆ ಫೈಜ್

ಅಲಿ ಬಂದರು; 'ನಡೀ, ಹೋಗೋಣ' ಎಂದರು. ನಾನು ಎದ್ದೆ. ಎರಡು ಜೋಡು ಬಟ್ಟೆಗಳನ್ನು ಹಗಲಿನಲ್ಲಿಯೇ ಗಂಟುಕಟ್ಟಿ ಇಟ್ಟಿದ್ದೆ. ಆಭರಣದ ಪೆಟ್ಟಿಗೆಯನ್ನು ಮೊದಲೇ ಅಲ್ಲಿಂದ ಬೇರೆ ಕಡೆಗೆ ಸಾಗಿಸಿದ್ದೆ. ಕಂಕುಳಲ್ಲಿ ಗಂಟನ್ನಿಟ್ಟುಕೊಂಡು ಅಕ್ಬರೀ ದರ್ವಾಜಾದ ಕಡೆಗೆ ದಾರಿ ಹಿಡಿದೆ. ಬಾಜಾರದಲ್ಲಿ ಆಗಲೇ ಎತ್ತಿನ ಬಂಡಿ ಸಿದ್ಧವಾಗಿ ನಿಂತಿತ್ತು. ನಾವಿಬ್ಬರೂ ಬಂಡಿಯಲ್ಲಿ ಕುಳಿತೆವು. ಬಂಡಿ ಸಾಗಿತು. ಹಿಂಡೋಲಿ ನಾಕಾದಿಂದ ಸ್ವಲ್ಪ ಮುಂದೆ ಫೈಜ್ ಅಲಿಯವರ ಕಾಸ್ದಾರ (ಸಾಯಿಸ್) ಕುದುರೆಯೊಡನೆ ನಿಂತಿದ್ದ. ಅವನೂ ಬಂಡಿಯ ಜೊತೆಗೆ ಬಂದ. ಬೆಳಗಾಗುವ ಹೊತ್ತಿಗೆ ಮೋಹನಲಾಲ್‌ಗಂಜ್ ತಲುಪಿದೆವು. ಅಲ್ಲಿಯ ಛತ್ರದಲ್ಲಿ ಉಳಿದುಕೊಂಡೆವು.

ಮಾರುದಿನ ಮೋಹನ್‌ಲಾಲ್ ಗಂಜ್‌ನಿಂದ ನಸುಕಿನಲ್ಲಿಯೇ ಹೊರಟೆವು. ದಾರಿ ಕೆಟ್ಟದಿರುವ ಬಗ್ಗೆ ಕೇಳಿದ್ದೆವು. ಮೂರು ತಾಸು ಹೊತ್ತೇರಿರಬಹುದು. ಈ ದಾರಿಯಲ್ಲಿ ನಮ್ಮನ್ನು ಬಿಟ್ಟು ಮತ್ತೆ ಯಾವ ಪ್ರಯಾಣಿಕರೂ ಕಾಣಿಸಲಿಲ್ಲ. ಸುತ್ತು ನಾಲ್ಕು ಕಡೆ ಭಯಾನಕ ವಾತಾವರಣ. ಹಿಂದೆ ಕುದುರೆಯ ಮೇಲೆ ಬರುತ್ತಿದ್ದ ಫೈಜ್ ಅಲಿ ತಮ್ಮ ಕುದುರೆಯನ್ನು ಮುಂದೆ ಓಡಿಸಿದರು. ನಾನು ಕೂಗಿ ನಿಲ್ಲಿಸಬೇಕೆನ್ನುವಷ್ಟರಲ್ಲಿ ದೂರ ಹೋಗಿ ಬಿಟ್ಟಿದ್ದರು. ತುಸು ಹೊತ್ತಿನಲ್ಲಿ ಕಣ್ಣಿಗೆ ಕಾಣದಷ್ಟು ದೂರ ಹೋಗಿದ್ದರು.

ನಮ್ಮ ಬಂಡಿ ಮೆಲ್ಲನೆ ಸಾಗಿತ್ತು. ಗಾಡಿಯವ ಬಂಡಿ ಹೊಡೆಯುತ್ತಿದ್ದ. ಕಾಸ್ದಾರ ಕುದುರೆಯ ಹಿಂದೆ ಓಡಿಹೋಗಿದ್ದ. ಈಗ ನಾನು, ಬಂಡಿಯವ ಇಬ್ಬರೇ. ಇಷ್ಟರಲ್ಲಿ ಹತ್ತು ಹದಿನೈದು ಹಳ್ಳಿಗರು ಬಂಡಿಯ ಕಡೆಗೆ ಓಡಿ ಬರುವುದು ಕಂಡಿತು. ಒಬ್ಬ ಹಳ್ಳಿಯವ ಬಂಡಿಯ ಪರದೆಯನ್ನು ಹಿಂದಕ್ಕೆ ಒಗೆದು ನನ್ನನ್ನು ಬಂಡಿಯಿಂದಿಳಿಸಿದ. ಮೂವರು ನನನ್ನು ಮುತ್ತಿ ನಿಂತರು. ಇಷ್ಟರಲ್ಲಿ ಕುದುರೆಯ ಮೇಲೆ ಫೈಜ್ ಅಲಿ ಇದ್ದುದು ಕಂಡಿತು. ಅವರ ಹಿಂದೆ ಹತ್ತು ಹದಿನೈದು ಸವಾರರಿದ್ದರು. ಹಳ್ಳಿಗರಿಗೂ ಸವಾರರಿಗೂ ಕೈಗೆ ಕೈ ಹತ್ತಿತು. ಇಬ್ಬರು ಸವಾರರು ಕೆಳಗುರುಳಿದರು. ಮೂವರು ಹಳ್ಳಿಗರು ಗಾಯಗೊಂಡರು. ಹಳ್ಳಿಗರು ಓಡಿದರು. ಓಡುತ್ತ ಕೂಗಿ ಹೇಳಿದರು.

"ಇರಲಿ, ಇರಲಿ, ಎಲ್ಲಿಗೆ ಹೋಗುವಿರಿ? ನೋಡುವೆವು!"

ಮತ್ತೆ ಎರಡೋ ಮೂರೋ ಹರದಾರಿ ಹೋಗಿರಬೇಕು. ಬಹಳ ಜನ ಕುದುರೆ ಸವಾರರು ಮತ್ತು ಪದಾತಿಗಳು ಬಂದು ನಮ್ಮನ್ನು ಮುತ್ತಿದರು. ಈ ಕಡೆಯವರೂ ಮೊದಲೇ ತಯಾರಿ ಮಾಡಿಕೊಂಡಿದ್ದರು. ಎರಡು ಕಡೆಗಳಿಂದಲೂ ಗುಂಡುಗಳು ಹಾರತೊಡಗಿದುವು. ಈ ಯುದ್ಧದಲ್ಲಿ ಫೈಜ್ ಅಲಿ ನನ್ನ ಬಂಡಿಯ ಹತ್ತಿರವಿದ್ದರು. ನಾನು ಬಂಡಿಯಲ್ಲಿ ಕುಳಿತು ದೇವರನ್ನು ಪ್ರಾರ್ಥಿಸುತ್ತಿದ್ದೆ. ಎದೆ ವೇಗವಾಗಿ ಬಡಿದುಕೊಳ್ಳುತ್ತಿತ್ತು. ಏನಾಗುತ್ತದೋ ಎಂಬ ಭಯ, ದುಗುಡ. ಆಗಾಗ ಬಂಡಿಯ ಪರದೆ ತೆರೆದು ನೋಡುತ್ತಿದ್ದೆ. ರಾಜಾ ಧ್ಯಾನಸಿಂಗನ ಜನರು ಹೆಚ್ಚಿದ್ದರು. ನಮ್ಮವರಲ್ಲಿ ಬಹಳ ಜನರು ಗಾಯಗೊಂಡರು. ಫೈಜ್ ಅಲಿ ಮತ್ತು ಕೆಲವರು ಸಮಯ ಸಾಧಿಸಿ ಓಡಿ ಬಿಟ್ಟರು. ಹತ್ತು ಹನ್ನೆರಡು ಜನ ಬಂದಿಯಾದರು. ಬಂದಿಯಾದವರಲ್ಲಿ ನಾನೂ ಒಬ್ಬಳು.

೪

ನಾವು ಬಂದಿಯಾದ ಬಳಿಕ ಬಂಡಿಯವನು ವಿನಯದಿಂದ ಬೇಡಿಕೊಂಡು ಬಿಡುಗಡೆಯಾದ. ಗಾಯಗೊಂಡ ಸವಾರರನ್ನು ಜೈಲಿನಲ್ಲಿ ಹಾಕಿದರು. ಅಲ್ಲಿಯೇ ಹೆಣಗಳು ಬಿದ್ದಿದ್ದುವು. ರಾಜನ ಗಡಿ ಅಲ್ಲಿಗೆ ಐದಾರು ಹರದಾರಿಯಿತ್ತು. ಸ್ವಲ್ಪ ದೂರ ಹೋಗುವುದರೊಳಗೆ ರಾಜಾಸಾಹೇಬ ಮತ್ತು ಕೆಲವು ಜನ ಬಂದು ನಮ್ಮನ್ನು ಕೂಡಿಕೊಂಡರು. ರಾಜಾಸಾಹೇಬ, ಕುದುರೆ ಮೇಲೆ ಕುಳಿತಿದ್ದರು. ನಾವು

ಮುಂದೆ ನಡೆಯುತ್ತ ಹೊರಟೆವು. ನನ್ನ ಕಡೆ ಬೆರಳು ತೋರಿಸಿ ರಾಜಾಸಾಹೇಬ ಕೇಳಿದರು.

ರಾಜಾ– ಇದೇ ಬೀಬಿ ಸಾಹಿಬಾರೇನು ಲಖ್ನೋದಿಂದ ಬಂದವರು?

ನಾನು– (ಕೈಕಟ್ಟಿಕೊಂಡು) ಹುಜೂರ್ ಅಪರಾಧಿಯೇನೋ ಹೌದು. ವಿಚಾರ ಮಾಡಿ ನೋಡಿದರೆ ಅಂಥ ಅಪರಾಧವೇನೂ ಅಲ್ಲ. ಹೆಣ್ಣು ಜಾತಿಗೆ ಮೋಸ ತಿಳಿಯದು. ನನಗೇನು ಗೊತ್ತಿತ್ತು ಇದೆಲ್ಲ?

ಅಪರಾಧಿಯಲ್ಲವೆಂದು ಸಿದ್ಧ ಮಾಡಲು ಪ್ರಯತ್ನ ಮಾಡಬೇಡಿರಿ. ನಿಮ್ಮ ತಪ್ಪು ಸಿದ್ಧವಾಗಿದೆ. ನಾನು ಕೇಳಿದ್ದಕ್ಕೆ ಮಾತ್ರ ಉತ್ತರ ಕೊಡಿರಿ.

ನಾನು– ಅಪ್ಪಣೆ.

ರಾಜಾ– ಲಖ್ನೋದಲ್ಲಿ ಮನೆಯೆಲ್ಲಿದೆ?

ನಾನು– ಟಿಕ್ಸಾಲದಲ್ಲಿ

ರಾಜಾ– (ತಮ್ಮ ಮನುಷ್ಯರಿಗೆ) ತಮ್ಮತ್ ಖೇಡದಲ್ಲಿ ಒಂದು ಎತ್ತಿನ ಬಂಡಿ ತೆಗೆದು ಕೊಳ್ಳಿರಿ. ಲಖ್ನೋದ ಸೂಳೆಯರು ನಮ್ಮ ದೇಶದ ಪಾತ್ರದವರಂತೆ ಅಲ್ಲ. ನಮ್ಮ ದೇಶದ ಸೂಳೆಯರು ರಾತ್ರಿಯೆಲ್ಲ ಸಭೆಯಲ್ಲಿ ಕುಣಿದು ಮತ್ತೆ ಹಗಲಿನಲ್ಲಿ ಹತ್ತು– ಹತ್ತು ಪರದಾರಿ ನರ್ತಿಸುತ್ತ ಹೋಗುತ್ತಾರೆ.

ನಾನು– ಹುಜೂರರಿಗೆ ದೇವರು ಒಳ್ಳೆಯದು ಮಾಡಲಿ.

ರಾಜನ ಮನುಷ್ಯರು ಹೋಗಿ ಖೇಡದಿಂದ ಬಂಡಿ ತಂದರು. ನನ್ನನ್ನು ಬಂಡಿಯಲ್ಲಿ ಕೂಡ್ರಿಸಿದರು. ಬಂದಿಯಾದವರು ಕೈ ಕಟ್ಟಿಸಿ

ಕೊಂಡು ಹಾಗೇ ನಡೆದು ಬರುತ್ತಿದ್ದರು.

ಗಡಿಗೆ ಹೋದ ಬಳಿಕ ಅವರನ್ನು ಎಲ್ಲಿಗೆ ಕಳಿಸಲಾಯಿತೋ ತಿಳಿಯದು. ಅರಮನೆಗೆ ನನ್ನನ್ನು ಕರೆಸಿದರು.

ರಾಜಾ– ನಾವು ನಿಮ್ಮನ್ನು ಬಿಡುಗಡೆ ಮಾಡಿದ್ದೇವೆ. ಫೈಜೂ ಮತ್ತು ಅವನ ಸಂಗಡಿಗರು ಮಹಾ ಬದ್ಮಾಷರು; ಪಾರಾಗಿ ಹೋದರು. ನೀವೇನೂ ತಪ್ಪು ಮಾಡಿಲ್ಲ ನಿಜ. ಆದರೆ ಮುಂದೆ ಇಂಥವರ ಸಂಗ ಮಾಡಬಾರದು. ಮನಸ್ಸಿದ್ದರೆ ನೀವು ಇಲ್ಲಿ ಒಂದೆರಡು ದಿನ ಇರಬಹುದು. ನಾವು ನಿಮ್ಮ ಸಂಗೀತದ ಬಗ್ಗೆ ಬಹಳ ಕೇಳಿದ್ದೇವೆ.

ನಾನು– ಹುಜೂರರು ಇದನ್ನು ಯಾರಿಂದ ಕೇಳಿದ್ದಾರೆ?

ರಾಜಾ– ಒಳ್ಳೇದು, ಈಗಲೇ ಇದು ಗೊತ್ತಾಗುವುದು.

ಸ್ವಲ್ಪ ಹೊತ್ತಿನ ನಂತರ ಲಖ್ನೋದ ಸೂಳೆಯನ್ನು ಕರೆಸಲಾಯಿತು. ಆಕೆ ಯಾರು? ಖುರ್ಷೀದ್ ಜಾನ್! ಖುರ್ಷೀದ್ ಓಡಿ ಬಂದು ನನ್ನನ್ನಪ್ಪಿಕೊಂಡಳು ಇಬ್ಬರೂ ಅಳತೊಡಗಿದೆವು ಮತ್ತೆ ರಾಜರ ಭಯದಿಂದ ಸುಮ್ಮನಾಗಿ ಕುಳಿತುಕೊಂಡೆವು. ಮುಂದೆ ತುಸು ಹೊತ್ತಿನ ಬಳಿಕ ಬಾರಿಸುವವರು ಬಂದರು. ಬಿಡುಗಡೆಯ ಸುದ್ದಿ ಕೇಳಿ ನಾನೊಂದು ಗಜಲ್ ಹೊಸೆದಿದ್ದೆ. ಅದರಲ್ಲಿ ಬಹಳ ನುಡಿಗಳಿದ್ದುವು, ನೆನಪಾದ ನುಡಿಯೊಂದನ್ನು ಹೇಳುವೆ. ಪ್ರತಿ ನುಡಿಗೂ ರಾಜಾಸಾಹೇಬ್ ಮತ್ತು ಸಭಿಕರು ಸಂತೋಷ ವ್ಯಕ್ತಗೊಳಿಸಿದರು. ಸಭೆಗೆ ಸಭೆಯೇ ಭಾವನೆಯಲ್ಲಿ ತೇಲಿ ಮೈಮರೆತಿತ್ತು.

ಬಂಧನವೆ ಪ್ರಿಯವಾದ ಓ ಬಂದಿ,
ರೇಗಿರುವ ಬೇಟೆಗಾರ.
ಬಿಡುಗಡೆಯ ಹೊಂದುವೆವು
ಇಲ್ಲದೆಯೆ ದುಃಖದಲಿ ಸುರಿಸಿ ನೀರ

ಸಭೆ ಮುಗಿದ ಮೇಲೆ ರಾಜಾಸಾಹೇಬರು ಭೋಜನ ಶಾಲೆಗೆ ಹೋದರು. ಖುರ್ಷೀದ್ ಮತ್ತು ನಾನು ಬಹಳ ಮಾತಾಡಿದೆವು. ಖುರ್ಷೀದ್ ಹೇಳಿದಳು.

'ನೋಡಕ್ಕಾ ನನ್ನದೇನೂ ತಪ್ಪಿಲ್ಲ. ಖಾನಮ್ ಜಾನ್ ಮತ್ತು ರಾಜಾಸಾಹೇಬರಲ್ಲಿ ಬಹಳ ದಿನಗಳಿಂದ ವೈರತ್ವವಿತ್ತು ಎಷ್ಟೋ ಸಲ ರಾಜಾ ಸಾಹೇಬರು ನನ್ನನ್ನು ಕಳಿಸಲು ಕೇಳಿದರು. ಆಕೆ ನಿರಾಕರಿಸಿದಳು. ಕೊನೆಗೆ ಐಷಬಾಗದ ಜಾತ್ರೆಗೆ ಅಂದು ನಾವೆಲ್ಲರೂ ಬಂದಿದ್ದೆವಲ್ಲ, ಜಾತ್ರೆಯಲ್ಲಿ ಈ ರಾಜಾಸಾಹೇಬರ ಮನುಷ್ಯರು ನನ್ನನ್ನು ಬಲಾತ್ಕಾರವಾಗಿ ಎತ್ತಿಕೊಂಡು ಹೋದರು. ಅಂದಿನಿಂದ ಇಲ್ಲಿಯೇ ಇದ್ದೇನೆ. ಇಲ್ಲಿ ಎಲ್ಲರೀತಿಯಿಂದ ಸುಖವಿದೆ. ಗೌರವವಿದೆ.'

ಮರುದಿನ ರಾಜಾ ಸಾಹೇಬರು ನನಗೆ ಅಪ್ಪಣೆ ಕೊಟ್ಟರು. ಹತ್ತು ವರಹಗಳನ್ನು ಬಹುಮಾನವಾಗಿತ್ತರು. ಒಂದು ಶಾಲು, ಚೌಕ, ಒಂದು ರಥ ಮತ್ತು ಮೂರು ಎತ್ತುಗಳು ಇನಾಮಾಗಿ ದೊರಕಿದುವು. ಒಬ್ಬ ಬಂಡಿಯುವ ಮತ್ತು ಇಬ್ಬರು ಆಳುಗಳನ್ನು ನನ್ನೊಡನೆ ಕಳಿಸಿದರು. ಅನಾವ್ ಕಡೆಗೆ ಸಾಗಿದೆ. ಅಲ್ಲಿಗೆ ಹೋಗಿ ಸಿಲಾರೂ ಬಾಣಸಿಗನ ಮನೆಯಲ್ಲಿ ತಂಗಿದೆ. ಬಂಡಿಯುವನನ್ನುಳಿಸಿಕೊಂಡು ರಾಜಾಸಾಹೇಬರ ಆಳುಗಳನ್ನು ಮರಳಿ ಕಳಿಸಿದೆ.

ಸಾಯಂಕಾಲ ಕೋಣೆಯ ಮುಂದೆ ಕುಳಿತಿದ್ದೆ. ಪ್ರವಾಸಿಗರು ಹೋಗುತ್ತಿದ್ದರು. ಬರುತ್ತಿದ್ದರು. ಇಷ್ಟರಲ್ಲಿ ನನ್ನ ದೃಷ್ಟಿ ಮುಂದೆ ಬರುತ್ತಿದ್ದ. ಫೈಜ್‌ಅಲಿಯ ಕಾಸ್ತಾರ ನತ್ತ ಬಿತ್ತು ನನ್ನಲ್ಲಿಗೆ ಬಂದು ಮಾತನಾಡತೊಡಗಿದ. ಅಂದೇ ರಾತ್ರಿ ಫೈಜ್ ಅಲಿ ಅಲ್ಲಿಗೆ ಬರುವ ಸುದ್ದಿ ಹೇಳಿದ. ನಾನು ಅನಾವಕ್ಕೆ ಬರುವ ಸುದ್ದಿ ಅವರಿಗೆ ಗೊತ್ತಾಗಿತ್ತು.

ಈ ಸುದ್ದಿ ಕೇಳಿ ನನ್ನೆದೆ ಹೊಡೆದುಕೊಳ್ಳತೊಡಗಿತು. ಯಾಕೆಂದರೆ ಫೈಜ್ ಅಲಿ ನನಗೆ ಬೇಕಾಗಿರಲಿಲ್ಲ. ತಮ್ಮತ್ ಖೇಡದ ಪ್ರಕರಣದ ಬಳಿಕ ಆ ಪೀಡೆ ತಪ್ಪಿತೆಂದು ನಾನು ತಿಳಿದಿದ್ದೆ. ಆದರೆ ಆದದ್ದೇ ಬೇರೆ.

ಅಂದು ರಾತ್ರಿ ಫೈಜ್‌ಅಲಿ ಬಂದರು. ವಿಶೇಷ ಮಾತುಕತೆಯೇನೂ ಆಗಲಿಲ್ಲ. ಬೆಳ.

ಗಾಗುವುದರಲ್ಲಿ ಕಾನಪುರಕ್ಕೆ ತಲುಪಿದೆವು- ಫೈಜ್ ಅಲಿ ನನ್ನನ್ನು ಲಾರೀ ಮಹಲಿನಲ್ಲಿ ಇಳಿಸಿದರು. ಮನೆ ಹುಡುಕಲು ತಾವು ಹೋದರು. ಸ್ವಲ್ಪ ಹೊತ್ತಿನ ಬಳಿಕ ಬಂದು 'ಮನೆಯನ್ನು ಬಾಡಿಗೆ ಹಿಡಿದಿದ್ದೇನೆ. ಅಲ್ಲಿಗೆ ಹೋಗೋಣ ನಡೆ' ಎಂದರು. ಮೇಣೆ, ಬಂದಿತು. ನನ್ನನ್ನು ಹೊಸ ಮನೆಯಲ್ಲಿ ಇಳಿಸಿ ತಾವು ಬಾಜಾರದಿಂದ ಏನಾದರೂ ತಿನ್ನಲು ತರಲು ಹೋದರು.

ಈಗ ಕೇಳಿರಿ ರುಸ್ವಾಸಾಹೇಬ್ ಏನಾಯಿತೆಂಬುದನ್ನು...

ಫೈಜ್ ಅಲಿ ಬಾಜಾರಕ್ಕೆ ಹೋದವರು ಮರಳಿ ಬರಲಿಲ್ಲ. ಹೊತ್ತು ಉರುಳತೊಡಗಿತ್ತು. ಹಸಿವಿನ ತಾಪದಿಂದ ಜೀವ ಹೋಗುತ್ತಿತ್ತು. ಒಂದು ದಿನ ಕಳೆಯಿತು. ಮರುದಿನ ಬೆಳಗು ಕಳೆದು ಮಧ್ಯಾಹ್ನ ಬಂತು. ಫೈಜ್ ಅಲಿ ಬರಲಿಲ್ಲ. ನನ್ನ ಪರಿಸ್ಥಿತಿಯಲ್ಲಿ ಯಾರಾದರೂ ಸಭ್ಯ ಗೃಹಿಣಿಯರಿದ್ದರೆ ಮನೆಯಲ್ಲಿಯೇ ಕುಳಿತು ಪ್ರಾಣ ಬಿಡುತ್ತಿದ್ದಳು. ನಾನು ನೂರಾರು ಗಂಡಸರ ಮಧ್ಯೆ ಕುಳಿತವಳು. ಕಾನಪುರ ನೋಡಿರಲಿಲ್ಲ. ಆದರೆ ಲಖ್ನೋದ ಹಲವು ಪೇಟೆ ಓಣಿಗಳನ್ನು ತಿರುಗಿ ಬಲ್ಲವಳಾಗಿದ್ದೆ. ಎದ್ದು ಬಾಗಿಲು ತೆರೆದೆ. ಓಣಿಯಲ್ಲಿ ಬಂದು ನಿಂತೆ. ಅಡಿ ಮುಂದಿಟ್ಟೆ. ನಾಲ್ಕೆಂಟು ಹೆಜ್ಜೆಯಿಟ್ಟಿರಲಿಲ್ಲ ನೋಡಿದ್ದೇನು? ಸರಕಾರಿ ಸಮವಸ್ತ್ರ ತೊಟ್ಟ ಒಬ್ಬ ಮನುಷ್ಯ ಕುದುರೆಯ ಮೇಲಿದ್ದ. ಆತನ ಜೊತೆಗೆ ಹತ್ತು ಹದಿನೈದು ಜೇಲಿನ ಜವಾನರು. ಅವರ ಮಧ್ಯೆ ಫೈಜ್ ಅಲಿ. ಅವರನ್ನು ಹೆಡಮುರಿಗೆ ಕಟ್ಟಲಾಗಿದೆ.

ಸರಿ, ಪರಿಸ್ಥಿತಿ ಅರ್ಥವಾಯಿತಲ್ಲ. ಮತ್ತೆ ಒಬ್ಬರ ಪರಿಚಯದಿಂದ ಬೇರೊಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡೆ. ಅಗತ್ಯದ ಎಲ್ಲ ವಸ್ತುಗಳನ್ನು ಕೊಂಡೆ. ಠೀವಿಯಿಂದ ಇರತೊಡಗಿದೆ. ಬಾರಿಸುವವರ ಶೋಧ ಮಾಡಿ ಮೇಳ ಸರಿಹೊಂದಿಸಿದೆ. ರಾತ್ರಿ ಒಂದೂವರೆ ಜಾವದ ವರೆಗೆ ಕೋಣೆಯಲ್ಲಿ ಸಂಗೀತ ನಡೆಯುತೊಡಗಿತು. ಲಖ್ನೋದಿಂದ ಒಬ್ಬ ಪಾತ್ರದವಳು ಬಂದಿದ್ದಾಳೆಂದು ಆಗಲೇ ಊರಲ್ಲಿ ಸುದ್ದಿಯಾಯಿತು. ಜನ ಬರತೊಡಗಿತು. ಕಾವ್ಯವೂ ಪ್ರಾರಂಭವಾಯಿತು. ಸಂಗೀತ ಕಾರ್ಯಕ್ರಮವಿಲ್ಲದ ದಿನವಿಲ್ಲ. ಕೆಲವೇ ದಿನಗಳಲ್ಲಿ ಬಹಳಷ್ಟು ಗಳಿಸಿದೆ. ಕಾನಪುರದ ಜನರ ಇರುವಿಕೆ, ರೀತಿ, ನೀತಿ ಮಾತು, ನಡೆ ನನಗೆ ಸರಿ ಬಂದಿರಲಿಲ್ಲ. ಮಾತು ಮಾತಿಗೆ ಲಖ್ನೋ ನೆನಪಾಗುತ್ತಿತ್ತು. ಆದರೆ ಸ್ವತಂತ್ರ ಜೀವನದ ಸವಿಯೇ ಬೇರೆ. ಆ ಸ್ವಾರಸ್ಯವೇ ಸ್ವಾರಸ್ಯ. ಅದಕ್ಕಾಗಿ ಲಖ್ನೋಕ್ಕೆ ಮರಳಿ

ಹೋಗುವ ಮನಸ್ಸಾಗಲಿಲ್ಲ.

ಕಾನಪುರದಲ್ಲಿ ಇರತೊಡಗಿ ಆರು ತಿಂಗಳು ಕಳೆದಿರಬೇಕು. ಈಗ ಎಲ್ಲಿ ನೋಡಿದಲ್ಲಿ ನನ್ನ ಹೆಸರು. ಸಾಯುಂಕಾಲ ನನ್ನ ಕೋಣೆಯಲ್ಲಿ ಉತ್ತಮ ರಸಿಕರ ಕೂಟವಿರುತ್ತದೆ.

ಬೇಸಿಗೆ ಕಾಲ, ಅಪರಾಹ್ನ ಎರಡು ಗಂಟೆಯ ಸಮಯ ಪಲ್ಲಂಗದ ಮೇಲೆ ನಾನೊಬ್ಬಳೇ ಮಲಗಿದ್ದೆ. ಎಪ್ಪತ್ತು ವರುಷದ ಒಬ್ಬ ಬಡೀಬೀ (ಮುದುಕಿ) ಬಂದಳು. ಜೊತೆಗೊಬ್ಬ ಹುಡುಗನಿದ್ದ.

ಬಡೀಬೀ :– ಲಖ್ನೋದಿಂದ ಬಂದವರು ನೀವೇ ಏನು ?

ನಾನು :– ಹೌದು.

ಬಡೀಬೀ :– ನಮ್ಮ ಬೇಗಮ್ಮರು ನಿಮಗೆ ಹೇಳಿ ಕಳಿಸಿದ್ದಾರೆ. ಹುಡುಗನ ಹುಟ್ಟು ಹಬ್ಬವಿದೆ. ಹೆಣ್ಣು ಮಕ್ಕಳ ಜಲಸಾ, ಸಂಗೀತ ಕಾರ್ಯಕ್ರಮಕ್ಕೆ ಏನು ತೆಗೆದುಕೊಳ್ಳುವಿರಿ ?

ನಾನು :– ನನ್ನ ಸಂಭಾವನೆಯ ಬಗ್ಗೆ ಎಲ್ಲರಿಗೂ ಗೊತ್ತು. ಐವತ್ತು ರೂಪಾಯಿ ತೆಗೆದುಕೊಳ್ಳುವೆ. ಜಲಸಾ ಯಾವಾಗ ?

ಬಡೀಬೀ :– ಇವತ್ತು ಸಂಜೆಗೆ, ಮನೆ ಸ್ವಲ್ಪ ದೂರವಿದೆ. ಈ ಹುಡುಗ ಸಂಜೆಗೆ ಬರುವನು. ಇವನ ಜತೆಗೆ ಬನ್ನಿ.

ಅದರಂತೆ ಸಾಯುಂಕಾಲ ಹುಡುಗ ಬಂದ. ಅಷ್ಟರಲ್ಲಿ ಬಾಜಿಗರನ್ನು ಕರೆಸಿದ್ದೆ. ಮೇಣೆ ಹತ್ತಿ ನಡೆದೆ. ಪಟ್ಟಣದಿಂದ ಒಂದು ತಾಸಿನ ದಾರಿ. ಆರು ಗಂಟೆಗೆ ಅಲ್ಲಿಗೆ ಮುಟ್ಟಿದೆ. ತೋಟದ ಅಂಚಿನಲ್ಲಿ ಒಂದು ಸುಂದರ ಸೌಧವಿತ್ತು. ಅಲ್ಲಿ ಕುಳಿತಿದ್ದ ಬೇಗಮರ ಮುಖವನ್ನು ಲಕ್ಷ್ಯಗೊಟ್ಟು ನೋಡತೊಡಗಿದೆ. ಆ ತೋಟ ಮತ್ತು ಅಲ್ಲಿಯ ಸೌಂದರ್ಯವನ್ನು ನೋಡಿ ನನಗದು ಮೊದಲಿಗೆ ಅಪ್ಸರೆಯರ ಲೋಕವೆನಿಸಿತ್ತು. ಈಗ ಆ ಅನಿಸಿಕೆ ಸತ್ಯವಾಯಿತು. ಅಪ್ಸರೆ ನನ್ನೆದುರಿಗೆ ಕುಳಿತಿದ್ದಳು. ಬೇಗಮ್ ಸಾಹಿಬಾ ಬಹಳ ಒಳ್ಳೆಯ ಸ್ವಭಾವದವಳಂತೆ ಕಂಡಳು. ನನ್ನ ಮುಖವನ್ನೇ ಆಕೆ ದಿಟ್ಟಿಸಿ ನೋಡುತ್ತಿದ್ದಳು. ಇಬ್ಬರ ದೃಷ್ಟಿಗಳೂ ಪರಸ್ಪರ ಒಂದ ನಡೆಸಿದ್ದುವು.

ನನ್ನ ಮನದಲ್ಲಿ ಮತ್ತೆ ಮತ್ತೆ ಒಂದು ವಿಚಾರ ಹೊಳೆಯುತ್ತಿತ್ತು. ಅದನ್ನು ಹೇಳಲಿ ಹೇಗೆ ? ಹೇಳಲು ಅವಕಾಶವಿಲ್ಲದಾಗಿತ್ತು. ಅವರೇ ಮಾತು ತೆಗೆದರು.

ಮಾತು ಕತೆ ನಡೆದಾಗ ಪರಿಚಾರಿಕೆ ಮಗುವನ್ನೆತ್ತಿಕೊಂಡು ಬಂದಳು. ಮೂರು ವರುಷದ ಮಗು–ಮಾಷಾ ಅಲ್ಲಾಹ್ ! ಮಗು ಮುದ್ದಾಗಿತ್ತು. ಬಹಳ ಹೊತ್ತಿನವರೆಗೆ ಎತ್ತಿಕೊಂಡು ಮುದ್ದಿಸಿ ಪರಿಚಾರಿಕೆಗೆ ಕೊಟ್ಟೆ.

ಆ ಮೇಲೆ ಅದು ಇದು ಮಾತನಾಡಿದೆವು. ದಸ್ತರ್ ಖಾನ್ ಹಾಸಲಾಯಿತು. ಬಗೆ–ಬಗೆಯ ಭಕ್ಷ್ಯಗಳಿದ್ದುವು. ಊಟ ಪ್ರಾರಂಭಿಸಿದೆವು. ಊಟ ಮುಗಿಯುವಷ್ಟರಲ್ಲಿ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ನಾವು ಸಂಗೀತಕ್ಕೆ ಕುಳಿತಾಗ ಸರಿಯಾಗಿ ಹನ್ನೆರಡು ಗಂಟೆ. ಸುತ್ತಲೂ ಅಡವಿ, ಮೇಲೆ ಕತ್ತಲೆ, ಭಯಾನಕ ವಾತಾವರಣ. ಸ್ಥಳ ಮತ್ತು ವೇಳೆಗನುಸಾರವಾಗಿ ನಾನು ಸೋಹನಿ ರಾಗದ ಚೀಜ್ ಪ್ರಾರಂಭಿಸಿದೆ. ಈ ರಾಗದ ಭಯಾನಕ ಸ್ವರಗಳು ಎಲ್ಲರ ಮನಸ್ಸಿನ ಮೇಲೆ ತಮ್ಮ ಪರಿಣಾಮ ಮಾಡಿದುವು. ಎಲ್ಲರೂ ಹೆದರಿ ಮೂರ್ತಿಮತ್ತಾಗಿ ಕುಳಿತಿದ್ದರು. ಇದ್ದಕ್ಕಿದ್ದಂತೆ ಬೇಗಮ್ ಸಾಹಿಬಾ ದಿಂಬಿನಿಂದ ಸರಿದು ಮೊಗವೆತ್ತಿ ನೋಡಿದರು. ಗಟ್ಟಿಯಾಗಿ ಚೀರಿ ಆಸನದ ಮೇಲೆ ಬಿದ್ದರು. ಎಲ್ಲ ಹೆಂಗಸರೂ ಆ ಕಡೆ ನೋಡತೊಡಗಿದರು. ನಾನೂ ಮೊಗ ತಿರುವಿ ಆ ಕಡೆಗೆ ನೋಡಿದೆ.

ಹತ್ತು ಹನ್ನೆರಡು ಜನ ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಬಿಚ್ಚುಗತ್ತಿ ಹಿಡಿದು ಎದುರಿನಿಂದ ಓಡಿ ಬರುತ್ತಿದ್ದರು. ಮುಂದೆ ಬರುತ್ತಿದ್ದ ಆ ಕಳ್ಳರ ನಾಯಕ ನನ್ನನ್ನು ನೋಡಿ ಗಕ್ಕನೆ ನಿಂತು ಬಿಟ್ಟ. ನೋಡಿದೆ ಫೈಜ್ ಅಲಿಯ ತಮ್ಮ ಫಜಲ್ ಅಲಿ !

ಫಜಲ್ ಅಲಿ– ಏನತ್ತಿಗೆ ನೀವು ಇಲ್ಲಿ ?

ನಾನು :– ಹೌದು, ಇಲ್ಲಿ ನನ್ನ ತಂಗಿ ಇರುತ್ತಾಳೆ.

ನನ್ನಿಂದಾಗಿ ದರೋಡೆ ನಿಂತಿತು. ಅವರೆಲ್ಲ ಮರ್ಯಾದೆಯಿಂದ ಹೋಗಿಬಿಟ್ಟರು. ಬೇಗಮ್ ಸಾಹಿಬಾ ಎಚ್ಚರಗೊಂಡ ನಂತರ ಕಳ್ಳರನ್ನು ಕರೆದು ಐದುನೂರು ವರಹಗಳನ್ನು ಕೊಟ್ಟು ಕಳಿಸಿದರು. ನನ್ನಿಂದಾಗಿಯೇ ವಿಪತ್ತು ತಪ್ಪಿತೆಂದು ಎಲ್ಲರೂ ಹೊಗಳಿದರು. ಬೆಳಗಾದ ಮೇಲೆ ಮನೆಗೆ ಬಂದೆ. ಮನೆಯಲ್ಲಿ ಬುವಾಹುಸೇನಿ ಮತ್ತು ಗೌಹರ್ ಮಿರ್ಜಾ ಕುಳಿತಿದ್ದರು. ಬುವಾ ಹುಸೇನಿ ನನ್ನನ್ನು ಅಪ್ಪಿಕೊಂಡು ಅಳತೊಡಗಿದಳು. ನಾನೂ ಅಳತೊಡಗಿದೆ. ಮಾತುಕತೆಯಾದ ಬಳಿಕ ಅಂದೇ ಲಖ್ನೋಕ್ಕೆ ಪೋಗಬೇಕೆಂದು ಬುವಾ ಹುಸೇನಿ ಹೇಳಿದಳು. ಮಾರನೆಯ ದಿನ ಲಖ್ನೋಕ್ಕೆ ಮುಟ್ಟಿದೆವು. ಮತ್ತೆ ಅದೇ ಮನೆ, ಅದೇ ಕೋಣೆ. ಅದೇ ಊಟ ಅದೇ ಜನ.

※

ಮಿರ್ಜಾ ಬಿರ್ಜೀಸ್ ಖದರರನ್ನು ಬಂಡಾಯದ ಸಿಪಾಯಿಗಳು ಪಟ್ಟಕ್ಕೆ ಕೂಡ್ರಿಸಿದಾಗ ನನ್ನನ್ನು ಸಂಪ್ರದಾಯದಂತೆ ಸ್ವಸ್ತಿ ಗೀತೆ ಹಾಡಲು ಕರೆಸಿದ್ದರು. ಬಾದಷಾಹರ ಅರಮನೆಗಳ ಕೋಠಿಗಳಲ್ಲಿ ನನ್ನ ಹೆಸರಿತ್ತು.

ನಗರದಲ್ಲಿ ಆಡಳಿತ ಸರಿಯಾಗಿರಲಿಲ್ಲ. ಎಲ್ಲಿ ನೋಡಿದರಲ್ಲಿ ಗಲಭೆ, ಗೊಂದಲ. ಕೇಡು ವಿನಾಶ. ಆ ದಿನಗಳಲ್ಲಿ ನಾನು ಸಾವಿರ ಕಷ್ಟಗಳನ್ನೆದುರಿಸಿ ಕೊನೆಗೆ ಫೈಜಾಬಾದಿಗ ಬಂದೆ. ಮೊದಲು ಛತ್ರದಲ್ಲಿ ಇಳಿದೆ. ಆ ಬಳಿಕ ತ್ರಿಪೋಲಿಯದ ಹತ್ತಿರ ಒಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡೆ. ವಾದ್ಯಗಾರರನ್ನು ನೇಮಕ ಮಾಡಿಕೊಂಡೆ. ಹಾಡುವುದನೂ ಬಾರಿಸುವುದನ್ನೂ ಪ್ರಾರಂಭಿಸಿದೆ.

ಫೈಜಾಬಾದಿನ ವಾಸ್ತವ್ಯದಲ್ಲಿ ಆರು ತಿಂಗಳುಗಳು ಕಳೆದುವು. ಅಲ್ಲಿಯ ಗಾಳಿ, ನೀರು ನನ್ನ ಆರೋಗ್ಯಕ್ಕೆ ಹಿತಕರವಾಗಿದ್ದುವು, ಪಟ್ಟಣದಲ್ಲೆಲ್ಲ ನನ್ನ ಕಾರ್ಯಕ್ರಮದ ಸುದ್ದಿಯೇ ಸುದ್ದಿ. ಜನ ನನ್ನನ್ನು ಹೊಗಳುತ್ತಿದ್ದರು. ನನಗೆ ಬಲು ಹಿಗ್ಗಾಗುತ್ತಿತ್ತು. ಒಮ್ಮೊಮ್ಮೆ ಕನಸಿನಲ್ಲಿ ಕಂಡಂತೆ ಚಿಕ್ಕಂದಿನ ನೆನಪೂ ಬರುತ್ತಿತ್ತು. ತಂದೆ ತಾಯಿಗಳ ನೆನಪು ಕಾಡುತ್ತಿತ್ತು.

ಒಂದು ದಿನ ನಾನು ನನ್ನ ಕೋಣೆಯಲ್ಲಿ ಕುಳಿತಿದ್ದೆ. ಒಬ್ಬ ಮಹಾಶಯರು ಬಂದರು. ಬಹೂ ಬೇಗಮ್ ಸಾಹೇಬರ ಸಂಬಂಧಿಕರವರು. ನಾನು ಹಳೆಯ ನೌಕರರ ಬಗ್ಗೆ ವಿಚಾರಿಸಿದೆ.

ನಾನು :– ಹಿಂದಿನ ನೌಕರರಲ್ಲಿ ಈಗ ಯಾರ್ಯಾರು ಉಳಿದಿದ್ದಾರೆ ?

ನವಾಬ್ ಸಾಹೇಬ :– ಬಹಳ ಮಂದಿ ಸತ್ತರು. ಹೊಸ ಹೊಸ ನೌಕರರಿದ್ದಾರೆ. ಹಿಂದಿನಂತೆ ಈಗಿಲ್ಲ. ಎಲ್ಲ ವ್ಯವಸ್ಥೆ ಬೇರೆಯಾಗಿದೆ.

ನಾನು :– ಹಿಂದಿನ ನೌಕರರಲ್ಲಿ ಒಬ್ಬ ಮುದುಕ ಜಮಾದಾರನಿದ್ದನಲ್ಲ ?

ನವಾಬ್ ಸಾಹೇಬ :– ಹಾಂ, ಇದ್ದ, ಆತ ನಿಮಗೆ ಹೇಗೆ ಗೊತ್ತು ?

ನಾನು :– ಬಂಡಾಯಕ್ಕಿಂತ ಮುಂಚೆ ನಾನೊಮ್ಮೆ ಫೈಜಾಬಾದಿಗೆ ಬಂದಿದ್ದೆ. ಆಗ ಸಮಾಧಿಗೆ ದೀಪೋತ್ಸವ ನೋಡಲು ಹೋಗಿದ್ದೆ. ಆತ ನನ್ನನ್ನು ಬಹಳ ಮಮತೆಯಿಂದ ಕಂಡಿದ್ದ.

ನವಾಬ್ ಸಾಹೇಬ :– ಅದೇ ಜಮಾದಾರನಲ್ಲವೆ ? ಆತನ ಒಬ್ಬ ಮಗಳು ಓಡಿ ಹೋಗಿದ್ದಳು ?

ನಾನು :– ನನಗೇನು ಗೊತ್ತು ? (ಅಯ್ಯೋ, ಈ ಕಥೆ ಇನ್ನೂ ಜನರ ಮನಸ್ಸಿನಲ್ಲಿದೆಯಲ್ಲ ಎಂದು ಮನಸ್ಸಿನಲ್ಲಿ ಅಂದುಕೊಂಡೆ.)

ನವಾಬ್ ಸಾಹೇಬ :– ಹಾಗೆ ನೋಡಿದರೆ ಎಷ್ಟೋ ಜಮಾದಾರರಿದ್ದರು. ಈಗಲೂ ಇದ್ದಾರೆ. ಆದರೆ ದೀಪ ಬೆಳಗುವ ಮುಂತಾದ ವ್ಯವಸ್ಥೆಗಳನ್ನು ಆತನೇ ಮಾಡುತ್ತಿದ್ದ.

ನಾನು :– ಆತನಿಗೆ ಒಬ್ಬ ಮಗನೂ ಇದ್ದ.

ನವಾಬ್ ಸಾಹೇಬ :– ನೀವು ಹುಡುಗನನ್ನು ಎಲ್ಲಿ ನೋಡಿದ್ದೀರಿ ?

ನಾನು :– ಅಂದೇ, ಆತನ ಜೊತೆಗೆ.

ನವಾಬ್ ಸಾಹೇಬ :- ಬಂಡಾಯಕ್ಕಿಂತ ಮೊದಲೇ ಜಮಾದಾರ ಸತ್ತು ಹೋದ.

ಅದೇ ಹುಡುಗ ಈಗ ಆತನ ಸ್ಥಳದಲ್ಲಿ ನೌಕರಿಯಿದ್ದಾನೆ.

ಆ ಮಾತನ್ನು ಮರೆಸಲು ನಾನು ಬೇರೆ ಸುದ್ದಿ ತೆಗೆದೆ. ತಂದೆ ಸತ್ತ ಸುದ್ದಿ ಕೇಳಿ ನನಗೆ ಬಹಳ ವ್ಯಥೆಯಾಯಿತು. ಅಂದು ಇಡೀ ರಾತ್ರಿ ಅತ್ತೆ. ಮರುದಿನ ತಮ್ಮನನ್ನು ನೋಡುವ ಹಂಬಲವುಂಟಾಯಿತು. ಎರಡು ದಿನಗಳ ನಂತರ ಒಂದು ಕಾರ್ಯಕ್ರಮ ಬಂತು. ಅದರ ಸಿದ್ಧತೆ ನಡೆಸಿದೆ. ಕಾರ್ಯಕ್ರಮಕ್ಕೆ ಹೋದೆ. ಅದು ನಡೆದ ಓಣಿಯ ಹೆಸರು ನೆನಪಿಲ್ಲ! ಮನೆಯ ಹತ್ತಿರ ಒಂದು ದೊಡ್ಡ ಹಳೆಯ ಹುಣಿಸೇ ಮರವಿತ್ತು. ಅದರ ಕೆಳಗೆ ಷಾಮಿಯಾನಾ ಹಾಕಿದ್ದರು.

ಒಬ್ಬ ಹೆಣ್ಣು ಮಗಳು ಬಂದು, 'ಲಖ್ನೋದಿಂದ ಬಂದಾಕೆ ನೀನೇ ಏನು ?' ಎಂದಳು.

ನಾನು, 'ಹೌದು' ಎಂದೆ. ಈಗಂತೂ ನನ್ನ ಎದೆ ವೇಗವಾಗಿ ಹೊಡೆದುಕೊಳ್ಳತೊಡಗಿತು. ಆ ಹೆಣ್ಣು ಮಗಳು 'ಅಚ್ಛಾ, ಈ ಕಡೆಗೆ ಬಾ,' ಯಾರೋ ನಿನ್ನನ್ನು ಕರೆಯುತ್ತಿದ್ದಾರೆ ಎಂದಳು.

ಅಚ್ಛಾ ಎಂದು ನಾನು ಆಕೆಯೊಡನೆ ಹೋದೆ. ನಾನು, ನನ್ನ ಮನೆಯೆಂದೇ ತಿಳಿದಿದ್ದ ಮನೆಗೇನೇ ಆ ಹೆಂಗಸು ನನ್ನನ್ನು ಕರೆದೊಯ್ದಳು. ಆ ಮನೆಯ ಒಳಕಟ್ಟೆಯ ಮೇಲೆ ನನ್ನನ್ನು ಕೂಡ್ರಿಸಿದಳು. ಒಳಬಾಗಿಲಿಗೆ ತಟ್ಟಿನ ಪರದೆ ಇಳಿಬಿದ್ದಿತ್ತು. ಇಬ್ಬರು ಮೂವರು ಹೆಂಗಸರು ಅದರ ಹಿಂದೆ ಬಂದು ನಿಂತರು.

ಒಬ್ಬಳು :- ಲಖ್ನೋದಿಂದ ಬಂದವಳು ನೀನೇ ಏನು ?

ನಾನು :- ಜೀ ಹ್ಞಾ !

ಇನ್ನೊಬ್ಬಳು :- ನಿನ್ನ ಹೆಸರೇನು ?

ನಾನು :- ಹೇಳಬೇಕೆನಿಸಿತು, (ಆದರೆ ಮನಸ್ಸು ಬಿಗಿ ಹಿಡಿದು) ಉಮರಾವ್ ಜಾನ್.

ಮೊದಲನೆಯವಳು :- ನಿನ್ನ ಸ್ವಂತ ಸ್ಥಳ ಲಖ್ನೋ ಏನು ?

ನಾನು :- (ಈಗ ನನ್ನಿಂದ ತಡೆಯುವದಾಗಲಿಲ್ಲ. ಕಂಗಳು ತುಂಬಿ ಬಂದುವು) ಸ್ವಂತ ಸ್ಥಳವಂತೂ ಇದೇ, ಎಲ್ಲಿ ನಾನು ನಿಂತಿದ್ದೇನೆ.

ಮೊದಲನೆಯವಳು :- ಬಂಗಲೆಯಲ್ಲಿರುವವಳೇನು ?

ನಾನು :- (ಕಣ್ಣಿನಿಂದ ನೀರು ಸುರಿಯುತ್ತಲೇ ಇದ್ದುವು. ಬಹು ಕಷ್ಟದಿಂದ ಉತ್ತರಿಸಿದೆ.) ಜೀ, ಹ್ಞಾ.

ಎರಡನೆಯವಳು :- ಕುಲದಿಂದ ನೀನು ಪಾತ್ರದವಳೇನು ?

ನಾನು :- ಕುಲದಿಂದೇನೂ ಪಾತ್ರದವಳಲ್ಲ; ಆದರೆ ಹಣೇ ಬರಹದಲ್ಲಿ ಬರೆದದ್ದನ್ನು ಅನುಭವಿಸುತ್ತಿದ್ದೇನೆ.

ಮೊದಲನೆಯವಳು :- ನೀನು ಅಳುವಿಯೇಕೆ ? ನೀನು ಯಾರೆಂಬುದನ್ನಾದರೂ ಹೇಳು.

ನಾನು :- (ಕಣ್ಣೊರೆಸಿಕೊಂಡು) ಏನು ಹೇಳಲಿ? ಹೇಳಲಾರದಂತಾಗಿದೆ. (ಇದಿಷ್ಟನ್ನು ನಾನು ಬಹಳ ಸಂಯಮದಿಂದ ಹೇಳಿದೆ. ಮುಂದೆ ತಡೆಯುವದಾಗಲಿಲ್ಲ. ಬಿಕ್ಕಿ ಬಿಕ್ಕಿ ಅತ್ತೆ).

ಇಬ್ಬರು ಹೆಂಗಸರು ಪರದೆಯಿಂದ ಹೊರ ಬಂದರು. ಒಬ್ಬಳ ಕೈಯಲ್ಲಿ ದೀಪವಿತ್ತು. ಆಕೆ ನನ್ನ ಮುಖವನ್ನು ಹಿಡಿದು ಕಿವಿಯ ಕೆಳಭಾಗವನ್ನು ದಿಟ್ಟಿಸಿ ನೋಡಿದಳು. 'ಏನು, ನಾನು ಹೇಳಿದ್ದೆನಲ್ಲ. ಅದೇ ಅಲ್ಲವೇನು ?' ಎನ್ನುತ್ತ ಎರಡನೆಯವಳಿಗೆ ತೋರಿಸಿದಳು.

ಎರಡನೆಯವಳು :- ಅಯ್ಯೋ ನನ್ನ ಅಮೀರನ್ !

ಆಕೆ ನನ್ನನ್ನಪ್ಪಿಕೊಂಡಳು. ತಾಯಿ ಮಗಳು ಎದೆ ಎದೆ ಬಡಿದುಕೊಂಡು ಅತ್ತೆವು. ಆ ಬಳಿಕ ನಾನು ನನ್ನ ಕಥೆಯನ್ನೆಲ್ಲ ಹೇಳಿದೆ. ಕೇಳಿ ನನ್ನ ತಾಯಿ ಮತ್ತಷ್ಟು ಅತ್ತಳು. ಉಳಿದ ರಾತ್ರಿಯನ್ನು ನಾವು ಅಲ್ಲಿಯೇ ಕುಳಿತು ಕಳೆದೆವು. ಬೆಳಗಾದಾಗ ಮರಳಿ ಬಂದೆ.

ಮಾರನೆಯ ದಿನ ರಾತ್ರಿ ಅರ್ಧ ತಾಸಾದಾಗ ಒಬ್ಬ ತರುಣ ಬಂದ. ಎಣ್ಣೆಗೆಂಪು ಬಣ್ಣ,


ಪ್ರತ್ಯಕ್ಷ ಪರೀಕ್ಷೆಗಳು ಪ್ರಮಾಣಪಡಿಸುತ್ತವೆ...
ರುಚಿ, ವಿಟಮಿನ್‌ಗಳು
ಮತ್ತು ಪೋಷಣೆ–
ಇವುಗಳಿಗಾಗಿ ಅಪ್ಪಟ ಬಿಸ್ಕಿಟ್
ಬ್ರಿಟಾನಿಯಾ
ಗ್ಲೂಕೋಸ್-ಡಿ
ತುಲನಾತ್ಮಕ ಪರೀಕ್ಷಣಗಳು ಸಿದ್ಧಪಡಿಸಿವೆ: ಗ್ಲೂಕೋಸ್ ಡಿ ಯಲ್ಲಿ ವಿಟಮಿನ್ ಮತ್ತು ಪೋಷಕಾಂಶಗಳು ಅಧಿಕ ಪ್ರಮಾಣದಲ್ಲಿವೆ. ಮತ್ತು ಅದರ ರುಚಿ, ಸಿಹಿ ಹಾಗೂ ಗರಿಮುರಿತನಕ್ಕಾಗಿ ಜನ ಮೆಚ್ಚುತ್ತಾರೆ.
ಆದ್ದರಿಂದಲೇ ಬೇರೆ ಯಾವುದೇ ಗ್ಲೂಕೋಸ್ ಬಿಸ್ಕಿಟ್‌ಗಿಂತ ಅಧಿಕವಾಗಿ ಬ್ರಿಟಾನಿಯಾ ಗ್ಲೂಕೋಸ್ ಡಿ ಜನರನ್ನು ಆಕರ್ಷಿಸುತ್ತದೆ.
ಬ್ರಿಟಾನಿಯಾ

ಇಪ್ಪತ್ತು–ಇಪ್ಪತ್ತೆರಡು ವಯಸ್ಸು. ಪಗಡಿ ಸುತ್ತಿದ್ದ. ಸಿಪಾಯಿ ಉಡುಪು ಧರಿಸಿದ್ದ. ನಾನು ಹುಕ್ಕಾ ಮುಂದಿರಿಸಿದೆ. ಪಾನ್‌ದಾನಿನಲ್ಲಿ ಎಲೆ ಇರಲಿಲ್ಲ. ಮಾಮಾಳನ್ನು ಕರೆದು ಎಲೆ ತಾ ಎಂದು ಮೆಲ್ಲನೆ ಹೇಳಿದೆ. ಆ ಹೊತ್ತಿನಲ್ಲಿ ಅಲ್ಲಿ ಮತ್ತೆ ಯಾರೂ ಇರಲಿಲ್ಲ. ಕೋಣೆಯಲ್ಲಿ ನಾನು ಮತ್ತು ಅವರು ಇಬ್ಬರೇ.

ತರುಣ :– ನಿನ್ನೆ ನೃತ್ಯಕ್ಕೆ ಹೋದವಳು ನೀನೇ ಏನು ? (ಆತನ ಮಾತಿನ ಧಾಟಿಗೆ ನಾನು ಭಯಗೊಂಡೆ).

ನಾನು :– ಹೌದು.

ನಾನು ಆತನ ಮುಖ ನೋಡಿದೆ. ಆತನ ಕಂಗಳು ರಕ್ತ ಸುರಿಸುವಂತೆ ಕಂಡವು.

ತರುಣ:– (ತಲೆ ಕೆಳಗೆ ಹಾಕಿ) ಮನೆತನದ ಹೆಸರನ್ನು ಬಹಳ ಚೆನ್ನಾಗಿ ಬೆಳಗಿ ಬಿಟ್ಟೆ.

ನಾನು:– (ಆತ ಯಾರೆಂಬುದು ಈಗ ತಿಳಿಯಿತು) ಅದನ್ನು ದೇವರೇ ಬಲ್ಲ.

ತರುಣ:– ಈ ಜೀವನಕ್ಕಿಂತ ಸಾವು ನೂರು ಪಟ್ಟು ಒಳ್ಳೆಯದು.

ನಾನು:– ಇಂಥ ಬುದ್ಧಿ ನನಗಿರಲಿಲ್ಲ. ಅಲ್ಲದೇ ಯಾರೂ ಇಂಥ ಬೆಲೆಯುಳ್ಳ ಅಭಿಪ್ರಾಯವನ್ನು ಕೊಟ್ಟಿರಲಿಲ್ಲ.

ತರುಣ:– ಮರ್ಯಾದೆಯುಳ್ಳ ಹೆಣ್ಣಾದರೆ ಈ ಪಟ್ಟಣದಲ್ಲಿ ಕಾಲಿಡುತ್ತಿರಲಿಲ್ಲ. ಬಂದರೂ ಯಾವ ಓಣಿಯಲ್ಲಿ ನೀನು ಹಿಂದೆ ವಾಸವಾಗಿದ್ದೆಯೋ ಆ ಓಣಿಗೆ ಸಂಗೀತಕ್ಕಾಗಿ ಖಂಡಿತ ಬರುತ್ತಿರಲಿಲ್ಲ.

ನಾನು:– 'ಹೌದು ಆ ತಪ್ಪು ನನ್ನಿಂದಾಯಿತು. ಆದರೆ ಅದೆಲ್ಲ ನನಗೇನು ಗೊತ್ತಿತ್ತು?

ತರುಣ:– ಅಚ್ಛಾ, ಈಗಾದರೂ ಗೊತ್ತಾಯಿತಲ್ಲ.

ನಾನು:– ಗೊತ್ತಾಗಿ ಈಗೇನಾಗಬೇಕಾಗಿದೆ?

ತರುಣ:– (ರೇಗಿ) ಈಗ ಏನಾಗಬೇಕಾಗಿದೆ? ಏನಾಗಬೇಕಾಗಿದೆ ಈಗ... (ಟೊಂಕದಲ್ಲಿದ್ದ ಕಿರುಗತ್ತಿ ತೆಗೆದು ನನ್ನ ಎರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದು ಕತ್ತಿಯನ್ನು, ಕುತ್ತಿಗೆಗೆ ಇಟ್ಟು) ಈಗ ಇದಾಗಬೇಕಾಗಿದೆ.

ಇಷ್ಟರಲ್ಲಿ ನನ್ನ ಸೇವಕಳು ಬಾಜಾರದಿಂದ ಎಲೆ ತೆಗೆದುಕೊಂಡು ಬಂದಳು. ಈ ಸ್ಥಿತಿಯನ್ನು ನೋಡಿ ಚೀರಿದಳು. ಆ ಹೊತ್ತಿಗೆ. ತರುಣ ಕಿರುಗತ್ತಿಯನ್ನು ತೆಗೆದು ಕೈಬಿಟ್ಟು ಹೇಳ ಹತ್ತಿದ.

'ಹೆಂಗಸನ್ನು ಏನಂತ ಹೊಡೆಯುವುದು? ಈ ಹೆಂಗಸಾದರೋ ಯಾರು? ದೊಡ್ಡ...... ಅ......' ಎನ್ನುತ್ತ ಅಳಹತ್ತಿದ. ನಾನಂತೂ ಮೊದಲೇ ಅಳತೊಡಗಿದ್ದೆ. ಆ ಮೇಲೆ ತರುಣ ನನಗೆ ಕೈಮುಗಿದು ಹೇಳಿದ.

'ಅಚ್ಛಾ ಈ ಊರು ಬಿಟ್ಟು ಎಲ್ಲಿಗಾದರೂ ಹೋಗಿ ಬಿಡು. ಇನ್ನು ಮೇಲೆ ಯಾರ ಮುಂದೆಯೂ ನಮ್ಮ ವಿಷಯ ತೆಗೆಯಬೇಡ.' ಎಂದು ಹೇಳಿ ಹೊರಟು ಹೋದ.

ಆ ತರುಣ ಹೊರಟು ಹೋದ ಮೇಲೆ. ನಾನು ನನ್ನ ದುಃಖದಲ್ಲಿ ಮುಳುಗಿದ್ದೆ. ಸೇವಕಳು ನನ್ನ ತಲೆ ತಿನ್ನತೊಡಗಿದಳು.

'ಅವರು ಯಾರು?'

'ಸೂಳೆಯರ ಮನೆಗೆ ಸಾವಿರ ಜನರು ಬರುತ್ತಾರೆ. ಯಾರಾದರೆ ನಿನಗೇನು?' ಎಂದು ಹೇಳಿ ಅವಳನ್ನು ಸುಮ್ಮನಿರಿಸಿದೆ. ರಾತ್ರಿಯೆಲ್ಲ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದೆ. ಬೆಳಿಗ್ಗೆ ಎದ್ದು ಲಖ್ನೋಕ್ಕೆ ಹೋಗುವ ಸಿದ್ಧತೆ ಮಾಡಿದೆ. ಬಂಡಿ ಬಾಡಿಗೆ ಮಾಡಿಕೊಂಡು ಸಾಯಂಕಾಲ ಹೊರಟುಬಿಟ್ಟೆ.

೬

ರಜ್ಜಬದ ಹಬ್ಬ. ದರಗಾಕ್ಕೆ ಹೋಗುವ ಮನಸ್ಸಾಯಿತು. ಹೊರಟೆ, ಸಾಯಂಕಾಲ ಅಲ್ಲಿಗೆ ಮುಟ್ಟಿದೆ. ದೊಡ್ಡ ಜನಸಂದಣಿಯಿತ್ತು. ಮೊದಲು ನಾನು ಗಂಡಸರ ದಾರಿಯ ಅಂಗಳದಲ್ಲಿ ಅಲ್ಲಿ ಇಲ್ಲಿ ಅಡ್ಡಾಡಿದೆ. ಆ ಮೇಲೆ ಹೋಗಿ ದೀಪ ಬೆಳಗಿಸಿದೆ. ಮರಳಿ ಹೋಗಲು ಎದ್ದೆ. ಅಷ್ಟರಲ್ಲಿ ಬಲಗಡೆಯ ಅಂಗಳದಿಂದ ಕಾನಪುರದ ಬೇಗಮ್ ಬರುವುದು ಕಂಡಿತು. ರಾಜ ಬೀದಿಯಿಂದ ಅವರು ಬರುತ್ತಿದ್ದರು. ನನ್ನನ್ನು ನೋಡುತ್ತಲೇ ಓಡಿ ಬಂದು ಹೆಗಲ ಮೇಲೆ ಕೈಯಿಟ್ಟರು.

'ಅಲ್ಲಾಹ್! ಉಮ್‌ರಾವ್ ಬಹಳ


ಆಕೆಯ
ಭವಿಷ್ಯದ ಕುರಿತು
ಇಂದೇ ಯೋಚಿಸಿರಿ.
ಇಂದೇ 5,000 ರೂ. ಗಳನ್ನು ಇರಿಸಿ.
ಇವಳು 21 ವಯಸ್ಸಿನವಳಾದಾಗ
22,440 ರೂ. ಗಳನ್ನು
ಪಡೆಯಿರಿ.
ಇಂದು ಕರ್ನಾಟಕ ಬ್ಯಾಂಕಿನಲ್ಲಿ ಇರಿಸಿದ 5,000 ರೂ. ಗಳು, ನಿಮ್ಮ ಮಗಳ 21 ನೇ ವಯಸ್ಸಿನಲ್ಲಿ (ಇವಳಿಗೆ ಈಗ 6 ವರ್ಷ ವಯಸ್ಸಿದ್ದರೆ) 22,440 ರೂ. ಗಳಾಗಿ ವೃದ್ಧಿಸಿರುತ್ತದೆ. ಹೆಚ್ಚಿನ ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ವಿಚಾರಿಸಿ.
ನಿಮ್ಮ ಉಳಿತಾಯ ಸಂಗ್ರಹಕ್ಕೆ
ಕರ್ನಾಟಕ ಬ್ಯಾಂಕ್ ಲಿ.
ಮಂಗಳೂರು
ಛೇರ್‌ಮನ್: ಕೆ. ಎಸ್. ಎನ್. ಅಡಿಗ.
ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಗೋವಾದಲ್ಲಿ 150 ಕ್ಕೂ ಹೆಚ್ಚಿನ ಶಾಖೆಗಳಿವೆ.

ಒಳ್ಳೆಯ ಗುಣದವಳು! ಅಂದು ಕಾನಪುರದಲ್ಲಿ ಕಣ್ಮರೆಯಾದವಳು ಮತ್ತೆ ಕಂಡದ್ದು ಇಂದೇ; ಅದೂ ಆಕಸ್ಮಿಕವಾಗಿ,' ಎಂದರು.

ನಾನು:_ ಅವೊತ್ತು ರಾತ್ರಿ ನಿಮ್ಮ ಮನೆಗೆ ಬಂದಿದ್ದೆನಲ್ಲಾ, ಅಂದೇ ಲಖ್ನೋದಿಂದ ನಮ್ಮ ಮಾವ ಬಂದಿದ್ದರು. ಮರುದಿನ ಬೆಳಗ್ಗೇನೆ ಅವರು ನನ್ನನ್ನು ಲಖ್ನೋಕ್ಕೆ ಎಳೆದೊಯ್ದರು. ಆ ಬಳಿಕೆ ಬಂಡಾಯವಾಯ್ತು. ಎಲ್ಲೆಲ್ಲೋ ತಿರುಗಿದೆ. ಏನೋ ಆಯ್ತು. ನನ್ನ ಸುದ್ದಿ ನಿಮಗೆ ತಿಳಿಯದು. ನೀವಿರುವ ಸ್ಥಳ ನನಗೆ ತಿಳಿಯದು.

ಬೇಗಮ್:– ಹೋಗಲಿ ಈಗಾದರೂ ನಾವಿಬ್ಬರೂ ಲಖ್ನೋದಲ್ಲಿಯೇ ಇದ್ದೇವಲ್ಲ!

ನಾನು:– ಲಖ್ನೋ ಯಾಕೆ? ಈಗಂತೂ ಒಂದೇ ಸ್ಥಳದಲ್ಲಿದ್ದೇವೆ.

ಬೇಗಮ್:– ಇಷ್ಟರಿಂದ ತೃಪ್ತಿಯಿಲ್ಲ. ನೀನು ನಮ್ಮ ಮನೆಗೆ ಬರಲೇಬೇಕು.

ನಾನು:– ನಿಮ್ಮ ಅಪ್ಪಣೆ ಶಿರಸಾವಾನ್ಯ; ಆದರೆ ನೀವಿರುವುದೆಲ್ಲಿ?

ಬೇಗಮ್:– ಚೌಪಾಟಿಯಲ್ಲಿ ನವಾಬ ಸಾಹೇಬರನ್ನು ಅರಿಯದವರಾರು?

ನಾನು:– ಆಗಲಿ ಖಂಡಿತ ಬರುವೆ.

ಬೇಗಮ್:– ಎಂದು ಬರುವಿ? ಎಷ್ಟೊತ್ತಿಗೆ ಬರುವಿ? ಮಾತಂ ಕೊಡು.

ನಾನು– ನೀವು ಹೇಳಿದ ಹೊತ್ತಿಗೆ ಬರುವೆ. ನನಗೆ ಮನೆಯಲ್ಲಿ ಏನೂ ಕೆಲಸವಿಲ್ಲ. ಎಷ್ಟು ಹೊತ್ತಿನಲ್ಲಾದರೂ ಸರಿ.

ಬೇಗಮ್:– ಅಚ್ಛಾ, ನಾನು ದಾಸಿಯನ್ನು ಕಳಿಸೇವೆ. ಅವಳೊಡನೆ ಬರಬೇಕು ಖುದಾ ಹಾಫಿಜ್.

ರವಿವಾರ ಬೆಳಿಗ್ಗೆ ಎಂಟು ಗಂಟೆಗೆ ಬೇಗಮ್ ಸಾಹಿಬಾರವರ ದಾಸಿ ಮೋಣೆಯೊಡನೆ ಬಂದಳು. ಬೇಗಮ್ ಸಾಹಿಬಾರವರು ನನ್ನ ದಾರಿ ಕಾಯುತ ಕುಳಿತಿದ್ದರು. ನಾನು ಹೋದಕೂಡಲೇ ದಸ್ತರಖಾನ್ ಹಾಸಿದರು. ನಾನು ಮತ್ತು ಬೇಗಮ್ ಸಾಹಿಬಾರವರು ಒಟ್ಟಿಗೆ ಕುಳಿತು ಊಟ ಮಾಡಿದೆವು. ಬಹಳ ರುಚಿಕಟ್ಟಾದ ಅಡಿಗೆಯಿತ್ತು. ಊಟವಾದ ಬಳಿಕ ಬೇಗಮ್ ಸಾಹಿಬಾರವರು ಮೆಲ್ಲನೆ ನನ್ನ ಕಿವಿಯಲ್ಲಿ ಮಾತಾಡಿದರು.

ಬೇಗಮ್:– ಏನು? ಆ ಕರೀಮನ ಮನೆಯ ತೊಗರಿ ಬೇಳೆ, ಜೋಳದ ರೊಟ್ಟಿ ಇನ್ನೂ ನೆನಪಿದೆಯಾ?

ನಾನು:– ಸುಮ್ಮನಿರು, ಯಾರಾದರೂ ಕೇಳಿಯಾರು?

ಬೇಗಮ್:– ಕೇಳಿದರೇನಾಗುತ್ತದೆ; ನವಾಬರ ತಾಯಿ, ಮಗನಿಗಾಗಿ ನನ್ನನ್ನು ಕೊಂಡದ್ದು ಯಾರಿಗೆ ಗೊತ್ತಿಲ್ಲ?

ನಾನು:– ದೇವರ ಸಲುವಾಗಿಯಾದರೂ ಸುಮ್ಮನಿರು. ಬೇರೆ ಕಡೆ ನಡೆ ಮಾತಾಡೋಣ.

ಊಟ ಮಾಡಿ ಕೈ-ಬಾಯಿ ತೊಳೆದುಕೊಂಡು ಎಲೆ ತಿಂದೆ. ದಾಸಿ ಹುಕ್ಕಾ ತಂದಿಟ್ಟಳು. ಬೇಗಮ್ ಏನೇನೋ ನೆವ ಮಾಡಿ ಎಲ್ಲರನ್ನೂ ಕಳಿಸಿ ಬಿಟ್ಟರು.

ನಾನು:– ನೀನು ನನ್ನ ಗುರುತು ಹಿಡಿದೆ!

ಬೇಗಮ್:– ಕಾನಪುರದಲ್ಲಿ ಮೊದಲ ಸಲ ನೋಡಿದಾಗಲೇ ಗುರುತು ಹಿಡಿದಿದ್ದೆ.

ನಾನು;– ನಾನು ಕೂಡ ಗುರುತು ಹಿಡಿದಿದ್ದೆ.

ಬೇಗಮ್:– ಇರಲಿ ನನ್ನ ಕಥೆ ಕೇಳು.

'ನಾನು ಅಂದು ನಿನ್ನಿಂದ ಬಿಡುಗಡೆಯಾಗಿ ಹೋದೆ. ನವಾಬ ಸಾಹೇಬರ ತಾಯಿ, ಬೇಗಮ್ ಉಮ್ದತುನ್ನೀಸಾ ಬೇಗಮ್ ಸಾಹೀಬಾಳಿಗೆ ನನ್ನನ್ನು ಮಾರಿದರು. ಆಗ ನನ್ನ ವಯಸ್ಸು ಹನ್ನೆರಡು ವರುಷ ಇರಬಹುದು. ನವಾಬರಿಗೆ ಹದಿನಾರು ವರುಷ. ನವಾಬರ ತಂದೆ ಕಾನಪುರದಲ್ಲಿರುತ್ತಿದ್ದರು. ಅಲ್ಲಿಯೇ ನವಾಬ ಸಾಹೇಬರು ಬಂದಾಗ ನನಗೆ ಮರುಳಾದರು. ಎಷ್ಟರ ವರೆಗೆ ಮರುಳಾದರೆಂದರೆ ನನ್ನನ್ನು ಬಿಟ್ಟು ಬೇರೆಯವರನ್ನು ಮದುವೆಯಾಗುವುದಿಲ್ಲ ವೆಂದರು. ಇಬ್ಬರ ಆಸ್ತಿಗೆ ಇವರೊಬ್ಬರೇ ಒಡೆಯರು.'

'ನವಾಬ ಸಾಹೇಬರಿಂದ ನಾನು ಬೇಗಮ್ ಳಾಗಿದ್ದೇನೆ. ವೈಭವದಲ್ಲಿದ್ದೇನೆ. ಮದುವೆ

ದಂತವೈದ್ಯರು ಅಭಿಪ್ರಾಯಪಡುತ್ತಾರೆ–

ನಿಯಮಿತವಾಗಿ ಹಲ್ಲುಗಳನ್ನು ಉಜ್ಜಿಕೊಂಡು ಒಸಡುಗಳನ್ನು ಮಸಾಜು ಮಾಡಿಕೊಂಡರೆ ದಂತಕ್ಷಯ ತಡೆದು ಒಸಡುಗಳ ತೊಂದರೆ ನಿವಾರಣೆಯಾಗುತ್ತದೆ.

ನಿರಂತರವಾಗಿ ಫೋರ್‌ಹನ್ಸ್ ಟೂಥ್‌ಪೇಸ್ಟ್ ಉಪಯೋಗಿಸುತ್ತಿರುವವರು ಸ್ವಸಂತೋಷದಿಂದ ಈ ರೀತಿ ಹೇಳುತ್ತಾರೆ.

"...ನನ್ನ ಹೆಂಡತಿಗೆ ಹಲ್ಲಿನ ತೊಂದರೆ ಇತ್ತು... ಫೋರ್‌ಹನ್ಸ್ ಉಪಯೋಗಿಸಲು ಪ್ರಾರಂಭಿಸಿದಳು...ಉಪಶಮನ ದೊರೆಯಿತು. ಅದರ ಪರಿಣಾಮವೆಂದರೆ ಇತರರಿಗೆ ಒಸಡುಗಳ ಹಲ್ಲಿನ ತೊಂದರೆಯಾದಾಗ ಫೋರ್‌ಹನ್ಸ್‌ನ್ನೇ ಉಪಯೋಗಿಸಲು ಹೇಳುತ್ತಾಳೆ. ನನ್ನ ತಮ್ಮನು ಇಂಗ್ಲಂಡಿಗೆ ಹೋದಾಗ, 6 ಟ್ಯೂಬ್ ಭಾರತದ ಫೋರ್‌ಹನ್ಸ್ ಕಳಿಸಲು ಮೇಲಿಂದ ಮೇಲೆ ಬರೆದನು..."

(ಸಹಿ) ಟಿ. ಜಿ. ಎಂ. ಡಿಸೋಝಾ
ಬೊಂಬಾಯಿ

"ರಾಜಮಹೇಂದ್ರಿಯ ಒಬ್ಬ ದಂತವೈದ್ಯರು...ಹಲ್ಲು ಮತ್ತು ಒಸಡುಗಳ ತೊಂದರೆಗಾಗಿ ಫೋರ್‌ಹನ್ಸ್ ಉಪಯೋಗಿಸಲು ನನಗೆ ಹೇಳಿದರು. ಕೂಡಲೇ ಅವರ ಸಲಹೆಯನ್ನು ಪಾಲಿಸಿದೆನು. ಮತ್ತು ಅತ್ಯಲ್ಪ ಕಾಲದಲ್ಲಿ ನನ್ನ ಬಾಯಿಯ ದುರ್ವಾಸನೆ ಹೋಯಿತು. ಒಸಡುಗಳ ತೊಂದರೆ ಇಲ್ಲವಾಯಿತು. ನಿಜ ಹೇಳಬೇಕೆಂದರೆ ಅಂದಿನಿಂದ ನಾನು ಒಬ್ಬನೆ ಅಲ್ಲ ನಮ್ಮ ಇಡೀ ಪರಿವಾರದವರು (ನಾವು ಒಟ್ಟು 9 ಜನ!) ಫೋರ್‌ಹನ್ಸ್ ಉಪಯೋಗಿಸುತ್ತಿದ್ದೇವೆ. ಈ ರೂಢಿ ಮತ್ತು ಶ್ರದ್ಧೆಗಳು ಮುಂಬರುವ ಪೀಳಿಗೆಯಲ್ಲೂ ಮುಂದುವರಿಯುವವು ಎಂಬ ವಿಶ್ವಾಸ ನನಗಿದೆ."


(ಸಹಿ) ಪಿ. ಜೆ. ಲಾಝರ್
ಚೀರಾಲಾ, ಆಂಧ್ರಪ್ರದೇಶ

(ಮೇಲಿನ ಫೋಟೋಪ್ರತಿಗಳನ್ನು ಜೆಫ್ರಿ ಮೇನರ್ಸ್‌ರವರ ಯಾವ ಆಫೀಸಿನಲ್ಲಿ ಬೇಕಾದರೂ ಕಾಣಬಹುದು).

ಹಲ್ಲುಗಳ ಸರಿಯಾದ ಸಂರಕ್ಷಣೆಗಾಗಿ ಪ್ರತಿದಿನ ರಾತ್ರಿ ಮತ್ತು ಮುಂಜಾನೆ ನಿಮ್ಮ ಹಲ್ಲುಗಳನ್ನು ಬ್ರಶ್ ಮಾಡಲು ಮತ್ತು ನಿಮ್ಮ ಒಸಡುಗಳನ್ನು ಮಸಾಜು ಮಾಡಲು ಫೋರ್‌ಹನ್ಸ್ ಉಪಯೋಗಿಸಿರಿ.

ಉಚಿತ! ಹಲ್ಲು ಮತ್ತು ಒಸಡುಗಳ ರಕ್ಷಣೆಯ ಬಗ್ಗೆ ಬೋಧಪ್ರದ ವರ್ಣರಂಜಿತ ಪುಸ್ತಿಕೆ, ಕೃಪೆಮಾಡಿ 25 ಪೈಸೆಯ ಅಂಚೆಯ ಸ್ಟ್ಯಾಂಪನ್ನು ಜೊತೆಗಿಟ್ಟು ಫೋರ್‌ಹನ್ಸ್ ಡೆಂಟಲ್ ಎಡ್ವೈಜರಿ ಬ್ಯೂರೋ. ಡಿಪಾರ್ಟ್‌ಮೆಂಟ್ T 139 ಪೋಸ್ಟ್ ಬ್ಯಾಗ್ 11463, ಬೊಂಬಾಯಿ 400 020 ಈ ವಿಳಾಸಕ್ಕೆ ಬರೆಯಿರಿ. ಬೇಕಾದ ಭಾಷೆಯನ್ನು ನಮೂದಿಸಿರಿ.

PIN CODE FOR ...



ಫೋರ್‌ಹನ್ಸ್

ದಂತವೈದ್ಯರಿಂದ ಸೃಷ್ಟಿಸಲ್ಪಟ್ಟ ಟೂಥ್‌ಪೇಸ್ಟ್.

160F.152 KN

ಯಾದ ಹೆಂಡತಿಯನ್ನು ಪ್ರೀತಿ ಗೌರವಗಳಿಂದ ಕಾಣುವಂತೆಯೇ ನವಾಬರು ನನ್ನನ್ನು ಕಾಣುತ್ತಾರೆ. ಅವರು ಇನ್ನೊಬ್ಬ ಹೆಣ್ಣನ್ನು ಕಣ್ಣೆತ್ತಿ ನೋಡಿದ್ದಂತೂ ನಾನು ನೋಡಿಲ್ಲ. ಹೊರಗೆ ತಮ್ಮ ಗೆಳೆಯರೊಡನೆ ಏನಾದರೂ ಮಾಡಿದರೆ ಮಾಡುತ್ತಿರಬಹುದು. ಗಂಡಸು ಜಾತಿ ಅಲ್ಲವೆ? ಅವರ ಹಿಂದೆ ತಿರುಗುವುದಂತೂ ಸಾಧ್ಯವಿಲ್ಲ.'

'ದೇವರು ನನ್ನ ಎಲ್ಲ ಆಶೆಗಳನ್ನೂ ಪೂರ್ಣಗೊಳಿಸಿದ್ದಾನೆ. ಮಗನ ಬಯಕೆಯಿತ್ತು; ದೇವರ ದಯದಿಂದ ಅದನ್ನೂ ಪಡೆದೆ. ಈಗ ನಿನ್ನ ಕಥೆ ಹೇಳು ಅಮೀರನ್'

ರಾಮಂದಯ್ ತನ್ನ ಕಥೆ ಹೇಳುತ್ತಿರುವಾಗ ನನಗೆ ಅತೀವ ವ್ಯಥೆಯಾಗುತ್ತಿತ್ತು. ದೈವ ಇದ್ದರೆ ಹೀಗಿರಬೇಕು. ನನ್ನ ದೈವ ಒಡಕು ದೈವ. ನನ್ನನ್ನೂ ಅವರೇ ಒಯ್ದು ಮಾರಿದ್ದರು. ಆದರೆ ನಾನು. ಸೇರಿದ್ದು ಸೂಳೆಯರ ಮನೆಗೆ.

ನನ್ನ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಿದೆ; ನಿಮಗಂತೂ ಅದು ಗೊತ್ತೇ ಇದೆ. ನಾನು ಹಗಲಿಡೀ ಅಲ್ಲೇ ಇದ್ದೆ. ಏಕಾಂತದ ಮಾತು ಮುಗಿದ ಕೂಡಲೇ ಬೇಗಮ್ ತಬಲಾ, ತಂಬೂರಿ, ಸಿತಾರ್ ತರಿಸಿದಳು. ಹಾಡುವುದು ಬಾರಿಸುವುದು ನಡೆಯಿತು.

ಸಾಯಂಕಾಲವಾಗುತ್ತ ಬಂದಾಗ ನವಾಬ್ ಸಾಹೇಬರು ಬಂದರೆಂಬ ಸುದ್ದಿಯಾಯಿತು. ಅವರ ಮುಖ ನೋಡುತ್ತಲೇ.

'ಅಯ್ಯೋ, ಅವೆರೇ... ಸುಲ್ತಾನ ಸಾಹೇಬರು, ಎಂಥ ಹೊತ್ತಿನಲ್ಲಿ ಭೆಟ್ಟಿಯಾಯಿತು. ಎಂದು ಮನಸ್ಸಿನಲ್ಲಿ ಅಂದುಕೊಂಡೆ. ನವಾಬರ ದೃಷ್ಟಿ ನನ್ನ ಮೇಲೆ ಬೀಳುತ್ತಲೇ ಅವರು ತುಸು ಹದರಿದಂತೆ ಕಂಡರು. ಮತ್ತೆ ನನ್ನನ್ನು ದಿಟ್ಟಿಸಿ ನೋಡುತ್ತ ಮುಂದೆ ಬಂದರು. ನಾನೂ ಅವರನ್ನೇ ನೋಡುತ್ತಿದ್ದೆ.

ಏನು ನೋಡುವೆ, ದಿಟ್ಟಿ ಬೀರಿದಾ—
ಗವನೆಡೆಗೆ ವಿಹ್ವಲ
ಅವನು ಕಾಣುವನೆನ್ನ ದಿಟ್ಟಿಯಲಿ
ಅಡಗಿಪ್ಪ ಕಲಷವುಲ

ಈಗ ನವಾಬರು ಜಗುಲಿಗೆ ಹತ್ತಿರ ಬಂದರು. ನನ್ನೆಡೆಗೇ ನೋಡುತ್ತ ನಡೆದಿದ್ದರು, ತುಸು ಹೊತ್ತಿನ ನಂತರ ಅರಿಯದವರಂತೆ ನಟಿಸುತ್ತ ನವಾಬರೇ ಮಾತನಾಡಿಸಿದರು.

ಉಮ್‌ರಾವ್ ಜಾನ್ ಸಾಹೇಬಾ ನಾವು
ನಿಮಗೆ ಬಹಳ
ಉಪಕೃತರು ನಿಜಕ್ಕೂ ಇಂದು
ಕಾನಪುರದಲ್ಲಿ ನಿಮ್ಮಿಂದಲೇ
ನಮ್ಮ ಮನೆ ಲೂಟಿಯಿಂದ ಉಳಿಯಿತು.


ನಾನೂ ಅದಕ್ಕೆ ಸರಿಯಾಗಿ ಅಪರಿಚಿತಳಂತೆಯೇ ಉತ್ತರ ಕೊಟ್ಟೆ. ಎಲ್ಲರೂ ಕೂಡಿ ಊಟ ಮಾಡಿದೆವು. ಎಲೆ ತಿಂದು ತಿಂದು ಹುಕ್ಕಾ ಸೇದಿದ ಬಳಿಕ ನವಾಬರು ಹಾಡು ಕೇಳಲು ಬಯಸಿದರು. ನಾನು ಈ ಗಝಲ್‌ನ್ನು ಪ್ರಾರಂಭಿಸಿದೆ.

ನನ್ನ ಪ್ರೇಮದ ನೆನಪು ನಿನಗೆ ಬರಲಿಲ್ಲ
ನನ್ನ ಪೀಡೆಯ ನೆನಪು ಬರದೆ ಇರಲಿಲ್ಲ
ಹಾಗೂ ಹೀಗೂ ಹೇಗೋ ಕಳೆದು
ಹೋಗುವುದೀ ವಿರಹದಿರುಳು.
ಹೀಗಿರಲು ಮತ್ತೇಕೆ ನೆನಪಾಯ್ತು
ನೋಡು ಆ ನಿನ್ನ ಕುರುಳು.
ಓ ವೈದ್ಯ, ತರಿಸಿಕೊಡು
ವಿಷವನೊಂದಿನಿತು
ನನ್ನ ಮದ್ದೇನೆಂಬುದೀಗೆನಗೆ
ನೆನಪಾಯ್ತು.

ರುಸ್ವಾ ಸಾಹೇಬರೇ ಇನ್ನುಳಿದ ಪದ್ಯಗಳು ನೆನಪಿಲ್ಲ.

2

ಏನ ಕೇಳುವಿಯೆನ್ನ ಹೃದಯದುಷ್ಟ
ಚರಿತ್ರೆ ಗ್ರಂಥದ ಬಗೆಗೆ
ಎಲ್ಲವೂ ಬಿಡದಂತೆ ಬರೆದಿಹುದು
ಇಲ್ಲಿ ಈ ಕಥೆಯೊಳಗೆ



THOMAS/DGM 675/Kan

ಮಿರ್ಜಾ ರುಸ್ತುಂಸಾಹೇಬ್, ನೀವು ನನ್ನ ಜೀವನ ಚರಿತ್ರೆಯ ಕರಡನ್ನು ನೋಡಲು ಕೊಟ್ಟಾಗ ಅದನ್ನು ಹರಿದು ಚೂರು ಚೂರು ಮಾಡಲೇ ಎನ್ನುವಷ್ಟು ಸಿಟ್ಟು ಬಂದಿತ್ತು. 'ನನ್ನ ಜೀವನದಲ್ಲಿ ನಾನು ಪಟ್ಟ ಪಾಡು ಕಡಿಮೆಯೇನು? ನನ್ನ ಮುಖಕ್ಕೆ ಹತ್ತಿದ್ದ ಮಸಿ ತುಸುವೇನು? ನಾನು ಸತ್ತ ಮೇಲೆಯೂ ಇದೆಲ್ಲ ಕಥೆಯಾಗಿ ಉಳಿಯಬೇಕೆ? ಜನ ಇದನ್ನು ಓದಿ ನನಗೆ ಬೈಯ್ಯಬೇಕೆ?' ಎಂಬ ವಿಚಾರ ಮೂಡಿತು. ಆದರೆ ದೈಹಿಕ ಮತ್ತು ಮಾನಸಿಕ ಆಲಸ್ಯ ಒಂದು ಕಡೆ, ನಿಮ್ಮ ಪರಿಶ್ರಮ ಇನ್ನೊಂದು ಕಡೆ— ಇವೆರಡು ತಡೆ ಹಿಡಿದುವು. ಕರಡು ಹಾಗೇ ಉಳಿಯಿತು.

ಪೂರ್ತಿ ಕಥೆಯಲ್ಲಿ ನೀವು ಒಳ್ಳೆಯ ಮತ್ತು ಕೆಟ್ಟ ಹೆಂಗಸರನ್ನು ಕುರಿತು ಹೇಳಿದ ಮಾತುಗಳು ನನಗೆ ಹಿಡಿಸಿದುವು. ಈ ದಿಸೆಯಲ್ಲಿ ದೈವ ಮತ್ತು ಸಮಯ ಇವೆರಡೂ ಮುಖ್ಯ ಪಾತ್ರವಾಡುತ್ತವೆ. ನನ್ನ ಕೆಡುಕಿಗೆ ಆ ನೀಚ ದಿಲಾವರ್‌ಖಾನನ ದುಷ್ಟತನವೇ ಕಾರಣವಾಯಿತು. ಅವನು ನನ್ನನ್ನು ಹೊತ್ತು ತರದಿದ್ದರೆ, ಖಾನಮ್‌ಗೆ ಮಾರದಿದ್ದರೆ ನನ್ನ ಈ ಚರಿತ್ರೆ ಎಲ್ಲಿರುತ್ತಿತ್ತು? ನಾನು ಮಾಡಿದ ಕೆಲಸಗಳು ಕೆಟ್ಟವೆಂಬುದರಲ್ಲಿ ನನಗೆ ಸಂಶಯವೇ ಉಳಿದಿಲ್ಲ.

ಯಾರಲ್ಲಿ ನಾನು ಬೆಳೆದೆ, ದೊಡ್ಡವಳಾದೆ. ಅವರ ರೀತಿ ನೀತಿಗಳೇ ನನ್ನವಾದುವು. ಆ ಕಾಲದಲ್ಲಿ ನಾನು ಯಾವ ಧರ್ಮತತ್ವವನ್ನೂ ತಿಳಿದಿರಲಿಲ್ಲ. ಅದರಂತೆ ಆಚರಿಸಲಿಲ್ಲ. ಅಂಥ ಸ್ಥಿತಿಯಲ್ಲಿ ಯಾರಿಗೂ ಧರ್ಮ, ಒಳಿತು, ಕೆಡುಕು, ಮುಂತಾದುವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲವೆಂದು ನನ್ನ ವಿಚಾರ.

ಆ ಕಾಲದಲ್ಲಿ ನನಗೆ ನನ್ನ ಧರ್ಮವೆಂಬುದೇ ಇರಲಿಲ್ಲ. ಯಾವ ಧರ್ಮವೂ ನನಗೆ ಗೊತ್ತಿರಲಿಲ್ಲ. ದೈವವನ್ನು ನಾನು ಬಲವಾಗಿ ನಂಬಿದ್ದೆ. ಆಲಸ್ಯದಿಂದ ಮಾಡಲಾಗದ್ದನ್ನು ನನ್ನ ಮೂರ್ಖತನದಿಂದ ಕೆಡಿಸಿದ್ದನ್ನು ದೈವದ ಮೇಲೆ ಹಾಕುತ್ತಿದ್ದೆ. ಫಾರಸೀ ಪುಸ್ತಕಗಳ ಅಭ್ಯಾಸದಿಂದ ದೈವವನ್ನು ದೂರುವ, ಹಳಿಯುವ ಗೀಳು ಬಲವಾಗಿ ಅಂಟಿಕೊಂಡಿತ್ತು. ನನ್ನ ಕೆಲಸ ಕೆಟ್ಟಾಗ ಯಾವುದೇ ಕಾರಣದಿಂದ ನನಗೆ ದುಃಖವಾದಾಗ ಸರಿಯೋ–ತಪ್ಪೋ ದೈವವನ್ನು ದೂರುತ್ತಿದ್ದೆ.

ಸ್ವಾತಂತ್ರ್ಯವೆನಗುಂಟು:-
ಇಂಥದೊಂದಧಿಕಾರವೂ ಉಂಟು
ಕಷ್ಟ ಬಂದಾಗಲೆಲ್ಲ ದೈವವನು
ಹಳಿಯುವಾ ರೂಢಿಯುಂಟು.

ಮೌಲ್ವಿ ಸಾಹೇಬ, ಬುವಾಹುಸೇನಿ, ಮತ್ತು ಮುದುಕ ಮುದುಕಿಯರು ಹಿಂದಿನ ಕಾಲದ ಮಾತನಾಡುತ್ತಿದ್ದರು. ಅವರ ಮಾತುಗಳಿಂದ ಆ ಕಾಲ ಈ ಕಾಲಕ್ಕಿಂತ ಚೆನ್ನಾಗಿತ್ತೆಂದು ಅನಿಸುತ್ತಿತ್ತು. ಅದು ಕಾರಣ ನಾನೂ ಅವರಂತೆ ಭೂತವನ್ನು ಹೊಗಳಿ ವರ್ತಮಾನವನ್ನು ಹಳಿಯುತ್ತಿದ್ದೆ. ವೃದ್ಧರು ಗತಕಾಲವನ್ನು ಹೊಗಳುವ ಕಾರಣ ನನಗೆ ತಿಳಿದಿರಲಿಲ್ಲ. ತಮ್ಮ ತಮ್ಮ ಯೌವನದ ಕಾಲ ಎಲ್ಲರಿಗೂ ಸುಂದರವೆನಿಸುತ್ತದೆ. ತಾನು ಬದುಕಿದರೆ ಜಗತ್ತು ಬದುಕಿದಂತೆ! ತಾನು ಸತ್ತರೆ ಜಗತ್ತು ಸತ್ತಂತೆ! ಮುದುಕರನ್ನು ನೋಡಿ ಯೌವನಿಗರು ಅವರ ರೀತಿ ನೀತಿಗಳನ್ನೇ ಅನುಸರಿಸುತ್ತಿದ್ದರು. ಈ ತಪ್ಪು ತಿಳುವಳಿಕೆ ಬಹು ಹಿಂದಿನಿಂದಲೇ ಉಳಿದು ಬಂದಿದೆ. ಸಾಮಾನ್ಯವಾಗಿ ಈಗ ಎಲ್ಲರಿಗೂ ಈ ಗೀಳು ಅಂಟಿಕೊಂಡಿದೆ.

ನಾನು ಒಬ್ಬರನ್ನು ಪ್ರೀತಿಸಿದೆನೆನ್ನಿರಿ. ಆ ಪ್ರೀತಿ ಪವಿತ್ರವಾದುದಿದ್ದರೂ ನಾನು ಪ್ರೀತಿಸಿದ ವ್ಯಕ್ತಿ ಮತ್ತು ಇತರ ಜನರು ನಾನು ಒಳ್ಳೆಯವಳೆಂದು ನಂಬುವುದಿಲ್ಲ. ನನ್ನ ಪ್ರೀತಿ ಪವಿತ್ರವಾದುದೆಂದು ಭಾವಿಸುವುದಿಲ್ಲ. ಇದರಿಂದ ನನ್ನ ಪ್ರೀತಿ ವ್ಯರ್ಥವೆನಿಸುವುದು. ಇಳಿವಯಸ್ಸಿನವಳಾದರೂ ನನ್ನಲ್ಲಿ ಅನೇಕ ಜನರು ಪ್ರೀತಿ ತೋರಿಸುವುದಕ್ಕೆ ನನ್ನ ಸಂಪತ್ತೇ ಕಾರಣವೆಂದು ಜನ [illegible] ಕೊಳ್ಳುವರು. ಅವರ ಮಾತಿನಲ್ಲಿ [illegible] ದಿಲ್ಲ.

ಸೊಳ್ಳೆ ಕಡಿತಗಳಿಂದ, ಖಾತ್ರಿಯಾದ ದ್ವಿವಿಧ ರಕ್ಷಣೆಯನ್ನು ಕೇವಲ ಒಡೊಮಸ್ ನಿಮಗೆ ನೀಡುತ್ತದೆ...

ನಿಮಗೆ ಸುಖನಿದ್ರೆ ಪ್ರಾಪ್ತವಾಗುವಂತೆ ಮಾಡುತ್ತದೆ

ಒಡೊಮಸ್ ನಿಮ್ಮನ್ನು ರಕ್ಷಿಸುವ ಹಾಗೆ ಬೇರೆ ಯಾವುದೇ ಸೊಳ್ಳೆನಿರೋಧಕವು ರಕ್ಷಿಸಲಾರದು.

1 

ಅದರ ವಾಸನೆ ಸೊಳ್ಳೆಗಳನ್ನು ದೂರಗೊಳಿಸುತ್ತದೆ.

2 

ಅದರ ಅಪೂರ್ವ ಘಟಕ ನಿಮ್ಮ ಚರ್ಮಕ್ಕೆ ಸೊಳ್ಳೆಗಳ ವಿರುದ್ಧ ರಕ್ಷಣಾ ಕವಚದಂತಿರುತ್ತದೆ—ರಾತ್ರಿಯಿಡೀ!

ಇಂದು ಭಾರತದಲ್ಲಿ ಒಡೊಮಸ್ ಅತ್ಯಧಿಕ ಮಾರಾಟವಾಗುವ ಸೊಳ್ಳೆನಿರೋಧಳ ಆಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಸೊಳ್ಳೆಗಳು ನಿಮ್ಮನ್ನು ಪೀಡಿಸುವ ಮೊದಲೇ ಅವನ್ನು

ಒಡೊಮಸ್

ನಿಂದ ಓಡಿಸಿರಿ!



ಅದು ಸೂಕ್ಷ್ಮ ಕೋಮಲ ಚರ್ಮಕ್ಕೂ ನಿರಪಾಯಕರ ವಾಗಿದೆ.

ಮಚ್ಛರ್ ಕಾ ದುಶ್ಮನ್

ನಾನೊಂದು ಅನುಭವಿಕ ಘಾಟಿ ಹೆಣ್ಣು. ಏಳು ಕೆರೆ ನೀರು ಕುಡಿದವಳು. ಲೋಕ ಕಂಡವಳು. ಯಾರು ಏನು ಬಯಸಿದರೂ ಅವರ ಆಸೆಗೆ ಪಕ್ಕಾಗುತ್ತೇನೆ. ಆದರೆ ನಿಜ ವಾಗಿ ನೋಡಿದರೆ ನನ್ನ ಬಯಕೆಯಂತೆ, ಅವ ರನ್ನು ಆಡಿಸುತ್ತೇನೆ. ಶುದ್ಧ ಪ್ರೀತಿಯಿಂದ ನನ್ನೊಡನೆ ಕೂಡುವವರು ಒಬ್ಬಿಬ್ಬರಿದ್ದಾರೆ. ಸ್ವಾರ್ಥರಹಿತರು ಅವರು. ಕಾವ್ಯ ಸಂಗೀತ, ಬಾಜನೆ ಮಧುರ ಸಂಭಾಷಣೆ ವಿನೋದ— ಕೇವಲ ಇವುಗಳಿಗಾಗಿ ಅವರ ಆಗಮನ. ಅವರಿಂದ ನನಗೂ ಏನಾಗಬೇಕಾಗಿಲ್ಲ. ನನ್ನಿಂದ ಅವರಿಗೂ ಏನೂ ಆಗಬೇಕಾಗಿಲ್ಲ. ಇವರನ್ನೂ ನಾನು ಹೃದಯದಿಂದ ಸ್ವಾಗತಿಸುತ್ತೇನೆ. ನಿಃಸ್ವಾರ್ಥ ಮಿಲನ ನಮ್ಮದು. ಈ ನಮ್ಮ ನಿಃಸ್ವಾರ್ಥವು ಕೂಡ ಬರಬರುತ್ತ ಒಂದು ಸ್ವಾರ್ಥವೇ ಆಗಿದೆ.

ಹೆಂಗಸರ ಜೀವನ ಯೌವನವಿರುವವರೆಗೆ. ಯೌವನದ ಜೊತೆಗೇನೇ ಜೀವನ ಮುಗಿಯು ವಂತಿದ್ದರೆ ಎಷ್ಟು ಒಳ್ಳೆಯದಿತ್ತು. ಆದರೆ ಹಾಗೆ ಆಗುವುದಿಲ್ಲ. ವೃದ್ಧಾಪ್ಯ ಹಾಗೆ ನೋಡಿದರೆ ಎಲ್ಲರಿಗೂ ಕೆಟ್ಟದ್ದೇ- ಹೆಚ್ಚಾಗಿ ಹೆಂಗಸರಿಗೆ. ಅದರಲ್ಲಿಯೂ ಸೂಳೆಯರಿಗೆ ಮುಪ್ಪು ನರಕ ಸಮಾನ!

ಮೊದ ಮೊದಲು ನಾನೂ ಸೂಳೆಯರ ಬಾಯಿಂದ ಗಂಡಸರ ಮೋಸದ ಕಥೆಗಳನ್ನು ಕೇಳಿ ಹೊತ್ತುಗಳೆಯುತ್ತಿದ್ದೆ. ತಿಳಿಯದೆ ಅವರ ಧ್ವನಿಯಲ್ಲಿ ನಾನೂ ಧ್ವನಿಗೂಡಿಸು ತ್ತಿದ್ದೆ. ಆದರೆ ಮುಂದೆ ನನ್ನ ವಿಚಾರ ಬದಲಾಯಿತು. ನಾನು ಗಂಡಸರನ್ನು ಮೋಸ ಗಾರರೆನ್ನುವುದಿಲ್ಲ, ವಿಶ್ವಾಸಘಾತುಕರೆನ್ನುವು ದಿಲ್ಲ. ಇವರಿಗಿಂತ ಹೆಂಗಸರು—ವಿಶೇಷವಾಗಿ ಬಾಜಾರಿ ಹೆಂಗಸರು ಯಾವ ನಿಟ್ಟಿನಲ್ಲಿಯೂ ಕಡಿಮೆಯಿಲ್ಲ. ಪ್ರೀತಿಯ ವಿಷಯದಲ್ಲಿ ಗಂಡಸರು (ಕ್ಷಮಿಸಿರಿ) ಹೆಚ್ಚಾಗಿ ಮೂರ್ಖ ರಾಗಿರುತ್ತಾರೆ; ಹೆಂಗಸರು ಜಾಣೆಯರಿರು ತ್ತಾರೆ. ಹೆಚ್ಚಾಗಿ ಗಂಡಸರು ಮನಸ್ಸಿನಿಂದ ನಿಜವಾದ ಪ್ರೇಮವನ್ನು ವ್ಯಕ್ತಪಡಿಸುತ್ತಾರೆ. ತದ್ವಿರುದ್ಧ ಹೆಂಗಸರು ಸುಳ್ಳು ಪ್ರೇಮವನ್ನು ವ್ಯಕ್ತಪಡಿಸುತ್ತಾರೆ.

ಹೆಂಗಸರು ಚೆಲುವೆಯರು, ಚೆಲುವು ಅವ ರಿಗೇ ಮೀಸಲು ಎಂಬ ಗಂಡಸರ ಮಾತನ್ನು ನಾನು ನಂಬುವದಿಲ್ಲ. ನಿಜವಾಗಿ ನೋಡಿದರೆ ಸ್ವಂತಕ್ಕೆ ಹೆಣ್ಣು ಸುಂದರಿಯಲ್ಲ. ಗಂಡೂ ಸುಂದರನಲ್ಲ. ಪರಸ್ಪರ ಸುಂದರವಾಗಿ ಕಾಣು ವಂಥ ಒಂದು ಚೆಲುವು ಅವರಿಗೆ ನೈಸರ್ಗಿಕ ವಾಗಿ ಬಂದಿದೆ. ಹೆಣ್ಣಾಗಲೀ ಗಂಡಾಗಲೀ ಮುಖ ಮೂಗು ಚೆನ್ನಾಗಿದ್ದರೆ ಎಲ್ಲರಿಗೂ ಅವರು ಬೇಕಾಗುವರು. ಆದರೆ ಸತ್ಯವಾದ ಮಾತೆಂದರೆ—ಹೆಣ್ಣಿನ ಸೌಂದರ್ಯದ ಉಪಾಸಕ ಗಂಡು, ಗಂಡಿನ ಸೌಂದರ್ಯದ ಉಪಾಸಕ ಹೆಣ್ಣು. ಒಬ್ಬರ ಸೌಂದರ್ಯ ಇನ್ನೊಬ್ಬರಿಗೆ ಮೋಹಕ. ಒಬ್ಬ ಚೆಲುವೆ ಇನ್ನೊಬ್ಬ ಚೆಲು ವೆಯ ಮುಂದೆ ಸುವಾಸನೆಯಿಲ್ಲದ ಬಣ್ಣದ ಹೂವಿದ್ದಂತೆ! ಆದರೆ ಒಬ್ಬ ಕುರೂಪಿ ಗಂಡು, ಸ್ಫುರದ್ರೂಪಿಯೊಬ್ಬಳ ದೃಷ್ಟಿಯಲ್ಲಿ ಚೆಲು ವನೇ!

ನನ್ನ ವಿಚಾರದಲ್ಲಿ ಗಂಡು ಮತ್ತು ಹೆಣ್ಣು ತಮ್ಮ ತಮ್ಮ ಅಂತಸ್ತು, ಆಸೆ, ಆಕಾಂಕ್ಷೆ ಗಳನ್ನು ಸರಿಯಾಗಿ ತಿಳಿದುಕೊಂಡರೆ ಬಾಳಿನಲ್ಲಿ ದುಃಖವೇ ಕಾಲಿಕ್ಕಲಿಕ್ಕಿಲ್ಲ. ಎಷ್ಟೋ ಕಷ್ಟ ಗಳು ಬರ ಬರುತ್ತಲೇ ದೂರಾಗಬಹುದು; ವಿಪತ್ತು ಹೋಳಾಗಿ ಹೋಗಬಹುದು.

ದೈವ ಮತ್ತು ಪ್ರಯತ್ನ ಇವುಗಳ ಸಮ ಸ್ಯೆಯ ತಿರುಗಣಿ ಮಡುವಿನಲ್ಲಿ ನಾನು ಬಹಳ ದಿನಗಳ ವರೆಗೆ ಸಿಲುಕಿ ಬಳಲಿದೆ. ಈ ಶಬ್ದ ಗಳನ್ನು ಜನರು ಯಾವ ಅರ್ಥದಲ್ಲಿ ಬಳಸು ತ್ತಿದ್ದಾರೆಂಬುದು ಕೊನೆಗೆ ತಿಳಿಯಿತು. ಅವರ ಅರ್ಥ ಕೇವಲ ಮೋಸ ಭರಿತವಾಗಿತ್ತು. ನಮ್ಮ ಕೆಲಸ, ಮಾತುಕತೆ, ಜೀವನ ಎಲ್ಲದರ ಅರಿವು ದೇವರಿಗಿದೆ. ನಿಜ. ಇದನ್ನು ನಂಬ ದವನೇ ಕಾಫಿರ್. ಆದರೆ ಜನ ತಮ್ಮ ಎಲ್ಲ ದುಷ್ಟ ಕೆಲಸಗಳ ಕೆಟ್ಟ ಪರಿಣಾಮಗಳನ್ನು ದೈವಕ್ಕೆ ಹೊಂದಿಸಿ ಬಿಡುತ್ತಾರೆ. ದೇವರ ಹೆಸರಿಗೆ ಕುಂದಲ್ಲವೇ ಇದು? ಈ ವಿಚಾರ ಬಹಳ ಕೆಟ್ಟುದು.

ಈಗ ತಿಳಿದ ಮಾತುಗಳನ್ನೆಲ್ಲ ನಾನು


ಸೌಂದರ್ಯ
ಸದಾ ಉಳಿಯಲು
ತ್ವಚೆ ನಿರ್ಮಲವಾಗಿರಬೇಕು

ಮೊದಲೇ ತಿಳಿದಿದ್ದರೆ ಎಷ್ಟು ಚೆನ್ನಾಗಿತ್ತು! ತಿಳಿಸುವವರೂ ಇರಲಿಲ್ಲ. ಸ್ವತಃ ತಿಳಿಯಲಿಕ್ಕೆ ಅಷ್ಟು ಅನುಭವವೂ ಇರಲಿಲ್ಲ. ಮೌಲ್ವಿ ಸಾಹೇಬರು ಕಲಿಸಿದ ಎರಡಕ್ಷರಗಳು ಬಹಳ ಕೆಲಸಕ್ಕೆ ಬಂದುವು. ಆ ಕಾಲದಲ್ಲಿ ನನಗೆ ಅದರ ಬೆಲೆ ಇರಲಿಲ್ಲ. ಊಟ, ವಿರಾಮ, ವಿಹಾರ ಇವುಗಳನ್ನುಳಿದು ಬೇರಾವ ಕೆಲಸವೂ ಇರಲಿಲ್ಲ. ಅಲ್ಲದೆ ರಸಿಕರು, ವಿಟರು ಬರದ ದಿನವಿರಲಿಲ್ಲ. ಬಿಡುವೆಲ್ಲಿ ಸಿಗಬೇಕು? ವಿಟರು ಒಬ್ಬೊಬ್ಬರೇ ದೂರ ಸರಿಯತೊಡಗಿದಾಗ ನನಗೆ ಬಿಡುವು ದೊರೆಯಹತ್ತಿತು. ಈ ಅವಧಿಯಲ್ಲಿ ಓದುವುದು ಹೆಚ್ಚಾಯಿತು. ಅದನ್ನುಳಿದು ಮತ್ತಾವ ಕೆಲಸವೂ ಇರಲಿಲ್ಲ.

ನಾನು ಮಿತವ್ಯಯಿಯಾದ ಕಾರಣ ಜೀವಿಸಿರುವವರೆಗೂ ಸಾಕಾಗುವಷ್ಟು ಹಣ ನನ್ನಲ್ಲಿದೆ. ಆ ಲೋಕದಲ್ಲಿ ದೇವರಿದ್ದಾನೆ. ಬಹಳ ದಿನಗಳ ಹಿಂದೆಯೇ ನಾನು ಪಶ್ಚಾತ್ತಾಪ ಮಾಡಿಕೊಂಡಿದ್ದೇನೆ. ಆದಷ್ಟು ನಮಾಜು ಮತ್ತು ಉಪವಾಸಗಳನ್ನು ಮಾಡುತ್ತಿದ್ದೇನೆ. ಸೂಳೆಯಂತೆಯೇ ಜೀವಿಸುತ್ತಿರುವೆ. ದೇವರು ಕೊಲ್ಲಲಿ, ಕಾಯಲಿ. ಪರದೆಯ ಹಿಂದೆ ಮುಂದುರಿ ಕುಳಿತುಕೊಳ್ಳುವುದು ನನ್ನಿಂದ ಸಾಧ್ಯವಿಲ್ಲ. ಆದರೆ ಪರದೆಯುಳ್ಳವರ ಸಲುವಾಗಿ ಹೃದಯತುಂಬ ಪ್ರಾರ್ಥಿಸುವೆ. ದೇವರು ಅವರ ಸೌಭಾಗ್ಯವನ್ನು ರಕ್ಷಿಸಲಿ; ಲೋಕವಿರುವವರೆಗೆ ಅವರ 'ಪರದಾ' ಇರಲಿ.

ನಾನೀಗ ನನ್ನ ವೃತ್ತಿಯವರನ್ನು ಕುರಿತು ಕೆಲವು ಉಪದೇಶದ ಮಾತುಗಳನ್ನು ಹೇಳುವೆನು. ಅವರು ಇವುಗಳನ್ನು ಹೃದಯ ತೆರೆದು ಕೇಳಲಿ ಎಂದು ಆಶಿಸುವೆ.

'ಓ ಮೂರ್ಖ ಸೂಳೆ. ಯಾರೂ ಎಂದೂ ನಿನ್ನನ್ನು ನಿಜವಾಗಿ ಪ್ರೀತಿಸುವರೆಂದು ತಿಳಿದು ಮೋಸ ಹೋಗಬೇಡ. ಇಂದು ನಿನ್ನ ಮೇಲೆ ಬಿದ್ದು ಸಾಯುವ ನಿನ್ನ ಪ್ರಿಯ ನಾಳೆ ಎಲ್ಲಿಯೋ? ಯಾರೊಡನೆಯೋ? ಆತ ಕೊನೆಯ ವರೆಗೆ ನಿನ್ನೊಡನೆ ಇರಲಾರ; ಅಲ್ಲದೆ ಅದಕ್ಕೆ ನೀನು ತಕ್ಕವಳೂ ಅಲ್ಲ, ಆಗಿಲ್ಲ. ನಿಜವಾದ ಪ್ರೀತಿಯೆಂದರೆ ಎಂತಹದು? ಒಬ್ಬನಿಗೆ ಹೃದಯವನ್ನಿತ್ತು, ಬಳಿಕ ಮತ್ತೊಬ್ಬನನ್ನು ಕಣ್ಣೆತ್ತಿ ನೋಡಲಾರದವಳೇ ನಿಜವಾದ ಪ್ರೀತಿಯುಳ್ಳವಳು. ಅಂಥ ಗುಣ ನಿನ್ನಂಥ ಬಾಜಾರಿ ಹೆಣ್ಣಿಗೆ ದೇವರು ಕರುಣಿಸಲಾರ.'

ಏನಾಗಬೇಕಿತ್ತು ನನ್ನ ಜೀವನದಲ್ಲಿ ಅದೆಲ್ಲ ಆಯಿತು. ಈಗ ಉಳಿದ ದಿನಗಳನ್ನು ಎಣಿಸುತ್ತಿರುವೆ. ಎಷ್ಟು ದಿನ ಈ ಜಗತ್ತಿನ ಅನ್ನ ನೀರಿನ ಋಣವಿದೆಯೋ ಅಷ್ಟು ದಿನ ಬದುಕಿರುವೆ. ನನ್ನ ಮನಸ್ಸು ತಿಳಿಯಾಗಿದೆ. ನನ್ನ ಎಲ್ಲ ಆಸೆಗಳೂ ಪೂರ್ಣವಾಗಿವೆ. ಆಸೆ ಬಲು ಕೆಟ್ಟದು; ಕೊನೆಯ ದಿನದವರೆಗೂ ಅದು ದೂರಾಗದು; ಮನಸ್ಸಿನ ಮೂಲೆಯಲ್ಲಿ ಕುಳಿತೇ ಇರುತ್ತದೆ. ಹೀಗಿದ್ದರೂ ನನಗೀಗ ಯಾವ ಆಸೆಯೂ ಉಳಿದಿಲ್ಲ. ನನ್ನ ಜೀವನ ಚರಿತ್ರದಿಂದ ಏನಾದರೂ ಒಂದಿಷ್ಟು ಲಾಭವಾಗುವುದೆಂದು ನಾನು ಭಾವಿಸಿರುವೆ. ನನಗೆ ಆಶೀರ್ವದಿಸಿರಿ. ನನ್ನ ಒಳಿತಿಗೆ ದೇವರಲ್ಲಿ ಪ್ರಾರ್ಥಿಸಿರಿ—ಎಂದು ಎಲ್ಲರಿಗೂ ಬೇಡಿಕೊಂಡು ಈ ಪದ್ಯದೊಂದಿಗೆ. ನನ್ನ ಚರಿತ್ರೆಯನ್ನು ಮುಗಿಸುವೆ.

ಸಾವ ದಿನ ಸಮಿಹಕ್ಕೆ ಬಂದಂತೆ
ಕಾಣುತಿದೆ ಓ ನನ್ನ ಜೀವನವೆ
ಸಾಕಷ್ಟು ಸಂತೃಪ್ತಿ ಪಡೆದಿದೆ ಜಗೆ
ನಿನ್ನಿಂದ ಓ ನನ್ನ ಜೀವನವೆ.

This magazine owned by the Karnataka Patrika Private Ltd. is printed & published by Bhomeshwar Das Kohli at the Samyukta Karnatak Press, Koppikar Road, Hubli. Representatives: Bombay: V. S. Mani, Phone: 472794: Calcutta: H. Muzamdar: Phone: 46-4238; Madras: P. N. Srinivasan, Phone: 83748; New Delhi: P. R. Chopra, Phone: 224130.


'ಝಗಮಗಿಸುವ' ಬಿಳುಪಿಗೆ
Supreme
Weight when Packed 135 gm. net
det
detergent washing cake
for whiteness that 'Glows'
ಸುಪ್ರೀಮ್ ಡೆಟ್ ಡಿಟರ್ಜೆಂಟ್ ಒಗೆಯುವ ಬಿಲ್ಲೆ

KASTURI PRICE : 1–25 Regd. No. KRNG 43
Registered with the Registrar of Newspapers for India under No. 3633/57



COVER PRINTED AT BHARAT PHOTO OFFSET WORKS, DHARWAR-1